ವಿಶ್ವವಾಣಿ
ವಿಶ್ವಾಸವೇ ವಿಶ್ವ

ಬಾಹ್ಯಾಕಾಶದಿಂದ ಮರಳಿದ ಗಗನಯಾನಿ ಶುಭಾಂಶು ಶುಕ್ಲಾ ಅವರು ಪ್ರಧಾನಿ ಮೋದಿ ಅವರನ್ನು ಭೇಟಿಯಾಗಿ, ಬಾಹ್ಯಾಕಾಶಕ್ಕೆ ಕೊಂಡೊಯ್ದಿದ್ದ ತಿರಂಗಾವನ್ನು ಉಡುಗೊರೆಯಾಗಿ ನೀಡಿದರು.

ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟದಿಂದ ಉಪರಾಷ್ಟ್ರಪತಿ ಅಭ್ಯರ್ಥಿಯಾಗಿ ನಾಮ ನಿರ್ದೇಶನವಾದ ಬೆನ್ನಲ್ಲೇ ಸಿ.ಪಿ.ರಾಧಾಕೃಷ್ಣನ್ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಸೋಮವಾರ ಭೇಟಿಯಾದರು.

ವಾಂಗ್ ಯಿ -ದೋವಲ್ ಇಂದು ಗಡಿ ಮಾತುಕತೆ

ದೆಹಲಿ: ಗಡಿ ವಿಷಯಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್ ಜತೆ ಮಾತುಕತೆ ನಡೆಸುವ ಸಂಬಂಧ ಚೀನಾ ವಿದೇಶಾಂಗ ಸಚಿವ ವಾಂಗ್ ಯಿ ಅವರು ಭಾರತಕ್ಕೆ 2 ದಿನಗಳ ಪ್ರವಾಸ ಕೈಗೊಂಡಿದ್ದಾರೆ. ಸೋಮವಾರ ದೆಹಲಿ ವಿಮಾನ ನಿಲ್ದಾಣದಲ್ಲಿ ವಾಂಗ್ ಯಿ ಅವರನ್ನು ವಿದೇಶಾಂಗ ಸಚಿವಾಲಯದ ಪೂರ್ವ ಏಷ್ಯಾ ವಿಭಾಗದ ಜಂಟಿ ಕಾರ್ಯದರ್ಶಿ ಗೌರಂಗ ಲಾಲ್‌ದಾಸ್ ಸ್ವಾಗತಿಸಿದರು. ವಾಂಗ್ ಯಿ ಮತ್ತು ದೋವಲ್ ಅವರು ಮಂಗಳವಾರ ಮಾತುಕತೆ ನಡೆಸಲಿದ್ದಾರೆ. ಇದು 24ನೇ ಸುತ್ತಿನ ಚರ್ಚೆಯಾಗಿದೆ.

10 ವರ್ಷಗಳಲ್ಲಿ ₹ 130 ಲಕ್ಷ ಕೋಟಿ ಸಾಲ ಹೆಚ್ಚಳ

ದೆಹಲಿ: ಕೇಂದ್ರ ಸರಕಾರದ ಸಾಲ ಕಳೆದ 10 ವರ್ಷಗಳಲ್ಲಿ ₹130 ಲಕ್ಷ ಕೋಟಿ ಹೆಚ್ಚಳ ಆಗಿದೆ. ಲೋಕಸಭೆಯಲ್ಲಿ ಪ್ರಶ್ನೋತ್ತರ ಅವಧಿಯಲ್ಲಿ ಸಂಸದ ಡಾ.ಎಂ.ಕೆ. ವಿಷ್ಣು ಪ್ರಸಾದ್ ಕೇಳಿದ ಪ್ರಶ್ನೆಗೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ನೀಡಿರುವ ಉತ್ತರದಲ್ಲಿ ಈ ಮಾಹಿತಿ ಇದೆ. 2015- 16ರಲ್ಲಿ ಕೇಂದ್ರದ ಸಾಲವು ₹70.98 ಲಕ್ಷ ಕೋಟಿ ಆಗಿತ್ತು. 2025-26ರಲ್ಲಿ ₹200.16 ಲಕ್ಷ ಕೋಟಿಗೆ ಜಿಗಿದಿದೆ. ಕೇಂದ್ರವು ಈ ವರ್ಷ ₹4.61 ಲಕ್ಷ ಕೋಟಿ ಸಾಲ ಮರುಪಾವತಿ ಮಾಡಿದೆ. ಒಟ್ಟು ಸಾಲಕ್ಕೆ ಈ ವರ್ಷ ಪಾವತಿಸುತ್ತಿರುವ ಬಡ್ಡಿ ₹12.76 ಲಕ್ಷ ಕೋಟಿ.

ಅಗೆದಿರುವ ಗುಂಡಿಗಳ ವರದಿ ಬರುವ ತನಕ ಹೊಸ ಗುಂಡಿ ಅಗೆಯಲ್ಲ: ಪರಂ ರಾಜ್ಯ ಸರಕಾರದ ಹಾರಿಕೆ ಉತ್ತರಕ್ಕೆ ಬಿಜೆಪಿ ಸದಸ್ಯರಿಂದ ಆಕ್ಷೇಪ, ಸಭಾತ್ಯಾಗ

ಗುಂಡಿ ಅಗೆತಕ್ಕೆ ತಾತ್ಕಾಲಿಕ ಬ್ರೇಕ್

ವಿಶ್ವವಾಣಿ ಸುದ್ದಿಮನೆ ವಿಧಾನಸಭೆ

ರಾಷ್ಟ್ರಾದ್ಯಂತ ಭಾರಿ ಸದ್ದಾಗಿದ್ದ ಬುರುಡೆ ಪ್ರಕರಣದ ತನಿಖೆಗೆ ತಾತ್ಕಾಲಿಕ ಬ್ರೇಕ್ ಬಿದ್ದಿದ್ದು, ಈಗಾಗಲೇ ಎಫ್‌ಎಸ್‌ಎಲ್‌ಗೆ ಕಳುಹಿಸಿರುವ ಮಾದರಿಯ ಫಲಿತಾಂಶ ಬರುವ ತನಕ ಹೊಸ ಗುಂಡಿ ತೆಗೆಯುವುದಿಲ್ಲ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ ಸ್ಪಷ್ಟಪಡಿಸಿದರು.

ವಿಧಾನಸಭೆಯಲ್ಲಿ ಸೋಮವಾರ ಮಧ್ಯಾಹ್ನ ವಿಶೇಷ ತನಿಖಾ ತಂಡದ ರಚನೆಯನ್ನು ಸಮರ್ಥಿಸಿಕೊಳ್ಳುವ ಜತೆಜತೆಗೆ ಹೊಸ ಗುಂಡಿಗಳನ್ನು ಅಗೆಯುವುದಿಲ್ಲ ಎನ್ನುವ ಮೂಲಕ ಅಡ್ಡ ಗೋಡೆಯ ಮೇಲೆ ದೀಪ ಇಡುವ ಪ್ರಯತ್ನ ಮಾಡಿದರು. ಆದರೆ ಪರಮೇಶ್ವರ ಹೇಳಿಕೆಗೆ ಬಿಜೆಪಿ ಶಾಸಕರು ಆಕ್ಷೇಪ ವ್ಯಕ್ತಪಡಿಸಿದ್ದು, ಎಸ್‌ಐಟಿ ರಚನೆ ಹಿಂದಿರುವ ಶಕ್ತಿ ಯಾವುದು? ಅನಾಮಧೇಯ ವ್ಯಕ್ತಿಯ ಹಿಂದಿರುವ ಷಡ್ಯಂತ್ರವೇನು? ಎನ್ನುವ ಬಗ್ಗೆ ಗೃಹ ಸಚಿವರು ಸ್ಪಷ್ಟನೆ ನೀಡಬೇಕು ಎಂದು ಪಟ್ಟು ಹಿಡಿದರು. ಈ ವೇಳೆ ಆಡಳಿತ-ಪ್ರತಿಪಕ್ಷ ಶಾಸಕರ ನಡುವೆ ಮಾತಿಗೆ ಮಾತು ಬೆಳೆದು ಕೆಲಕಾಲ ಸಭೆಯನ್ನು ಮುಂದೂಡಲಾಗಿತ್ತು. ಬಳಿಕ ವಿಧಾನಸಭೆ ನಡೆದಾಗಲೂ, ಸರಕಾರದ ನಡೆಯನ್ನು ಖಂಡಿಸಿ ಪ್ರತಿಪಕ್ಷ ಸದಸ್ಯರು ಸಭಾತ್ಯಾಗ ಮಾಡಿದರು. → 4

ಬಿಜೆಪಿ ಶಾಸಕರ ಆಕ್ಷೇಪ

ವಿಶೇಷ ತನಿಖಾ ತಂಡದಿಂದ ಮಧ್ಯಂತರ ವರದಿಯ ನಿರೀಕ್ಷೆಯಲ್ಲಿದ್ದ ಬಿಜೆಪಿ ನಾಯಕರು, ಪರಮೇಶ್ವರ ಅವರ ಹೇಳಿಕೆಗೆ ಆಕ್ಷೇಪ ವ್ಯಕ್ತಪಡಿಸಿದರು. ಯಾರ ಷಡ್ಯಂತ್ರವಿದೆ ಎನ್ನುವ ಬಗ್ಗೆ ಯಾವುದೇ ಪ್ರಸ್ತಾಪವಿಲ್ಲ. ಎಸ್‌ಐಟಿಗೆ ನಮ್ಮ ವಿರೋಧವಿಲ್ಲ. ಆದರೆ ಇದರ ಹೆಸರಲ್ಲಿ ಧರ್ಮಸ್ಥಳಕ್ಕೆ ಮಾಡುತ್ತಿರುವ ಅನ್ಯಾಯವನ್ನು ತಡೆಗಟ್ಟಲು ಸರಕಾರ ಏಕೆ ಸೂಚನೆ ನೀಡುತ್ತಿಲ್ಲ? ಸಾಮಾಜಿಕ ಜಾಲತಾಣಗಳಲ್ಲಿ ಬರುವ ಪೋಸ್ಟ್‌ಗಳ ವಿರುದ್ಧ ಕ್ರಮ ಏಕೆ ತೆಗೆದುಕೊಂಡಿಲ್ಲ? ಮುಸುಕುಧಾರಿಯ ಹಿಂದಿರುವ ಶಕ್ತಿಗಳೇನು? ಹಣಕಾಸು ನೆರವು ಎಲ್ಲಿಂದ ಬರುತ್ತಿದೆ? ಇದರ ಬಗ್ಗೆ ಸರಕಾರದ ನಡೆಯೇನು? ಎನ್ನುವ ಬಗ್ಗೆ ಮಾಹಿತಿ ನೀಡಬೇಕು ಎಂದು ಆಗ್ರಹಿಸಿದರು.

ಪರಮೇಶ್ವರ ಹೇಳಿದ್ದೇನು?

- ವಿಶೇಷ ತನಿಖಾ ತಂಡದಿಂದ ಯಾವುದೇ ಮಧ್ಯಂತರ ವರದಿ ಬಂದಿಲ್ಲ
- ಧರ್ಮಸ್ಥಳ ಬುರುಡೆ ಪ್ರಕರಣದಲ್ಲಿ ಸರಕಾರಕ್ಕೆ ಯಾವುದೇ ಹಿತಾಸಕ್ತಿ ಇಲ್ಲ
- ವೀರೇಂದ್ರ ಹೆಗ್ಗಡೆ ಕುಟುಂಬದ ವಿರುದ್ಧದ ಆರೋಪದ ಸತ್ಯ ಹೊರಬರಬೇಕಿದೆ
- ಯಾರ ಒತ್ತಡಕ್ಕೂ ಮಣಿದು ರಾಜ್ಯ ಸರಕಾರ ಎಸ್‌ಐಟಿ ರಚನೆ ಮಾಡಿಲ್ಲ

ಲಾಯರ್ ಜಗದೀಶ್‌ಗೆ ಸಂಕಷ್ಟ

ರಾಜಕಾರಣಿಗಳು ಸೇರಿದಂತೆ ಎಲ್ಲರ ವಿರುದ್ಧ ಏಕವಚನದಲ್ಲಿ ವಾಗ್ದಾಳಿ ನಡೆಸುವ ಮೂಲಕವೇ ಸಾಮಾಜಿಕ ಜಾಲತಾಣದಲ್ಲಿ ಕಾಣಿಸಿಕೊಳ್ಳುತ್ತಿದ್ದ ಲಾಯರ್ ಜಗದೀಶ್ ವಿರುದ್ಧ ಮಂಡಿಸಿದ ಹಕ್ಕುಚ್ಯುತಿಯನ್ನು ಒಪ್ಪಿರುವ ಸದನ ಹಕ್ಕುಬಾಧ್ಯತಾ ಸಮಿತಿಗೆ ರವಾನಿಸಲು ತೀರ್ಮಾನಿಸಿದೆ.

ಅನಾಮಿಕ ತಪ್ಪೊಪ್ಪಿಗೆ?

ಬುರುಡೆ ರಹಸ್ಯ

ವಿಧಾನಸಭೆ ಹಾಗೂ ಪರಿಷತ್‌ನಲ್ಲಿ ಈ ವಿಷಯಕ್ಕೆ ಸಂಬಂಧಿಸಿದಂತೆ ಪರ-ವಿರೋಧ ಚರ್ಚೆಯ ಸಮಯದಲ್ಲಿಯೇ, ಧರ್ಮಸ್ಥಳದಲ್ಲಿರುವ ಎಸ್‌ಐಟಿ ಮುಂದೆ ಅನಾಮಧೇಯ ವ್ಯಕ್ತಿ ತಪ್ಪೊಪ್ಪಿಕೊಂಡಿದ್ದಾನೆ ಎನ್ನುವ ಮಾತುಗಳು ಪ್ರಕರಣಕ್ಕೆ ಭಾರಿ ಟ್ವಿಸ್ಟ್ ನೀಡಿದೆ.

ಮೂಲಗಳ ಪ್ರಕಾರ, 'ಒತ್ತಡಕ್ಕೆ ಒಳಗಾಗಿ ಸುಳ್ಳು ಹೇಳಿಕೆ ದಾಖಲಿಸಿದ್ದೇನೆ' ಎಂದು ಎಸ್‌ಐಟಿ ಮುಂದೆ ಹೇಳಿದ್ದಾನೆ ಎನ್ನಲಾಗಿದೆ. ಆದರೆ ಈ ವಿಷಯಕ್ಕೆ ಸಂಬಂಧಿಸಿದಂತೆ ಎಸ್‌ಐಟಿ ಅಥವಾ ಸರಕಾರದಿಂದ ಯಾವುದೇ ಅಧಿಕೃತ ಹೇಳಿಕೆ ಬಿಡುಗಡೆಯಾಗಿಲ್ಲ. ಅನಾಮಧೇಯ ವ್ಯಕ್ತಿ, 2014ರಲ್ಲಿ ಧರ್ಮಸ್ಥಳವನ್ನು ತೊರೆದು ತಮಿಳುನಾಡಿನಲ್ಲಿ ನೆಲೆಸಿದ್ದ. → 4

ತಿಮರೋಡಿ ವಿರುದ್ಧ ಕ್ರಮಕ್ಕೆ ಸೂಚನೆ

ಧರ್ಮಸ್ಥಳ ಪ್ರಕರಣಕ್ಕೆ ಸಂಬಂಧಿಸಿದಂತೆ ಸೌಜನ್ಯಾ ಪರ ಹೋರಾಟದಲ್ಲಿ ಮುಂಚೂಣಿಯಲ್ಲಿ ಗುರುತಿಸಿಕೊಂಡಿದ್ದ ಮಹೇಶ್ ತಿಮರೋಡಿ ಬಂಧನಕ್ಕೆ ಗೃಹ ಸಚಿವಾಲಯ ಆದೇಶ ನೀಡಿದೆ ಎಂದು ಹೇಳಲಾಗಿದೆ. ಸೌಜನ್ಯಾ ಪರ ಹೋರಾಟದಲ್ಲಿ ಗುರುತಿಸಿಕೊಂಡಿದ್ದ ಮಹೇಶ್ ಶೆಟ್ಟಿ ತಿಮರೋಡಿ ಸಾಮಾಜಿಕ ಜಾಲತಾಣದಲ್ಲಿ ನಾಲಿಗೆ ಹರಿಬಿಟ್ಟಿದ್ದು, ಬಂಧಿಸುವಂತೆ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಮಂಗಳೂರು ಪೊಲೀಸ್ ಆಯುಕ್ತರಿಗೆ ಸೂಚನೆ ನೀಡಿದ್ದಾರೆ ಎನ್ನಲಾಗಿದೆ.

ಸೊಂಪಾದ ಪುಟಗಳು

ಬುರುಡೆ ಪ್ರಕರಣದಲ್ಲಿ ಕೊನೆಗೆ ಸಿಕ್ಕಿದ್ದೇನು?

ಅಶ್ವತ್ಥಕಟ್ಟೆ
ರಂಜಿತ್ ಎಚ್. ಅಶ್ವತ್ಥ



ಅದೇ ಭೂಮಿ, ಆಕಾಶ; ಬದುಕಿನಲ್ಲೆಷ್ಟು ವ್ಯತ್ಯಾಸ!

ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ

ದಾರಿದೀಪೋಕ್ತಿ

ನಾನು ಹಾರಬೇಕಾ ಬೇಡವಾ ಎಂದು ಯಾರ ಅನುಮತಿಯನ್ನೂ ಕೇಳಬೇಕಿಲ್ಲ. ರೆಕ್ಕೆ ನಿಮ್ಮದು, ಆಸೆ ನಿಮ್ಮದು. ಆಕಾಶವಂತೂ ಯಾರಿಗೂ ಸೇರಿದ್ದಲ್ಲ. ಹೀಗಿರುವಾಗ ಹಾರದೇ ಇರುವುದೇ ಅಪರಾಧ.

ವಕ್ರತುಂಡೋಕ್ತಿ



ನಾಳೆಯೂ ನಾನು ಸುಸ್ತಾಗಿದ್ದೇನೆ ಎಂದು ಭಾವಿಸುವುದು ನಿಜವಾದ ಆಲಸ್ಯ.

ತುಮಕೂರಿಗೆ 4 ರೈಲು ಮಾರ್ಗ: ಸೋಮಣ್ಣ

ತುಮಕೂರು: ವೇಗವಾಗಿ ಬೆಳೆಯುತ್ತಿರುವ ತುಮಕೂರು ನಗರ ಹಾಗೂ ಸುತ್ತಲಿನ ಪ್ರದೇಶ, ರೈಲು ಪ್ರಮಾಣ ಅವಲಂಬನೆ ಹೆಚ್ಚಾಗುವ ಭವಿಷ್ಯದ ದೃಷ್ಟಿಯಿಂದ ತುಮಕೂರು- ಬೆಂಗಳೂರು ನಡುವೆ ನಾಲ್ಕು ರೈಲು ಮಾರ್ಗ ನಿರ್ಮಾಣ ಮಾಡಲು ಯೋಜನೆ ರೂಪಿಸಲಾಗುತ್ತಿದೆ. ಈ ಮೂಲಕ ಹೆಚ್ಚುವರಿ ರೈಲುಗಳ ಸೇವೆ ಒದಗಿಸಲಾಗುತ್ತಿದೆ ಎಂದು ಕೇಂದ್ರ ಜಲಶಕ್ತಿ ಹಾಗೂ ರೈಲ್ವೆ ಖಾತೆ ಸಹಾಯಕ ಸಚಿವ ವಿ.ಸೋಮಣ್ಣ ತಿಳಿಸಿದರು.

ಬುರುಡೆ ಪ್ರಕರಣ ಸದನದಲ್ಲಿ ಕೋಲಾಹಲ

ವಿವರಪುಟ → 5

ಎಸ್‌ಸಿ, ಎಸ್‌ಟಿ, ಒಬಿಸಿ ಮಹಿಳೆಯರಿಗೆ ಮೀಸಲು

ಸಹಕಾರ ಸಂಘದಲ್ಲಿ ಇನ್ಮುಂದೆ ಮೀಸಲು

ವಿಶ್ವವಾಣಿ ಸುದ್ದಿಮನೆ ವಿಧಾನಸಭೆ

ಬಹುನಿರೀಕ್ಷಿತ ಸಹಕಾರ ಸಂಘಗಳ ತಿದ್ದುಪಡಿ ವಿಧೇಯಕಕ್ಕೆ ಸೋಮವಾರ ಅನುಮೋದನೆ ದೊರಕಿದ್ದು, ಈ ಮೂಲಕ ಸಹಕಾರ ಸಂಘಗಳಲ್ಲಿಯೂ ಪರಿಶಿಷ್ಟ ಜಾತಿ, ಪಂಗಡ, ಹಿಂದುಳಿದ ವರ್ಗ ಹಾಗೂ ಮಹಿಳೆಯರಿಗೆ ಮೀಸಲು ದೊರೆಕಿದೆ.

ವಿಧಾನಸಭೆಯಲ್ಲಿ ಸೋಮವಾರ ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಪರವಾಗಿ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ್ ವಿಧೇಯಕವನ್ನು ಮಂಡಿಸಿದರು.

ತಿದ್ದುಪಡಿ ವಿಧೇಯಕದಲ್ಲಿ, ಸಹಕಾರ ಸಂಘಗಳ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಗಳಿಗೆ ಇನ್ನು ಮುಂದೆ ಅನುಸೂಚಿತ ಜಾತಿ, ಬುಡಕಟ್ಟು ಸಮುದಾಯ, ಮಹಿಳೆ ಹಾಗೂ ಹಿಂದುಳಿದವರಿಗೆ ಮೀಸಲಾತಿ ದೊರೆಯಲಿದೆ.ಇದಿಷ್ಟೇ ಅಲ್ಲದೇ, ಪ್ರತಿ ಸಹಕಾರ ಸಂಘಕ್ಕೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗದ ತಲಾ ಒಬ್ಬರನ್ನು ಸರಕಾರ ನಾಮ ನಿರ್ದೇಶನ ಮಾಡುವುದಕ್ಕೂ ಅವಕಾಶ ಮಾಡಿಕೊಳ್ಳಲಾಗಿದೆ. → 4

> ಇದು ಸಹಕಾರ ರಂಗದ ಮೇಲೆ ಸರಕಾರದ ನೇರ ಹಸ್ತಕ್ಷೇಪ. ನೆಹರೂ, ಲಾಲ್ ಬಹದ್ದೂರ ಶಾಸ್ತ್ರಿ ಅವರ ಕನಸಿನ ಸಹಕಾರ ರಂಗದ ಉತ್ತೇಜನಕ್ಕೆ ಸರಕಾರ ತಿಲಾಂಜಲಿ ಇಟ್ಟಿದೆ. ಇದರ ಬದಲಾಗಿ ಸಹಕಾರ ಕ್ಷೇತ್ರವನ್ನೇ ಮುಚ್ಚಿಬಿಡಿ.
> **-ಜಿ.ಟಿ.ದೇವೇಗೌಡ** ಜೆಡಿಎಸ್ ಶಾಸಕ

> ಸರಕಾರದಿಂದ ಲೆಕ್ಕಪರಿಶೋಧನೆ ಮಾಡಿಸುವುದು, ನಿರ್ದೇಶಕರು ಪ್ರತಿ ವರ್ಷ ಆಸ್ತಿ ಘೋಷಣೆ ಮಾಡಬೇಕು ಎಂಬುದು ಅಪ್ರಾಯೋಗಿಕ. ಆದ್ದರಿಂದ ಇದನ್ನು ತಡೆಹಿಡಿದು ಅಧ್ಯಯನಕ್ಕೆ ಸಮಿತಿ ರಚಿಸಿ ನಂತರ ಜಾರಿಗೊಳಿಸಿ.
> **ಆರಗ ಜ್ಞಾನೇಂದ್ರ**, ಶಾಸಕ

ಅಪ್ರಾಪ್ತರಿಗೆ ನಿಶ್ಚಿತಾರ್ಥ ಮಾಡಿದರೆ ಜೈಲು

ಮತ್ತೊಂದು ಮಹತ್ವದ ಬೆಳವಣಿಗೆಯಲ್ಲಿ ಅಪ್ರಾಪ್ತ ವಯಸ್ಕರ ವಿವಾಹ ನಿಶ್ಚಿತಾರ್ಥ ನಿಷೇಧಿಸುವ ಹಾಗೂ ಈ ಅಪರಾಧಕ್ಕೆ ಎರಡು ವರ್ಷ ಕಠಿಣ ಶಿಕ್ಷೆ ಮತ್ತು ಒಂದು ಲಕ್ಷ ರುಪಾಯಿ ದಂಡ ವಿಧಿಸುವ ತಿದ್ದುಪಡಿಯನ್ನು ಬಾಲ್ಯ ವಿವಾಹ ನಿಷೇಧ ಕಾಯಿದೆ ತರಲಾಗಿದೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ವಿಧೇಯಕ ಮಂಡಿಸಿ, ಬಾಲ್ಯ ವಿವಾಹ ಪಿಡುಗು ಬೇರು ಸಮೇತ ದೂರವಾಗಿಲ್ಲ ಎಂದರು.

54 ಲಕ್ಷ ಜನ್‌ಧನ್ ಖಾತೆ ನಿಷ್ಕ್ರಿಯ

ದೆಹಲಿ: ಪ್ರಧಾನಮಂತ್ರಿ ಜನ್‌ಧನ್ ಯೋಜನೆಯಡಿ ಕರ್ನಾಟಕದಲ್ಲಿ ತೆರೆಯಲಾಗಿದ್ದ ₹2.08 ಕೋಟಿ ಖಾತೆಗಳ ಪೈಕಿ 54 ಲಕ್ಷ ಖಾತೆಗಳು ನಿಷ್ಕ್ರಿಯವಾಗಿವೆ ಎಂದು ಕೇಂದ್ರ ಹಣಕಾಸು ಸಚಿವಾಲಯವು ಲೋಕಸಭೆಗೆ ಸೋಮವಾರ ತಿಳಿಸಿದೆ.

ದೇಶದಲ್ಲಿ ಜುಲೈ 31ರವರೆಗೆ ಒಟ್ಟು 56.04 ಕೋಟಿ ಜನ್‌ಧನ್ ಖಾತೆಗಳನ್ನು ತೆರೆಯಲಾಗಿದೆ. ಈ ಪೈಕಿ, ₹13.04 ಲಕ್ಷ ಖಾತೆಗಳು ನಿಷ್ಕ್ರಿಯವಾಗಿವೆ. ರಿಸರ್ವ್ ಬ್ಯಾಂಕ್ 2009ರಲ್ಲಿ ಹೊರಡಿಸಿದ ಮಾರ್ಗಸೂಚಿಗಳ ಪ್ರಕಾರ, 2 ವರ್ಷಗಳಿಗಿಂತ ಹೆಚ್ಚು ಕಾಲ ಖಾತೆಯಲ್ಲಿ ಯಾವುದೇ ವಹಿವಾಟು ನಡೆಯದಿದ್ದರೆ ಉಳಿತಾಯ ಖಾತೆಯನ್ನು ನಿಷ್ಕ್ರಿಯ ಎಂದು ಪರಿಗಣಿಸಬೇಕು ಎಂದು ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ ಅವರು ಸದನಕ್ಕೆ ತಿಳಿಸಿದರು. ನೇರ ನಗದು ವರ್ಗಾವಣೆಯಂತಹ ಸರಕಾರದ ವಿವಿಧ ಯೋಜನೆಗಳ ಮೊತ್ತವನ್ನು ಜನ್‌ಧನ್ ಖಾತೆ ಸೇರಿ ಬ್ಯಾಂಕ್ ಖಾತೆಗೆ ನೇರವಾಗಿ ಜಮಾ ಮಾಡಲಾಗುತ್ತದೆ. ಈ ಮೊತ್ತವನ್ನು ನಿಷ್ಕ್ರಿಯ ಖಾತೆಗಳಿಗೂ ವರ್ಗಾಯಿಸಲಾಗುತ್ತದೆ ಎಂದು ಸ್ಪಷ್ಟಪಡಿಸಿದರು. ಖಾತೆ ನಿಷ್ಕ್ರಿಯಗೊಳ್ಳುವ ಬಗ್ಗೆ ಬ್ಯಾಂಕುಗಳು ಖಾತೆದಾರರಿಗೆ ಲಿಖಿತ ಮಾಹಿತಿ ನೀಡುತ್ತವೆ ಎಂದರು.

ಈ ದಿನಗಳು

ಬೆಂಗಳೂರಿನ ಹೆಬ್ಬಾಳದಲ್ಲಿ ನಿರ್ಮಿಸಲಾದ ನೂತನ ಮೇಲ್ಸೇತುವೆಯನ್ನು ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಸಾರ್ವಜನಿಕ ಬಳಕೆಗೆ ಮುಕ್ತಗೊಳಿಸಿದರು. ಈ ವೇಳೆ ಡಿ.ಕೆ.ಶಿವಕುಮಾರ್ ಅವರು ಮೇಲ್ಸೇತುವೆಯಲ್ಲಿ ತಮ್ಮ ಹಳೆಯ ಬೈಕ್ ಓಡಿಸಿ, ಕಾಲೇಜು ದಿನಗಳನ್ನು ಮೆಲುಕು ಹಾಕಿದರು.

ದರ್ಶನ್ ಬೇರೆ ಜೈಲಿಗೆ ಶಿಫ್ಟ್ ವಿಚಾರಣೆ ಮುಂದೂಡಿಕೆ

ಬೆಂಗಳೂರು: ನಟ ದರ್ಶನ್ ಅವರನ್ನು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಿಂದ ಬಳ್ಳಾರಿ ಕೇಂದ್ರ ಕಾರಾಗೃಹಕ್ಕೆ ಸ್ಥಳಾಂತರಿಸುವುದಕ್ಕೆ ಸಂಬಂಧಿಸಿದಂತೆ ಸಲ್ಲಿಕೆಯಾದ ಅರ್ಜಿಯ ವಿಚಾರಣೆಯನ್ನು ಸಿಸಿಎಚ್ 64ನೇ ನ್ಯಾಯಾಲಯ ಆಗಸ್ಟ್ 23ಕ್ಕೆ ಮುಂದೂಡಿತು.

'ಬೇರೆ ಕಾರಾಗೃಹಕ್ಕೆ ಸ್ಥಳಾಂತರ ಮಾಡುವುದಾದರೆ ನಮ್ಮ ವಾದವನ್ನೂ ಆಲಿಸಬೇಕು' ಎಂದು ಆಗಸ್ಟ್ 14ರಂದೇ ದರ್ಶನ್ ಪರ ವಕೀಲರು ನ್ಯಾಯಾಲಯದಲ್ಲಿ ಮನವಿ ಮಾಡಿದ್ದರು. ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಾಧೀಶರು, ದರ್ಶನ್ ಪರ ವಕೀಲರಿಗೆ ಆಕ್ಷೇಪಣೆ ಸಲ್ಲಿಸಲು ಅವಕಾಶ ನೀಡಿ ಮುಂದಿನ ವಿಚಾರಣೆಯನ್ನು ಆಗಸ್ಟ್ 23ಕ್ಕೆ ಮುಂದೂಡಿದರು.

ವಿಜಯಲಕ್ಷ್ಮಿ ಭೇಟಿ

ವಿಜಯಲಕ್ಷ್ಮಿ ಅವರು ಪರಪ್ಪನ ಅಗ್ರಹಾರ ಕಾರಾಗೃಹಕ್ಕೆ ಸೋಮವಾರ ಸಂಜೆ ಭೇಟಿ ನೀಡಿ ಪತಿ ದರ್ಶನ್ ಅವರ ಆರೋಗ್ಯ ವಿಚಾರಿಸಿದರು. ಈ ವೇಳೆ ಮುಂದಿನ ಕಾನೂನು ಹೋರಾಟದ ಬಗ್ಗೆ ದರ್ಶನ್ ಅವರೊಂದಿಗೆ ಚರ್ಚಿಸಿದರು ಎಂಬ ಮಾಹಿತಿ ಲಭ್ಯವಾಗಿದೆ.

ತಿರುಚ್ಚಿ ಶಿವ ಇಂಡಿ ವಿಪಿ ಅಭ್ಯರ್ಥಿ?

ದೆಹಲಿ: ಉಪರಾಷ್ಟ್ರಪತಿ ಚುನಾವಣೆಗೆ ಇಂಡಿಯಾ ಮೈತ್ರಿಕೂಟ ತನ್ನ ಅಭ್ಯರ್ಥಿಯನ್ನಾಗಿ, ತಮಿಳುನಾಡಿನ ಡಿಎಂಕೆ ರಾಜ್ಯಸಭಾ ಸಂಸದ ತಿರುಚಿ ಸಿವಾ ಅವರನ್ನು ಆಯ್ಕೆ ಮಾಡುವ ಸಾಧ್ಯತೆ ಇದೆ. ಪ್ರಾದೇಶಿಕ ರಾಜಕೀಯದಿಂದ ಎದುರಾಗುವ ಪ್ರಮುಖ ಅಡಚಣೆಯನ್ನು ನಿವಾರಿಸುವ ಕಾರ್ಯತಂತ್ರದ ನಡೆಯಾಗಿ, ಇಂಡಿಯಾ ಮೈತ್ರಿಕೂಟ, ಡಿಎಂಕೆ ಪಕ್ಷದಿಂದ ರಾಜ್ಯಸಭಾ ಸಂಸದರಾಗಿರುವ ತಿರುಚಿ ಸಿವಾ ಅವರನ್ನು ಉಪರಾಷ್ಟ್ರಪತಿ ಅಭ್ಯರ್ಥಿಯಾಗಿ ಆಯ್ಕೆ ಮಾಡುವ ಸಾಧ್ಯತೆಯಿದೆ. ಅಲ್ಲದೇ ಕೇವಲ ತಮಿಳುನಾಡು ಮಾತ್ರವಲ್ಲದೇ, ಸಮಸ್ತ ದಕ್ಷಿಣದ ರಾಜ್ಯಗಳ ಬೆಂಬಲವನ್ನೂ ಗಳಿಸಬಹುದು ಎಂಬುದು ಇಂಡಿಯಾ ಬ್ಲಾಕ್ ಲೆಕ್ಕಾಚಾರವಾಗಿದೆ.

ನಿರುದ್ಯೋಗದ ಪ್ರಮಾಣ ಇಳಿಕೆ

ದೆಹಲಿ: ದೇಶದಲ್ಲಿ ನಿರುದ್ಯೋಗ ದರವು ಜುಲೈನಲ್ಲಿ ಶೇ.5.2ಕ್ಕೆ ಇಳಿದಿದೆ ಎಂದು ಕೇಂದ್ರ ಸಾಂಖ್ಯಿಕ ಮತ್ತು ಯೋಜನಾ ಅನುಷ್ಠಾನ ಸಚಿವಾಲಯ ಸೋಮವಾರ ತಿಳಿಸಿದೆ. ಜೂನ್ ತಿಂಗಳಿನಲ್ಲಿ ಇದು ಶೇ.5.6ರಷ್ಟಿತ್ತು. ಪುರುಷರಲ್ಲಿ ನಿರುದ್ಯೋಗ ಪ್ರಮಾಣವು ಶೇ.5.3ರಷ್ಟಿದ್ದರೆ, ಮಹಿಳೆಯರಲ್ಲಿ ಇದು ಶೇ.5.1ರಷ್ಟು ಇದೆ. ಈ ಪೈಕಿ 15ರಿಂದ 29 ವರ್ಷದೊಳಗಿನವರ ನಿರುದ್ಯೋಗ ಪ್ರಮಾಣವು ಶೇ.15.3ರಿಂದ ಶೇ.14.9ಕ್ಕೆ ತಗ್ಗಿದೆ. ಇದು ನಗರ ಪ್ರದೇಶದಲ್ಲಿ ಶೇ.19ರಷ್ಟಿದ್ದರೆ, ಗ್ರಾಮೀಣ ಭಾಗದಲ್ಲಿ ಶೇ.13ರಷ್ಟಿದೆ. ನಗರ ಪ್ರದೇಶದಲ್ಲಿರುವ ಎಲ್ಲ ವಯೋಮಾನದವರ ನಿರುದ್ಯೋಗ ಪ್ರಮಾಣ ಜೂನ್‌ನಲ್ಲಿ ಶೇ.7.1 ಇತ್ತು. ಇದು ಜುಲೈನಲ್ಲಿ ಶೇ.7.2ಕ್ಕೆ ಏರಿಕೆಯಾಗಿದೆ ಎಂದು ತಿಳಿಸಿದೆ.

ಫನ್‌ತರಂಗ
- ರಘುಪತಿ ಶೃಂಗೇರಿ -

ದೇಶದಲ್ಲೇ ನಾನೇ ನಂ.1.. 'ಗೊತ್ತಿಲ್ಲ ಸಚಿವ' ಎಂಬ ಟ್ರೋಲ್‌ಗೆ ಗೃಹ ಮಂತ್ರಿ ತಿರುಗೇಟು

ಸುದ್ದಿ

ಏನ್ ಕೇಳಿದ್ರೂ ಗೊತ್ತಿಲ್ಲ ಅಂತಾನೆ, ನಮ್ ಮಗೂ ಮುಂದೆ ನಂ.1 ರಾಜಕಾರಣಿ ಆಗೋ ಲಕ್ಷಣ ಇದೆ ಕಣ್ರೀ!!



ಕೋಡಿಬಿದ್ದ ಕೆರೆಗಳು, ಅಣೆಕಟ್ಟೆಗಳು ಭರ್ತಿ, ರಸ್ತೆ ಸಂಪರ್ಕ ಕಡಿತ, ಜನಜೀವನ ಅಸ್ತವ್ಯಸ್ತ

ಬಹುತೇಕ ಜಿಲ್ಲೆಗಳಲ್ಲಿ ವರುಣನ ಆರ್ಭಟ

ಬೆಂಗಳೂರು: ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಸೋಮವಾರ ವರುಣನ ಆರ್ಭಟ ಮುಂದುವರಿದಿದ್ದು, ಜನಜೀವನ ಅಸ್ತವ್ಯಸ್ತವಾಗಿದೆ. ತಗ್ಗುಪ್ರದೇಶಗಳು, ಜಮೀನುಗಳು ಜಲಾವೃತಗೊಂಡಿವೆ. ಹಲವೆಡೆ ಮನೆಗಳಿಗೆ ಹಾನಿಯಾಗಿದೆ. ಜಲಾಶಯಗಳಿಗೆ ಒಳಹರಿವು ಹೆಚ್ಚಿದೆ. ಮುಂಜಾಗ್ರತೆಯಾಗಿ ಜಲಾಶಯಗಳಿಂದ ಹೊರಹರಿವಿನ ಪ್ರಮಾಣ ಹೆಚ್ಚಿಸಿದ್ದು, ನದಿ ಪಾತ್ರದ ಪ್ರದೇಶಗಳಲ್ಲಿ ಆತಂಕದ ಸ್ಥಿತಿ ಮೂಡಿದೆ. ಬೆಳಗಾವಿ, ಉತ್ತರ ಕನ್ನಡ, ಧಾರವಾಡ, ಕೊಡಗು, ದಾವಣಗೆರೆ, ಚಿತ್ರದುರ್ಗ ಜಿಲ್ಲೆಯಾದ್ಯಂತ ಹಾಗೂ ಬೀದರ್ ಜಿಲ್ಲೆಯ ಔರಾದ್ ತಾಲೂಕಿನಲ್ಲಿ ಶಾಲೆ, ಕಾಲೇಜುಗಳಿಗೆ ರಜೆ ಘೋಷಿಸಲಾಗಿತ್ತು. ಕೊಡಗು, ಉಡುಪಿ, ಚಿಕ್ಕಮಗಳೂರು ಜಿಲ್ಲೆಯ ನಾಲ್ಕು ತಾಲೂಕು, ಬೆಳಗಾವಿ ಜಿಲ್ಲೆಯ 8 ತಾಲೂಕುಗಳ ವ್ಯಾಪ್ತಿಯಲ್ಲಿ ಜಿಲ್ಲಾಡಳಿತ ಮಂಗಳವಾರವೂ ರಜೆ ಘೋಷಿಸಲಾಗಿದೆ. ಬೆಳಗಾವಿ ಜಿಲ್ಲೆಯಲ್ಲಿ ರಾಜಾ ಲಖಮಗೌಡ ಜಲಾಶಯ (ಹಿಡಕಲ್) ಭರ್ತಿಯಾಗಿದ್ದು, → 4

ಎಲ್ಲೆಲ್ಲಿ ಏನೇನು ಅನಾಹುತ?

- ಬೀದರ್ ಜಿಲ್ಲೆಯ ನಂದಿ ಬಿಜಲಗಾಂವ್ ಗ್ರಾಮದಲ್ಲಿ 40ಕ್ಕೂ ಹೆಚ್ಚು ಎಮ್ಮೆಗಳು ನೀರು ಪಾಲು
- ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ ದೇಗುಲದ ಕಪ್ಪೆಶಂಕರನಾರಾಯಣ ದೇಗುಲ ಮುಳುಗಡೆ
- ಸುರಿಯುತ್ತಿರುವ ಭಾರೀ ಮಳೆಗೆ ಕೊಪ್ಪಳದ ಐತಿಹಾಸಿಕ ಸ್ಮಾರಕಗಳು ಸಂಪೂರ್ಣವಾಗಿ ಜಲಾವೃತ

ಬೆಳಗಾವಿ ಜಿಲ್ಲೆಯ ಸವದತ್ತಿ ಬಳಿಯ ನವಿಲುತೀರ್ಥ ಅಣೆಕಟ್ಟಿನಿಂದ ಸೋಮವಾರ 10 ಸಾವಿರ ಕ್ಯೂಸೆಕ್ ನೀರು ಹರಿಸಲಾಯಿತು.

ಸಿಇಸಿ ವಿರುದ್ಧ ಮಹಾಭಿಯೋಗ?

ದೆಹಲಿ: ಮತಗಳ್ಳತನ ಆರೋಪದ ಮೇಲೆ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ವಿರುದ್ಧ ಸಂಸತ್ತಿನಲ್ಲಿ ಮಹಾಭಿಯೋಗ ಪ್ರಸ್ತಾವನೆ ಮಂಡಿಸಲು ರಾಜ್ಯಸಭೆಯ ಪ್ರತಿ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅಧ್ಯಕ್ಷತೆಯಲ್ಲಿ ನಡೆದ ಇಂಡಿಯಾ ಕೂಟದ ಸಭೆಯಲ್ಲಿ ನಿರ್ಧರಿಸಲಾಗಿದೆ. ಈ ಕುರಿತು ಪ್ರತಿಕ್ರಿಯಿಸಿದ ಪ್ರತಿಪಕ್ಷದ ನಾಯಕರೊಬ್ಬರು, ಇಂಡಿಯಾ ಕೂಟದ ಎಲ್ಲ ಸದಸ್ಯರು ಈ ಪ್ರಸ್ತಾಪವನೆಗೆ ಒಪ್ಪಿಗೆ ನೀಡಿದ್ದಾರೆ. ಕಾನೂನು ವಿಧಾನಗಳ ಕುರಿತು ಶೀಘ್ರ ಚರ್ಚೆ ನಡೆಯಲಿದೆ. ಈ ಪ್ರಕ್ರಿಯೆ ನ್ಯಾಯಾಧೀಶರ ಮಹಾಭಿಯೋಗದಂತೆಯೇ ಇರಲಿದೆ ಎಂದು ಹೇಳಿದ್ದಾರೆ.

ಸಮಾಚಾರ ಸಣ್ಣದಲ್ಲ

ಜನರ ನೆರವಿಗೆ ಶಾಸಕ ಚವ್ಹಾಣ ಸೂಚನೆ

ಔರಾದ: ಕಳೆದೆರಡು ದಿನಗಳಿಂದ ಸುರಿಯುತ್ತಿರುವ ವಿಪರೀತ ಮಳೆಯಿಂದಾಗಿ ಔರಾದ(ಬಿ) ಮತ್ತು ಕಮಲನಗರ ತಾಲೂಕುಗಳಲ್ಲಿ ಸಾಕಷ್ಟು ಹಾನಿ

ಸಂಭವಿಸಿದ್ದು, ಅಧಿಕಾರಿಗಳು ಕೂಡಲೇ ಸಾರ್ವಜನಿಕರ ನೆರವಿಗೆ ಧಾವಿಸಬೇಕು ಎಂದು ಶಾಸಕ ಪ್ರಭು ಬಿ.ಚವ್ಹಾಣ ಅವರು ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಈ ಕುರಿತು ಪತ್ರಿಕಾ ಪ್ರಕಟಣೆ ಹೊರಡಿಸಿರುವ ಅವರು, ಔರಾದ(ಬಿ) ವಿಧಾನಸಭಾ ಕ್ಷೇತ್ರದಲ್ಲಿ ಕೆರೆ ಕಟ್ಟೆಗಳು ಒಡೆದು ಮಳೆ ನೀರು ಹೊಲಗಳಿಗೆ ನುಗ್ಗಿ ಸಾಕಷ್ಟು ಬೆಳೆ ಹಾನಿ ಸಂಭವಿಸಿದೆ. ಸೋಯಾ, ಉದ್ದು, ಹೆಸರು, ತೊಗರಿ ಸೇರಿದಂತೆ ಎಲ್ಲ ರೀತಿಯ ಬೆಳೆಗಳು ನೀರು ಪಾಲಾಗಿವೆ. ನಂದಿ ಬಿಜಲಗಾಂವ ಒಂದರಲ್ಲೇ ಸಾಕಷ್ಟು ಜಾನುವಾರುಗಳು ಮೃತಪಟ್ಟಿವೆ. ತಾಲ್ಲೂಕಿನಲ್ಲಿ ಹಲವು ಮನೆಗಳು ಕುಸಿದು ಜನಜೀವನ ಅಸ್ತವ್ಯಸ್ತಗೊಂಡಿದೆ. ಸಾರ್ವಜನಿಕರ ರಕ್ಷಣೆಗೆ ತುರ್ತು ಕ್ರಮ ವಹಿಸಬೇಕೆಂದು ನಿರ್ದೇಶನ ನೀಡಿದ್ದಾರೆ. ಕಂದಾಯ, ಕೃಷಿ, ತೋಟಗಾರಿಕೆ, ಪಶು ಸಂಗೋಪನೆ ಇಲಾಖೆಯ ಅಧಿಕಾರಿಗಳು ಖುದ್ದಾಗಿ ಸ್ಥಳ ಪರಿಶೀಲನೆ ನಡೆಸಿ ಹಾನಿಯ ಕುರಿತು ಸರಕಾರಕ್ಕೆ ನಿಖರ ವರದಿ ಸಲ್ಲಿಸಬೇಕು. ಬೆಳೆ, ಮನೆ, ಜಾನುವಾರುಗಳನ್ನು ಕಳೆದುಕೊಂಡು ಸಂಕಷ್ಟದಲ್ಲಿರುವರಿಗೆ ಅಗತ್ಯ ಪರಿಹಾರ ಕಲ್ಪಿಸಲು ಪ್ರಮಾಣಿಕ ಪ್ರಯತ್ನಿಸಬೇಕೆಂದು ತಿಳಿಸಿದ್ದಾರೆ.

ಸತತ ಮಳೆ: ನೀರು ಕುದಿಸಿ ಕುಡಿಯಿರಿ

ಹುಣಸಗಿ: ಸತತ ಮಳೆಯಾಗುತ್ತಿರುವ ಹಿನ್ನೆಲೆ ಹುಣಸಗಿ ಪಟ್ಟಣದಲ್ಲಿ ಯೆಥಾಪ್ರಕಾರ ಸರಬರಾಜು ಆಗುವ ನೀರನ್ನು ಕಾಯಿಸಿ ಆರಿಸಿ ಕುಡಿಯಲು

ಸಾರ್ವಜನಿಕರಲ್ಲಿ ಪ.ಪಂ ವ್ ಂ ಂ ಖ್ಯಾ ಧಿ ಕಾ ರಿ ಸಿದ್ರಾಮೇಶ್ವರ ಶಖಾಪುರ ತಿಳಿಸಿದ್ದಾರೆ. ಮಳೆಗೆ ಮಣ್ಣು ಮಿಶ್ರಿತ ನೀರು ತೆರೆದ ಭಾವಿಗೆ ಸೇರಿಲಿದ್ದು, ಇಲ್ಲಿಂದಲೇ ಪ್ರತಿಯೊಂದು ವಾರ್ಡ್‌ಗಳಿಗೆ ಕುಡಿಯುವ ನೀರು ಸರಬರಾಜು ಆಗುತ್ತಿವೆ. ಆದ್ದರಿಂದ ಮಳೆ ಕಡಿಮೆಯಾಗುವವರೆಗೂ ಮನೆಯಲ್ಲಿ ನೀರು ಕಾಯಿಸಿ ಸೋಸಿದ ನಂತರ ಕುಡಿಯಬೇಕು. ಸುತ್ತಲೂ ಸ್ವಯಂ ಸ್ವಚ್ಚತೆ ಕಾಪಾಡಿಕೊಂಡು ವಾತಾವರಣ ಶುದ್ಧವಿಟ್ಟುಕೊಳ್ಳಬೇಕು ಸಲಹೆ ನೀಡಿದ್ದಾರೆ. ನೀರು ಕುದಿಸಿ ಕುಡಿಯದೇ ಇದ್ದರೆ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರಲಿವೆ. ಈ ಬಗ್ಗೆ ಸಾರ್ವಜನಿಕರು ಹಾಗೂ ನಿವಾಸಿಗರು ಆರೋಗ್ಯ ದೃಷ್ಟಿಯಿಂದ ಸ್ವತ ಮುಂಜಾಗ್ರತೆ ವಹಿಸುವುದು ಸೂಕ್ತವಾಗಿದೆ. ಕಾಯಿಸಿ ಸೋಸಿದ ಶುದ್ಧ ನೀರನ್ನೇ ಕುಡಿಯುವ ಅಭ್ಯಾಸ ಕೆಲವು ದಿನಗಳ ಮಟ್ಟಿಗೆ ಪ್ರಯತ್ನಿಸಬೇಕು ಎಂದು ಪ್ರಕಟಣೆಗೆ ತಿಳಿಸಿದ್ದಾರೆ.

ಮಾಂಜ್ರಾ ನದಿಗೆ ನೀರು ಬಿಡುಗಡೆ: ಎಚ್ಚರಿಕೆ

ಬೀದರ: ಬಸವಕಲ್ಯಾಣ ತಾಲೂಕಿನ ಮುಸ್ತಾಪೂರ ಗ್ರಾಮದ ಹತ್ತಿರವಿರುವ ಚುಳಕಿನಾಲಾ ಜಲಾಶಯ ಮೇಲ್ಭಾಗದ ಪ್ರದೇಶದಲ್ಲಿ ವ್ಯಾಪಕವಾಗಿ ನಿರಂತರವಾಗಿ ಮಳೆಯಾಗುತ್ತಿರುವುದರಿಂದ ಜಲಾಶಯದ ಒಳಹರಿವು ಹೆಚ್ಚಾಗುತ್ತಲಿರುವುದರಿಂದ ಜಲಾಶಯವು ಯಾವುದೇ ಕ್ಷಣದಲ್ಲಿ ಭರ್ತಿಯಾಗುವ ಹಂತದಲ್ಲಿರುತ್ತದೆ. ಸದರಿ ಜಲಾಶಯದ ಗರಿಷ್ಟ ಮಟ್ಟ ತಲುಪುವ ಸಂಭವ ಕಂಡಲ್ಲಿ ತಕ್ಷಣ ಚುಳಕಿನಾಲಾ ಜಲಾಶಯದ ಗೇಟುಗಳನ್ನು ತೆರೆದು ನದಿಗೆ ನೀರು ಬಿಡಲಾಗುವುದು. ಆದಕಾರಣ ಜಲಾಶಯದ ಕೆಳಭಾಗದ ಗ್ರಾಮಗಳಿಗೆ ನದಿ ಪ್ರವಾಹದಿಂದ ತೊಂದರೆ ಉಂಟಾಗಬಹುದಾಗಿದೆ. ನದಿಯ ಕೆಳಭಾಗದ ತಳಪಾತ್ರದ ಅಕ್ಕಪಕ್ಕದ ಮುಚಾಳಂಬ, ಗೋರ್ಟ (ಬಿ), ರಾಚಪ್ಪ ಗೌಡಗಾಂವ, ಕೋಟಗೇರಾ, ಕುಟೆಗಾವ, ಲಾಧ, ಇಂಚೂರ್, ಹೊನ್ನಳ್ಳಿ, ಮೋರಂಬಿ ಗ್ರಾಮದ ಜನರು, ಸಾರ್ವಜನಿಕರು ಎಚ್ಚರಿಕೆಯಿಂದ ಇರಬೇಕು, ನದಿಯಲ್ಲಿ ಇಳಿಯುವುದಾಗಲಿ, ಬಟ್ಟೆ ಒಗೆಯುವುದಾಗಲಿ, ಈಜುವುದಾಗಲಿ, ದನಕರುಗಳಿಗೆ ನೀರು ಕುಡಿಸುವುದಾಗಲಿ ಮಾಡಬಾರದು. ಯಾವುದೇ ಇಲಾಖೆಗಳಿಗೆ ಸಂಬಂಧಪಟ್ಟ ಆಸ್ತಿಗಳಿದ್ದಲ್ಲಿ ಸಂರಕ್ಷಿಸಿಕೊಳ್ಳಲು ಮುಂಜಾಗೃತೆ ವಹಿಸಿಕೊಳ್ಳುವಂತೆ ತಿಳಿಸಿದ್ದಾರೆ.

ರಾಜ್ಯ ಪ್ರಶಸ್ತಿಗಾಗಿ ಅರ್ಜಿ ಆಹ್ವಾನ

ಬೀದರ: ವಿಶೇಷಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ವತಿಯಿಂದ ಅ.1ರಂದು ವಿಶ್ವ ಹಿರಿಯ ನಾಗರಿಕರ ದಿನಾಚರಣೆಯನ್ನು ರಾಜ್ಯ ಮಟ್ಟದಲ್ಲಿ ಆಚರಿಸುವ ಸಂದರ್ಭದಲ್ಲಿ ವಿವಿಧ ಕ್ಷೇತ್ರದಲ್ಲಿ (ಶಿಕ್ಷಣ ಕ್ಷೇತ್ರ, ಸಾಹಿತ್ಯ ಕ್ಷೇತ್ರ, ಕಾನೂನು, ಪ್ರತಿಭೆ / ಕ್ರೀಡೆ ಮತ್ತು ಹಿರಿಯ ನಾಗರಿಕರ ಕ್ಷೇತ್ರದಲ್ಲಿ ಸಮಾಜ ಸೇವೆ) ಗಣನೀಯ ಸೇವೆ ಸಲ್ಲಿಸಿದ ಹಿರಿಯ ನಾಗರಿಕರಿಗೆ ಹಾಗೂ ಸ್ವಯಂ ಸೇವಾ ಸಂಸ್ಥೆಗಳಗೆ ರಾಜ್ಯ ಪ್ರಶಸ್ತಿ ನೀಡಲಾಗುತ್ತಿದ್ದು, ಇದಕ್ಕಾಗಿ ಅರ್ಹರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ ಎಂದು ಬೀದರ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

{ ಡಿ.ಕೆ.ಶಿವಕುಮಾರ್ } ಡಿಸಿಎಂ

ಅಣೆಕಟ್ಟೆಯ ವಿಚಾರ ಚರ್ಚೆ ಮಾಡಲು ತೆಲಂಗಾಣ ಹಾಗೂ ಆಂಧ್ರಪ್ರದೇಶ ಮುಖ್ಯಮಂತ್ರಿಗಳ ಸಭೆಗೆ ಸಮಯ ಕೇಳಿದ್ದೆ. ಈ ವಿಚಾರವನ್ನು ನಿಯಮ 69ರ ಅಡಿಯಲ್ಲಿ ಚರ್ಚೆಗೆ ಸೇರಿಸಲಾಗಿದೆ. ಈ ವಿಚಾರವಾಗಿ ಅನೇಕರು ಚರ್ಚೆ ಮಾಡಲು ಸಿದ್ಧರಿದ್ದು, ಈ ಚರ್ಚೆ ವೇಳೆ ನಾನು ವಿವರವಾದ ಉತ್ತರ ನೀಡುತ್ತೇನೆ.

ಬೀದರ್‌ನಲ್ಲಿ ವರುಣನ ಆರ್ಭಟ| ಜಲಾವೃತವಾದ ರೈತರ ಜಮೀನು | ಸೇತುವೆ ಕುಸಿತ, ಸಂಚಾರ ಸ್ಥಗಿತ

ಔರಾದ್‌ನ ಬೋಂತಿ ಕೆರೆ ಒಡೆದು ಅಪಾರ ಹಾನಿ

ಬೀದರ: ಜಿಲ್ಲೆಯಲ್ಲಿ ಎರಡು ದಿನಗಳಿಂದ ಸುರಿಯುತ್ತಿರುವ ಮಳೆಗೆ ಸೇತುವೆಗಳು ಜಲಾವೃತವಾಗಿವೆ. ವಿವಿಧೆಡೆ ಸೇತುವೆ ಕುಸಿತದಿಂದ ಸಂಚಾರ ಸ್ಥಗಿತವಾಗಿದೆ. ಮಳೆಯಿಂದ ರೈತರ ಜಮೀನುಗಳಿಗೆ ನೀರು ನುಗ್ಗಿ ಅಪಾರ ಪ್ರಮಾಣದ ಹಾನಿಯಾಗಿದೆ. ರವಿವಾರ ರಾತ್ರಿ ಸುರಿದ ಮಹಾಮಳೆಗೆ ಜಿಲ್ಲೆಯ ಔರಾದ ತಾಲೂಕಿನ ಬೋಂತಿ ಕೆರೆ ಒಡೆದು ಅಪಾರ ಪ್ರಮಾಣದ ಹಾನಿಯಾಗಿದೆ. ಕೆರೆ ಒಡೆದು ಅಕ್ಕಪಕ್ಕದ ಜಮೀನುಗಳಿಗೆ ನೀರು ನುಗ್ಗಿದೆ. ನೆರೆಯ ಭಂಡಾರಕುಮಟಾ ಹಾಗೂ ಬಾವಲ್ ಗಾಂವ್ ಗ್ರಾಮಸ್ಥರನ್ನು ಎಚ್ಚರದಿಂದ ಇರುವಂತೆ ಸೂಚಿಸಲಾಗಿದೆ. ತಗ್ಗು ಪ್ರದೇಶದ ಜನರಿಗೆ ಸರ್ಕಾರಿ ಶಾಲೆಯಲ್ಲಿ ಇರಲು ವ್ಯವಸ್ಥೆ ಮಾಡಲಾಗಿದೆ.

ಕಮಲನಗರ ತಾಲ್ಲೂಕಿನ ಬಿಜಲ್ ಗಾಂವ್ ನಲ್ಲಿ ಭಾರಿ ಮಳೆಗೆ ಜಾನುವಾರು ಕೊಚ್ಚಿ ಹೋಗಿದ್ದು, ಅವುಗಳ ನಿಖರ ಸಂಖ್ಯೆ ಇನ್ನಷ್ಟೇ ಗೊತ್ತಾಗಬೇಕಿದೆ. ಹಾನಿಯಾದ ಎರಡೂ ಪ್ರದೇಶಗಳಿಗೆ ಅಧಿಕಾರಿಗಳು ಭೇಟಿ ಕೊಟ್ಟಿದ್ದಾರೆ. ಭಾರಿ ಮಳೆಯ ಮುನ್ಸೂಚನೆ ಹಿನ್ನೆಲೆಯಲ್ಲಿ ಸೋಮವಾರ ಔರಾದ್ ತಾಲ್ಲೂಕಿನ ಎಲ್ಲ ಅಂಗನವಾಡಿ ಕೇಂದ್ರಗಳು, ಶಾಲಾ-ಕಾಲೇಜುಗಳಿಗೆ ರಜೆ ಘೋಷಿಸಲಾಗಿದೆ. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಔರಾದ ತಾಲೂಕಿನ ಬೋಂತಿ ಗ್ರಾಮದ ಕೆರೆ ಒಡೆದ ಸ್ಥಳಕ್ಕೆ ತಹಸೀಲ್ದಾರ ಮಹೇಶ ಪಾಟೀಲ್ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಬಾವಲಗಾಂವ ಹಾಗೂ ಹಂಗರಗಾ ಗ್ರಾಮಗಳ ಸಣ್ಣ ನೀರಾವರಿ ಕೆರೆ ಒಡೆದು ನೂರಾರು ಎಕರೆ ಬೆಳೆ ಪ್ರದೇಶಗಳಿಗೆ ನೀರು ನುಗ್ಗಿದೆ. ಬಾವಲಗಾಂವ ಗ್ರಾಮಸ್ಥರಿಗೆ ತಕ್ಷಣವೇ ಸ್ಥಳೀಯ ಶಾಲೆಯಲ್ಲಿ ಕಾಳಜಿ ಕೇಂದ್ರ ಆರಂಭಿಸುವಂತೆ ಜಿಲ್ಲಾಧಿಕಾರಿಗಳು ತಿಳಿಸಿದರು.

ಭಾನುವಾರ ಒಂದೇ ದಿನ 300 ಮೀ.ಮೀ. ಮಳೆಯಾಗಿದ್ದು, ನಾಲ್ಕು ಸಂಪರ್ಕ ಸೇತುವೆ ಭಾಗಶಃ ಹಾನಿಯಾಗಿವೆ. ಅಂದಾಜು 500 ಎಕರೆ ಬೆಳೆ ಹಾನಿಯಾಗಿದ್ದು ಮಳೆ ನಿಂತ ಮೇಲೆ ಸಮೀಕ್ಷೆ ಕೈಗೊಳ್ಳಲಾಗುವುದು. ಸದ್ಯಕ್ಕೆ ಯಾವುದೇ ರೀತಿಯ ಜೀವ ಹಾನಿ ಸಂಭವಿಸಿರುವುದಿಲ್ಲ ಹಾಗೂ ಮನೆಗಳಿಗೂ ಯಾವುದೇ ರೀತಿಯ ಹಾನಿಯಾಗಿರುವುದಿಲ್ಲವೆಂದು ಔರಾದ್ ತಹಸೀಲ್ದಾರ ಮಹೇಶ ಪಾಟೀಲ ತಿಳಿಸಿದರು.

ನಂತರ ಜಿಲ್ಲಾಧಿಕಾರಿಗಳು ಕಮಲನಗರ ತಾಲೂಕಿನ ನಂದಿ ಬಿಜಲಗಾಂವ ಗ್ರಾಮದಲ್ಲಿ ಹಾನಿಗೊಳಗಾದ ಸೇತುವೆ, ಬೆಳೆ ಹಾನಿ ವೀಕ್ಷಿಸಿದರು. ಹಲವಾರು ವಿದ್ಯುತ್ ಕಂಬಗಳು ಹಾನಿಗೊಳಗಾಗಿವೆ ಗ್ರಾಮದ ಕೆಲ ಮನೆಗಳಿಗೂ ಭಾಗಶಃ ಹಾನಿಯಾಗಿದ್ದು ಸಮೀಕ್ಷೆ ನಡೆಸಿ ತುರ್ತು ಪರಿಹಾರ ನೀಡುವಂತೆ ತಹಸೀಲ್ದಾರರಿಗೆ ಸೂಚಿಸಿದರು.

ಈ ಸಂದರ್ಭದಲ್ಲಿ ಪ್ರೊಬೇಷನರಿ ಐಎಎಸ್ ಅಧಿಕಾರಿ ರಮ್ಯಾ, ಸಹಾಯಕ ಆಯುಕ್ತರಾದ ಮಹ್ಮದ ಶಕೀಲ, ತಾಪಂ ಇಒ ಕಿರಣ ಪಾಟೀಲ ಉಪಸ್ಥಿತರಿದ್ದರು.

> ಬೋಂತಿ ಗ್ರಾಮದ ಸಣ್ಣ ನೀರಾವರಿ ಇಲಾಖೆಯ ಕೆರೆಯೊಂದು ಒಡೆದು ಹೋಗಿದ್ದರಿಂದ ಅಪಾರ ಪ್ರಮಾಣದ ನೀರು ಹರಿದು ಬೋಂತಿ, ಬಾವಲಗಾಂವ ಹಾಗೂ ಹಂಗರಗಾ ಗ್ರಾಮಗಳ ಸಂಪರ್ಕ ಸೇತುವೆ ಕುಸಿದು ಬೃಹತ್ ಗುಂಡಿ ನಿರ್ಮಾಣಗೊಂಡ ಹಿನ್ನೆಲೆಯಲ್ಲಿ ಸಾರ್ವಜನಿಕರು ಈ ಕಡೆ ಓಡಾಡದಂತೆ ಎಚ್ಚರಿಕೆ ವಹಿಸುವಂತೆ ಡಂಗೂರ ಸಾರುವಂತೆ ಸೂಚನೆ.
> -ಶಿಲ್ಪಾ ಶರ್ಮಾ, ಜಿಲ್ಲಾಧಿಕಾರಿ

ಕಮಲನಗರ ತಾಲೂಕಿನ ಬಸನಾಳ ಕೊರಾಳ ಸಂಪರ್ಕ ಕಲ್ಪಿಸುವ ಸೇತುವೆ ಜಲಾವೃತವಾಗಿದೆ.

ಪ್ರತಿಭಾ ಪ್ರದರ್ಶನಕ್ಕೆ ಯುವ ಸೌರಭ

ಬೀದರ: ನಮ್ಮ ಜಿಲ್ಲೆಯಲ್ಲಿ ಯುವ ಕಲಾವಿದರು ಕಡಿಮೆ ಇಲ್ಲ. ಪ್ರತಿ ಹಳ್ಳಿಯಿಂದಲೂ, ಪ್ರತಿಯೊಂದು ಶಾಲೆ ಕಾಲೇಜುಗಳಿಂದಲೂ, ಪ್ರತಿಭಾವಂತರನ್ನು ಕಾಣಬಹುದು. ಸಂಗೀತ, ನೃತ್ಯ, ನಾಟಕ, ಚಿತ್ರಕಲೆ, ಕ್ರೀಡೆ ಅಥವಾ ಸಾಹಿತ್ಯ ಯಾವ ಕ್ಷೇತ್ರವನ್ನೇ ತೆಗೆದುಕೊಂಡರು ನಮ್ಮ ಜಿಲ್ಲೆಯ ಮಕ್ಕಳು ತಮ್ಮ ಕಲೆ ಪ್ರತಿಭೆ ಶ್ರಮದಿಂದ ರಾಜ್ಯ, ರಾಷ್ಟ್ರ ಮಟ್ಟದಲ್ಲಿಯೂ ಹೆಸರು ಮಾಡುತ್ತಿದ್ದಾರೆ. ಅವರ ಸಾಧನೆಗಳನ್ನು ನೋಡಿದಾಗ ನಿಜಕ್ಕೂ ನಮ್ಮ ಹೃದಯದಲ್ಲಿ ಹೆಮ್ಮೆ ಮೂಡುತ್ತದೆ ಎಂದು ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಸೋಮಶೇಖರ್ ಬಿರಾದಾರ್ ಶ್ಲಾಘನಿಸಿದರು.

ಬೀದರ ತಾಲೂಕಿನ ಮನ್ನಳ್ಳಿ ಗ್ರಾಮದ ಕರ್ನಾಟಕ ಪಬ್ಲಿಕ್ ಶಾಲೆ (ಪದವಿ ಪೂರ್ವ ಕಾಲೇಜು) ಸಭಾಂಗಣದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಏರ್ಪಡಿಸಿದ 2025-26ನೇ ಸಾಲಿನ ಯುವ ಸೌರಭ, ಮಕ್ಕಳ ಸಂಸ್ಕೃತಿಕ ಕಾರ್ಯಕ್ರಮವು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಸಿದ್ರಾಮ ಸಿಂಧೆ ಮಾತನಾಡಿ, ಜಾನಪದ ಸಂಸ್ಕೃತಿ ಉಳಿಸಿ ಬೆಳೆಸಲು ಸರಕಾರ ಸಾಕಷ್ಟು ಪ್ರೋತ್ಸಾಹ ನೀಡುತ್ತಿದೆ ಎಂದರು.

ಮನ್ನಳ್ಳಿ ಪೊಲೀಸ್ ಠಾಣೆಯ ಆರಕ್ಷಕ ಉಪ-ನಿರೀಕ್ಷಕಿ ನಂದಿನಿ, ಗ್ರಾಪಂ ಅಧ್ಯಕ್ಷೆ ಕಾಶಿಬಾಯಿ, ಉಪಾಧ್ಯಕ್ಷ ಅಬ್ದುಲ್ ಸಮದ, ಮಾಜಿ ತಾಪಂ ಮಾಜಿ ಸದಸ್ಯ ಚಂದ್ರಶೇಖರ ಮಳಿಗೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಸಿದ್ರಾಮ್ ಸಿಂಧೆ, ಕಾಲೇಜಿನ ಪ್ರಾಂಶುಪಾಲ ಮಾರುತಿ ರೆಡ್ಡಿ, ಗ್ರಾಪಂ ಅಭಿವೃದ್ಧಿ ಅಧಿಕಾರಿ ಕನಕರಾಯ, ಸರಿಗಮಪ ವಿಜೇತೆ ಶಿವಾನಿ ಶಿವದಾಸ್, ಶಾಂತರಸ, ವಿಜಯಕುಮಾರ್ ದೇವಾ ವೇದಿಕೆ ಮೇಲಿದ್ದರು.

ಬೀದರ ತಾಲೂಕಿನ ಮನ್ನಳ್ಳಿ ಗ್ರಾಮದಲ್ಲಿ ನಡೆದ ಯುವ ಸೌರಭದಲ್ಲಿ ಯುವತಿಯರ ತಂಡ ಪ್ರದರ್ಶಿಸಿದ ಸಮೂಹ ನೃತ್ಯ ಗಮನ ಸೆಳೆಯಿತು.

> ಇಂದಿನ ಯುವ ಪೀಳಿಗೆಗೆ ಬೇಕಾದ ಮಾರ್ಗದರ್ಶನ, ಬೆಂಬಲ ಮತ್ತು ಪ್ರೋತ್ಸಾಹ ಸಿಕ್ಕರೆ ಅವರು ಇನ್ನಷ್ಟು ಎತ್ತರಕ್ಕೆ ಬೆಳೆಯಲು ಸಾಧ್ಯ. ಜಿಲ್ಲೆಯ ಮಕ್ಕಳಲ್ಲಿ ಇರುವ ಕಲಾತ್ಮಕ ಶಕ್ತಿ ಕೇವಲ ವೈಯಕ್ತಿಕ ಸಾಧನೆಗೆ ಸೀಮಿತವಾಗಿರದೆ, ನಮ್ಮ ಜಿಲ್ಲೆಯ ಹೆಸರನ್ನೂ ರಾಜ್ಯ, ರಾಷ್ಟ್ರಮಟ್ಟದಲ್ಲಿ ಬೆಳಗಿಸುತ್ತದೆ. ಆದ್ದರಿಂದ ಪ್ರತಿಯೊಬ್ಬ ಪೋಷಕರು, ಶಿಕ್ಷಕರು ಮತ್ತು ಸಮಾಜವು ಇವರಿಗೆ ಬೆಂಬಲವಾಗಿ ನಿಲ್ಲಬೇಕು.
> -ಸಂಜೀವಕುಮಾರ್ ಅತಿವಾಳೆ,
> ಗಡಿ ಅಭಿವೃದ್ಧಿ ಪ್ರಾಧಿಕಾರದ ಸದಸ್ಯ

ಹೊನ್ನಿಕೇರಿ ಭಕ್ತರಿಗೆ ಸುಸಜ್ಜಿತ ಯಾತ್ರಿ ನಿವಾಸ

ಬೀದರ: ತಾಲೂಕಿನ ಸುಕ್ಷೇತ್ರ, ಹೊನ್ನಿಕೇರಿ ಶ್ರೀಸಿದ್ದೇಶ್ವರ ದೇವಸ್ಥಾನಕ್ಕೆ ಬರುವ ಭಕ್ತರ ಸೌಕರ್ಯಕ್ಕಾಗಿ 2 ಕೋಟಿ ರು. ವೆಚ್ಚದಲ್ಲಿ ನಿರ್ಮಿಸುತ್ತಿರುವ ಸುಸಜ್ಜಿತ ಯಾತ್ರಿ ನಿವಾಸಕ್ಕೆ ಶಾಸಕ ಡಾ.ಶೈಲೇಂದ್ರ ಬೆಲ್ದಾಳೆ ಸೋಮವಾರ ಗುದ್ದಲಿ ಪೂಜೆ ನೆರವೇರಿಸಿದರು.

ಈ ವೇಳೆ ಮಾತನಾಡಿದ ಶಾಸಕರು, ಐತಿಹಾಸಿಕ ಧಾರ್ಮಿಕ ಕೇಂದ್ರವಾಗಿ ಪ್ರಸಿದ್ಧಿ ಪಡೆದಿರುವ ಹೊನ್ನಿಕೇರಿ ಶ್ರೀ ಸಿದ್ದೇಶ್ವರ ಕ್ಷೇತ್ರಕ್ಕೆ ಕರ್ನಾಟಕವಲ್ಲದೆ ನೆರೆಯ ಮಹಾರಾಷ್ಟ್ರ, ತೆಲಂಗಾಣದಿಂದಲೂ ಅಪಾರ ಭಕ್ತಾದಿಗಳು ಆಗಮಿಸುತ್ತಾರೆ.

ಶ್ರಾವಣಮಾಸ ತಿಂಗಳಪೂರ್ತಿ ಹಾಗೂ ಪ್ರತಿ ಸೋಮವಾರ, ಹುಣ್ಣಿಮೆ, ಅಮವಾಸ್ಯೆ ದಿನ ಭಕ್ತಸಮೂಹವೇ ಹರಿದುಬರುತ್ತದೆ. ಆದರೆ ಇಲ್ಲಿ ಉತ್ತಮ ವಸತಿ, ಶೌಚಾಲಯ, ಸ್ನಾನಗೃಹ, ಭೋಜನ ಸೇರಿದಂತೆ ಅಗತ್ಯ ಸೌಲಭ್ಯಗಳ ಕೊರತೆಯಿಂದ ಭಕ್ತಾದಿಗಳಿಗೆ ಅನಾನುಕೂಲತೆ ಕಾಡುತ್ತಿತ್ತು. ಈ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಲು ಅಗತ್ಯ ಸೌಲಭ್ಯಗಳುಳ್ಳ ಯಾತ್ರಿ ನಿವಾಸ ನಿರ್ಮಿಸಲಾಗುತ್ತಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ದೇವಸ್ಥಾನ ಆಡಳಿತಾಧಿಕಾರಿ ಅನಂತರಾವ ಕುಲಕರ್ಣಿ, ಮುಖಂಡರಾದ ಹಣಮಂತರಾವ ಮೈಲಾರೆ, ಭೀಮರಾಮ ಪಾಟೀಲ್, ಸುರೇಶ ಮಾಸೆಟ್ಟಿ, ಮಹೇಶ ಮೈಲಾರೆ, ಶಿವಕುಮಾರ ಕೋಳಾರೆ, ಸಂಜುಕುಮಾರ ಮಾಸೆಟ್ಟಿ, ಸಂತೋಷ ಸೋರಳ್ಳಿ, ಸಂಜು ರೆಡ್ಡಿ, ಬಸವರಾಜ ಸಿಂದಬಂದಗಿ, ಬಸವರಾಜ ಪಟೋದಿ, ಸಂತೋಷ ರೆಡ್ಡಿ, ಕಾಶಿನಾಥ ಸೋರಳ್ಳಿ, ರೇವಣಪ್ಪ ಕೋಳಾರೆ, ರಾಜಶೇಖರ ಕೋಳಾರೆ, ರವಿ ಶಂಕರಶೆಟ್ಟಿ, ಉಮೇಶ ಮೂಲಿಮನಿ, ವಿನೋದ ರಾಠೋಡ್, ಮಾದಪ್ಪ ಗುಮಸಾಪುರೆ, ಧನರಾಜ ಖೇಮಶೆಟ್ಟಿ, ಶಾಲಿವಾನ ಕೋಳಾರೆ, ದೇವಿದಾಸ ರೆಡ್ಡಿ, ಸಿದ್ದಯ್ಯಾ ಸ್ವಾಮಿ, ಅನೀಲ, ಶಿವಶಂಕರ ಫುಲ್ಲೆ, ಸಂತೋಷ ಶಂಭು, ಸುಭಾಷರಾವ ಪಾಟೀಲ, ಚೇತನ ಸೋರಳ್ಳಿ, ಶಿವಕುಮಾರ ಸ್ವಾಮಿ, ಅಮರ ಕಪಲಾಪುರ, ಚೇತನ ಸೋರಳ್ಳಿ, ಪ್ರವೀಣ ಪಟೋದಿ ಉಪಸ್ಥಿತರಿದ್ದರು.

ಸುಸಜ್ಜಿತ ಯಾತ್ರಿ ನಿವಾಸ ಕಟ್ಟಡ ನಿರ್ಮಾಣಕ್ಕೆ ಶಾಸಕ ಡಾ. ಶೈಲೇಂದ್ರ ಬೆಲ್ದಾಳೆ ಭೂಮಿಪೂಜೆ ನೇರವೆರಿಸಿದರು.

> ವಿವಿಧೆಡೆಯಿಂದ ಬರುವ ಭಕ್ತರಿಗೆ ಯಾತ್ರಿ ನಿವಾಸದಲ್ಲಿ ಸುಸಜ್ಜಿತ ಕೊಠಡಿಗಳಿರಲಿವೆ. ಗಣ್ಯರಿಗೆ ವಿಐಪಿ ಕೋಣೆ, ಸಭಾಂಗಣ, ಕಲ್ಯಾಣ ಮಂಟಪ, ಊಟ, ಶುದ್ಧ ನೀರಿನ ವ್ಯವಸ್ಥೆ ಇರಲಿದೆ. ಮಹಿಳಾ ಭಕ್ತಾದಿಗಳಿಗೆ ಈ ಯಾತ್ರಿ ನಿವಾಸ ಸಾಕಷ್ಟು ಅನುಕೂಲ ಕಲ್ಪಿಸಲಿದೆ. ಈ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಆದ್ಯತೆ ನೀಡಿದ್ದು, ಬರುವ ದಿನಗಳಲ್ಲಿ ಇನ್ನಷ್ಟು ಯೋಜನೆ ಕಾರ್ಯಗತಗೊಳಿಸುವೆ.
> -ಡಾ.ಶೈಲೇಂದ್ರ ಬೆಲ್ದಾಳೆ, ಶಾಸಕ

ಶೋಷಿತ ವರ್ಗದ ಐಕ್ಯತಾ ಸಮಾವೇಶ ಆ.24ರಂದು

ಪ್ರವಾಸಿ ಮಂದಿರದಲ್ಲಿ ಪೂರ್ವಭಾವಿ ಸಭೆಯಲ್ಲಿ ಬಿತ್ತಿ ಪತ್ರಗಳನ್ನು ಬಿಡುಗಡೆಗೊಳಿಸಿದರು.

ಶಹಾಪುರ: ನಗರದ ಆರಬೋಳ ಕಲ್ಯಾಣ ಮಂಟಪದಲ್ಲಿ ಆ. 24 ರಂದು ಶೋಷಿತ ವರ್ಗಗಳ ಐಕ್ಯತಾ ಸಮಾವೇಶ ನಡೆಯಲ್ಲಿದ್ದು, 5 ಸಾವಿರಕ್ಕೂ ಹೆಚ್ಚು ಜನ ಸೇರುವ ನಿರೀಕ್ಷೆ ಇದೆ ಎಂದು ಜಿಲ್ಲಾ ಹಿಂದುಳಿದ ವರ್ಗಗಳ ಒಕ್ಕೂಟ, ದಲಿತ ಸಂಘಟನೆಗಳ ಒಕ್ಕೂಟ, ಸಮ ಸಮಾಜ ಚಿಂತನಾ ವೇದಿಕೆ, ಹಾಗೂ ಕರ್ನಾಟಕ ರಾಜ್ಯ ಸರಕಾರಿ ಅರೆ ಸರಕಾರಿ ಪ.ಜಾ/ಪಂ ನೌಕರರ ಒಕ್ಕೂಟಗಳು ಜಂಟಿಯಾಗಿ ತಿಳಿಸಿವೆ.

ನಗರದ ಪ್ರವಾಸಿ ಮಂದಿರದಲ್ಲಿ ಪೂರ್ವಭಾವಿ ಸಭೆ ನಡೆಸಿ ಬಿತ್ತಿ ಪತ್ರಗಳನ್ನು ಬಿಡುಗಡೆಗೊಳಿಸಿ ಮಾತನಾಡಿದ ಮುಖಂಡರು ಅಂದಿನ ಕಾರ್ಯಕ್ರಮವನ್ನು ಉರಿಲಿಂಗ ಪೆದ್ದಿ ಮಾಹಾ ಸಂಸ್ಥಾನದ ಪೂಜ್ಯ ಜ್ಞಾನಪ್ರಕಾಶ ಸ್ವಾಮಿಜೀಯವರು ಸಾನಿಧ್ಯ ವಹಿಸಲಿದ್ದಾರೆ.

ಸಣ್ಣ ಕೈಗಾರಿಕಾ ಮತ್ತು ಸಾರ್ವಜನಿಕ ಉದ್ಯಮಗಳ ಸಚಿವ ಶರಣಬಸಪ್ಪಗೌಡ ದರ್ಶನಾಪುರವರು ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ ಮಾಹಾದೇವಪ್ಪ ಅವರು ಸಾಮಾಜಿಕ ಪರಿವರ್ತನಕಾರರ ಭಾವ ಚಿತ್ರಕ್ಕೆ ಪುಷ್ಪಾರ್ಚನೆ ಮಾಡುವರು, ಲೋಕೊಪಯೋಗಿ ಸಚಿವ ಸತೀಶ ಜಾರಕಿಹೊಳಿ ಜ್ಯೋತಿ ಬೆಳಗುವರು, ಕರ್ನಾಟಕ ರಾಜ್ಯದ ಸಂಘಟಿತ ಪಿತಾಮಹ ದ.ಸಂ.ಸ ರಾಜ್ಯಾಧ್ಯಕ್ಷ ಡಾ.ಡಿ.ಜಿ.ಸಾಗರ ಅವರು ಅಧ್ಯಕ್ಷತೆ ವಹಿಸುವರು. ಅಲ್ಲದೆ ಮುಖ್ಯ ಅಥಿತಿಗಳಾಗಿ ವಿಧಾನ ಪರಿಷತ್ ಸದಸ್ಯ ತಿಪ್ಪಣಪ್ಪ ಕಮಕನೂರ ಹಾಗೂ ಸುರುಪುರ ಮತ ಕ್ಷೇತ್ರದ ಶಾಸಕ ರಾಜಾ ವೇಣು ಗೋಪಾಲ ನಾಯಕ ಪಾಲ್ಗೊಳ್ಳಲಿದ್ದಾರೆ ಎಂದು ಸಮಿತಿಗಳ ಮುಖಂಡರು ಪೂರ್ವಭಾವಿ ಸಭೆಯಲ್ಲಿ ವಿವರಣೆ ನೀಡಿದರು.

ತಿಮ್ಮಯ್ಯ ಪುರ್ಲೆ, ಡಾ.ಭೀಮಣ್ಣ ಮೇಟಿ, ಹನುಮೇಗೌಡ ಮರ್ಕಲ್, ಗೌಡಪ್ಪಗೌಡ ಆಲ್ದಾಳ, ಮಾಹಾದೇವಪ್ಪ ಸಾಲಿಮನಿ, ರೇಶೈಲ್ ಹೊಸ್ಮನಿ, ಶಿವುಪುತ್ರ ಜವಳಿ, ಹೊನ್ನಪ್ಪ ಗಂಗನಾಳ, ಶಿವುಕುಮಾರ ತಳವಾರ, ಮರೆಪ್ಪ ಪ್ಯಾಟಿ, ಮಲ್ಲಣ್ಣ ಗೌಡಗೇರಿ, ಮೊಹ್ಮದ್ ರಫೀಕ್ ಚೌದ್ರಿ, ಮುಸ್ತಾಫ ದರ್ಬಾನ, ಚಂದ್ರಶೇಖರ ಜಾದವ್ ವಕೀಲರು, ದೇವಿಂದ್ರಪ್ಪ ವಿಶ್ವಕರ್ಮ, ಬಸವರಾಜ ಭಜಂತ್ರಿ, ಅಯ್ಯಣ ಇನಾಮದಾರ, ಶೇಖರ ದೊರೆ, ಮರೆಪ್ಪ ಪ್ಯಾಟಿ, ಮೌನೇಶ ಹಳಿಸಗರ ಇದ್ದರು.

ಮಳೆಗೆ ಬೆಳೆ ನಷ್ಟ; ಪರಿಹಾರ ನೀಡಲು ಕರವೇ ಒತ್ತಾಯ

ಯಾದಗಿರಿ: ಸತತ ಮಳೆಯಿಂದಾಗಿ ಜಿಲ್ಲೆಯಾದ್ಯಂತ ರೈತರು ಬೆಳೆದ ಬೆಳೆಗಳು ನೀರಲ್ಲಿ ನಿಂದು ಅಪಾರ ಹಾನಿಯಾಗಿದ್ದು ಕೂಡಲೇ ಸರಕಾರ ರೈತರ ನೆರವಿಗೆ ಧಾವಿಸಬೇಕು. ತ್ವರಿತವಾಗಿ ಜಂಟಿ ಸಮೀಕ್ಷೆ ಮಾಡಿ ಸೂಕ್ತ ಪರಿಹಾರ ವಿತರಣೆಗೆ ಕ್ರಮ ಕೈಗೊಳ್ಳಬೇಕೆಂದು ಕರ್ನಾಟಕ ರಕ್ಷಣಾ ವೇದಿಕೆ ಜಿಲ್ಲಾಧ್ಯಕ್ಷ ಟಿ.ಎನ್.ಭೀಮುನಾಯಕ ಆಗ್ರಹಿಸಿದ್ದಾರೆ.

ಈ ಕುರಿತು ಹೇಳಿಕೆ ನೀಡಿರುವ ಅವರು, ಖುದ್ದಾಗಿ ಕೊಯಿಲೂರು ಭಾಗದಲ್ಲಿ ರೈತರ ಹೊಲಗಳಿಗೆ ಭೇಟಿ ಕೊಟ್ಟಾಗ ಬೆಳೆಯೆಲ್ಲ ಮಳೆಯ ನೀರ ಮಡುವಿನಲ್ಲಿ ನಿಂತಿರುವುದು ಕಂಡುಬಂತು.

ಸರಕಾರ ತಕ್ಷಣ ಎಚ್ಚೆತ್ತು ಯುದ್ಧೋಪಾದಿಯಲ್ಲಿ ಅಣಿಯಾಗಿ ಕಂದಾಯ ಹಾಗೂ ಕೃಷಿ ಇಲಾಖೆಗಳ ಜಂಟಿ ಸಮೀಕ್ಷೆಯನ್ನು ಕೈಗೊಂಡು ನೊಂದ ರೈತರಿಗೆ ತ್ವರಿತವಾಗಿ ಎಕರೆಗೆ 50 ಸಾವಿರದಂತೆ ಪರಿಹಾರ ವಿತರಿಸಲು ಮುಂದಾಗಬೇಕು ಎಂದು ಒತ್ತಾಯಿಸಿದ್ದಾರೆ.

ಸಂಕಷ್ಟಕ್ಕೆ ಸಿಲುಕಿರುವ ಅನ್ನದಾತನ ನೆರವಿಗೆ ತಕ್ಷಣ ಬರಬೇಕು ಎಂದು ಕನ್ನಡಕ್ಕಾಗಿ ಕೊಡುಗೆ ಕೊಟ್ಟವರಿಗೆ ಅವಮಾನ ಆದರೂ ಸುಮ್ಮನಿರುವುದು ಕನ್ನಡದವರ ಜಾಯಮಾನವಲ್ಲ ಇದಕ್ಕೆ ಸರಿಯಾದ ಪ್ರತಿಕಾರ ಕೈಗೊಂಡು ಹಿರಿಯ ನಟನ ಕೊಡುಗೆಗೆ ಪ್ರತಿಯಾಗಿ ಸಮಾನ ನೀಡುವ ಕೆಲಸ ಮಾಡಬೇಕು. ಸರಕಾರ ಇಂತಹ ದಿವ್ಯ ನಿರ್ಲಕ್ಷ್ಯ ತೋರುತ್ತಿರುವುದು ತರವಲ್ಲ ಎಂದು ಮಲ್ಲು ಮಾಳಿಕೇರಿ, ಸಿದ್ದು ನಾಯಕ ಹತ್ತಿಕುಣಿ, ಅಂಬ್ರೇಷ್ ಹತ್ತಿಮನಿ, ಸಂತೋಷ ನಿರ್ಮಲಕರ್, ಪ್ರಕಾಶ ಪಾಟೀಲ್ ಜೈಗ್ರಾಮ್, ಯಮುನಯ್ಯ ಗುತ್ತೇದಾರ, ವಿಶ್ವರಾಜ ಪಾಟೀಲ್, ವೆಂಕಟೇಶ ನಾಯಕ ಬೈರಿಮಡ್ಡಿ, ಅಬ್ದುಲ್ ಚಿಗಾನೂರು, ಶರಣಬಸಪ್ಪ ಯಲ್ಹೇರಿ, ಬಸವರಾಜ ಚೆನ್ನೂರು, ಕಾಶಿನಾಥ ನಾನೇಕ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

> ಕಳೆದ 4 ದಿನಗಳಿಂದ ಬಿಟ್ಟು ಬಿಡದೇ ಸುರಿಯುತ್ತಿರುವ ಮಳೆಯಿಂದಾಗಿ ರೈತರು ಬೆಳೆದ ಹೆಸರು, ಹತ್ತಿ, ತೊಗರಿ ಸೇರಿದಂತೆ ಇನ್ನಿತರ ಬೆಳೆಗಳು ನೀರಲ್ಲಿ ನಿಂತಿವೆ. ಬೆಳೆ ಕೈಗೆ ಬಂದಿದ್ದರೆ ಲಕ್ಷಾಂತರ ರು. ಕೈಸೇರಿ ರೈತರಿಗೆ ಆಸರೆಯಾಗುತ್ತಿತ್ತು. ಆದರೆ ಇದ್ದಕ್ಕಿದ್ದಂತೆ ಮಳೆರಾಯನ ಮುನಿಸಿನಿಂದಾಗಿ ರೈತರಿಗೆ ಒಂದೋ ಗುಳೆ ಹೋಗಬೇಕು ಇಲ್ಲವೇ ಆತ್ಮಹತ್ಯೆಗೆ ಶರಣಾಗಬೇಕೆಂಬ ಪರಿಸ್ಥಿತಿ ನಿರ್ಮಾಣವಾಗಿದೆ.
> - ಟಿ.ಎನ್.ಭೀಮುನಾಯಕ, ಜಿಲ್ಲಾಧ್ಯಕ್ಷ

ಅಗತೀರ್ಥ ಗ್ರಾಮಕ್ಕೆ ತಾಪಂ ಇಒ ಭೇಟಿ, ಪರಿಶೀಲನೆ

ಹುಣಸಗಿ: ತಾಲೂಕಿನ ಅಗ್ನಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಅಗತೀರ್ಥ ಗ್ರಾಮಕ್ಕೆ ತಾಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿ ಬಸಣ್ಣ ನಾಯಕ ಭೇಟಿ ನೀಡಿ ಕುಡಿಯುವ ನೀರಿನ ಸಮಸ್ಯೆಯ ಕುರಿತು ಪರಿಶೀಲನೆ ಡಿಸಿದರು.

ನಂತರ ಗ್ರಾಮಸ್ಥರೊಂದಿಗೆ ಮಾತನಾಡಿ, ಗ್ರಾಮದಲ್ಲಿ ನೀರಿನ ಅಭಾವ ಕುರಿತು ಸಂಭಂದ ಪಟ್ಟ ಅಧಿಕಾರಿಗಳೊಂದಿಗೆ ಮಾತನಾಡಿ ಹೊಸದಾಗಿ ಕೊಳವೆ ಬಾವಿ ಕೊರೆಸಿ ಗ್ರಾಮಕ್ಕೆ ಶಾಶ್ವತ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಸಿಲು ಮುಂದಿನ ದಿನಗಳಲ್ಲಿ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಗ್ರಾಮಸ್ಥರಿಗೆ ಭರವಸೇ ನೀಡಿದರು.

ಈ ಗ್ರಾಮಕ್ಕೆ ಶಾಶ್ವತ ನೀರಿಗಾಗಿ ಕ್ರಮ ಕೈಗೊಳ್ಳವರೆಗೂ ಟ್ಯಾಂಕರ ಮೂಲಕ ಗ್ರಾಮಕ್ಕೆ ನೀರು ಸರಬರಾಜು ಮಾಡಲು ಗ್ರಾಮ ಪಂಚಾಯತಿ ಅಧಿಕಾರಿಗೆ ಸೂಚಿಸಿದ್ದಾರೆ. ಈ ಸಂದರ್ಭದಲ್ಲಿ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಜಹೀರ್ ಹುಸೇನ್.ಹಾಗೂ ಗ್ರಾಮೀಣ ಕುಡಿಯುವ ನೀರು ಸರಬರಾಜು ಎಇಇ ಎಚ್.ಡಿ.ಪಾಟೀಲ ಹಾಗೂ ಗ್ರಾಮಸ್ಥರಾದ ಮಹಾಂತ ಗೌಡ ಬಿ.ಆಲ್ದಾಳ, ಮಾನಪ್ಪಗೌಡ ಹೊಸಮನಿ ಇದ್ದರು.

ಅಗತೀರ್ಥ ಗ್ರಾಮಕ್ಕೆ ತಾಪಂ ಇಒ ಬಸಣ್ಣನಾಯಕ ಭೇಟಿ ನೀಡಿ ಕುಡಿಯುವ ನೀರಿನ ಸಮಸ್ಯೆ ಪರಿಶೀಲನೆ ಮಾಡಿದರು.

ಮಳೆ ಕಾಟ, ಬೆಳೆ ಹಾನಿ ಸಮೀಕ್ಷೆಗೆ ರೈತರ ಪಟ್ಟು

ಶಹಾಪುರ: ಕಳೆದ ಒಂದು ವಾರದಿಂದ ಸುರಿಯುತ್ತಿರುವ ನಿರಂತರ ಮಳೆಯಿಂದಾಗಿ ಬೆಳೆಗಳಿಗೆ ಕಂಟಕವಾಗಿ ಪರಿಣಮಿಸಿದೆ, ಬೆಳೆಗಳು ಸಂಪೂರ್ಣ ನೀರುಪಾಲಾಗಿದ್ದು, ಅನ್ನದಾತರ ವಲಯದಲ್ಲಿ ಭಾರಿ ಆತಂಕ ಮೂಡಿದೆ, ಹತ್ತಿ, ಮೆಣಸಿನಕಾಯಿ ಬೆಳೆಗಳು ಸಂಪೂರ್ಣ ನೀರು ಪಾಲಾಗಿದ್ದು ರೈತರು ಯಮಯಾತನೆ ಅನುಭವಿಸುವ ಸ್ಥಿತಿ ಉದ್ಭವಿಸಿದೆ.

ಈ ಬಾರಿ ಹೆಚ್ಚಿನ ಮಳೆ ಸುರಿಯುತ್ತಿರುವ ಪರಿಣಾಮ ಬಹುತೇಕ ರೈತರ ತೊಗರಿ, ಹತ್ತಿ, ಹೆಸರು ಬೆಳೆ ನೀರು ಪಾಲಾಗಿ ತೇವಾಂಶ ಹೆಚ್ಚಾಗಿ ಬೆಳೆಗಳು ಮುಳುಗಿ ಹೋಗಿವೆ. ಇದರಿಂದ ರೈತರು ಏನು ಮಾಡದಂತಹ ಪರಿಸ್ಥಿತಿ ಏರ್ಪಟ್ಟಿದ್ದು, ಸರಕಾರ ರೈತರ ಬೆನ್ನಿಗೆ ನಿಲ್ಲಬೇಕು ಎನ್ನುವ ಒತ್ತಾಯ ಕೇಳಿಬರುತ್ತಿವೆ.

ಶೇ.80 ರಷ್ಟು ಬೆಳೆಗಳು ನೀರು ಪಾಲು: ತಾಲೂಕಿನ ಗೋಗಿ, ಸಿಂಗನಹಳ್ಳಿ, ಮದ್ರಕಿ, ಹೊತಪೇಠಮ ಮೂಡಬೂಳ, ದೋರನಹಳ್ಳಿ ಸೇರಿದಂತೆ ವಿವಿದೆಡೆ ಸಾಕಷ್ಟು ಸಮಸ್ಯೆಗಳ ನಡುವೆ ಬಿತ್ತನೆ ಮಾಡಿ ಬೆಳೆಯ ನಿರೀಕ್ಷೆಯಲ್ಲಿದ್ದ ಅನ್ನದಾತರಿಗೆ ಬರಸಿಡಿಲು ಬಡಿದಂತಾಗಿದೆ. ಬೆಳೆಗಳು ಸಂಪೂರ್ಣ ನೀರಿನಲ್ಲಿ ನಿಂತಿವೆ. ಹೆಚ್ಚಿನ ತೇವಾಂಶದಿಂದ ಬೇರು ಕೊಳೆತು ಸಾಯುತ್ತಿದೆ ಎಂದು ರೈತರ ಆಗ್ರಹವಾಗಿದೆ.

ಜಿಟಿಜಿಟಿ ಮಳೆಗೆ ಹದಗೆಟ್ಟ ರಸ್ತೆ

ನಗರದ ಹಳೆ ಬಸ್ ನಿಲ್ದಾಣದ ಬಳಿಯಿರುವ, ಕೋರ್ಟ್, ಬಸವೇಶ್ವರ ನಗರ, ಕನಕ ನಗರ ಬಡಾವಣೆ, ಹಾಗೂ ಹಾಲಭಾವಿಗೆ ಹೋಗುವ ರಸ್ತೆಯು ಜಿಟಿಜಿಟಿ ಮಳೆಗೆ ಸಂಪೂರ್ಣ ಹಾಳಾಗಿರುವುದರಿಂದ ಸವಾರರು ಸಂಚಾರಕ್ಕೆ ಸಮಸ್ಯೆ ಪಡುವಂತಾಗಿದೆ. ಇದೇ ರಸ್ತೆಯಲ್ಲಿ ಭಾರಿ ಗಾತ್ರದ ಗುಂಡಿಗಳಲ್ಲಿ ಅನೇಕ ಸವಾರರು ಬಿದ್ದು ಗಾಯಗೊಂಡಿರುವ ಉದಾಹರಣೆಗಳು ಸಹ ಇವೆ. ನಿತ್ಯ ಸಾವಿರಾರು ಸಂಖ್ಯೆಯಲ್ಲಿ ಸಂಚಾರವಿರುವ ಈ ಕೇಸರಿನ ರಸ್ತೆಯಲ್ಲಿ ನಡೆದುಕೊಂಡು ಹೋಗಲು ಸಹ ಜನರು ಭಯಪಡುತ್ತಿದ್ದಾರೆ. ಇನ್ನೂ ಕೇಲ ದ್ವಿಚಕ್ರ ವಾಹನ, ಆಟೋ ಸೇರಿ ಬೃಹತ್ ವಾಹನಗಳನ್ನು ರಸ್ತೆಯ ಬದಿಯಲ್ಲಿ ಪಾರ್ಕಿಂಗ್ ಮಾಡಲಿದ್ದು, ಇದರಿಂದಲೂ ಸಹ ಸಾರ್ವಜನಿಕರು ಕಾಲ್ನಡಿಗೆಯಲ್ಲಿ ಹೋಗಲು ಸಹ ದುಸ್ತರವಾಗಿದೆ. ಕೂಡಲೇ ಜನಪ್ರತಿನಿಧಿಗಳು ಕಾಳಜಿ ವಹಿಸಿ ಸುಗಮ ಸಂಚಾರಕ್ಕೆ ಆದ್ಯತೆ ನೀಡಿ ರಸ್ತೆ ನಿರ್ಮಿಸಿ ಕೊಡಬೇಕು ಎನ್ನುವುದು ಸಾರ್ವಜನಿಕರ ಆಗ್ರಹವಾಗಿದೆ.

> ಪ್ರಸಕ್ತ ಸಾಲಿನಲ್ಲಿ ಈ ವರೆಗೆ ಕಳೆದ ಒಂದು ವಾರದಲ್ಲಿ ಅಂದರೆ ಆ.11ರಿಂದ 18ರವರೆಗೆ ನಗರದಲ್ಲಿ 49.5 ಮೀ.ಮೀ ಮಳೆಯಾಗಿದೆ, ದೋರನಹಳ್ಳಿ 39.3 ಮೀ.ಮೀ, ಗೋಗಿ 43.4 ಮೀ.ಮೀ, ಹೈಯಾಳ ಬಿ. 63.2 ಮೀ.ಮೀ ಮಳೆಯಾಗಿದೆ. ಪ್ರಾಥಮಿಕ ವರದಿಯ ಪ್ರಕಾರ ಮದ್ರಕಿ ಗ್ರಾಮದಲ್ಲಿ 8 ಮನೆಗಳು ಮಳೆಯಿಂದ ಹಾನಿಗೊಳಗಾಗಿವೆ. ಮತ್ತು 13 ರೈತರ 12.80 ಹೆಕ್ಟರ್ ಜಮೀನು ಪ್ರದೇಶ ಸಂಪೂರ್ಣ ನೀರು ಪಾಲಾಗಿದೆ.
> -ಸಿದ್ದಾರೂಢ ಬನ್ನಿಕೊಪ್ಪ, ತಹಸೀಲ್ದಾರ

> ಈ ಬಾರಿ ವಾಡಿಕೆಗಿಂತ ಹೆಚ್ಚು ಮಳೆಯಾಗಿದೆ. ನಿರಂತರ ಮಳೆಯಿಂದಾಗಿ ಬೆಳೆಗಳು ಹಾನಿಗೊಳಗಾದ ಮಾಹಿತಿ ಇದ್ದು, ನಷ್ಟಕ್ಕಿಡಾದ ಪ್ರದೇಶಕ್ಕೆ ಬೇಟಿ ನೀಡಿ ಸಮೀಕ್ಷೆ ಮಾಡಲಾಗುವುದು.
> -ಸುನೀಲಕುಮಾರ,
> ಕೃಷಿ ಇಲಾಖೆ ಸಹಾಯಕ ನಿರ್ದೇಶಕರು

ಕೊಳೆಯುತ್ತಿವೆ ಬೆಳೆ

ಏಕಾಏಕಿ ಮಳೆಯಿಲ್ಲದೆ ಕಂಗಲಾಗಿದ್ದ ರೈತರಿಗೆ ಮಳೆ ಕೈ ಹಿಡಿದ ಕೂಡಲೇ ಯೂರಿಯಾ ಗೊಬ್ಬರದ ಅಭಾವ ಮತ್ತೊಂದು ತಲೆನೋವು ಸೃಷ್ಟಿ ಮಾಡಿತ್ತು. ಕೊನೆಗೆ ಕಷ್ಟಪಟ್ಟು ಯೂರಿಯಾ ಗೊಬ್ಬರ ತೆಗೆದುಕೊಂಡು ಹೊಲಗಳಿಗೆ ಹೋದ ರೈತರಿಗೆ ಪ್ರಸ್ತುತ ಅತಿಯಾದ ಮಳೆಯಿಂದ ಸಂಕಷ್ಟ ಎದುರಾಗಿದೆ. ಬಿಡುವು ಕೊಡದೆ ಸುರಿಯುತ್ತಿರುವ ಮಳೆಯಿಂದಾಗಿ ಹತ್ತಿ, ಮೆಣಸಿನ ಕಾಯಿ, ತೊಗರಿ ನೀರಿನಲ್ಲಿ ಕೊಳೆಯುತ್ತಿವೆ. ಹೀಗಾಗಿ ರೈತರ ಪಾಡು ಹೇಳತೀರದ್ದಾಗಿದೆ.

ಸಮಾಚಾರ ಸಣ್ಣದಲ್ಲ

ಮಳೆ: ದಸರಾ ಕ್ರೀಡೆ ಮುಂದೂಡಿಕೆ

ಚಿಂಚೋಳಿ: ತಾಲೂಕಿನ ನಿರಂತರವಾಗಿ ಸುರಿಯುತ್ತಿರುವ ಮಳೆಯಿಂದಾಗಿ ಸೋಮವಾರ ಶಾಸಕ ಡಾ.ಅವಿನಾಶ ಜಾಧವ ಅವರಿಂದ ಚಾಲನೆ ಪಡೆಯಬೇಕಾಗಿದ್ದ ದಸರಾ ಕ್ರೀಡಾಕೂಟ ರದ್ದುಪಡಿಸಿ ಮುಂದೂಡಲಾಗಿದೆ. ತಾಲೂಕು ಕ್ರೀಡಾಂಗಣದ ವ್ಯವಸ್ಥಾಪಕ ಮಲ್ಲಿಕಾರ್ಜುನ ನೆಲ್ಲಿ ಪ್ರಕಟಣೆ ಬಿಡುಗಡೆ ಮಾಡಿ, 'ಮಳೆಯಿಂದಾಗಿ ಕ್ರೀಡಾಕೂಟವನ್ನು ಮುಂದೂಡಬೇಕಾಗಿದೆ. ಹೊಸ ದಿನಾಂಕವನ್ನು ಶೀಘ್ರದಲ್ಲೇ ನಿಗದಿಪಡಿಸಿ ಕ್ರೀಡಾಪಟುಗಳಿಗೆ ಮಾಹಿತಿ ನೀಡಲಾಗುತ್ತದೆ. ಕ್ರೀಡಾಪಟುಗಳು ಸಹಕರಿಸಬೇಕು' ಎಂದು ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಕ್ರೀಡಾಪಟುಗಳು 9945750794 ನಂಬರಿಗೆ ಕರೆ ಮಾಡಿ ವಿವರ ಪಡೆಯಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಚಾಕುವಿನಿಂದ ಇರಿದು ವ್ಯಕ್ತಿ ಕೊಲೆ

ಕಲಬುರಗಿ: ಚಾಕುವಿನಿಂದ ಇರಿದು ಅಪರಿಚಿತ ವ್ಯಕ್ತಿಯ ಕೊಲೆ ಮಾಡಿರುವ ಘಟನೆ ನಗರದ ಜೇವರ್ಗಿ ಕಾಲೋನಿಯ ರೈಲ್ವೆ ಬ್ರಿಡ್ಜ್ ಅಂಡರ್ ಬಳಿ ನಡೆದಿದೆ. 30 ರಿಂದ 40 ವಯಸ್ಸಿನ ಆಸುಪಾಸಿನ ಅಪರಿಚಿತ ವ್ಯಕ್ತಿಯ ಹತ್ಯೆಯಾಗಿದ್ದು,ಯಾರೋ ದುಷ್ಕರ್ಮಿಗಳು ಕರೆದುಕೊಂಡು ಹೋಗಿ ಕೊಲೆ ಮಾಡಿರುವ ಶಂಕೆ ವ್ಯಕ್ತವಾಗಿದೆ. ಕೊಲೆಯಾದ ವ್ಯಕ್ತಿಯ ಗುರುತು ಪತ್ತೆಗಾಗಿ ಸ್ಟೇಷನ್ ಬಜಾರ್ ಪೊಲೀಸ್ ಠಾಣೆ ಪೊಲೀಸರು ಮುಂದಾಗಿದ್ದು, ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಕೊಲೆಯಾದ ವ್ಯಕ್ತಿಯ ಬಗ್ಗೆ ಮಾಹಿತಿ ಸಿಕ್ಕರೆ ಪೊಲೀಸ್ ಠಾಣೆಗೆ ಮಾಹಿತಿ ನೀಡುವಂತೆ ಪೊಲೀಸರು ಮನವಿ ಮಾಡಿದ್ದು,ಈ ಕುರಿತು ಸ್ಟೇಷನ್ ಬಜಾರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ದೇವರಾಜ ಅರಸು ಜಯಂತಿ ನಾಳೆ

ಕಲಬುರಗಿ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಕಲಬುರಗಿ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ, ಕಲಬುರಗಿ ವತಿಯಿಂದ ಕರ್ನಾಟಕದ ಮಾಜಿ ಮುಖ್ಯಮಂತ್ರಿಗಳು ಹಾಗೂ ಹಿಂದುಳಿದ ವರ್ಗಗಳ ಪರಿವರ್ತನೆಯ ಹರಿಕಾರ ಡಿ.ದೇವರಾಜ ಅರಸು 110ನೇ ಜನ್ಮ ದಿನಾಚರಣೆಯನ್ನು ಆ.20 ರಂದು ಬೆಳಗ್ಗೆ 11 ಗಂಟೆಗೆ ಪಬ್ಲಿಕ್ ಗಾರ್ಡನ್ ಹತ್ತಿರವಿರುವ ವೀರಶೈವ ಕಲ್ಯಾಣ ಮಂಟಪದಲ್ಲಿ ಹಮ್ಮಿಕೊಳ್ಳಲಾಗಿದೆ. ಡಿ.ದೇವರಾಜು ಅರಸು ಅವರ ಭಾವಚಿತ್ರದ ಮೆರವಣಿಗೆಯನ್ನು ಅಂದು ಬೆಳಗ್ಗೆ 8ಗಂಟೆಗೆ ಕಲಬುರಗಿಯ ಗಂಜನ ನಗರೇಶ್ವರ ಶಾಲೆಯಿಂದ ಪಬ್ಲಿಕ್ ಗಾರ್ಡನ್ ಹತ್ತಿರದ ವೀರಶೈವ ಕಲ್ಯಾಣ ಮಂಟಪದವರೆಗೆ ಭಾವಚಿತ್ರದ ಭವ್ಯವಾದ ಮೆರವಣಿಗೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಹಿಂದುಳಿದ ಕಲ್ಯಾಣ ಇಲಾಖೆ ಉಪನಿರ್ದೇಶಕ ಸೋಮಶೇಖರ.ವೈ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪರಿಸರ ಸ್ನೇಹಿ ಗೌರಿ ಗಣೇಶ ಹಬ್ಬ ಆಚರಿಸಿ

ಕಲಬುರಗಿ: ಕರ್ನಾಟಕ ರಾಜ್ಯದಾದ್ಯಂತ ಗೌರಿ ಗಣೇಶ ಹಬ್ಬವನ್ನು ಪರಿಸರ ಸ್ನೇಹಿಯಾಗಿ ಆಚರಿಸಬೇಕು. ಪಿಒಪಿ ಮತ್ತು ರಾಸಾಯನಿಕ ಬಣ್ಣ ಲೇಪಿತ ಗಣೇಶ ಮೂರ್ತಿಗಳನ್ನು ತಯಾರಿಸುವುದಾಗಲಿ/ಮಾರಾಟ ಮಾಡುವುದಾಗಲಿ/ಸಂಗ್ರಹ ಮಾಡುವುದಾಗಲಿ/ಸಾಗಾಣಿಕೆಯನ್ನು ಮಾಡುವುದಾಗಲಿ ಇತ್ಯಾದಿಗಳು ಪರಿಸರಕ್ಕೆ ಮಾರಕವೆಂದು ಕರ್ನಾಟಕ ಸರಕಾರವು ಈಗಾಗಲೇ ನಿಷೇಧಿಸಿರುತ್ತದೆ ಹಾಗೂ ಜೇಡಿ ಮಣ್ಣಿನಿಂದ ತಯಾರಿಸಿದಂತಹ ಮತ್ತು ನೈಸರ್ಗಿಕ ಬಣ್ಣ ಲೇಪಿತ ಮೂರ್ತಿಗಳನ್ನು ಪ್ರತಿಷ್ಠಾಪಿಸಿ ಪರಿಸರ ಸ್ನೇಹಿ ಗಣೇಶ ಹಬ್ಬವನ್ನು ಆಚರಿಸಬೇಕೆಂದು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಪ್ರಾದೇಶಿಕ ಕಚೇರಿಯ ಪರಿಸರ ಅಧಿಕಾರಿ ಸೋಮಶೇಖರ್. ಕೆ.ಎಂ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಸಹಜ ಸಾವಿನ ಕುರಿತು ತನಿಖೆ ನಡೆಸಿ

ಕಲಬುರಗಿ: ಧರ್ಮಸ್ಥಳದ ವ್ಯಾಪ್ತಿಯಲ್ಲಿ 1987ರಿಂದ ನಡೆದ ಕೊಲೆ, ಕಾಣೆಯಾದವರು ಹಾಗೂ ಅಸಹಜ ಸಾವಿನ ಕುರಿತು ಪ್ರತ್ಯೇಕ ಎಸ್ಐಟಿ ತನಿಖೆ ನಡೆಸಬೇಕು ಎಂದು ಸಿಪಿಐ(ಎಂ)ನ ಜಿಲ್ಲಾ ಕಾರ್ಯದರ್ಶಿ ಕೆ.ನೀಲಾ ಆಗ್ರಹಿಸಿದ್ದಾರೆ. ನಗರದ ಪತ್ರಿಕಾ ಭವನದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ಧರ್ಮಸ್ಥಳದಲ್ಲಿ ಕಳೆದ ಹಲವು ವರ್ಷಗಳಿಂದ ನಾನಾ ಅಕ್ರಮಗಳು ನಡೆಯುತ್ತಿವೆ. ಮುಖ್ಯವಾಗಿ ಭೂ ಕಬಳಿಕೆ ಕೂಡ ಸೇರಿಕೊಂಡಿದೆ. ಧರ್ಮಸ್ಥಳದಲ್ಲಿ ಹೆಣಗಳು ಹೂತುಹಾಕಿದ್ದೇನೆ ಎಂದು ವ್ಯಕ್ತಿಯೊಬ್ಬರ ದೂರು ಆಧರಿಸಿ ಸದ್ಯ ಎಸ್ಐಟಿ ತನಿಖೆ ನಡೆಸುತ್ತಿದೆ. ಈ ಬಗ್ಗೆ ಆಡಳಿತ ಪಕ್ಷದ ಡಿಸಿಎಂ ಡಿಕೆ ಶಿವಕುಮಾರ ಮತ್ತು ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಅವರು ಎಸ್ಐಟಿಯ ಆತ್ಮಸ್ಥೈರ್ಯ ಕುಗ್ಗಿಸುವ ಮಾತನಾಡುತ್ತಿದ್ದಾರೆ. ಇದಲ್ಲದೆ ಕಳೆದ 10 ವರ್ಷಗಳಲ್ಲಿ ಸುಮಾರು 416 ಅಸಹಜ ಸಾವು ಆಗಿವೆ ಎಂಬ ಕುರಿತು ವರದಿಗಳಿವೆ. ಮುಂದಿನ ವಾರ ನಗರದಲ್ಲಿ ಸಮಾನ ಮನಸ್ಕರ, ಪ್ರಗತಿಪರರ ದುಂಡು ಮೇಜಿನ ಸಭೆ ನಡೆಸಿ, ಮುಂದಿನ ಸುಧಾಮ ಧನ್ನಿ, ಶಾಂತಾ ಘಂಟಿ ಇದ್ದರು.

{ಮಧು ಬಂಗಾರಪ್ಪ} ಸಚಿವ

ಕಳೆದ ಮೂರು ವರ್ಷಗಳಲ್ಲಿ ಸರಕಾರಿ ಶಾಲೆಗಳಲ್ಲಿ ದಾಖಲಾತಿ ಪ್ರಮಾಣ ಕಡಿಮೆಯಾಗಿದೆ. ಗುಣಮಟ್ಟದ ಶಿಕ್ಷಣ ಕೊಡುವ ಪ್ರಯತ್ನ ನಡೆಯುತ್ತಿದ್ದರೂ ಗಣನೀಯ ಪ್ರಮಾಣದಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಳವಾಗುತ್ತಿಲ್ಲ. ಪೋಷಕರು ಖಾಸಗಿ ಶಾಲೆಗಳತ್ತ ಒಲವು ತೋರಿರುವುದು ಹೆಚ್ಚಾಗಿದೆ.

ವಾಣಿಜ್ಯ ಬೆಳೆಗಳಿಗೆ ಭಾರಿ ಹೊಡೆತ | ನೀರಿನಲ್ಲಿ ಕೊಚ್ಚಿ ಹೋದ ಉದ್ದು, ಹೆಸರು | ತೊಗರಿಗೂ ಎದುರಾದ ಕಂಟಕ

ವರುಣನ ಆರ್ಭಟ, ರೈತರ ಪರದಾಟ

ವಿಶ್ವವಾಣಿ ಸುದ್ದಿಮನೆ

ಕಲಬುರಗಿ: ಕಲ್ಯಾಣ ಕರ್ನಾಟಕ ಭಾಗದ ಕೇಂದ್ರ ಸ್ಥಾನವಾಗಿರುವ ಕಲಬುರಗಿ ಜಿಲ್ಲೆಯಲ್ಲಿ ಕಳೆದ ಕೆಲವು ದಿನಗಳಿಂದ ಸುರಿಯುತ್ತಿರುವ ನಿರಂತರ ಧಾರಾಕಾರ ಮಳೆಯ ಪರಿಣಾಮವಾಗಿ ಹಳ್ಳ-ಕೊಳ್ಳಗಳು ತುಂಬಿ ಹರಿಯುತ್ತಿದ್ದು, ಜಲಾಶಯಗಳ ನೀರು ನದಿಗೆ ಹರಿಬಿಟ್ಟ ಪರಿಣಾಮ ಜಮೀನುಗಳಿಗೆ ನೀರು ನುಗ್ಗಿ ರೈತರ ವಾಣಿಜ್ಯ ಬೆಳೆಗಳು ಹಾನಿಗೀಡಾಗಿವೆ.

ಜಿಲ್ಲೆಯ ಪ್ರಮುಖ ಬೆಳೆಗಳಾದ ಉದ್ದು, ಹೆಸರು ನೀರಿನಲ್ಲಿ ಕೊಚ್ಚಿ ಹೋಗಿದ್ದು, ಭಾಗದ ಬಹು ಬೆಳೆಯಾದ ತೊಗರಿ ಸಹ ನಾಶದತ್ತ ಸಾಗುತ್ತಿದೆ. ಇದರಿಂದ ರೈತಾಪಿ ವರ್ಗ ಸಂಕಟಕ್ಕೆ ಸಿಲುಕಿದ್ದು, ಆತಂಕದ ವಾತಾವರಣ ನಿರ್ಮಾಣವಾಗಿದೆ. ಜ.1ರಿಂದ ಆ.18ರವರೆಗೆ ವಾಡಿಕೆ ಪ್ರಕಾರ ಸರಾಸರಿ 409 ಮೀ.ಮೀ. ಮಳೆಯಾಗಬೇಕಿದ್ದರೆ, 613 ಮೀ.ಮೀ. ಮಳೆಯಾಗಿದೆ. ಅಂದರೆ, ಶೇ.50 ಹೆಚ್ಚು ಮಳೆಯಾಗಿದೆ. ಅಫಜಲಪುರ, ಚಿಂಚೋಳಿ, ಆಳಂದ, ಸೇಡಂ ತಾಲೂಕುಗಳಲ್ಲಿ ಸಾಲಮಾಡಿ ಬಿತ್ತನೆ ಮಾಡಿದ ಹೆಸರು, ಉದ್ದು, ತೊಗರಿ ಬೆಳೆಗಳು ನೀರಿನಲ್ಲಿ ಕೊಚ್ಚಿ ಹೋಗಿದ್ದು, ರೈತರ ಬದುಕಿಗೆ ಭಾರೀ ಹೊಡೆತ ಬಿದ್ದಂತಾಗಿದೆ.

ಜಿಲ್ಲೆಯಲ್ಲಿ ಒಟ್ಟು 6.30 ಲಕ್ಷ ಹೆಕ್ಟರ್ ಪ್ರದೇಶದಲ್ಲಿ ತೊಗರಿ ಬಿತ್ತನೆ ಗುರಿ ಇಟ್ಟುಕೊಳ್ಳಲಾಗಿದ್ದು, ಈಗಾಗಲೇ 6 ಲಕ್ಷಕ್ಕೂ ಅಧಿಕ ಹೆಕ್ಟರ್‌ನಲ್ಲಿ ಬಿತ್ತನೆ ಮಾಡಲಾಗಿದೆ. ಆದರೆ, ನೀರಿನ ಅತಿಯಾದ ತೇವಾಂಶದಿಂದಾಗಿ ಶೇ.40ರಷ್ಟು ತೊಗರಿ ಬೇರು ಕೊಳೆತು ಹಾನಿಯಾಗುತ್ತಿದೆ.

ಜಿಲ್ಲಾವಾರು ಮಳೆ ಹೋಲಿಕೆ (ಜು.1ರಿಂದ ಆ.18) ಕಲಬುರಗಿ

ವಾಡಿಕೆ 409 ಮಿ.ಮೀ | ಬಿದ್ದ ಮಳೆ 613 ಮಿ.ಮೀ (50% ಹೆಚ್ಚು), ಬೀದರ್: 477 ಮಿ.ಮೀ | 473 ಮೀ.ಮೀ, ಯಾದಗಿರಿ: 370 ಮಿ.ಮೀ | 543 ಮೀ.ಮೀ (47% ಹೆಚ್ಚು) ರಾಯಚೂರು: 311 ಮೀ.ಮೀ | 469 ಮಿ.ಮೀ (51% ಹೆಚ್ಚು) ಕೊಪ್ಪಳ: 275 ಮೀ.ಮೀ | 431 ಮಿ.ಮೀ (57% ಹೆಚ್ಚು) ಬಳ್ಳಾರಿ: 260 ಮೀ.ಮೀ | 319 ಮಿ.ಮೀ ವಿಜಯನಗರ: 323 ಮೀ.ಮೀ | 430 ಮಿ.ಮೀ.

> ಬೆಣ್ಣೆತೋರಾ ಜಲಾಶಯದ ನೀರು ಹರಿದು ಜಮೀನುಗಳಿಗೆ ನುಗ್ಗಿವೆ. ಕಟಾವಿಗೆ ಬಂದಿದ್ದ ಉದ್ದು-ಹೆಸರು ಸಂಪೂರ್ಣ ಹಾಳಾಗಿವೆ. ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ. ಸಾಲ ತೀರಿಸುವುದು ಕಷ್ಟವಾಗಲಿದೆ.
>
> -ದಶರಥ್ ಹೆಬ್ಬಾಳ, ರೈತ

> ನಿರಂತರ ಮಳೆಯಿಂದ ಜಿಲ್ಲೆಯ ಪ್ರಮುಖ ಬೆಳೆ ಶೇ.40ರಷ್ಟು ತೊಗರಿ ಬೇರು ಕೊಳೆತು ಹಾನಿಯಾಗಿದೆ. ತಕ್ಷಣವೇ ಬೆಳೆ ಹಾನಿ ಸರ್ವೆ ಮಾಡಿ ಪರಿಹಾರ ಘೋಷಿಸಬೇಕು.
>
> -ಶರಣಬಸಪ್ಪ ಮಮಶೆಟ್ಟಿ, ಜಿಲ್ಲಾ ಅಧ್ಯಕ್ಷ,ಕೆಪಿಆರ್‌ಸ್

ಜಲಾಶಯಗಳ ಸ್ಥಿತಿ

ಅಮರ್ಜಾ ಜಲಾಶಯ ಸಾಮರ್ಥ್ಯ 1,554 ಟಿಎಂಸಿ, ಸಂಗ್ರಹ 1,220 ಟಿಎಂಸಿ ಬೆಣ್ಣೆತೋರಾ ಜಲಾಶಯ: ಸಾಮರ್ಥ್ಯ 5,297 ಟಿಎಂಸಿ, ಸಂಗ್ರಹ 4,447 ಟಿಎಂಸಿ ಭೀಮಾ ಲಿಫ್ಟ್ ಇರೀಗೇಶನ್: ಸಾಮರ್ಥ್ಯ 3,166 ಟಿಎಂಸಿ, ಸಂಗ್ರಹ 2,198 ಟಿಎಂಸಿ ಚಂದ್ರಂಪಳ್ಳಿ ಜಲಾಶಯ: ಸಾಮರ್ಥ್ಯ 1,208 ಟಿಎಂಸಿ, ಸಂಗ್ರಹ 0.973 ಟಿಎಂಸಿ ಗುಂಡೋರಿ ನಾಲಾ: ಸಾಮರ್ಥ್ಯ 1,887 ಟಿಎಂಸಿ, ಸಂಗ್ರಹ 1,534 ಟಿಎಂಸಿ ಲೋವರ್ ಮುಲ್ಲಾಮಾರಿ: ಸಾಮರ್ಥ್ಯ 1,736 ಟಿಎಂಸಿ, ಸಂಗ್ರಹ 1,332 ಟಿಎಂಸಿ.

ಮುಖ್ಯಾಂಶಗಳು

- ಕಲಬುರಗಿಯಲ್ಲಿ 613 ಮೀ.ಮೀ. ಮಳೆ ವಾಡಿಕೆಗಿಂತ 50% ಹೆಚ್ಚು
- ತೊಗರಿ, ಉದ್ದು, ಹೆಸರು ಬೆಳೆ ನಾಶ ರೈತರ ಆರ್ಥಿಕ ಸ್ಥಿತಿ ಸಂಕಷ್ಟ
- ಬೆಳೆ ಹಾನಿ ಸರ್ವೆ, ಪರಿಹಾರಕ್ಕೆ ರೈತರ ಒತ್ತಾಯ
- ಜಲಾಶಯಗಳು ತುಂಬಿ ಹರಿಯುತ್ತಿದ್ದು, ನದಿಗಳು ಉಕ್ಕಿ ಹರಿಯುವ ಭೀತಿ

ಎಪಿಎಂಸಿ ರೈತರ ಮಾರುಕಟ್ಟೆಯಾಗಿ ಉಳಿಯಲಿ

ಕಲಬುರಗಿ: ಎಪಿಎಂಸಿ ಸ್ಥಳಾಂತರದಿಂದ ರೈತರಿಗೆ ಯಾವುದೂ ಪ್ರಯೋಜನ ಇಲ್ಲ, ಅನುಕೂಲಕ್ಕಿಂತ ಅನಾನುಕೂಲವೇ ಹೆಚ್ಚು. ಸ್ಥಳಾಂತರ ಮಾಡಿದರೆ ರೈತರೆಲ್ಲ ಬೀದಿಗಿಳಿಯಬೇಕಾಗುತ್ತದೆ ಎಂದು ಎಪಿಎಂಸಿ ಮಾಜಿ ಅಧ್ಯಕ್ಷ ಚಂದ್ರಶೇಖರ ಹರಸೂರ್ ಎಚ್ಚರಿಸಿದರು. ಕಕ ಪ್ರತ್ಯೇಕ ರಾಜ್ಯ ಹೋರಾಟ ಸಮಿತಿ ವತಿ ಯಿಂದ ನಗರದ ಕನ್ನಡ ಭವನದಲ್ಲಿ ಎಪಿಎಂಸಿ ರೈತರ ಮಾರುಕಟ್ಟೆಯಾಗಿ ಉಳಿ ಯಲಿ, ಕಿರಾಣಿ ಮಾರುಕಟ್ಟೆಯಾಗಿ ಉದ್ಯಮಿಗಳ ಪಾಲಾಗದಿರಲಿ ಎಂಬ ವಿಷಯದ ಕುರಿತು ವಿಚಾರ ಸಂಕಿರಣ ಹಾಗೂ ಎಪಿ ಎಂಸಿ ಹೋರಾಟಕ್ಕೆ ಬೆಂಬಲಿಸಿದ ಸಂಘಟ ನೆಗಳ ಅಧ್ಯಕ್ಷರಿಗೆ ಅಭಿನಂದನಾ ಸಮಾ ರಂಭ ಉದ್ಘಾಟಿಸಿದರು. ಮಾತನಾಡಿದ ಎಂ.ಎಸ್. ಪಾಟೀಲ್ ನರಿಬೋಳ, ಎಪಿಎಂಸಿ ಹೋರಾಟದಲ್ಲಿ ಬೆಂಬಲಿಸಿ ಭಾಗ ವಹಿಸಿದ ಎಲ್ಲರಿಗೂ ಧನ್ಯವಾದ ಸಲ್ಲಿದರು. ಆ.18ರ ವರೆಗೆ ಕಾಯುತ್ತೇವೆ. 19ರಂದು ಬೆಳಗ್ಗೆ ಎಪಿಎಂಸಿಗೆ ಮುತ್ತಿಗೆ ಹಾಕುತ್ತೇವೆ. ಅಧಿಕಾರಿಗಳು ಕೀಲಿ ಹಾಕದಿದ್ದರೆ, ನಾವೇ ಸೇರಿ ಎಲ್ಲಾ ಅಂಗಡಿಗಳಿಗೆ ಕೀಲಿ ಹಾಕು ತ್ತೇವೆ ಎಂದು ಎಚ್ಚರಿಕೆ ನೀಡಿದರು. ಕಾರ್ಯಕ್ರಮದಲ್ಲಿ ದಲಿತ ಸೇನೆ ಜಿಲ್ಲಾಧ್ಯಕ್ಷ ಮಂಜುನಾಥ ಬಂಡಾರಿ, ಲಕ್ಷ್ಮೀಕಾಂತ ಸ್ವಾದಿ, ಗೋಲ್ಲಾಳಪ್ಪ ಮದರಿ, ಯುಗಾಂತ್ರಿ ದೇಶಮಾನೆ, ಶರಣಬಸಪ್ಪಾ ದೊಡ್ಡಮನಿ, ವಿರಣ ಬೆಲೂರೆ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಹೋರಾಟಕ್ಕೆ ಬೆಂಬಲಿಸಿದರು. ಈ ಸಂದರ್ಭದಲ್ಲಿ ಎಪಿಎಂಸಿ ಹೋರಾಟಕ್ಕೆ ಬೆಂಬಲಿಸಿದ ವಿವಿಧ ಸಂಘಟನೆಗಳ ಅಧ್ಯಕ್ಷರನ್ನು ಸನ್ಮಾನಿಸಿ ಗೌರವಿಸಲಾಯಿತು.

ಉಚಿತ ಕೃತಕ ಕೈ-ಕಾಲು ಜೋಡಣೆ ಶಿಬಿರ

ಆಳಂದ: ಪಟ್ಟಣದ ಹೊರವಲಯದಲ್ಲಿರುವ ಸಮತಾ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದಲ್ಲಿ ವಿಶೇಷ ಚೇತನರಿಗೆ ಉಚಿತ ಕೃತಕ ಕೈ-ಕಾಲು ಜೋಡಣೆ ಶಿಬಿರ ಏರ್ಪಡಿಸಲಾಯಿತು.

> ಈ ಸಾಲಿನಲ್ಲಿ ವಿಶೇಷಚೇತನರಿಗಾಗಿ ತ್ರಿಚಕ್ರ ವಾಹನ ಖರೀದಿಗೆ 60 ಲಕ್ಷ ಅನುದಾನ ಬಿಡುಗಡೆ ಮಾಡಿದ್ದಾರೆ. ಖಾಸಗಿ ಆಸ್ಪತ್ರೆಗಳಲ್ಲಿ ಕೃತಕ ಕೈ-ಕಾಲು ಅಳವಡಿಸಿಕೊಳ್ಳಲು ಸಾವಿರಾರು ರುಪಾಯಿ ವೆಚ್ಚವಾಗುತ್ತದೆ. ಆದರೆ ಈ ಶಿಬಿರದಲ್ಲಿ ಪುಣೆಯ ಸಾಧು ವಾಸ್ವನಿ ಮಿಷನ್ ಉಚಿತವಾಗಿ ಅಳವಡಿಸುತ್ತಿರುವುದು ಶ್ಲಾಘನೀಯ. ಅಗತ್ಯವಿರುವವರು ಇದರ ಸದುಪಯೋಗ ಪಡೆದುಕೊಳ್ಳಬೇಕು.
>
> - ಬಿ.ಆರ್.ಪಾಟೀಲ್, ಶಾಸಕ

ಭಾರತೀಯ ರೆಡ್ ಕ್ರಾಸ ಸಂಸ್ಥೆ, ಸಾಧು ವಾಸ್ವನಿ ಮಿಷನ್ ಪುಣೆ, ಸಮತಾ ಆಯುರ್ವೇದ ಮಹಾವಿದ್ಯಾಲಯ ಹಾಗೂ ಭಾರತೀಯ ರೆಡ್ ಕ್ರಾಸ್ ಸೊಸೈಟಿ ತಾಲೂಕು ಘಟಕ ಜಂಟಿಯಾಗಿ ಆಯೋಜಿಸಿದ ಶಿಬಿರವನ್ನು ಕೆಎಂಎಫ್ ಅಧ್ಯಕ್ಷ ಹಾಗೂ ಸಂಸ್ಥೆಯ ಕಾರ್ಯದರ್ಶಿ ಆರ್.ಕೆ. ಪಾಟೀಲ್ ಉದ್ಘಾಟಿಸಿದರು.

ಸಮತಾ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದಲ್ಲಿ ವಿಶೇಷ ಚೇತನರಿಗೆ ಉಚಿತ ಕೃತಕ ಕೈ-ಕಾಲು ಜೋಡಣೆ ಶಿಬಿರ ಏರ್ಪಡಿಸಲಾಯಿತು.

ಸಾಧು ವಾಸ್ವನಿ ಮಿಷನ್ ಪುಣೆಯ ಡಾ. ಶಾಲಿಲ ಜೈನ್ ಹಾಗೂ ಮಿಲಿಂದ ಜಾಧವ ಮಾತನಾಡಿ, 'ತಾಲೂಕಿನಲ್ಲಿ 4 ಸಾವಿರಕ್ಕೂ ಹೆಚ್ಚು ಅಂಗವಿಕಲರು ಇದ್ದಾರೆ. ಅವರಲ್ಲಿ ಅನೇಕರು ಕೃತಕ ಕೈ-ಕಾಲು ಅಳವಡಿಸಿಕೊಳ್ಳಲು ಮುಂದಾಗಿದ್ದಾರೆ. ಸಮತಾ ಸಂಸ್ಥೆ ಕೈಗೊಂಡಿರುವ ಈ ಸಾಮಾಜಿಕ ಕಾರ್ಯ ಶ್ಲಾಘನೀಯ' ಎಂದು ಅಭಿಪ್ರಾಯಪಟ್ಟರು.

ಈ ಸಂದರ್ಭದಲ್ಲಿ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ.ಮಂಜುನಾಥ ಅಕ್ಕಿ, ರೆಡ್ ಕ್ರಾಸ ಸಂಸ್ಥೆ ಜಿಲ್ಲಾಧ್ಯಕ್ಷ ಅರುಣಕುಮಾರ ಲೋಹಿಯಾ, ತಾಲೂಕು ಶಾಖಾಧ್ಯಕ್ಷ ಮೋಹನ ಜಿಡ್ಡಿಮನಿ, ಗೌರವ ಕಾರ್ಯದರ್ಶಿ ಪ್ರಭಾಕರ ಸಲಗರೆ, ಸಂಯೋಜಕ ಬಾಬುರಾವ ಮಡ್ಡೆ ಹಾಗೂ ದತ್ತು ಅಗರವಾಲ, ಮಲ್ಲಿಕಾರ್ಜುನ ಕಟ್ಟಿಮನಿ, ಡಾ.ಚನ್ನವೀರ, ಡಾ.ಆಶಾ ಪಾಟೀಲ್, ಕಲ್ಯಾಣರಾವ ಶೀಲವಂತ, ಗುಂಡೇರಾವ ಪದ್ಮಾಜೀ, ಮನೋಜ ತಳವಾರ, ರಮೇಶ ಕಾಮಣೆ, ಹಣಮಂತರಾಯ ಏರಿ, ಗುರುನಾಥ ದೇವಂತಗಿ, ಸವಿತಾಬಾಯಿ ಸೂರ್ಯವಂಶಿ, ರೂಪಾಶ್ರೀ ಗಡಕರ, ಸಿದ್ಧರಾಮ ಪಾಟೀಲ್ ಭಾಗವಹಿಸಿದರು.

ಬೆಳೆ ವಿಮೆ ಪರಿಹಾರ ಬಿಡುಗಡೆಗೆ ಮನವಿ

ಕಲಬುರಗಿ: ತೊಗರಿ ನೆಟೆ ರೋಗದಿಂದ ಹಾನಿಯಾಗಿರುವ ಪ್ರದೇಶದ ರೈತರಿಗೆ 677.73 ಕೋಟಿ ರು. ಮಂಜೂರಾಗಿತ್ತು. ಇದರಲ್ಲಿ ಕೇವಲ 340.99 ಕೋಟಿ ರು. ಬಿಡುಗಡೆಯಾಗಿದೆ. ಉಳಿದ 326 ಕೋಟಿ ರು. ಬೆಳೆ ವಿಮಾ ಪರಿಹಾರ ಮತ್ತು ವಿಮಾರಹಿತ ರೈತರಿಗೆ 307 ಕೋಟಿ ರು. ಪರಿಹಾರ ನೀಡುವಂತೆ ಜಿಲ್ಲಾ ರೈತ ಹೋರಾಟ ಸಮಿತಿ ನಿಯೋಗವು ಇತ್ತೀಚಿಗೆ ಸಿಎಂ ಸಿದ್ದರಾಮಯ್ಯ, ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಹಾಗೂ ಕೃಷಿ ಸಚಿವ ಚೆಲುವರಾಯಸ್ವಾಮಿ ಅವರನ್ನು ಬೆಂಗಳೂರಲ್ಲಿ ಭೇಟಿಯಾಗಿ ಮನವಿ ಸಲ್ಲಿಸಿತು.

ಜಿಲ್ಲಾ ರೈತ ಹೋರಾಟ ಸಮಿತಿ ನಿಯೋಗದ ಮನವಿಗೆ ಸ್ಪಂದಿಸಿದ ಸಿಎಂ ಹಾಗೂ ಸಚಿವರು, ಕೂಡಲೇ ಬಾಕಿ ಇರುವ ವಿಮಾ ಹಣವನ್ನು ಬಿಡುಗಡೆ ಮಾಡುವುದಾಗಿ ಮತ್ತು ವಿಮಾರಹಿತ ರೈತರಿಗೆ ಪರಿಹಾರದ ಬಗ್ಗೆ ಪರಿಶೀಲಿಸಲಾಗುವುದು ಎಂದು ಭರವಸೆ ನೀಡಿದ್ದಾರೆ ಎಂದು ನಿಯೋಗದಲ್ಲಿದ್ದ ರೈತ ಮುಖಂಡರು ತಿಳಿಸಿದ್ದಾರೆ.

ಅದರಂತೆ ಈ ಬಗ್ಗೆ ಗಂಭೀರವಾಗಿ ಪರಿಗಣಿಸಿ, ಕೂಡಲೇ ಹಣ ಬಿಡುಗಡೆ ಮಾಡುವಂತೆ ಸದನದಲ್ಲಿ ಸರಕಾರವನ್ನು ಒತ್ತಾಯಿಸಬೇಕೆಂದು ಜಿಲ್ಲೆಯ ಪ್ರತಿನಿಧಿಗಳಾದ ಅಲ್ಲಮಪ್ರಭು ಪಾಟೀಲ, ಬಿ.ಆರ್.ಪಾಟೀಲ್, ಬಿ.ಜಿ.ಪಾಟೀಲ್, ಶಶೀಲ್ ಜಿ ನಮೋಶಿ, ತಿಪ್ಪಣಪ್ಪ ಕಮಕನೂರ, ಬಸವರಾಜ ಮತ್ತಿಮೂಡ, ಎಂ.ವೈ.ಪಾಟೀಲರು ಅವರನ್ನು ವಿನಂತಿಸಲಾಗಿದ್ದು, ಸದನದ ಗಮನ ಸೆಳೆದು ಕೂಡಲೇ ರೈತರಿಗೆ ಹಣ ಬಿಡುಗಡೆ ಮಾಡಿಸುವುದಾಗಿ ತಿಳಿಸಿದ್ದಾರೆ. ಜಿಲ್ಲಾ ರೈತ ಹೋರಾಟ ಸಮಿತಿ ನಿಯೋಗದಲ್ಲಿ ಮುಖಂಡರಾದ ಅವ್ವಣ್ಣ ಮ್ಯಾಕೇರಿ, ಬಸವರಾಜ ಇಂಗಿನ, ಸಿದ್ರಾಮಪ್ಪ ಪಾಟೀಲ್, ಚಂದ್ರಶೇಖರ ಹಿರೇಮಠ್, ಆದಿನಾಥ್ ಹೀರಾ, ಭೀಮಶೆಟ್ಟಿ ಮುಕ್ಕಾ, ಮಲ್ಲಣ್ಣ ಕುಲಕರ್ಣಿ, ಮಹೇಶ್ ಪಾಟೀಲ್, ಮಲ್ಲಣ್ಣ ಮೇಳಕುಂದಿ, ಶಿವಕುಮಾರ್ ಪಾಟೀಲ್, ಸುರೇಶ್ ಪಾಟೀಲ್ ಇದ್ದರು.



ಜಿಲ್ಲಾ ರೈತ ಹೋರಾಟ ಸಮಿತಿ ನಿಯೋಗವು ಸಿಎಂ ಸಿದ್ದರಾಮಯ್ಯ, ಸಚಿವ ಪ್ರಿಯಾಂಕ್ ಖರ್ಗೆ ಹಾಗೂ ಕೃಷಿ ಸಚಿವ ಚೆಲುವರಾಯಸ್ವಾಮಿ ಅವರನ್ನು ಭೇಟಿಯಾಗಿ ಮನವಿ ಸಲ್ಲಿಸಲಾಯಿತು.

ಪರಿಹಾರ ಹಣ ಬಿಡುಗಡೆ ಭರವಸೆ

ಹೀಗಾಗಿ ಬಾಕಿ ಇರುವ ಪರಿಹಾರ ಹಣ ಬಿಡುಗಡೆ ಮಾಡುವುದಾಗಿ ಸರಕಾರ ಭರವಸೆ ನೀಡಿರುವ ಹಿನ್ನೆಲೆ ತಿಂಗಳಾಂತ್ಯದವರೆಗೆ ಕಾದು ನೋಡಿ, ಒಂದು ವೇಳೆ ಪರಿಹಾರ ಹಣ ಬಿಡುಗಡೆ ಮಾಡದೇ ಇದ್ದಲ್ಲಿ ಮತ್ತೇ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಜಿಲ್ಲಾ ರೈತ ಹೋರಾಟ ಸಮಿತಿ ಮುಖಂಡರು ತಿಳಿಸಿದ್ದಾರೆ.

ಪಿಕಾರ್ಡ್: ಕಾಂಗ್ರೆಸ್-ಜೆಡಿಎಸ್ ಮೇಲುಗೈ



ಜೇವರ್ಗಿ: ಪಟ್ಟಣದ ತಾಲೂಕು ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ (ಪಿಕಾರ್ಡ್ ಬ್ಯಾಂಕ್) ಆಡಳಿತ ಮಂಡಳಿಗೆ ದಶಕಗಳ ಬಳಿಕ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷದ ಅಭ್ಯರ್ಥಿಗಳು ಮೇಲುಗೈ ಸಾಧಿಸಿದ್ದಾರೆ.

ಒಟ್ಟು 14 ಸ್ಥಾನಗಳಿಗೆ 51 ಅಭ್ಯರ್ಥಿಗಳು ಕಣಕ್ಕಿಳಿದಿದ್ದು, ಅದರಲ್ಲಿ ಕಾಂಗ್ರೆಸ್ ಪಕ್ಷದ 6 ಅಭ್ಯರ್ಥಿಗಳು, ಜೆಡಿಎಸ್ ಪಕ್ಷದ 6 ಅಭ್ಯರ್ಥಿಗಳು ಮತ್ತು ಬಿಜೆಪಿ ಪಕ್ಷದ ಒಬ್ಬ ಅಭ್ಯರ್ಥಿ ಗೆಲುವು ಸಾಧಿಸಿದ್ದಾರೆ. ಜತೆಗೆ ಕಾಂಗ್ರೆಸ್‌ನ ಒಬ್ಬ ಅಭ್ಯರ್ಥಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿಗಳು ತಿಳಿಸಿದ್ದಾರೆ.

ಚುನಾವಣಾ ಸಂಭ್ರಮ

ಚುನಾವಣಾ ಫಲಿತಾಂಶ ಘೋಷಣೆಯಾದ ನಂತರ ಕಾಂಗ್ರೆಸ್ ಮತ್ತು ಜೆಡಿಎಸ್ ಕಾರ್ಯಕರ್ತರು ಸಂಭ್ರಮಾಚರಣೆ ನಡೆಸಿ ವಿಜಯೋತ್ಸವ ಆಚರಿಸಿದರು. ರಾಜಕೀಯ ಪಕ್ಷಗಳ ಮುಖಂಡರು ತಂತ್ರಬದ್ಧವಾಗಿ ಕಾರ್ಯನಿರ್ವಹಿಸಿದ ಪರಿಣಾಮ ತಮ್ಮ ಅಭ್ಯರ್ಥಿಗಳ ಗೆಲುವು ಸಾಧ್ಯವಾಯಿತೆಂದು ಅಭಿಪ್ರಾಯ ವ್ಯಕ್ತವಾಗಿದೆ.

ಚುನಾವಣಾ ಚಿತ್ರಣ: ಒಟ್ಟು ಸ್ಥಾನಗಳು: 14 ಸ್ಪರ್ಧಿಸಿದ್ದ ಅಭ್ಯರ್ಥಿಗಳು: 51 ಗೆದ್ದವರು: ಕಾಂಗ್ರೆಸ್ 6, ಜೆಡಿಎಸ್ 6, ಬಿಜೆಪಿ 1, ಅವಿರೋಧ 1 (ಕಾಂಗ್ರೆಸ್).

ಶ್ರಾವಣದ ರುದ್ರಾಭಿಷೇಕಕ್ಕೆ ಭಕ್ತಿಪೂರ್ವಕ ತೆರೆ

ಕಲಬುರಗಿ: ವಿಷ್ಣುವು ಅಲಂಕಾರದಿಂದ, ಸೂರ್ಯನು ನಮಸ್ಕಾರದಿಂದ ಪ್ರಸನ್ನನಾದರೆ, ಪರಶಿವನು ಅಭಿಷೇಕದಿಂದಲೇ ಸಂಪ್ರೀತನಾಗುತ್ತಾನೆ. ಹಾಗಾಗಿಯೇ ಶ್ರಾವಣ ಮಾಸದಲ್ಲಿ ರುದ್ರನಿಗೆ ಅಭಿಷೇಕ ಮಾಡುವುದು ಅತ್ಯಂತ ಶ್ರೇಷ್ಠ ಹಾಗೂ ಸಕಲ ದೋಷಗಳನ್ನು ನಿವಾರಿಸಿ, ಸುಖ-ಶಾಂತಿಯನ್ನು ನೀಡುತ್ತದೆ ವೇದಮೂರ್ತಿ ರಮಕಾಂತ್ ಜೋಶಿ ನರಿಬೋಳ ಹೇಳಿದರು.

ಕರುಣೇಶ್ವರ ನಗರದ ಶ್ರೀಜೈವೀರ್ ಹನುಮಾನ್ ಮಂದಿರದಲ್ಲಿ ಶ್ರಾವಣ ಮಾಸದ ಪವಿತ್ರ ಪರ್ವಕಾಲದಲ್ಲಿ, ಪ್ರತಿ ಸೋಮವಾರದಂದು ಆಯೋಜಿಸಲಾಗಿದ್ದ ವಿಶೇಷ ರುದ್ರಾಭಿಷೇಕ ಪೂಜೆಯ ಸೋಮವಾರ ರುದ್ರಾಭಿಷೇಕದ ಸಮಾರೋಪದಲ್ಲಿ ಮಾತನಾಡಿದ ಅವರು, ಶಿವನು ಅಭಿಷೇಕ ಪ್ರಿಯ ಎಂದು ಪ್ರಸಿದ್ಧ ಎಂದರ್ಥ.

ಈ ಸಂದರ್ಭದಲ್ಲಿ ದೇವಸ್ಥಾನ ಸಮಿತಿ ಅಧ್ಯಕ್ಷ ಶ್ರೀಕಿಶನರಾವ್ ಮಟಮಾರಿ, ಪ್ರಮುಖರಾದ ಅವಿನಾಶ್ ಕುಲಕರ್ಣಿ, ಶೇಷಗಿರಿರಾವ್ ಕುಲಕರ್ಣಿ, ವಿನುತ ಎಸ್ ಜೋಶಿ, ನಿತೀಶ ಜೋಶಿ, ವಿಶ್ವಾಸ್ ಮೋಘೇಕರ್, ನಾರಾಯಣ ಜಾಹಗೀರದಾರ್, ವಿನೋದ ಸಾತಖೇಡ್, ಸಂತೋಷ್ ಕುಲಕರ್ಣಿ, ಕಿಶನರಾವ್ ಕುಲಕರ್ಣಿ, ಅರ್ಚಕರಾದ ವೆಂಕಟೇಶಾಚಾರ್ಯ ಜೋಶಿ ನೆಲೋಗಿ, ವ್ಯವಸ್ಥಾಪಕರಾದ ಲಕ್ಷ್ಮಣರಾವ್ ಕುಲಕರ್ಣಿ ಸೇರಿದಂತೆ ಸಮುದಾಯದ ಉಪಸ್ಥಿತರಿದ್ದು, ರುದ್ರದೇವರ ಕೃಪೆಗೆ ಪಾತ್ರರಾದರು.

ವಿಶೇಷ ರುದ್ರಾಭಿಷೇಕ ಪೂಜೆಯು ಸೋಮವಾರ ರುದ್ರಾಭಿಷೇಕದ ಸಮಾರೋಪ ನಡೆಯಿತು.

> ಕಳೆದ ನಾಲ್ಕು ವಾರಗಳಿಂದಲೂ ಈ ಪೂಜಾ ಕೈಂಕರ್ಯವು ಅತ್ಯಂತ ಶ್ರದ್ಧಾಭಕ್ತಿಯಿಂದ ನೆರವೇರಿತು. ಪ್ರತಿ ಸೋಮವಾರ, ಮಂತ್ರಘೋಷಗಳೊಂದಿಗೆ ಶಿವಲಿಂಗಕ್ಕೆ ವಿವಿಧ ದ್ರವ್ಯಗಳಿಂದ ಅಭಿಷೇಕವನ್ನು ಮಾಡಿ, ವಿಶೇಷ ಪೂಜೆಗಳನ್ನು ಸಲ್ಲಿಸಲಾಯಿತು.
>
> -ರಮಕಾಂತ್ ಜೋಶಿ ನರಿಬೋಳ, ವೇದಮೂರ್ತಿ

ತಾಲೂಕು ಮಟ್ಟದ ದಸರಾ ಕ್ರೀಡಾಕೂಟಕ್ಕೆ ಚಾಲನೆ

ಕಲಬುರಗಿ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಕಲಬುರಗಿ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಂಯುಕ್ತಾಶ್ರಯದಲ್ಲಿ ಕಮಲಾಪುರ ತಾಲೂಕು ಮಟ್ಟದ 2025-26ನೇ ಸಾಲಿನ ದಸರಾ ಕ್ರೀಡಾಕೂಟಕ್ಕೆ ಸೋಮವಾರ ಚಾಲನೆ ನೀಡಲಾಯಿತು. ನಗರದ ಚಂದ್ರಶೇಖರ ಪಾಟೀಲ ಕ್ರೀಡಾಂಗಣದಲ್ಲಿ ಕಮಲಾಪುರ ತಾಲೂಕು ಪಂಚಾಯತ್ ಇಒ ನೀಲಗಂಗಾ ಬಬಲಾದಿ ಉದ್ಘಾಟಿಸಿದರು. ಉದ್ಘಾಟನಾ ಸಮಾರಂಭದಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಅಮೃತ ಎನ್. ಅಷ್ಟಗಿ, ಕಮಲಾಪುರ ಸಿಪಿಐ ಶಿವಶರಣ ಸಾವು, ಜಿಲ್ಲಾ ದೈಹಿಕ ಶಿಕ್ಷಕರ ಸಂಘದ ಅಧ್ಯಕ್ಷ ಭೋಜನ ಗೌಡ ಪಾಟೀಲ, ಸರಕಾರಿ ನೌಕರರ ಸಂಘದ ನಿರ್ದೇಶಕ ಮಹೇಶ್ ಬಸರಕೋಡ, ಮಲ್ಲಣ್ಣ ಬಿದನೂರು ಕ್ರೀಡಾಕೂಟಕ್ಕೆ ಭಾಗವಹಿಸಿದರು. ಈ ವೇಳೆ ತರಬೇತುದಾರರಾದ ಸಂಜಯ್ ಬಾಣದ, ಪ್ರವೀಣ್ ಕುಮಾರ್ ಪುಣೆ, ರಾಜಕುಮಾರ್, ಮಹಾನಂದ ವಿ. ಪಾಟೀಲ, ದೇವೇಂದ್ರ ಕಟ್ಟಿಮನಿ, ರವಿಚಂದ್ರ ಸಿಬಾರಿ, ಬಸವರಾಜ ಇಂಗಲೇಶ್ವರ್, ದತ್ತಾತ್ರೇಯ ಜೇವರ್ಗಿ, ದಿಲೀಪ್ ಕುಮಾರ್, ಮಹಿಬೂಬ ಎಂ. ಖಾಜಿ ಹಾಗೂ ಮುಜಮಮಿಲ ಕೆಂಭಾವಿ ಉಪಸ್ಥಿತರಿದ್ದರು. ಉದ್ಘಾಟನಾ ಸಮಾ ರಂಭದ ಬಳಿಕ ಅಥ್ಲೆಟಿಕ್ಸ್, ವಾಲಿಬಾಲ್, ಕಬಡ್ಡಿ, ಚೆಸ್, ಕ್ರೀಡಾ ಓಟ ಸೇರಿದಂತೆ ಹಲವು ಕ್ರೀಡೆಗಳಲ್ಲಿ ತಾಲೂಕಿನ ವಿವಿಧ ಹಂತದ ವಿದ್ಯಾರ್ಥಿಗಳು ಮತ್ತು ಯುವಕರು ಪಾಲ್ಗೊಂಡು ತಮ್ಮ ಕೌಶಲ ಪ್ರದರ್ಶಿಸಿದರು.

ಒಳಮೀಸಲು ಜಾರಿಗೆ ಆಗ್ರಹಿಸಿ ತಮಟೆ ಚಳವಳಿ

ವಿಶ್ವವಾಣಿ ಸುದ್ದಿಮನೆ

ಕಲಬುರಗಿ: ಒಳಮೀಸಲು ಜಾರಿಗೊಳಿಸುವಂತೆ ಆಗ್ರಹಿಸಿ ಕರ್ನಾಟಕ ಮಾದಿಗ ಜಾತಿ-ಉಪಜಾತಿ ಸಂಘಟನೆಗಳ ಒಕ್ಕೂಟದ ನೇತೃತ್ವದಲ್ಲಿ ಭಾನುವಾರ ಬೃಹತ್ ಪ್ರತಿಭಟನೆ ನಡೆಯಿತು.

ನಗರದ ಎಸ್.ವಿ.ಪಿ ವೃತ್ತದಿಂದ ಜಿಲ್ಲಾಧಿಕಾರಿಗಳ ಕಚೇರಿವರೆಗೆ ತಮಟೆ ಮೆರವಣಿಗೆ ನಡೆಸಿದ ಹೋರಾಟಗಾರರು ಸರಕಾರದ ವಿರುದ್ಧ ಘೋಷಣೆ ಕೂಗಿ ಅಸಮಾಧಾನ ವ್ಯಕ್ತಪಡಿಸಿದರು. ನ್ಯಾ.ನಾಗಮೋಹನ ದಾಸ್ ಅವರ ವರದಿ ಆಧರಿಸಿ ಒಳಮೀಸಲಾತಿ ಜಾರಿಗೊಳಿಸಬೇಕು ಎಂಬುದು ಪ್ರತಿಭಟನಾಕಾರರ ಆಗ್ರಹವಾಗಿತ್ತು.

ಪ್ರತಿಭಟನೆಯಲ್ಲಿ ನ್ಯಾ.ನಾಗಮೋಹನ ದಾಸ್ ಅವರ ಭಾವಚಿತ್ರಕ್ಕೆ ಕ್ಷೀರಾಭಿಷೇಕ ಮಾಡಿದರು.

ಮಾದಿಗ ಸಮುದಾಯ ಅಧ್ಯಕ್ಷ ಪರಮೇಶ್ವರ್ ಖಾನಾಪುರ ಮಾತನಾಡಿ, ಪರಿಶಿಷ್ಟ ಜಾತಿಯ ಸಮುದಾಯದೊಳಗಿನ ಅತಿ ಹಿಂದುಳಿದ ಮತ್ತು ಅವಕಾಶ ವಂಚಿತ ಸಮುದಾಯಗಳಿಗೆ ಸಾಮಾಜಿಕ ನ್ಯಾಯವನ್ನು ಒದಗಿಸುವ ಸಲುವಾಗಿ ಜಾರಿಯಾಗಬೇಕಾಗಿರುವ ಒಳಮೀಸಲಾತಿಯ ಬೇಡಿಕೆ ಮತ್ತು 3 ದಶಕಗಳ ಹೋರಾಟ ನೆನೆಗುದಿಗೆ ಬಿದ್ದಿದ್ದು, ಹೈಕೋರ್ಟ್ ಆದೇಶ ನೀಡಿದರು.

ನ್ಯಾಯಾಲಯದ ತೀರ್ಪನ್ನು ಜಾರಿಗೊಳಿಸಲು ಅನಗತ್ಯವಾಗಿ ವಿಳಂಬ ನೀತಿಯನ್ನು ಅನುಸರಿಸುವ ಸರಕಾರ ಸಮುದಾಯದಲ್ಲಿ ತೀವ್ರ ಅಸಮಾಧಾನ ಹಾಗೂ ಆತಂಕಕ್ಕೆ ಕಾರಣವಾಗಿದೆ. ಇದರಿಂದ ಸಮುದಾಯದ ವಿದ್ಯಾರ್ಥಿಗಳು, ಉದ್ಯೋಗಾಕಾಂಕ್ಷಿಗಳು, ಕಾರ್ಮಿಕರು ಹಾಗೂ ಮಹಿಳೆಯರು ನ್ಯಾಯಯುತ ಹಕ್ಕುಗಳಿಂದ ವಂಚಿತರಾಗುತ್ತಿದ್ದಾರೆ ಎಂದರು.

ಪ್ರತಿಭಟನೆಯಲ್ಲಿ ಮುಖಂಡರಾದ ರಾಜು ವಾಡೇಕರ್, ಶ್ಯಾಂ ನಾಟೀಕರ್, ಭೀಮಣ್ಣ ಬಿಲ್ಲವ್, ಎ.ಎಚ್.ನಾಗೇಶ್, ಬಾಬು ಸುಂತಾಣ, ಲಿಂಗರಾಜ ತಾರಫೈಲ್, ರಮೇಶ್ ವಾಡೇಕರ್, ಗೋಪಾಲ ಕಟ್ಟಿಮನಿ, ನಾಗರಾಜ್, ದಶರಥ್, ಮಲ್ಲಿಕಾರ್ಜುನ, ರಾಜು ಮುಕ್ಕಣ್ಣ, ಮಂಜುನಾಥ್ ನಾಲವಾರಕರ್, ಮನೋಹರ್ ಬಿರನೂರ, ಗೋಪಾಲ ನಾಟೀಕರ್, ದತ್ತು ಭಾಸಗಿ ಉಪಸ್ಥಿತರಿದ್ದರು.

ಒಳಮೀಸಲು ಜಾರಿಗೊಳಿಸುವಂತೆ ಆಗ್ರಹಿಸಿ ಕರ್ನಾಟಕ ಮಾದಿಗ ಜಾತಿ-ಉಪಜಾತಿ ಸಂಘಟನೆಗಳ ಒಕ್ಕೂಟದ ನೇತೃತ್ವದಲ್ಲಿ ಬೃಹತ್ ಪ್ರತಿಭಟನೆ ನಡೆಯಿತು.

ಬೇರೆ ರಾಜ್ಯಗಳಂತೆ ಒಳಮೀಸಲು ಜಾರಿಗೆ ತನ್ನಿ

ಸುಪ್ರೀಂ ಕೋರ್ಟಿನ ಆದೇಶದಂತೆ ಹರಿಯಾಣಾ, ತೆಲಂಗಾಣ ಹಾಗೂ ಆಂಧ್ರಪ್ರದೇಶದ ಸರಕಾರಗಳು ಒಳಮೀಸಲಾತಿ ಜಾರಿಗೆ ಮಾಡಿ ಸಾಮಾಜಿಕ ನ್ಯಾಯದ ವಿಷಯದಲ್ಲಿ ಮೇಲ್ಪಂಕ್ತಿಯಾಗಿದ್ದು, ಕರ್ನಾಟಕ ಸರಕಾರ ಮಾತ್ರ ವಿಳಂಬ ನೀತಿ ಅನುಸರಿಸುತ್ತಿದೆ. ಕೂಡಲೇ, ಸಿಎಂ ಸಿದ್ದರಾಮಯ್ಯ ಅವರು ಆ.19ಕ್ಕೆ ಯಾರ ಒತ್ತಡಕ್ಕೂ ಮಣಿಯದೆ ನ್ಯಾ.ನಾಗ್‌ಮೋಹನ್ ದಾಸ್ ವರದಿಯನ್ನು ಯಥಾವತ್ತಾಗಿ ಜಾರಿಗೊಳಿಸಬೇಕು. ಇಲದಿದ್ದಲ್ಲಿ ಸಮುದಾಯ ರಸ್ತೆಗಿಳಿದು ಉಗ್ರ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಸಮಾಚಾರ ಸಣ್ಣದಲ್ಲ

ಲೋಕಾ ಬಲೆಗೆ ಬಿದ್ದ ಲೇಬರ್ ಇನ್‌ಸ್ಪೆಕ್ಟರ್

ರಾಯಚೂರು: ಪೆಟ್ರೋಲ್ ಬಂಕ್ ಮಾಲೀಕರಿಂದ 30 ಸಾವಿರ ರು. ಲಂಚ ಪಡೆಯುತ್ತಿದ್ದ ವೇಳೆ ಇಲ್ಲಿನ ಕಾರ್ಮಿಕ ಇಲಾಖೆ ಲೇಬರ್ ಇನ್‌ಸ್ಪೆಕ್ಟರ್ ಅಬ್ದುಲ್ ಗನಿ ಅಲಿಯಾಸ್ ಅಮರ್ ಲೋಕಾಯುಕ್ತ ಬಲೆಗೆ ಬಿದ್ದಿದ್ದಾನೆ. ಪೆಟ್ರೋಲ್ ಬಂಕ್ ಮಾಲೀಕರ ಕೆಲಸ ಮಾಡಿಕೊಡಲು 30 ಸಾವಿರ ರು. ಲಂಚದ ಬೇಡಿಕೆ ಇಟ್ಟಿದ್ದ. ಹೀಗಾಗಿ ದೂರುದಾರ ನಾಗೀರೆಡ್ಡಿ ಎನ್ನುವವರು ಅಧಿಕಾರಿಗೆ ಸೋಮವಾರ ಹಣ ನೀಡುವಾಗ ಲೋಕಾಯುಕ್ತ ಅಧಿಕಾರಿಗಳ ತಂಡ ದಾಳಿ ನಡೆಸಿದ್ದು, ಆರೋಪಿಯನ್ನು ವಶಕ್ಕೆ ಪಡೆದಿದೆ. ದಾಳಿ ತಂಡದಲ್ಲಿ ಲೋಕಾಯುಕ್ತ ಎಸ್‌ಪಿ ಸತೀಶ ಚಿಟಗುಪ್ಪಿ, ಇನ್‌ಸ್ಪೆಕ್ಟರ್‌ಗಳಾದ ಕಾಳಪ್ಪ ಬಡಿಗೇರ್, ರವಿಪುರು ಷೋತ್ತಮ್ ಸೇರಿದಂತೆ ಸಿಬ್ಬಂದಿ ದಾಳಿ ತಂಡದಲ್ಲಿದ್ದರು.

ತಮ್ಮನಿಂದಲೇ ಅಣ್ಣನ ಕೊಲೆ

ಕೋಲಾರ: ಜಮೀನು ವಿವಾದದ ಹಿನ್ನೆಲೆಯಲ್ಲಿ ತಲ್ವಾರ್‌ನಿಂದ ತಲೆಗೆ ಹೊಡೆದು ತಮ್ಮನೇ ಅಣ್ಣನನ್ನು ಬರ್ಬರವಾಗಿ ಕೊಲೆ ಮಾಡಿರುವ ಘಟನೆ ಕೋಲಾರ ಜಿಲ್ಲೆಯ ಬಂಗಾರಪೇಟೆ ತಾಲೂಕಿನ ರಾಮಾಪುರದಲ್ಲಿ ಸೋಮವಾರ ಮುಂಜಾನೆ ಈ ಘಟನೆ ನಡೆದಿದೆ. ಚಲಪತಿ ಅಲಿಯಾಸ್ ವೆಂಕಟಾಚಲಪತಿ (50) ಕೊಲೆಯಾದ ಅಣ್ಣ. ಪಕ್ಕದ ಮನೆಯಲ್ಲೇ ವಾಸ ಮಾಡುವ ತಮ್ಮ ಮುನಿರಾಜು (40) ಕೊಲೆ ಮಾಡಿ ಬಳಿಕ ಪೊಲೀಸರಿಗೆ ಫೋನ್ ಮಾಡಿ ವಿಷಯ ತಿಳಿಸಿದ್ದಾನೆ. ಸೋಮವಾರ ಬೆಳಗ್ಗೆ 6:30ರ ಸುಮಾರಿಗೆ ಕುರಿಗಳಿಗೆ ಮೇವು ನೀಡಲು ಹೋದ ಅಣ್ಣನನ್ನು ತಲ್ವಾರ್‌ನಿಂದ ಕೊಚ್ಚಿ ತಮ್ಮ ಕೊಲೆ ಮಾಡಿದ್ದಾನೆ. ಅಣ್ಣ ಚಲಪತಿ ಜಮೀನಿನಲ್ಲಿ ಸರಿಯಾಗಿ ಭಾಗ ಕೊಡದ ಹಿನ್ನೆಲೆ ಹಲವು ಬಾರಿ ನ್ಯಾಯ ಪಂಚಾಯ್ತಿಗಳನ್ನು ಮಾಡಲಾಗಿದೆ. ಜತೆಗೆ ಜಮೀನು ವಿವಾದ ನ್ಯಾಯಾಲಯದಲ್ಲೂ ಇದ್ದು, ಇತ್ತೀಚೆಗೆ ಹಿರಿಯರ ಸಮ್ಮುಖದಲ್ಲಿ 35 ಲಕ್ಷ ಹಣ ಕೊಟ್ಟು ತೀರ್ಮಾನ ಸಹ ಮಾಡಿಕೊಂಡಿದ್ದಾನೆ. ಆದರೆ ಸೋಮವಾರ ಮುಂಜಾನೆ ಕುರಿ ಶೆಡ್‌ಗೆ ತೆರಳಿದ ಅಣ್ಣನನ್ನ ಹಿಂಬಾಲಿಸಿದ ತಮ್ಮ ಮುನಿರಾಜು ಶೆಡ್ನಲ್ಲಿ ತಲ್ವಾರ್‌ನಿಂದ ಕೊಚ್ಚಿ ಕೊಲೆ ಮಾಡಿದ್ದಾನೆ. ಬೂದಿಕೋಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿರಾಮ
ಪ್ರತಿ ಭಾನುವಾರ

ವಿಶ್ವವಾಣಿ ಕ್ಲಬ್ ಹೌಸ್
19.08.2025
ಸಂಜೆ 05.55 ರಿಂದ 08.05 ರವರೆಗೆ
ಮಂಗಳವಾರದ ಅತಿಥಿ

ಡಾ. ವಿಜಯಲಕ್ಷ್ಮಿ ಬಾಳೆಕುಂದ್ರಿ
ವಿಷಯ
79ನೇ ಸ್ವಾತಂತ್ರ್ಯೋತ್ಸವ, ಕಲಿತದ್ದೇನು?
vishwavani.news

ತುಂಗಭದ್ರಾ ಡ್ಯಾಮ್‌ನಿಂದ ನದಿಗೆ ಭಾರೀ ನೀರು, ನವಿಲುತೀರ್ಥ ಡ್ಯಾಮ್ ಭರ್ತಿ । ಕಲಬುರಗಿ, ಯಾದಗಿರಿಯಲ್ಲಿ ಬೆಳೆಹಾನಿ

ರಾಜ್ಯಾದ್ಯಂತ ಮಳೆಯೋ ಮಳೆ...

ಬೆಂಗಳೂರು: ರಾಜ್ಯಾದ್ಯಂತ ಕಳೆದ ಒಂದು ವಾರದಿಂದ ಎಡೆಬಿಡದೆ ಮಳೆ ಸುರಿಯುತ್ತಿರುವ ಪರಿಣಾಮ ಡ್ಯಾಮ್‌ಗಳು ಭರ್ತಿಯಾಗಿದ್ದು, ಹಳ್ಳ-ಕೊಳ್ಳ, ನದಿ ತೊರೆಗಳು ಮೈದುಂಬಿ ಹರಿಯುತ್ತಿವೆ. ಬೆಳಗಾವಿ, ಶಿವಮೊಗ್ಗ , ಕಲಬುರಗಿ, ಯಾದಗಿರಿ, ಕೊಡುಗು, ಹಾಸನ, ಹುಬ್ಬಳ್ಳಿ, ಬೀದರ್ ಜಿಲ್ಲೆಯಲ್ಲೂ ಮಳೆ ಆರ್ಭಟ ಮುಂದುವರಿದ್ದು, ಜಿಲ್ಲೆಗಳಲ್ಲಿ ಸುರಿದ ಮಳೆ ಬೆಳೆಯಿಂದ ಸಾವಿರಾರು ಎಕರೆ ಬೆಳೆ ಹಾನಿಗೀಡಾಗಿದೆ.

ಮಲೆನಾಡು ಸೇರಿದಂತೆ ತುಂಗಭದ್ರಾ ಜಲಾನಯನ ಪ್ರದೇಶದಲ್ಲಿ ಬಾರಿ ಮಳೆಯಾಗುತ್ತಿರುವ ಹಿನ್ನೆಲೆ ಹೊಸಪೇಟೆ ಬಳಿಯ ತುಂಗಭದ್ರಾ ಜಲಾಶಯಕ್ಕೆ ಅಪಾರ ಪ್ರಮಾಣದ ನೀರು ಹರಿದು ಬರುತ್ತಿದೆ. ಸದ್ಯ ಜಲಾಶಯಕ್ಕೆ 75,500 ಕ್ಯೂಸೆಕ್ ಒಳಹರಿವಿದ್ದು, ಜಲಾಶಯದಿಂದ 86,631 ಕ್ಯೂಸೆಕ್ ನೀರು ರಿಲೀಸ್ ಮಾಡಲಾಗಿದೆ.

105 ಟಿಎಂಸಿ ನೀರು ಸಂಗ್ರಹ ಸಾಮರ್ಥ್ಯದ ಜಲಾಶಯದಲ್ಲಿ ಸದ್ಯ 77 ಟಿಎಂಸಿ ಸಂಗ್ರಹವಾಗಿದೆ. ಕಳೆದ ವರ್ಷ ಕೊಚ್ಚಿ ಹೋಗಿದ್ದ 19ನೇ ಗೇಟ್‌ಗೆ ತಾತ್ಕಾಲಿಕ ಗೇಟ್ ಅಳವಡಿಕೆ ಮಾಡಿರೋದ್ರಿಂದ ಮುಂಜಾಗ್ರತಾ ಕ್ರಮವಾಗಿ 80 ಟಿಎಂಸಿ ನೀರು ಮಾತ್ರ ಶೇಖರಿಸಿಟ್ಟುಕೊಳ್ಳಲು ಟಿಬಿ ಬೋರ್ಡ್ ತೀರ್ಮಾನಿಸಿದೆ. ತುಂಗಾ, ಭದ್ರಾ ಹಾಗೂ ವರದಾ ನದಿಗಳಿಂದ ಅಪಾರ ಪ್ರಮಾಣದ ನೀರು ಜಲಾಶಯಕ್ಕೆ ಹರಿದು ಬರುತ್ತಿದೆ. ಹೀಗಾಗಿ ಸಂಜೆ ವೇಳೆಗೆ 1 ಲಕ್ಷ ಕ್ಯೂಸೆಕ್ ನೀರು ನದಿಗೆ ಬಿಡುಗಡೆ ಮಾಡುವ ಸಾಧ್ಯತೆ ಇದೆ.

ಹಳ್ಳ ದಾಟಿ ವ್ಯಕ್ತಿಯ ಅಂತ್ಯಸಂಸ್ಕಾರ: ಅಪಾಯದ ಮಟ್ಟವನ್ನೂ ಮೀರಿ ಉಕ್ಕಿ ಹರಿಯುತ್ತಿದ್ದ ಹಳ್ಳವನ್ನು ದಾಟಿ ಗ್ರಾಮಸ್ಥರು ಶವಸಂಸ್ಕಾರ ಮಾಡಿರುವ ಘಟನೆ ರಾಯಚೂರು ಜಿಲ್ಲೆಯ ಗೋಮರ್ಸಿ ಗ್ರಾಮದಲ್ಲಿ ನಡೆದಿದೆ. ಜಿಲ್ಲೆಯ ಸಿಂಧನೂರು ತಾಲೂಕಿನ ಗೋಮರ್ಸಿ ಗ್ರಾಮದಲ್ಲಿ ವೀರೇಶ ತೆಲುಗರ ಎನ್ನುವ ವ್ಯಕ್ತಿ ಮೃತಪಟ್ಟಿದ್ದರು. ಶನಿವಾರ ಶವಸಂಸ್ಕಾರ ಮಾಡಲು ಕುಟುಂಬಸ್ಥರು ತೀರ್ಮಾನಿಸಿದ್ದರು. ಆದರೆ, ಶವಸಂಸ್ಕಾರಕ್ಕೆ ಸೂಕ್ತ ವ್ಯವಸ್ಥೆ ಇಲ್ಲದೇ, ಸ್ಮಶಾನಕ್ಕೆ ಹಳ್ಳ ದಾಟಿ ಹೋಗಬೇಕಿದ್ದರಿಂದ ಗ್ರಾಮದ ಜನರು ಸೇರಿದಂತೆ ಸಂಬಂಧಿಕರು ಪರದಾಡುವಂತಾಯಿತು. ಅನಿವಾರ್ಯವಾಗಿ ತುಂಬಿ ಹರಿಯುತ್ತಿರುವ ಹಳ್ಳದ ನೀರಿನಲ್ಲಿಯೇ ಶವಹೊತ್ತು ಅಂತ್ಯಸಂಸ್ಕಾರ ನೆರವೇರಿಸಿದರು.

ಕೊಡಗಿನಲ್ಲಿ ಮತ್ತೆ ಮುಂಗಾರು ಬಿರುಸು: ಕೊಡಗು ಜಿಲ್ಲೆಯಲ್ಲಿ ಚಳಿ, ಗಾಳಿ, ಮಳೆ ಮುಂದುವರಿದಿದ್ದು, ಜನಜೀವನ ಅಸ್ತವ್ಯಸ್ತಗೊಂಡಿದೆ. ಮಡಿಕೇರಿ ತಾಲೂಕು ಮತ್ತು ದಕ್ಷಿಣ ಕೊಡಗಿನಲ್ಲಿ ಉತ್ತಮ ಮಳೆಯಾಗುತ್ತಿದ್ದು, ಜಿಲ್ಲಾ ವ್ಯಾಪಿ ಮೈಕೊರೆಯುವ ಚಳಿ ಇದೆ. ಮಂಜು ಕವಿದ ವಾತಾವರಣದಿಂದ ತಿರುವಿನ ರಸ್ತೆಗಳಲ್ಲಿ ವಾಹನ ಚಾಲನೆ ಕಷ್ಟವಾಗುತ್ತಿದ್ದು, ಚಾಲಕನ ನಿಯಂತ್ರಣ ಕಳೆದುಕೊಂಡ ಕೆಎಸ್‌ಆರ್‌ಟಿಸಿ ಬಸ್ ವೊಂದು ಧರೆಗೆ ಗುದ್ದಿದ ಘಟನೆ ಮುಟ್ಲು ಗ್ರಾಮದಲ್ಲಿ ನಡೆದಿದೆ. ಮರಳು ತುಂಬಿದ ಲಾರಿಯೊಂದು ಮಗುಚಿದ ಘಟನೆ ಮಡಿಕೇರಿ ಸಮೀಪ ಕೂಟುಹೊಳೆ ರಸ್ತೆಯಲ್ಲಿ ನಡೆದಿದ್ದು, ಯಾವುದೇ ಅನಾಹುತ ಸಂಭವಿಸಿಲ್ಲ. ಕತ್ತಲೆಕಾಡು ಗ್ರಾಮದಲ್ಲಿ ಮತ್ತು ವಾಲ್ನೂರು ತ್ಯಾಗತ್ತೂರು ಗ್ರಾ.ಪಂ ವ್ಯಾಪ್ತಿಯ ತ್ಯಾಗತ್ತೂರು ಚೆಟ್ಟಳ್ಳಿ ರಸ್ತೆಯಲ್ಲಿ ಬೃಹತ್ ಮರಗಳು ಬಿದ್ದು, ವಾಹನ ಸಂಚಾರಕ್ಕೆ ಅಡಚಣೆ ಉಂಟಾಯಿತು. ಗ್ರಾಮೀಣ ಭಾಗದಲ್ಲಿ ಮರ ಮತ್ತು ವಿದ್ಯುತ್ ಕಂಬಗಳು ಬಿದ್ದು ಹಾನಿ ಉಂಟಾಗಿದೆ. ನಿರಂತರ ಮಳೆಯಿಂದ ಜಿಲ್ಲೆಯ ಬಹುತೇಕ ಎಲ್ಲಾ ರಸ್ತೆಗಳು ಸಂಪೂರ್ಣವಾಗಿ ಹದಗೆಟ್ಟು ವಾಹನ ಸವಾರರು ಹರಸಾಹಸ ಪಡುತ್ತಿದ್ದಾರೆ.

ಬೆಳೆನಷ್ಟ: ಪರಿಹಾರಕ್ಕೆ ರೈತರು ಆಗ್ರಹ

ಕಳೆದ ಒಂದು ವಾರದಿಂದ ಯಾದಗಿರಿ ಜಿಲ್ಲೆಯ ಸುರಿಯುತ್ತಿರುವ ನಿರಂತರ ಮಳೆಯಿಂದಾಗಿ ಬೆಳೆಗಳಿಗೆ ಕಂಟಕವಾಗಿ ಪರಿಣಮಿಸಿದೆ. ಬೆಳೆಗಳು ಸಂಪೂರ್ಣ ನೀರುಪಾಲಾಗಿದ್ದು, ಅನ್ನದಾತರ ವಲಯದಲ್ಲಿ ಭಾರೀ ಆತಂಕ ಮೂಡಿದೆ, ಹತ್ತಿ, ಮೆಣಸಿನಕಾಯಿ ಬೆಳೆಗಳು ಸಂಪೂರ್ಣ ನೀರು ಪಾಲಾಗಿದ್ದು ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ತೊಗರಿ, ಹತ್ತಿ, ಹೆಸರು ಬೆಳೆ ನೀರು ಪಾಲಾಗಿ ತೇವಾಂಶ ಹೆಚ್ಚಾಗಿ ಬೆಳೆಗಳು ಮುಳುಗಿ ಹೋಗಿವೆ. ಶಹಾಪುರ ತಾಲೂಕಿನ ಗೋಗಿ, ಸಿಂಗನಹಳ್ಳಿ, ಮದ್ರಕಿ, ಹೊತಪೇಠಮ ಮೂಡಬೂಳ, ದೋರನಹಳ್ಳಿ ಸೇರಿ ವಿವಿಧೆಡೆ ಸಾವಿರಾರು ಎಕರೆಯಲ್ಲಿ ಬೆಳೆದ ಬೆಳೆ ಮಳೆ ಅಪೋಷನ ಆಗಿದೆ. ಕೂಡಲೇ ಸರಕಾರ ಬೆಳೆನಷ್ಟ ಸಮೀಕ್ಷೆ ನಡೆಸಿ ಪರಿಹಾರ ನೀಡಬೇಕೆಂದು ರೈತರು ಸರಕಾರಕ್ಕೆ ಆಗ್ರಹ ಮಾಡಿದ್ದಾರೆ.

ನೂರಾರು ಎಕರೆ ಬೆಳೆ ಹಾನಿ: ಕಲಬುರಗಿ ಜಿಲ್ಲೆಯಲ್ಲಿ ಕಳೆದ ಕೆಲ ದಿನಗಳಿಂದ ನಿರಂತರ ಮಳೆ ಆಗುತ್ತಿರುವ ಪರಿಣಾಮ ಹಳ್ಳ-ಕೊಳ್ಳಗಳು ತುಂಬಿ ಹರಿಯುತ್ತಿದ್ದು, ಬೆಣ್ಣೆತೊರಾ ಜಲಾಶಯದಿಂದ ನದಿಗೆ ಬಿಟ್ಟಿರುವ ನೀರು ಜಮೀನುಗಳಿಗೆ ನುಗ್ಗಿದೆ. ನೂರಾರು ಎಕರೆಯಲ್ಲಿ ಬೆಳೆದಿದ್ದ ಬೆಳೆಗಳು ಹಾನಿಗೀಡಾಗಿವೆ. ಜಿಲ್ಲೆಯ ಪ್ರಮುಖ ಬೆಳೆಗಳಾದ ಉದ್ದು, ಹೆಸರು ನೀರಿನಲ್ಲಿ ಕೊಚ್ಚಿ ಹೋಗಿದ್ದು, ಭಾಗದ ಬಹು ಬೆಳೆಯಾದ ತೊಗರಿ ಸಹ ನಾಶದತ್ತ ಸಾಗುತ್ತಿದೆ. ಇದರಿಂದ ರೈತಾಪಿ ವರ್ಗ ಸಂಕಟಕ್ಕೆ ಸಿಲುಕಿದ್ದು, ಆತಂಕದ ವಾತಾವರಣ ನಿರ್ಮಾಣವಾಗಿದೆ. ಅಫಜಲಪುರ, ಚಿಂಚೋಳಿ, ಆಳಂದ, ಸೇಡಂ ತಾಲೂಕುಗಳಲ್ಲಿ ಸಾಲಮಾಡಿ ಬಿತ್ತನೆ ಮಾಡಿದ ಹೆಸರು, ಉದ್ದು, ತೊಗರಿ ಬೆಳೆಗಳು ನೀರಿನಲ್ಲಿ ಕೊಚ್ಚಿ ಹೋಗಿದ್ದು, ರೈತರ ಬದುಕಿಗೆ ಭಾರೀ ಹೊಡೆತ ಬಿದ್ದಂತಾಗಿದೆ.

ಶಿವಮೊಗ್ಗ ಭಾಗದಲ್ಲಿ ಬಿರುಸಿನ ಮಳೆ ಆಗುತ್ತಿರುವುದರಿಂದ ತುಂಗಭದ್ರಾ ಜಲಾಶಯಕ್ಕೆ ಅಪಾರ ಪ್ರಮಾಣದಲ್ಲಿ ನೀರು ಹರಿದು ಬರುತ್ತಿದೆ.

ಮಡಿಕೇರಿ ತಾಲೂಕಿನ ಸಂಪಾಜೆ ಹೋಬಳಿ ಹೆರವನಾಡು ಗ್ರಾಮದ ಕೇಟೋಳಿ ಮೋಹನ್ ರಾಜ್ ಎಂಬುವವರ ಕೊಟ್ಟಿಗೆ ಮೇಲೆ ವಿದ್ಯುತ್ ಕಂಬ ಬಿದ್ದು ಕೊಟ್ಟಿಗೆ ಸಂಪೂರ್ಣ ಹಾನಿಯಾಗಿದೆ.

ತುಂಗ, ಭದ್ರಾ, ಲಿಂಗನಮಕ್ಕಿ ಪ್ರವಾಹ

ಶಿವಮೊಗ್ಗ ಜಿಲ್ಲೆಯಲ್ಲಿ ವರುಣಾರ್ಭಟ ಮುಂದುವರಿದಿದ್ದು, ನದಿಗಳು ಉಕ್ಕಿ ಹರಿಯಲಾರಂಭಿಸಿವೆ. ಜಿಲ್ಲೆಯ ಪ್ರಮುಖ ಜಲಾಶಯಗಳಾದ ತುಂಗ, ಭದ್ರಾ ಹಾಗೂ ಲಿಂಗನಮಕ್ಕಿ ಒಳಹರಿವಿನಲ್ಲಿ ಗಣನೀಯ ಏರಿಕೆ ಆಗಿದೆ. ಶಿವಮೊಗ್ಗ ತಾಲೂಕಿನ ಗಾಜನೂರಿನ ತುಂಗಾ ಜಲಾಶಯಕ್ಕೆ 73,415 ಕ್ಯೂಸೆಕ್ ಒಳಹರಿವಿದ್ದು, 76,656 ಕ್ಯೂಸೆಕ್ ನೀರನ್ನು ಹೊರ ಬಿಡಲಾಗುತ್ತಿದೆ. ಅಪಾರ ಪ್ರಮಾಣದ ನೀರು ಹೊರಬಿಟ್ಟಿರುವುದರಿಂದ ನದಿ ಪಾತ್ರದಲ್ಲಿ ಪ್ರವಾಹದ ಭೀತಿ ಎದುರಾಗಿದೆ. ಭದ್ರಾ ಡ್ಯಾಮ್‌ಗೂ 34,430 ಕ್ಯೂಸೆಕ್ ಹರಿದು ಬರುತ್ತಿದ್ದು, 39,245 ಕ್ಯೂಸೆಕ್ ನೀರನ್ನು ಡ್ಯಾಮ್‌ನಿಂದ ಹೊರ ಬಿಡಲಾಗುತ್ತಿದೆ. ಭದ್ರಾವತಿ ಬಳಿ ಅಪಾಯದ ಮಟ್ಟಮೀರಿ ಭದ್ರಾನದಿ ಹರಿಯುತ್ತಿದ್ದು, ಹೊಸ ಸೇತುವೆ ಜಲಾವೃತ ಆಗಿದೆ. ಮುನ್ನೆಚ್ಚರಿಕೆ ಕ್ರಮವಾಗಿ ವಾಹನ ಸಂಚಾರ ನಿರ್ಬಂಧಿಸಲಾಗಿದೆ. ಲಿಂಗನಮಕ್ಕಿ ಜಲಾಶಯ ಭರ್ತಿಗೆ ಇನ್ನೂ ಕೇವಲ 4 ಅಡಿ ಮಾತ್ರ ಬಾಕಿಯಿದೆ.

ಕೋಡಿಬಿದ್ದ ಬೋಂತಿ ಕೆರೆ: ಬೆಳೆ ನಷ್ಟ

ಬೀದರ್ ಜಿಲ್ಲೆಯಲ್ಲಿ ಎರಡು ದಿನಗಳಿಂದ ಸುರಿಯುತ್ತಿರುವ ಮಳೆಗೆ ಸೇತುವೆಗಳು ಜಲಾವೃತವಾಗಿವೆ. ವಿವಿಧೆಡೆ ಸೇತುವೆ ಕುಸಿತದಿಂದ ಸಂಚಾರ ಸ್ಥಗಿತವಾಗಿದೆ. ಮಳೆಯಿಂದ ರೈತರ ಜಮೀನುಗಳಿಗೆ ನೀರು ನುಗ್ಗಿ ಅಪಾರ ಪ್ರಮಾಣದ ಹಾನಿಯಾಗಿದೆ. ಭಾನುವಾರ ರಾತ್ರಿ ಸುರಿದ ಮಹಾಮಳೆಗೆ ಜಿಲ್ಲೆಯ ಔರಾದ ತಾಲೂಕಿನ ಬೋಂತಿ ಕೆರೆಕೋಡಿ ಒಡೆದು ಅಪಾರ ಪ್ರಮಾಣದ ಹಾನಿಯಾಗಿದೆ. ಅಕ್ಕಪಕ್ಕದ ಜಮೀನುಗಳಿಗೆ ಕೆರೆಕೋಡಿ ನೀರು ನುಗ್ಗಿದೆ. ನೆರೆಯ ಭಂಡಾರಕುಮಟಾ ಹಾಗೂ ಬಾವಲ್ ಗಾಂವ್ ಗ್ರಾಮಸ್ಥರನ್ನು ಎಚ್ಚರದಿಂದ ಇರುವಂತೆ ಸೂಚಿಸಲಾಗಿದೆ. ತಗ್ಗು ಪ್ರದೇಶದ ಜನರಿಗೆ ಸರಕಾರಿ ಶಾಲೆಯಲ್ಲಿ ಇರಲು ವ್ಯವಸ್ಥೆ ಮಾಡಲಾಗಿದೆ.

ನವಿಲು ತೀರ್ಥ ಡ್ಯಾಮ್ ಸಂಪೂರ್ಣ ಭರ್ತಿ

ಪಶ್ಚಿಮಘಟ್ಟ ಪ್ರದೇಶದ ಹಾಗೂ ಬೆಳಗಾವಿ ಜಿಲ್ಲೆಯಲ್ಲಿ ಸುರಿಯುತ್ತಿರುವ ಭಾರೀ ಮಳೆ ಪರಿಣಾಮ ಮಲಪ್ರಭಾ ನದಿ ನೀರಿನ ಮಟ್ಟ ಹೆಚ್ಚಾಗುತ್ತಿದೆ. ನಿರಂತರವಾಗಿ ಒಳ ಹರಿವಿನ ಪ್ರಮಾಣ ಹೆಚ್ಚಾದ ಹಿನ್ನಲೆಯಲ್ಲಿ ನವಿಲು ತೀರ್ಥ ಜಲಾಶಯ ಸಂಪೂರ್ಣ ಭರ್ತಿಯಾಗಿದೆ. 37.73 ಟಿಎಂಸಿ ಸಾಮರ್ಥ್ಯ ಹೊಂದಿರುವ ನವಿಲುತೀರ್ಥ ಜಲಾಶಯದಲ್ಲಿ 31.19 ಟಿಎಂಸಿ ಭರ್ತಿ ಆಗಿದೆ. ಸದ್ಯ 7 ಸಾವಿರ ಕ್ಯೂಸೆಕ್ ಒಳಹರಿವು ಇದ್ದು, 4 ಸಾವಿರ ಕ್ಯೂಸೆಕ್ ನೀರನ್ನು ಮಲಪ್ರಭಾ ನದಿಗೆ ಬಿಡಲಾಗುತ್ತಿದ್ದು, ನದಿಪಾತ್ರದ ಜನ ಎಚ್ಚರದಿಂದರಲೂ ಅಧಿಕಾರಿಗಳು ಎಚ್ಚರಿಕೆ ನೀಡಿದ್ದಾರೆ. ಚಿಕ್ಕೋಡಿ, ರಾಯಬಾಗ, ಹುಕ್ಕೇರಿ ಅಥಣಿ ತಾಲೂಕಿನಲ್ಲಿ ನಿರಂತರವಾಗಿ ಮಳೆ ಹಿನ್ನೆಲೆಯಲ್ಲಿ ಕೃಷ್ಣಾ ನದಿ ನೀರಿನ ಮಟ್ಟವೂ ಹೆಚ್ಚಾಗಿದೆ. ವೇದಗಂಗಾ ಹಾಗೂ ದೂದಗಂಗಾ ನದಿಗಳು ತುಂಬಿ ಹರಿಯುತ್ತಿದ್ದು ಕಳೆಹಂತದ ಐದು ಸೇತುವೆಗಳು ಜಲಾವೃತಗೊಂಡಿವೆ.

ಬಹುತೇಕ ಜಿಲ್ಲೆಗಳಲ್ಲಿ ವರುಣನ ಆರ್ಭಟ

← ಮೊದಲಪುಟದಿಂದ

ಸವದತ್ತಿಯ ನವಿಲುತೀರ್ಥ ಜಲಾಶಯ ಭರ್ತಿಗೆ ಒಂದೂವರೆ ಅಡಿ ಬಾಕಿ ಇದೆ. ಮಹಾರಾಷ್ಟ್ರದಲ್ಲಿ ವ್ಯಾಪಕ ಮಳೆಯಿಂದಾಗಿ ಕೃಷ್ಣಾ ನದಿಯ ನೀರಿನ ಮಟ್ಟ ಏರಿದೆ. ಕಲ್ಲೋಳ-ಡೂರ ಸೇತುವೆ, ಮಲಿಕವಾಡ-ದತ್ತವಾಡ ಸೇತುವೆಗಳು ಜಲಾವೃತಗೊಂಡಿವೆ.

ಕಲ್ಯಾಣ ಕರ್ನಾಟಕದ ಬೀದರ್, ಕಲಬುರಗಿ, ಯಾದಗಿರಿ, ರಾಯಚೂರು ಹಾಗೂ ಕೊಪ್ಪಳ ಜಿಲ್ಲೆಗಳಲ್ಲಿ ಭಾನುವಾರ ರಾತ್ರಿ ಹಾಗೂ ಸೋಮವಾರ ಭಾರಿ ಮಳೆಯಾಗಿದೆ. ಬೀದರ್ ಜಿಲ್ಲೆಯ ಮಾಂಜ್ರಾ ನದಿ ಅಪಾಯದ ಮಟ್ಟ ಮೀರಿ ಹರಿಯುತ್ತಿದೆ. ಔರಾದ್ ತಾಲೂಕಿನ ಬೊಂತಿ ಗ್ರಾಮದ ಕೆರೆ ಒಡೆದು ಗ್ರಾಮಗಳಿಗೆ ನೀರು ನುಗ್ಗಿದೆ. 15 ಎಮ್ಮೆಗಳು ಕೊಚ್ಚಿಕೊಂಡು ಹೋಗಿವೆ. ಯಾದಗಿರಿ ಜಿಲ್ಲೆಯಲ್ಲಿ ಹಲವು ಕೆರೆಗಳು, ಹಳ್ಳ-ಕೊಳ್ಳಗಳು ಕೋಡಿಬಿದ್ದಿವೆ. ಹತ್ತಿಕುಣಿ ಜಲಾಶಯ ತುಂಬಿದೆ. ಕಲಬುರಗಿ ಜಿಲ್ಲೆಯಾದ್ಯಂತ ಮಳೆ ಅಬ್ಬರಿಸಿದೆ. ಹಾಸನ ಮತ್ತು ಕೊಡಗಿನಲ್ಲಿ ಮಳೆ ಮುಂದುವರಿದಿದೆ. ಸಕಲೇಶಪುರ ತಾಲೂಕಿನ ದೋಣಿಗಲ್ ಬಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ತಡೆಗೋಡೆ ಕುಸಿದಿದೆ. ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣದ ಪಶ್ಚಿಮವಾಹಿನಿ, ಗೋಸಾಯಿಘಾಟ್, ನಿಮಿಷಾಂಬ ದೇವಾಲಯ ಭಾಗಶಃ ಮುಳುಗಿವೆ. ಸಾಯಿಬಾಬಾ ಆಶ್ರಮಕ್ಕೆ ನೀರು ನುಗ್ಗಿದೆ. ಮಲೆನಾಡು ಭಾಗದಲ್ಲಿ ಧಾರಕಾರ ಮಳೆಯಾಗುತ್ತಿದ್ದು, ತುಂಗಭದ್ರಾ ನದಿಯಲ್ಲಿ ಭಾನುವಾರದಿಂದ ಸುಮಾರು 85 ಸಾವಿರದಿಂದ 1 ಲಕ್ಷ ಕ್ಯೂಸೆಕ್‌ವರೆಗೂ ಒಳಹರಿವು ಹೆಚ್ಚಳವಾಗಿದೆ. ಸದ್ಯ 95 ಸಾವಿರ ಕ್ಯೂಸೆಕ್ ನೀರನ್ನು ನದಿಗೆ ಹರಿ ಬಿಡಲಾಗುತ್ತಿದೆ. ಪರಿಣಾಮ ಆನೆಗೊಂದಿ ಬಳಿ ಇರುವ ಶ್ರೀಕೃಷ್ಣದೇವರಾಯ ಸಮಾಧಿ ಮಂಟಪ ಸೇರಿ ಐತಿಹಾಸಿಕ ಸ್ಮಾರಕಗಳು ಸಂಪೂರ್ಣವಾಗಿ ಜಲಾವೃತವಾಗಿದೆ.

ರೇಬಿಸ್‌ನಿಂದ ನಾಲ್ಕು ವರ್ಷದ ಬಾಲಕಿ ಸಾವು



ದಾವಣಗೆರೆ: ಬೀದಿ ನಾಯಿ ದಾಳಿಗೆ ಒಳಗಾಗಿ ರೇಬಿಸ್ ಕಾಯಿಲೆಯಿಂದ 4 ತಿಂಗಳಿಂದ ಆಸ್ಪತ್ರೆಯಲ್ಲಿದ್ದ ಬಾಲಕಿ ಚಿಕಿತ್ಸೆ ಫಲಿಸದೇ ಮೃತಪಟ್ಟಿರುವ ಘಟನೆ ದಾವಣಗೆರೆಯಲ್ಲಿ ನಡೆದಿದೆ. ದಾವಣಗೆರೆ ನಗರದ ಶಾಸ್ತ್ರಿ ಲೇಔಟ್‌ನ ನಿವಾಸಿ ಮೊಹಮ್ಮದ್ ಶಾಕೀರ್ ಅಲಿ, ಅತೀಹಾ ಖಾನಂ ದಂಪತಿಯ ಮಗಳು ಖದೀರಾ ಬಾನು (4) ಮೃತ ಬಾಲಕಿ. ಬೀದಿ ನಾಯಿಗಳ ದಾಳಿಯಿಂದ ಬಾಲಕಿ ಗಂಭೀರವಾಗಿ ಗಾಯಗೊಂಡಿದ್ದಳು. ಆಗ ಪೋಷಕರು ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿದ್ದರು. ಹೆಚ್ಚಿನ ಚಿಕಿತ್ಸೆಯನ್ನು ದಾವಣಗೆರೆಯ ಖಾಸಗಿ ಆಸ್ಪತ್ರೆಯಲ್ಲಿ ಕೊಡಿಸಿ ಮನೆಗೆ ಕರೆತಂದಿದ್ದರು. ಆದರೆ ಒಂದು ತಿಂಗಳ ಹಿಂದೆ ಬಾಲಕಿ ವಾಂತಿ ಮಾಡಿ ಕೊಂಡು ಅಸ್ವಸ್ಥಳಾಗಿದ್ದಳು. ಗಾಬರಿಗೊಂಡ ಪೋಷಕರು ಬೆಂಗಳೂರಿನ ರಾಜೀವ್ ಗಾಂಧಿ ಆಸ್ಪತ್ರೆಗೆ ದಾಖಲು ಮಾಡಿದ್ದು, ತಪಾಸಣೆ ನಡೆಸಿದ ವೈದ್ಯರು ಮಗುವಿಗೆ ರೇಬಿಸ್ ತಗಲಿರುವುದು ಪತ್ತೆಯಾಗಿದೆ. ಕೂಡಲೇ ಐಸಿಯುನಲ್ಲಿ ಚಿಕಿತ್ಸೆ ನೀಡಿದ್ದು, ಚಿಕಿತ್ಸೆ ಫಲಕಾರಿಯಾಗದೇ ಬಾಲಕಿ ಮೃತಪಟ್ಟಿದ್ದಾಳೆ. ಪೋಷಕರು ಆಘಾತಕ್ಕೆ ಒಳಗಾಗಿದ್ದಾರೆ. ಇದ್ದ ಒಬ್ಬ ಮಗಳು ಬೀದಿ ನಾಯಿಗಳ ದಾಳಿಯಿಂದ ಸಾವನ್ನಪ್ಪಿದ್ದಾಳೆಂದು ಕಣ್ಣೀರಿಟ್ಟಿದ್ದಾರೆ.

ಚಾಮರಾಜನಗರ ಜಿಲ್ಲೆಯ ಯಳಂದೂರು ತಾಲೂಕಿನ ಬಿಆರ್‌ಟಿ ಹುಲಿ ರಕ್ಷಿತಾ ಅರಣ್ಯ ಪ್ರದೇಶದ ಕಾಡಂಚಿನ ಕೊಮಾರನಪುರ ಗ್ರಾಮದಲ್ಲಿ ಸೋಮವಾರ ಭಾರಿ ಗಾತ್ರದ ಹೆಬ್ಬಾವು ಪತ್ತೆಯಾಗಿದ್ದು ಇದನ್ನು ಉರಗ ತಜ್ಞ ಸ್ನೇಕ್ ಸುಂದರ್ ರವರು ಸುರಕ್ಷಿತವಾಗಿ ಹಿಡಿದಿದ್ದಾರೆ. ಈ ಹಾವು 12 ಅಡಿ ಉದ್ದವಿದ್ದು 30 ಕೆಜಿ ತೂಗುತ್ತಿತ್ತು ಎನ್ನಲಾಗಿದೆ.

ಕರ್ನಾಟಕ ಸರಕಾರ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇಂಜೀನಿಯರಿಂಗ ವಿಭಾಗ, ಕಲಬುರಗಿ
ಲೋಕೋಪಯೋಗಿ ಇಲಾಖೆ ವಸತಿಗೃಹ ಸಂಖ್ಯೆ 110ಡಿ, ಐವಾನ್-ಇ-ಶಾಹಿ ಕಾಲೋನಿ,
ಹೆಚ್.ಕೆ.ಇ. ಶಿಕ್ಷಣ ಸಂಸ್ಥೆಯ ಮಹಿಳಾ ಪಾಲಿಟೆಕ್ನಿಕ್ ಎದುರುಗಡೆ ಕಲಬುರಗಿ -585102.
ದೂರವಾಣಿ/ಫ್ಯಾಕ್ಸ ಸಂಖ್ಯೆ -08472-241982 E-mail : ee.khsdrp.klb@gmail.com
ಸಂಖ್ಯೆ: ಆಕುಕ/ಕಾನಿಅ/ಇಂ.ವಿ.ಕ/ಸ.ಇಂ-2/ಟೆಂಡರ/2025-26/590 ದಿನಾಂಕ:16.08.2025

ಟೆಂಡರ ಪ್ರಕಟಣೆ

ಕಾರ್ಯನಿರ್ವಾಹಕ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇಂಜಿನೀಯರಿಂಗ ವಿಭಾಗ ಕಲಬುರಗಿ ರವರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ (kppp portal) ಮೂಲಕ ದ್ವಿಲಕೋಟೆ ಟೆಂಡರ ದಸ್ತಾವೇಜು ಪದ್ಧತಿಯಲ್ಲಿ ಟೆಂಡರಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರಗಿಟ್ಟ ಮೊತ್ತ ರೂ. (ಲಕ್ಷಗಳಲ್ಲಿ	ಇ.ಎಮ್.ಡಿ ಮೊತ್ತ (ರೂ. ಗಳಲ್ಲಿ)	ಮೀಸಲು ವರ್ಗ	ಕಾಮಗಾರಿ ಪೂರ್ಣ ಗೊಳಿಸಲು ನಿಗದಿಪಡಿಸಿದ ಅವಧಿ
1	ಬಳ್ಳಾರಿ ಜಿಲ್ಲೆ ಬಳ್ಳಾರಿ ತಾಲೂಕಿನ ಬಾಣಾಪುರದಲ್ಲಿ ಆಯುಷ್ಮಾನ ಆರೋಗ್ಯ ಮಂದಿರ ನಿರ್ಮಾಣ ಕಾಮಗಾರಿ. (ಕಾಮಗಾರಿ ಇಂಡೆಂಟ ಸಂ:1234)	54.86	55000.00	SC	6 months
2	ಬಳ್ಳಾರಿ ಜಿಲ್ಲೆ ಕುರುಗೋಡು ತಾಲೂಕಿನ ಗೆಣಿಕಿಹಾಳದಲ್ಲಿ ಆಯುಷ್ಮಾನ ಆರೋಗ್ಯ ಮಂದಿರ ನಿರ್ಮಾಣ ಕಾಮಗಾರಿ. (ಕಾಮಗಾರಿ ಇಂಡೆಂಟ ಸಂ:1235)	54.84	55000.00	SC	6 months
3	ಬಳ್ಳಾರಿ ಜಿಲ್ಲೆ ಬಳ್ಳಾರಿ ತಾಲೂಕಿನ ಹರಗಿನದೋಣಿಯಲ್ಲಿ ಆಯುಷ್ಮಾನ ಆರೋಗ್ಯ ಮಂದಿರ ನಿರ್ಮಾಣ ಕಾಮಗಾರಿ. (ಕಾಮಗಾರಿ ಇಂಡೆಂಟ ಸಂ:1236)	54.84	55000.00	SC	6 months
4	ಬಳ್ಳಾರಿ ಜಿಲ್ಲೆ ಸಂಡೂರು ತಾಲೂಕಿನ ಕುರೇಕುಪ್ಪದಲ್ಲಿ ಆಯುಷ್ಮಾನ ಆರೋಗ್ಯ ಮಂದಿರ ನಿರ್ಮಾಣ ಕಾಮಗಾರಿ. (ಕಾಮಗಾರಿ ಇಂಡೆಂಟ ಸಂ:1237)	54.84	55000.00	SC	6 months
5	ವಿಜಯನಗರ ಜಿಲ್ಲೆ ಕೊಟ್ಟೂರು ತಾಲೂಕಿನ ನಾಗರಕಟ್ಟೆಯಲ್ಲಿ ಆಯುಷ್ಮಾನ ಆರೋಗ್ಯ ಮಂದಿರ ನಿರ್ಮಾಣ ಕಾಮಗಾರಿ. (ಕಾಮಗಾರಿ ಇಂಡೆಂಟ ಸಂ:1238)	54.86	55000.00	SC	6 months
6	ವಿಜಯನಗರ ಜಿಲ್ಲೆ ಕೊಟ್ಟೂರು ತಾಲೂಕಿನ ಸುಂಕದ ಕಲ್ಲುದಲ್ಲಿ ಆಯುಷ್ಮಾನ ಆರೋಗ್ಯ ಮಂದಿರ ನಿರ್ಮಾಣ ಕಾಮಗಾರಿ. (ಕಾಮಗಾರಿ ಇಂಡೆಂಟ ಸಂ:1239)	54.86	55000.00	Cat-II(A)	6 months
7	ಬಳ್ಳಾರಿ ಜಿಲ್ಲೆ ಸಿರುಗುಪ್ಪ ತಾಲೂಕಿನ ಕುಡುದರಾಳದಲ್ಲಿ ಆಯುಷ್ಮಾನ ಆರೋಗ್ಯ ಮಂದಿರ ನಿರ್ಮಾಣ ಕಾಮಗಾರಿ. (ಕಾಮಗಾರಿ ಇಂಡೆಂಟ ಸಂ:1241)	54.84	55000.00	Cat-II(A)	6 months

ಟೆಂಡರ ಪ್ರಕ್ರಿಯೆಗಳ ದಿನಾಂಕಗಳು: 1) ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ:**03.09.2025 ರಂದು 16.00 ಗಂಟೆಯ ವರೆಗೆ,** 2) ಟೆಂಡರ ತೆರೆಯುವ ದಿನಾಂಕ ಮತ್ತು ಸಮಯ (ತಾಂತ್ರಿಕ ಬಿಡ್): **04.09.2025 ರಂದು 16:30 ಗಂಟೆಗೆ.**

ಟಿಪ್ಪಣಿ: 1)ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೇ ಟೆಂಡರ ಪ್ರಕ್ರಿಯೆಯ ಮುಂದೂಡುವಿಕೆ/ ಸಂಪೂರ್ಣವಾಗಿ ಟೆಂಡರ ರದ್ದುಗೊಳಿಸುವ/ ಟೆಂಡರ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. 2) ಇನ್ನು ಮುಂದೆ ಟೆಂಡರ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಬದಲಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಸಹಿ/- ಕಾರ್ಯಪಾಲಕ ಅಭಿಯಂತರರು,
ಆ&ಕುಕಇ, ಇಂಜಿನೀಯರಿಂಗ ವಿಭಾಗ ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/401/ಕೆ.ಎಸ್.ಎಂ.ಸಿ.&ಎ/2025-26

ಹಟ್ಟಿ ಚಿನ್ನದ ಗಣಿಗೆ 444 ಕೋಟಿ ರು.ಲಾಭ

ಲಿಂಗಸೂಗೂರು: ಪ್ರಸಕ್ತ ವರ್ಷದಲ್ಲಿ ಹಟ್ಟಿ ಚಿನ್ನದ ಗಣಿ ಕಂಪೆನಿ 1,342 ಕೋಟಿ ರು. ವಹಿವಾಟು ನಡೆಸಿದ್ದು, ವಾರ್ಷಿಕ ವಹಿವಾಟಿನಲ್ಲಿಶೇ 3.43 ರಷ್ಟು ಹೆಚ್ಚಳ ಆಗಿದೆ. ಕಳೆದ ವರ್ಷಕ್ಕಿಂತ 300 ಕೋಟಿ ರು ಅಧಿಕ ವಹಿವಾಟು ಆಗಿದ್ದು, ಇದು ದಾಖಲೆಯ ಸಾಧನೆ ಆಗಿದೆ. ತೆರಿಗೆ, ರಾಯಲ್ಟಿ ಪಾವತಿಸಿ ಒಟ್ಟು 444 ಕೋಟಿ ರು ನಿವ್ವಳ ಲಾಭವನ್ನು ಹಟ್ಟಿಚಿನ್ನಗಣಿ ಕಂಪೆನಿ ಗಳಿಸಿದೆ. ವರ್ಷಾಂತ್ಯಕ್ಕೆ 1700 ಕೆ.ಜಿ ಚಿನ್ನ ಉತ್ಪಾದಿಸಿ 3,000 ಕೋಟಿ ರು.ಗೂ ವಹಿವಾಟು ನಡೆಸುವ ಗುರಿ ಹೊಂದಲಾಗಿದೆ. ಇದು ಗಣಿ ಕಂಪೆನಿಯ ಇತಿಹಾಸದಲ್ಲಿ ಅತ್ಯಧಿಕ ಲಾಭವಾಗಿದೆ. ವಾರ್ಷಿಕ 10 ರಿಂದ 11 ಲಕ್ಷ ಟನ್ ಅದಿರು ಉತ್ಪಾದಿಸಲಾ ಗುತ್ತದೆ. 2.8 ಟನ್‌ನಿಂದ 3 ಟನ್ ಚಿನ್ನ ಉತ್ಪಾದಿ ಸುವ ಹಾಗೂ 3,000 ಕೋಟಿ ರು. ಅಧಿಕ ವಾರ್ಷಿ ಕ ವಹಿವಾಟು ಗುರಿಯಿದೆ. ಪ್ರಸಕ್ತ ವರ್ಷ 1700 ಕೆ.ಜಿ ಚಿನ್ನ ಉತ್ಪಾದಿಸುವ ಗುರಿ ಹೊಂದಲಾಗಿದೆ.

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ
ಸಂಚಾರ (ವಾಣಿಜ್ಯ) ಇಲಾಖೆ, 2ನೇ ಮಹಡಿ, ಶಾಂತಿನಗರ ಬಸ್ ನಿಲ್ದಾಣ,
ಕೆ.ಹೆಚ್.ರಸ್ತೆ, ಬೆಂಗಳೂರು-560027 ದೂರವಾಣಿ ಸಂಖ್ಯೆ: 080 22537575
ವೆಬ್‌ಸೈಟ್ : www.mybmtc.com ಇ-ಮೇಲ್ : ctmc@mybmtc.com
ಸಂಖ್ಯೆ:ಬೆಂಮಸಾಸಂ/ಕೇಕ/ಸಂ/ವಾ/1872/2161/2025-26 ದಿನಾಂಕ:16.08.2025.
ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ-19/2025-26 (ಇ-ಪ್ರೊಕ್ಯೂರ್‌ಮೆಂಟ್ ಮೂಲಕ)
ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಕತ್ರಿಗುಪ್ಪೆ ಘಟಕ-13ರ ವ್ಯಾಪ್ತಿಯಲ್ಲಿರುವ ಸಮುದಾಯ ಭವನ / ಕಲ್ಯಾಣ ಮಂಟಪದ ನಿರ್ವಹಣೆಗೆ ಪರವಾನಗಿದಾರರ ಆಯ್ಕೆಗಾಗಿ ಆಸಕ್ತ ವ್ಯಕ್ತಿ/ಏಜೆನ್ಸಿ/ಕಂಪನಿಗಳಿಂದ ಇ-ಸಂಗ್ರಹಣಾ ವೇದಿಕೆ ಮುಖಾಂತರ ಟೆಂಡರ್ ಪ್ರಕಟಿಸಿ ಬಿಡ್‌ಗಳನ್ನು ಆಹ್ವಾನಿಸಿದೆ.

ಬಿಡ್ ಪೂರ್ವ ಸಭೆಯ ದಿನಾಂಕ	20.08.2025 ರಂದು 11.30 ಗಂಟೆಗೆ	ಸ್ಥಳ: ಮುಖ್ಯ ಸಂಚಾರ ವ್ಯವಸ್ಥಾಪಕರು (ವಾಣಿಜ್ಯ) ರವರ ಕೊಠಡಿ, 2ನೇ ಮಹಡಿ, ಕೇಂದ್ರ ಕಛೇರಿ, ಬೆಂಮಸಾಸಂಸ್ಥೆ, ಶಾಂತಿನಗರ, ಬೆಂಗಳೂರು
ಬಿಡ್ ಸಲ್ಲಿಸುವ ಕೊನೆಯ ದಿನಾಂಕ	01.09.2025 ರಂದು 17:00 ಗಂಟೆಯವರೆಗೆ.	
ತಾಂತ್ರಿಕ ಬಿಡ್ ತೆರೆಯುವ ದಿನಾಂಕ	02.09.2025 ರಂದು 17:05 ಗಂಟೆಗೆ	

ಮಾಸಿಕ ಪರವಾನಗಿ ಶುಲ್ಕ, ಇಎಂಡಿ ಮೊತ್ತ, ವಿಸ್ತೀರ್ಣ ಹಾಗೂ ಇನ್ನಿತರ ಮಾಹಿತಿಗಾಗಿ www.kppp.karnataka.gov.in ಗೆ ಲಾಗಿನ್ ಆಗಿ ಅಥವಾ ಇ-ಸಂಗ್ರಹಣಾ ಕೋಶ ದೂರವಾಣಿ ಸಂಖ್ಯೆ: 09240214000, 09240214001; 22371090; 22340060; 22340948 ಅಥವಾ 7760997519 & 7760991222 ಇ-ಮೇಲ್: ctmc@mybmtc.com ಗೆ ಸಂಪರ್ಕಿಸಬಹುದು.
ಸಹಿ/- ಮುಖ್ಯ ಸಂಚಾರ ವ್ಯವಸ್ಥಾಪಕರು (ವಾಣಿಜ್ಯ) (ಟೆಂಡರ್ ಕರೆಯುವ ಪ್ರಾಧಿಕಾರಿ)

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ,, ಹಾನಗಲ್ಲ,
ಕ.ಸಂ : ಕೃಮಾಇ/ಕೃಉಮಾಸ(ಹಾ)/ಅಭಿಕೆ/ವಾಕಿಯೋ/316 /2025-26 ದಿ: 12/08/2025
-: ಸಂಕ್ಷಿಪ್ತ ಟೆಂಡರ್ ಪುಕಟಣೆ : -
ಈ ಸಮಿತಿಯ 2024-25ನೇ ಸಾಲಿನ ವಾ.ಕ್ರಿ.ಯೋ.ಅಡಿ ಸಮಿತಿಯ ಮು.ಮಾ.ಪ್ರಾಂ.ದಲ್ಲಿ (ಹಾಲಿ ಇರುವ ಕಟ್ಟಡದ ಮೊದಲನೇ ಮಹಡಿ) ಹೊಸದಾಗಿ ಆಡಳಿತ ಕಛೇರಿ ಕಟ್ಟಡ ನಿರ್ಮಾಣ ಮಾಡುವ ಕಾಮಗಾರಿಯನ್ನು (Work reserved for Cat-1 category) (Indent No. APMC/2025-26/BD/WORK_INDENT 614) ರೂ 78,68,111-00(ಜಿ.ಎಸ್.ಟಿ ಪ್ರತ್ಯೇಕ) ಗಳಲ್ಲಿ (ಇ.ಎಂ.ಡಿ ಮೊತ್ತ ರೂ. 78,685-00) ಕೈಗೊಳ್ಳಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 1999-2000 ರ ನಿಯಮಗಳಂತೆ Standard Tendering Document (KW 3) ರನ್ವಯ http://kppp.karnataka.gov.in ನಲ್ಲಿ ನಿಯಮಾನುಸಾರ ದ್ವಿಲಕೋಟೆ ಪದ್ಧತಿಯಲ್ಲಿ ಸ್ಪರ್ಧಾತ್ಮಕ ಐಟಂವಾರು ಟೆಂಡರನ್ನು ಆಹ್ವಾನಿಸಲಾಗಿರುತ್ತದೆ. ಪ್ರಿಬಿಡ್ ಮೀಟಿಂಗ್ (ಸಮಿತಿಯ ಸಭಾಭವನದಲ್ಲಿ) ದಿನಾಂಕ: 04/09/2025, ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 08/09/2025 ಸಂಜೆ 5.30ರ ವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 10/09/2025, ಬೆಳಗ್ಗೆ 11.00ಕ್ಕೆ ಹಾಗೂ ಆರ್ಥಿಕ ಬಿಡ್ ತೆರೆಯುವ ದಿನಾಂಕ (ಸಾಧ್ಯವಾದಲ್ಲಿ): 12/09/2025 ಬೆಳಗ್ಗೆ 11.00ಕ್ಕೆ ಟೆಂಡರ್ ಷರತ್ತು ಹಾಗೂ ನಿಬಂಧನೆಗಳು ಇ- ಪೋರ್ಟಲನಲ್ಲಿ ನಮೂದಿಸಿರುವಂತೆ ಇರುತ್ತದೆ. ಹೆಚ್ಚಿನ ಮಾಹಿತಿಯನ್ನು ರಜಾ ದಿನಗಳನ್ನು ಹೊರತುಪಡಿಸಿ ಕಛೇರಿ ವೇಳೆಯಲ್ಲಿ ಕಾರ್ಯದರ್ಶಿ, ಕೃ.ಉ.ಮಾ.ಸ. ಹಾನಗಲ್ಲ ಅಥವಾ www.kppp.karnataka.gov.in ವೆಬ್ ಸೈಟಿನಲ್ಲಿ ಹಾಗೂ ಕರ್ನಾಟಕ ಸರ್ಕಾರದ ಇ- ಪ್ರಕ್ಯೂರಿಮೆಂಟ್ ಸಹಾಯವಾಣಿ 080-22501216/25501227 ಪಡೆಯಬಹುದಾಗಿದೆ.
ಸಹಿ/- ಕಾರ್ಯದರ್ಶಿ, ಕೃ.ಉ.ಮಾ.ಸ.ಹಾನಗಲ್ಲ
ಸಹಿ/- ಆಡಳಿತಾಧಿಕಾರಿಗಳು, ಕೃ.ಉ.ಮಾ.ಸ. ಹಾನಗಲ್ಲ

ಗುಂಡಿ ಅಗೆತಕ್ಕೆ ತಾತ್ಕಾಲಿಕ ಬ್ರೇಕ್

← ಮೊದಲಪುಟದಿಂದ

ಇದಕ್ಕೂ ಮೊದಲು ಮಾತನಾಡಿದ ಗೃಹ ಸಚಿವ ಡಾ.ಜಿ. ಪರಮೇಶ್ವರ ಅವರು, ಎಫ್‌ಎಸ್‌ಎಲ್ ವರದಿ ಬರುವ ತನಕ ಮಣ್ಣು ಅಗೆತವನ್ನು ಸ್ಥಗಿತಗೊಳಿಸಲು ಎಸ್‌ಐಟಿ ತೀರ್ಮಾನಿಸಿದೆ. ಈ ವಿಚಾರವಾಗಿ ಸಾಕಷ್ಟು ಊಹಾಪೋಹ ಸೃಷ್ಟಿಯಾಗುತ್ತಿದೆ. ಇದರಿಂದ ಭಕ್ತರಿಗೂ ಅನುಮಾನ, ಆತಂಕ ಆರಂಭವಾಗುತ್ತಿದೆ. ಹೀಗಾಗಿ ಅದನ್ನು ಬಹಳ ಸೂಕ್ಷ್ಮವಾಗಿ ಪರಿಗಣಿಸಬೇಕಾಗಿದೆ. ಪ್ರತಿಪಕ್ಷಗಳ ಉದ್ದೇಶ ಏನು ಎಂಬುದು ಗೊತ್ತಾಗಿಲ್ಲ. ಸತ್ಯ ಹೊರಬರಬೇಕು ಎಂದರು.

ಘಟನೆಯಾಗಿದೆ ಎಂದು ಯಾರೂ ಹೇಳಲಾಗುವುದಿಲ್ಲ. ಆಗಿಲ್ಲವೆಂದು ಹೇಳಲಾಗುತ್ತಿಲ್ಲ. ಆದ್ದರಿಂದ ತನಿಖೆ ನಡೆಸಿ, ಯಾವುದೇ ಘಟನೆ ನಡೆದಿಲ್ಲ ಎನ್ನುವುದು ಬಂದರೆ ಧರ್ಮಸ್ಥಳದ ಗೌರವ ಇನ್ನಷ್ಟು ಹೆಚ್ಚುವುದಿಲ್ಲವೇ? ಇದಕ್ಕೆ ರಾಜಕೀಯ ಬೆರೆಸುವುದು ಸರಿಯಲ್ಲ. ಇದನ್ನು ನ್ಯಾಯಕ್ಕೆ ಬಿಡೋಣ, ಸತ್ಯ ಹೊರಬರಲಿ. ಬಳಿಕ ಅದನ್ನು ಧರ್ಮಸ್ಥಳದವರೂ ಒಪ್ಪಬೇಕಾಗುತ್ತದೆ. ಜನರೂ ಒಪ್ಪಬೇಕಾಗುತ್ತದೆ ಎಂದು ತಿಳಿಸಿದರು.

ಅನಾಮಿಕ ತಪ್ಪೊಪ್ಪಿಗೆ?

← ಮೊದಲಪುಟದಿಂದ

2023ರಲ್ಲಿ ಕೆಲವು ಜನರ ಗುಂಪು ಆತನನ್ನು ಸಂಪರ್ಕಿಸಿದಾಗ ನಾನು ಕಾನೂನಿನ ಪ್ರಕಾರ ಶವಗಳನ್ನು ಹೂತಿದ್ದೇನೆ ಎಂದು ಒಪ್ಪಿಕೊಂಡಿದ್ದನು. ಆದರೆ, ಆ ಗುಂಪು ಆತನಿಗೆ ಬುರುಡೆಯೊಂದನ್ನು ನೀಡಿ ಪೊಲೀಸರ ಮುಂದೆ ಶರಣಾಗುವಂತೆ ಒತ್ತಡ ಹೇರಿತ್ತು. 'ಮೂವರು ನನಗೆ ಏನು ಹೇಳಬೇಕೆಂದು ತಿಳಿಸಿದ್ದರು. ಒತ್ತಡಕ್ಕೆ ಒಳಗಾಗಿ ಸುಳ್ಳು ಹೇಳಿಕೆ ನೀಡಿದೆ' ಎಂದು ಆತ ಒಪ್ಪಿಕೊಂಡಿದ್ದಾನೆ ಎಂದು ಹೇಳಲಾಗಿದೆ.

'ಗುಂಪೊಂದು ಒತ್ತಡ ಹೇರುತ್ತಿದ್ದರೂ ಕೋರ್ಟ್ ಮುಂದೆ ಹೇಳಿಕೆ ನೀಡಲು ಭಯವಾಗುತಿತ್ತು. ಆದರೆ ಮಹಿಳೆ (ಸುಜಾತಾ ಭಟ್) ದೂರಿನ ನಂತರ ಪೊಲೀಸರು ಹಾಗೂ ನ್ಯಾಯಾಲಯದ ಮುಂದೆ ಹೇಳಿಕೆ ನೀಡಲು ಧೈರ್ಯ ಬಂತು. ಆ ಮಹಿಳೆಯೇ ನನ್ನಲ್ಲಿ ಧೈರ್ಯ ತುಂಬಿದರು. ಹೀಗಾಗಿ ನಾನು ಬಂದೆ. ಆ ಗುಂಪು ಹೇಳಿದ ರೀತಿ ನಡೆದುಕೊಂಡೆ. ಪೊಲೀಸರ ಮುಂದೆ ಏನು ಹೇಳಬೇಕು ಎಂದು ಮೂವರು ನಿತ್ಯ ಹೇಳಿಕೊಡುತ್ತಿದ್ದರು. ಅದೇ ರೀತಿಯಲ್ಲಿ ಪೊಲೀಸರ ಮುಂದೆ ಹೇಳಿಕೆ ನೀಡಿದೆ' ಎಂದು ಅನಾಮಿಕ ವ್ಯಕ್ತಿ ಎಸ್‌ಐಟಿ ಅಧಿಕಾರಿಗಳ ಮುಂದೆ ಮಾಹಿತಿ ನೀಡಿರುವುದಾಗಿ ತಿಳಿದುಬಂದಿದೆ. ದೂರುದಾರನ ಹೇಳಿಕೆಯನ್ನು ಎಸ್‌ಐಟಿ ಅಧಿಕಾರಿಗಳು ವಿಡಿಯೋ ರೆಕಾರ್ಡ್ ಮಾಡಿಕೊಂಡಿದ್ದಾರೆ ಎನ್ನಲಾಗಿದೆ.

ಸಹಕಾರ ಸಂಘದಲ್ಲಿ ಇನ್ಮುಂದೆ ಮೀಸಲು

← ಮೊದಲಪುಟದಿಂದ

ಆದರೆ ನಾಮನಿರ್ದೇಶಿತರಿಗೆ ಮತದಾನದ ಹಕ್ಕು ಇರುವುದಿಲ್ಲ ಎಂದು ಸ್ಪಷ್ಟಪಡಿಸಲಾಗಿದೆ. ಈ ತಿದ್ದುಪಡಿಗೆ ಆಡಳಿತ ಪಕ್ಷದ ಸದಸ್ಯರು ಇದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರೆ, ಪ್ರತಿಪಕ್ಷಗಳ ಕೆಲವು ಸದಸ್ಯರು ಸಹಕಾರ ವ್ಯವಸ್ಥೆಯಲ್ಲಿ ಸರಕಾರ ಹಸ್ತಕ್ಷೇಪ ಮಾಡುವುದು ಸರಿಯಲ್ಲ ಎಂದು ವಿರೋಧಿಸಿದರು. ಪರ-ವಿರೋಧ ಚರ್ಚೆಗಳ ನಂತರ 'ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕ'ವನ್ನು ಧ್ವನಿಮತದಿಂದ ಅಂಗೀಕರಿಸಲಾಯಿತು.

ಜಿಲ್ಲಾ ಸಹಕಾರ ಒಕ್ಕೂಟಕ್ಕೆ ಅವಕಾಶ: ಇದರೊಂದಿಗೆ ಸರಕಾರದ ನೆರವು ಪಡೆದ ಸಹಕಾರ ಸಂಘಗಳಿಗೆ ಇನ್ನು ಮುಂದೆ 'ಜಿಲ್ಲಾ ಸಹಕಾರ ಒಕ್ಕೂಟ' ಎಂದು ಕರೆಯಲಾಗುತ್ತದೆ. ಸಹಕಾರ ಸಂಘಗಳ ನಿರ್ದೇಶಕರು ಪ್ರತಿವರ್ಷ ಆಸ್ತಿ ಘೋಷಣೆ ಮಾಡಬೇಕು. ಸಹಕಾರ ಸಂಘಗಳ ಲೆಕ್ಕಪರಿಶೋಧನೆಯನ್ನು ಸರಕಾರವೇ ಪ್ರತಿ ಮೂರು ವರ್ಷಕ್ಕೊಮ್ಮೆ ಮಾಡುತ್ತದೆ ಎಂದು ವಿಧೇಯಕ ತಿಳಿಸಿದೆ. ಸತತ ಮೂರು ಸಾಮಾನ್ಯ ಸಭೆಗಳಿಗೆ ಹಾಜರಾಗದ ಸದಸ್ಯರನ್ನು ಸಂಘದ ಚುನಾವಣೆಗೆ ಸ್ಪರ್ಧಿಸದಂತೆ ನಿಷೇಧ ಹೇರಲಾಗುತ್ತದೆ ಎಂದಿರುವುದು ತಿದ್ದುಪಡಿಯ ಇನ್ನೊಂದು ಮಹತ್ವದ ಅಂಶವಾಗಿದೆ.

ಅಪ್ರಾಪ್ತರಿಗೆ ನಿಶ್ಚಿತಾರ್ಥ ಮಾಡಿದರೆ ಜೈಲು: ಮತ್ತೊಂದು ಮಹತ್ವದ ಬೆಳವಣಿಗೆಯಲ್ಲಿ ಅಪ್ರಾಪ್ತ ವಯಸ್ಕರ ವಿವಾಹ ನಿಶ್ಚಿತಾರ್ಥ ನಿಷೇಧಿಸುವ ಹಾಗೂ ಈ ಅಪರಾಧಕ್ಕೆ ಎರಡು ವರ್ಷ ಕಠಿಣ ಶಿಕ್ಷೆ ಮತ್ತು ಒಂದು ಲಕ್ಷ ರುಪಾಯಿ ದಂಡ ವಿಧಿಸುವ ತಿದ್ದುಪಡಿಯನ್ನು ಬಾಲ್ಯ ವಿವಾಹ ನಿಷೇಧ ಕಾಯಿದೆ ತರಲಾಗಿದೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ವಿಧೇಯಕ ಮಂಡಿಸಿ, ಬಾಲ್ಯ ವಿವಾಹ ಪಿಡುಗು ಬೇರು ಸಮೇತ ದೂರವಾಗಿಲ್ಲ. 2024-25ರ ಅವಧಿಯಲ್ಲಿ 1828 ಬಾಲ್ಯ ವಿವಾಹ ದೂರುಗಳು ಬಂದಿದ್ದವು. ನಾವು ತಡೆದರೂ 369 ಬಾಲ್ಯ ವಿವಾಹಗಳು ಆದವು. ಆದ್ದರಿಂದ ಇದನ್ನು ಪರಿಣಾಮಕಾರಿಯಾಗಿ ತಡೆಯಬೇಕಾದರೆ, ಹಿರಿಯರು ತಮ್ಮ ಸಣ್ಣ ವಯಸ್ಸಿನ ಮಕ್ಕಳ ನಿಶ್ಚಿತಾರ್ಥ ಮಾಡಿಟ್ಟುಕೊಳ್ಳುವುದನ್ನು ನಿಲ್ಲಿಸಬೇಕಾಗಿದೆ. ಆದ್ದರಿಂದ ಈ ತಿದ್ದುಪಡಿ ತರಲಾಗಿದೆ. ಅಪ್ರಾಪ್ತರ ನಿಶ್ಚಿತಾರ್ಥ ಇನ್ನು ಶಿಕ್ಷಾರ್ಹ ಅಪರಾಧವಾಗಲಿದೆ ಎಂದು ವಿವರಿಸಿದರು. ಇದಲ್ಲದೇ ಪುನರ್ವಸತಿ ಹೊಂದಿದ ದೇವದಾಸಿಯರಿಗೆ ಮಾಸಿಕ ಐದು ಸಾವಿರ ಪ್ರೋತ್ಸಾಹ ಧನ ನೀಡುವ ಹಾಗೂ ಈ ಪದ್ಧತಿ ಅನುಸರಿಸಿದರೆ ಅಥವಾ ಪ್ರೋತ್ಸಾಹಿಸಿದರೆ ಎರಡು ವರ್ಷ ಜೈಲು ಶಿಕ್ಷೆ ವಿಧಿಸುವ 'ಕರ್ನಾಟಕ ದೇವದಾಸಿ ಪ್ರತಿಬಂಧಕ, ನಿಷೇಧ, ಪರಿಹಾರ ಮತ್ತು ಪುನರ್ವಸತಿ' ತಿದ್ದುಪಡಿ ವಿಧೇಯಕವನ್ನು ವಿಧಾನಸಭೆ ಅಂಗೀಕರಿಸಿತು.

ನಿಜವಾದ ಫಲಾನುಭವಿಗಳ ಹೆಸರು ಬಿಟ್ಟು ಹೋಗಿದ್ದರೆ ತಹಸೀಲ್ದಾರ್‌ಗೆ ಅರ್ಜಿ ಸಲ್ಲಿಸಿದರೆ 24 ಗಂಟೆಯೊಳಗೆ ಸೇರ್ಪಡೆಯಾಗುತ್ತಾರೆ. ಅನಗತ್ಯವಾಗಿ ಯಾರೂ ಗೊಂದಲಕ್ಕೆ ಒಳಗಾಗಬಾರದು. ರಾಜ್ಯದಲ್ಲಿ ಒಟ್ಟು 1.10 ಕೋಟಿ ಬಿಪಿಎಲ್ ಫಲಾನುಭವಿಗಳಿದ್ದಾರೆ. ಇವರೆಲ್ಲರಿಗೂ ಪ್ರತಿ ತಿಂಗಳು 10 ಕೆಜಿ ಅಕ್ಕಿ ನೀಡುತ್ತೇವೆ. ಬಿಪಿಎಲ್ ಪಡಿತರ ಚೀಟಿ ನೀಡಬೇಕೆಂಬ ಬೇಡಿಕೆ ಹೆಚ್ಚಿದೆ. ಪರಿಶೀಲಿಸಿ ಸೂಕ್ತವಾದ ಕ್ರಮ ಕೈಗೊಳ್ಳುತ್ತೇವೆ.

ಕೆ.ಎಚ್.ಮುನಿಯಪ್ಪ, ಸಚಿವ

ಈ ವರ್ಷ 144 ಪ್ರೌಢಶಾಲೆಗಳನ್ನು ಮಂಜೂರು ಮಾಡಿದ್ದೇವೆ. 500 ಕರ್ನಾಟಕ ಪಬ್ಲಿಕ್ ಶಾಲೆಗಳನ್ನ ಇಲಾಖೆಯಿಂದ, ಕೆಕೆಆರ್‌ಡಿಬಿಯಿಂದ 1 ಸಾವಿರ ಕೆಪಿಎಸ್ ಶಾಲೆಗಳನ್ನು ತೆರೆಯಲಾಗಿದೆ. ಕೆಪಿಎಸ್ ಶಾಲೆಗಳಿಂದ ಒಂದು ಹಂತಕ್ಕೆ ಪೋಷಕರಲ್ಲಿ ವಿಶ್ವಾಸ ಬಂದಿದೆ. ನಾವು ಯಾವುದೇ ಶುಲ್ಕ ಪಡೆಯುತ್ತಿಲ್ಲ. ಶಾಲೆಗಳ ನಿರ್ವಹಣೆಗೆ ಬಜೆಟ್ ಕೂಡ ಸರಿಯಾಗಿದೆ ಎಂದು ತಿಳಿಸಿದರು.

- ಮಧುಬಂಗಾರಪ್ಪ, ಸಚಿವ



ವಿಧಾನ ಮಂಡಲ ಮಧ್ಯದೊಳಗೆ

ಸಮಾಚಾರ ಸಣ್ಣದಲ್ಲ

ಹೊಸ ತಾಲೂಕು ರಚನೆ ಪ್ರಸ್ತಾಪವಿಲ್ಲ

ವಿಧಾನಸಭೆ: ರಾಜ್ಯದಲ್ಲಿ ಹೊಸ ತಾಲೂಕುಗಳನ್ನು ಸದ್ಯಕ್ಕೆ ರಚನೆ ಮಾಡದಿರಲು ತೀರ್ಮಾನ ಕೈಗೊಳ್ಳಲಾಗಿದೆ ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ಸ್ಪಷ್ಟಪಡಿಸಿದರು. ಪ್ರಶ್ನೋತ್ತರ ಅವಧಿಯಲ್ಲಿ ಕಾಂಗ್ರೆಸ್‌ನ ರಘುಮೂರ್ತಿರವರ ಪ್ರಶ್ನೆಗೆ ಉತ್ತರಿಸಿದ ಅವರು, 2009ರಲ್ಲಿ ಎಂ.ಪಿ ಪ್ರಕಾಶ್ ಸಮಿತಿಯು ಹೊಸ ತಾಲೂಕುಗಳನ್ನು ರಚಿಸುವ ಸಂಬಂಧ ಸರಕಾರಕ್ಕೆ ಶಿಫಾರಸ್ಸು ಮಾಡಿತ್ತು. ಅದರಲ್ಲಿ ಪರಶುರಾಮಪುರ ಹೋಬಳಿ ಕೇಂದ್ರವನ್ನು ತಾಲೂಕು ಮಾಡುವಂತೆ ಘೋಷಿಸಿತ್ತು. ಆ ನಂತರ ಕಳೆದ ಸರಕಾರದಲ್ಲಿ 63 ಹೊಸ ತಾಲೂಕುಗಳನ್ನು ಘೋಷಣೆ ಮಾಡಲಾಗಿತ್ತು. ಅದರಲ್ಲಿ ಪರಶುರಾಮಪುರ ಇರಲ್ಲಿಲ್ಲ. ಈ ಸಮಿತಿಯ ಶಿಫಾರಸ್ಸಿನ ಅನ್ವಯವೂ ಹೊಸ ತಾಲೂಕುಗಳ ಘೋಷಣೆ ಆಗಲಿಲ್ಲ ಎಂದರು. ಈ ಹಿಂದೆ ಘೋಷಣೆಯಾಗಿದ್ದ ಹೊಸ ತಾಲೂಕುಗಳಲ್ಲಿ ಹೋಬಳಿ ಕೇಂದ್ರವೂ ಆಗಿರದ ಪ್ರದೇಶವನ್ನು ಹೊಸ ತಾಲೂಕಾಗಿ ಗ್ರಾಮ ಪಂಚಾಯಿತಿ ಕೇಂದ್ರವನ್ನು ಹೊಸ ತಾಲೂಕಾಗಿ ಘೋಷಿಸಿರುವುದೂ ಇದೆ. ಹೀಗೆ ವೈಜ್ಞಾನಿಕವಾಗಿ ಸಾಧುವಲ್ಲದ ತಾಲೂಕುಗಳು ಘೋಷಣೆಯಾಗಿವೆ. ಹೋಬಳಿ ಇರದ ಕೇಂದ್ರವನ್ನು ತಾಲೂಕು ಮಾಡಿದ್ದರೂ ಅದನ್ನು 2 ತಾಲೂಕುಗಳಾಗಿ ಘೋಷಣೆ ಮಾಡುವಂತೆಯೂ ಬೇಡಿಕೆ ಇದೆ ಎಂದರು. ಕಳೆದ ಸರಕಾರದಲ್ಲಿ ಘೋಷಣೆಯಾದ 63 ತಾಲೂಕುಗಳಲ್ಲಿ 14 ತಾಲೂಕುಗಳು ಮಾತ್ರ ಆಡಳಿತಸೌಧ ಮಂಜೂರಾಗಿತ್ತು. ನಮ್ಮ ಸರಕಾರದ ಬಂದ ಮೇಲೆ ಉಳಿದ 49 ತಾಲೂಕುಗಳಲ್ಲೂ ಪ್ರಜಾಸೌಧ ನಿರ್ಮಾಣಕ್ಕೆ ಮಂಜೂರು ಮಾಡಿದ್ದೇವೆ. ತಾಲೂಕುಗಳ ಘೋಷಣೆ ಮುಖ್ಯವಲ್ಲ, ಅದನ್ನು ಕಾರ್ಯರೂಪಕ್ಕೆ ತರುವುದೂ ಅಷ್ಟೇ ಮುಖ್ಯ ಎಂದು ಸ್ಪಷ್ಟಪಡಿಸಿದರು.

42 ಸಾವಿರ ಮನೆಗಳ ವಿತರಣೆಗೆ ಕ್ರಮ

ವಿಧಾನಸಭೆ: ಮುಂದಿನ ತಿಂಗಳು 42,345 ಮನೆಗಳನ್ನು ಫಲಾನುಭವಿಗಳಿಗೆ ಹಸ್ತಾಂತರಿಸಲು ಬೃಹತ್ ಸಮಾರಂಭ ನಡೆಸಲಾಗುವುದು ಎಂದು ವಸತಿ ಸಚಿವ ಜಮೀರ್ ಅಹ್ಮದ್ ಖಾನ್ ಹೇಳಿದ್ದಾರೆ. ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿ ಸದಸ್ಯ ಸಿದ್ದು ಪಾಟೀಲ್ ಪ್ರಶ್ನೆಗೆ ಉತ್ತರಿಸಿದ ಸಚಿ ವರು, ಕೊಳಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ ಸರಕಾರ ಕಳೆದ ವರ್ಷವೇ 36,789 ಮನೆಗಳನ್ನು ಒದಗಿಸಿದ್ದು, ಮತ್ತೆ 42,345 ಮನೆಗಳನ್ನು ಫಲಾನುಭವಿಗಳಿಗೆ ಹಸ್ತಾಂತರಿಸುವುದಕ್ಕೆ ಸಜ್ಜಾಗಿದೆ. ಜೂನ್ ಅಥವಾ ಜುಲೈನಲ್ಲಿ ಹುಬ್ಬಳ್ಳಿಯಲ್ಲಿ ದೊಡ್ಡ ಸಮಾವೇಶ ನಡೆಸಿ ಈ ಮನೆಗಳನ್ನು ಹಂಚಬೇಕೆಂಬ ನಿರ್ಧಾರಕ್ಕೆ ಬರಲಾಗಿತ್ತು. ಆದರೆ ಹೊಸಪೇಟೆಯಲ್ಲೇ ಸರಕಾರದ ಎರಡನೇ ವರ್ಷದ ಸಾಧನಾ ಸಮಾವೇಶ ನಡೆಸಬೇಕು ಎಂದು ಮುಖ್ಯಮಂತ್ರಿ ಅವರು ಸೂಚಿಸಿದ ಕಾರಣ ಮನೆ ಹಂಚಿಕೆ ಕಾರ್ಯಕ್ರಮ ಮುಂದೂಡಿಕೆಯಾಗಿದೆ, ಅದನ್ನು ಮುಂದಿನ ತಿಂಗಳು ನಡೆಸಲಾಗುವುದು ಎಂದು ಅವರು ಹೇಳಿದರು. ಸರಕಾರ ಬಡವರ ಮೇಲಿನ ನಿಜವಾದ ಕಾಳಜಿಯನ್ನು ಪ್ರದರ್ಶಿಸಿದೆ ಹಾಗೂ 2026ರ ಅಂತ್ಯದೊಳಗೆ 2.30 ಲಕ್ಷ ಮನೆಗಳನ್ನು ನೀಡಲಿದ್ದೇವೆ ಎಂದ ಅವರು, 2013 ರಿಂದ 2023 ರವರೆಗೆ ಬಡ ಕುಟುಂಬಗಳಿಗೆ 1.82 ಲಕ್ಷ ಮನೆ ನಿರ್ಮಾಣ ಯೋಜನೆ ರೂಪಿಸಲಾಗಿತ್ತು. ಫಲಾನುಭವಿಗಳ ವಂತಿಗೆ ಪಾವತಿ ಕಷ್ಟ ವಾಗಿ ಮನೆಗಳು ಅರ್ಧ ಕ್ಕೆ ನಿಂತಿತ್ತು. ಮುಖ್ಯಮಂತ್ರಿ ಯವರಿಗೆ ಸಮಸ್ಯೆ ಮನವರಿಕೆ ಮಾಡಿಕೊಟ್ಟು ಫಲಾನುಭವಿಗಳ ವಂತಿಗೆ ತಲಾ ನಾಲ್ಕು ಲಕ್ಷ ರೂ. ಸರ್ಕಾರವೇ ಭರಿಸುವ ತೀರ್ಮಾನ ಕೈಗೊಂಡು ಮನೆ ಪೂರ್ಣ ಗೊಳಿಸಲಾಗುತ್ತಿದೆ ಎಂದು ಹೇಳಿದರು.

ಜಾಮರ್‌ನಿಂದ ಜನರಿಗೆ ಸಮಸ್ಯೆ

ವಿಧಾನಸಭೆ: ಮಂಗಳೂರು ಕಾರಾಗೃಹದಲ್ಲಿ ಮೊಬೈಲ್ ಜಾಮರ್ ಅಳವಡಿಸಿರುವ ಕಾರಣ, ಸುತ್ತಲಿನ ಪ್ರದೇಶಗಳ ಜನರು ಮೊಬೈಲ್ ಬಳಸಲು ಪರದಾಡುವಂತಾಗಿದೆ, ಆದರೆ, ಜೈಲಿನ ಒಳಗೆ ನೆಟ್ ವರ್ಕ್ ದೊರೆಯುತ್ತಿದೆ ಎಂದು ಶಾಸಕ ವೇದವ್ಯಾಸ ಕಾಮತ್ ಪ್ರಸ್ತಾಪಿಸಿದರು. ಇದಕ್ಕೆ ಪ್ರತಿಕ್ರಿಯಿಸಿರುವ ಡಿ.ಕೆ.ಶಿವಕುಮಾರ್, ಜಾಮರ್ ಅಳವಡಿಕೆಯಿಂದ ಜನರಿಗೆ ತೊಂದರೆಯಾಗುತ್ತಿರುವುದು ನಿಜ. ಆದರೆ, ಜೈಲಿನ ಒಳಗೆ ನೆಟ್ ವರ್ಕ್ ಸಿಗುತ್ತದೆ ಎಂದು ಇವರಿಗೆ ಹೇಗೆ ತಿಳಿದಿದೆ. ಜೈಲಿನ ಒಳಗೆ ಇವರಿಗೆ ಸಂಪರ್ಕ ಇದೆಯೇ?'' ಎಂದು ಕಿಚಾಯಿಸಿದರು. ನಂತರ ''ಗೃಹಸಚಿವರು ಇದಕ್ಕೆ ಉತ್ತರಿಸುತ್ತಾರೆ'' ಎಂದು ವಿರೋಧ ಪಕ್ಷದ ಶಾಸಕರ ಕಾಲೆಳೆದರು.

ಬಿ ಖರಾಬು ಭೂಮಿ ಯಾರಿಗೂ ಮಂಜೂರಾಗಿಲ್ಲ

ವಿಧಾನಸಭೆ: ಜಂಗಲ್ ಅಥವಾ ಬಿ-ಖರಾಬು ಜಮೀನನ್ನು ಯಾರಿಗೂ ಮಂಜೂರು ಮಾಡಲು ಸಾಧ್ಯವಿಲ್ಲ. ಈ ಹಿಂದೆ ಇಂತಹ ಕೆಲವು ಪ್ರಕರಣಗಳು ಕಂಡುಬಂದಿದ್ದು, ಈ ಬಗ್ಗೆ ತನಿಖೆಯನ್ನೂ ನಡೆಸಲಾಗುತ್ತಿದೆ ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ತಿಳಿಸಿದರು. ಪ್ರಶ್ನೋತ್ತರ ಕಲಾಪದಲ್ಲಿ ಶಾರದಾ ಪೂರ್ಯಾನಾಯ್ಕ್ ಅವರ ಪ್ರಶ್ನೆಗೆ ಉತ್ತರ ನೀಡಿದ ಸಚಿವರು, ಜಂಗಲ್ ಅಥವಾ ಬಿ-ಖರಾಬು ಜಮೀನು ಮಂಜೂರಾತಿ ವಿಚಾರದಲ್ಲಿ ಯಾವುದೋ ಕಾಲದಲ್ಲಿ ತಪ್ಪಾಗಿದೆ. ಆಗಿನ ಸರಕಾರ ಸರಿಯಾದ ಹೆಜ್ಜೆ ಇಟ್ಟಿಲ್ಲ. ಆದರೆ, ಅದನ್ನು ನಾವು ಸರಿ ಮಾಡುವ ಕೆಲಸಕ್ಕೆ ಮುಂದಾಗಿದ್ದೇವೆ. ಈಗಾಗಲೇ ಬೆಂಗಳೂರು ವಿಭಾಗ ಪ್ರದೇಶಿಕ ಆಯುಕ್ತರ ನೇತೃತ್ವದಲ್ಲಿ ಸಮಿತಿಯನ್ನು ರಚಿಸಿ ಇದರ ನೈಜತೆ ಪರಿಶೀಲನೆಯ ಜವಾಬ್ದಾರಿ ಕೊಟ್ಟಿದ್ದೇವೆ. ತನಿಖೆ ಆರಂಭವಾಗಿದೆ. ತನಿಖೆಯನ್ನು ಶೀಘ್ರದಲ್ಲಿ ಮುಗಿಸಲು ಸೂಚಿಸಿದ್ದೇನೆ ಎಂದು ತಿಳಿಸಿದರು.

ಕಾನೂನು ಪ್ರಕಾರವೇ ನಡೆದಿದೆ ಎಂದು ಸಮರ್ಥಿಸಿಕೊಂಡ ಪರಂ | ಯಾವುದೇ ಒತ್ತಡಕ್ಕೆ ಮಣಿಯದೇ ಕಾನೂನು ಪ್ರಕಾರವೇ ಎಸ್‌ಐಟಿ ತನಿಖೆ | ಗೃಹ ಸಚಿವರ ಹೇಳಿಕೆಗೆ ಬಿಜೆಪಿ ಕಿಡಿ | ಧರ್ಮಸ್ಥಳ ವಿಷಯದಲ್ಲಿ ರಾಜಕೀಯವೆಂದು ಕೈ ಶಾಸಕರ ವಿರೋಧ

ಬುರುಡೆ ಪ್ರಕರಣ; ಸದನದಲ್ಲಿ ಕೋಲಾಹಲ

ವಿಶ್ವವಾಣಿ ಸುದ್ದಿಮನೆ

ವಿಧಾನಸಭೆ: ಧರ್ಮಸ್ಥಳ ಅನಾಮಧೇಯ ವ್ಯಕ್ತಿಯ 'ಬುರುಡೆ' ಪ್ರಕರಣವನ್ನು ಎಸ್‌ಐಟಿಗೆ ವಹಿಸಲು ಯಾರು ಒತ್ತಡ ಹೇರಿದ್ದರೂ? ಸರಕಾರದ ಪಾತ್ರವೇನು ಎನ್ನುವ ಪ್ರಶ್ನೆಗೆ ಬಿಜೆಪಿ-ಕಾಂಗ್ರೆಸ್ ಶಾಸಕರ ನಡುವೆ ವಾಕ್ಸಮರ ನಡೆದು ಕೆಲ ಕಾಲ ಆರೋಪ-ಪ್ರತ್ಯಾರೋಪ ಮಾಡಿಕೊಂಡ ಘಟನೆ ನಡೆಯಿತು.

ಸೋಮವಾರ ಮಧ್ಯಾಹ್ನ ವಿಧಾನಸಭೆಯಲ್ಲಿ ಗೃಹ ಸಚಿವ ಡಾ.ಜಿ. ಪರಮೇಶ್ವರ ನೀಡಿದ ಉತ್ತರಕ್ಕೆ ಕಿಡಿಕಾರಿದ ಬಿಜೆಪಿ ನಾಯಕರು, ಪ್ರಕರಣದ ಹಿಂದೆ ಸರಕಾರ ಹಾಗೂ ಕಾಂಗ್ರೆಸ್ ಹೈಕಮಾಂಡ್ ಹುನ್ನಾರ ನಡೆಸಿದೆ ಎಂದು ಟೀಕಿಸಿದರು. ಇದಕ್ಕೆ ಆಕ್ಷೇಪವ್ಯಕ್ತಪಡಿಸಿದ ಕಾಂಗ್ರೆಸ್ ಶಾಸಕರು, ಧರ್ಮಸ್ಥಳ ವಿಷಯವನ್ನು ರಾಜಕೀಯ ಮಾಡಬೇಡಿ ಎಂದು ವಾಗ್ದಾಳಿ ನಡೆಸಿದರು. ಸದನದಲ್ಲಿ ತೀವ್ರ ಗೊಂದಲ ಉಂಟಾಗಿದ್ದರಿಂದ, ಸದನವನ್ನು ಕೆಲಕಾಲ ಮುಂದೂಡಲಾಯಿತು. ಬಳಿಕ ಪುನರಾರಂಭಗೊಂಡಾಗ ಸರಕಾರದ ನಡೆಯನ್ನು ಖಂಡಿಸಿ ಬಿಜೆಪಿಗರು ಸಭಾತ್ಯಾಗ ಮಾಡಿದರು.

ಇದಕ್ಕೂ ಮೊದಲು ವಿಧಾನಸಭೆಯಲ್ಲಿ ಉತ್ತರಿಸಿದ ಗೃಹ ಸಚಿವ ಡಾ.ಜಿ. ಪರಮೇಶ್ವರ, ಧರ್ಮಸ್ಥಳ ಪ್ರಕರಣ ಸಂಬಂಧ ನಾವು ಯಾವುದೇ ಒತ್ತಡಕ್ಕೆ ಮಣಿದಿಲ್ಲ. ಇದರಲ್ಲಿ ಯಾವುದೇ ರಾಜಿಯಾಗುವುದಿಲ್ಲ. ಸತ್ಯವನ್ನು ಹೊರಗಡೆ ತರುತ್ತೇವೆ ಎಂದು ಸ್ಪಷ್ಟಪಡಿಸಿದರು. ಇಡೀ ದೇಶ ಧರ್ಮಸ್ಥಳ ಪ್ರಕರಣವನ್ನು ಗಮನಿಸುತ್ತಿದೆ. ಧರ್ಮಸ್ಥಳ ಒಂದು ದೇವಸ್ಥಾನ. ಲಕ್ಷಾಂತರ ಭಕ್ತರು ಇದ್ದಾರೆ. ಅದಕ್ಕೇ ಅದರದ್ದೇ ಆದ ಸ್ಥಾನಮಾನವಿದೆ. ಧರ್ಮಸ್ಥಳಕ್ಕೆ 800 ವರ್ಷಗಳ ಇತಿಹಾಸ ಇದೆ. ಒಬ್ಬ ವ್ಯಕ್ತಿ ಧರ್ಮಸ್ಥಳ ಠಾಣೆಗೆ ಹೋಗಿ ದೂರು ಕೊಡುತ್ತಾನೆ. ಆತ ಪ್ರಸ್ತಾಪ ಮಾಡಿದ ವಿಚಾರ ತನಗೆ ಪ್ರಾಣ ಬೆದರಿಕೆವೊಡ್ಡಿ, ಧರ್ಮಸ್ಥಳ ಸುತ್ತಮುತ್ತ ಕೊಲೆಯಾದವರ ಮೃತದೇಹಗಳನ್ನು ಹೂತು ಹಾಕಿಸಿದ್ದಾರೆ ಎಂದು ದೂರು ನೀಡಿದ್ದಾನೆ. ಪಾಪ ಪ್ರಜ್ಞೆಯಿಂದ ಹೊರಬರಲು ದೂರು ನೀಡುತ್ತಿದ್ದೇನೆ ಎಂದಿದ್ದಾನೆ. ಅತ್ಯಾಚಾರವಾದ ಮಹಿಳೆಯರು, ಕೊಲೆಗಳಾದ ಬಗ್ಗೆ ತನಿಖೆ ನಡೆಸುವಂತೆ ದೂರು ನೀಡಿದ್ದಾನೆ ಎಂದು ವಿವರಿಸಿದರು.

ಈ ದೂರು ಧರ್ಮಸ್ಥಳ ಪೊಲೀಸರು ಎಫ್‌ಐಆರ್ ಮಾಡುತ್ತಾರೆ. ಪೊಲೀಸರು ಪ್ರಮುಖ ವಿಚಾರ ಪ್ರಸ್ತಾಪ ಮಾಡಿರುವ ಕಾರಣ ಆತನನ್ನು ಮ್ಯಾಜಿಸ್ಟ್ರೇಟ್ ಮುಂದೆ ಹಾಜರುಪಡಿಸಿ ಹೇಳಿಕೆ ದಾಖಲಿಸುತ್ತಾರೆ. ಕೂಡಲೇ ಪೊಲೀಸರು ತನಿಖೆ ನಡೆಸುತ್ತಾರೆ. ಈ ಮಧ್ಯೆ ಕರ್ನಾಟಕ ಮಹಿಳಾ ಆಯೋಗದ ಅಧ್ಯಕ್ಷರು ಸಿಎಂಗೆ ಪತ್ರ ಬರೆದು ಧರ್ಮಸ್ಥಳದ ಸಾವಿನ ಕೇಸ್ ಸಂಬಂಧ ಎಸ್‌ಐಟಿ ರಚಿಸುವಂತೆ ಕೋರುತ್ತಾರೆ. ಬಳಿಕ ಎಸ್‌ಐಟಿ ತನಿಖೆಗೆ ಸಿಎಂ ಹಾಗೂ ನಾನು ಚರ್ಚೆ ಮಾಡಿ ಆದೇಶ ಮಾಡಲಾಗಿದೆ. ಇದರಲ್ಲಿ ಯಾವುದೇ ವೈಯಕ್ತಿಕ ಹಿತಾಸಕ್ತಿಯಿರಲಿಲ್ಲ ಎಂದು ಸ್ಪಷ್ಟಪಡಿಸಿದರು.

ತನಿಖೆ ಆರಂಭವಾಗಬೇಕಿದೆ: ಸುಮಾರು ಜಾಗಗಳಲ್ಲಿ ಮಣ್ಣು ತೆಗೆಯಲಾಗಿದೆ. ಎರಡು ಜಾಗಗಳಲ್ಲಿ ಅಸ್ಥಿಪಂಜರ ಸಿಕ್ಕಿದೆ. ಅದನ್ನು ಎಫ್‌ಎಸ್‌ಎಲ್‌ಗೆ ಕೊಡಲಾಗುತ್ತದೆ. ಮಿಕ್ಕ ಜಾಗಗಳಲ್ಲಿ ಕೆಂಪು ಕಲ್ಲಿನ ಮಣ್ಣು ಇದ್ದು, ಅದು ಬಹಳ ಎಸಿಡಿಕ್ ಮಣ್ಣಾಗಿರುವುದರಿಂದ ಎಸ್‌ಐಟಿ ಅವರು ಮಣ್ಣಿನ ಮಾದರಿ ಪಡೆದು ಎಫ್‌ಎಸ್‌ಎಲ್‌ಗೆ ಕಳುಹಿಸಿದ್ದಾರೆ. ಇಲ್ಲಿವರೆಗೆ ಆಗಿರುವುದು ಕೇವಲ ಮಣ್ಣು ಅಗೆತ ಮಾತ್ರ. ತನಿಖೆ ಇನ್ನೂ ಆರಂಭವಾಗಿಲ್ಲ. ಎಫ್‌ಎಸ್‌ಎಲ್ ವರದಿ ಬಂದ ಬಳಿಕ ಅದರ ಆಧಾರದಲ್ಲಿ ತನಿಖೆ ಆರಂಭವಾಗುತ್ತದೆ. ದೂರುದಾರ ಬುರುಡೆ ತಗೊಂಡು ಬಂದಿದ್ದ. ಅದನ್ನೂ ಎಫ್‌ಎಸ್‌ಎಲ್‌ಗೆ ಕಳುಹಿಸಿಕೊಡಲಾಗಿದೆ ಎಂದು ವಿವರಿಸಿದರು.

ಪರಂ ಉತ್ತರದಲ್ಲಿ ನೊಣವೂ ಸಿಕ್ಕಿಲ್ಲ: ಪರಮೇಶ್ವರ ಉತ್ತರಕ್ಕೆ ಅಸಮಾಧಾನ ವ್ಯಕ್ತಪಡಿಸಿದ ಪ್ರತಿಪಕ್ಷ ನಾಯಕ ಆರ್. ಅಶೋಕ್, ಗೃಹ ಸಚಿವರು ಏನೋ ಹೇಳುತ್ತಾರೆ ಎಂದುಕೊಂಡು ಬಂದೆ. ಅನಾಮಧೇಯ ವ್ಯಕ್ತಿ ಬೆಟ್ಟ ಅಗೆದರೂ ಇಲಿಯೂ ಸಿಕ್ಕಿಲ್ಲ, ಪರಮೇಶ್ವರ ಉತ್ತರದಲ್ಲಿ ಒಂದು ನೊಣನೂ ಸಿಕ್ಕಿಲ್ಲ. ಧರ್ಮಸ್ಥಳ ವಿಚಾರದಲ್ಲಿ ಷಡ್ಯಂತರ ಇದೆ ಅಂತ ಹೇಳುತ್ತಾರೆ. ಪರಮೇಶ್ವರ ಅವರು ಏನೂ ಇಲ್ಲ ಅಂತಾರೆ. ಎಸ್‌ಐಟಿ ರಚನೆ ಮಾಡಿರುವುದು ಯಾರ ಒತ್ತಡದಲ್ಲಿ ಅಂತ ಹೇಳಿಲ್ಲ, ನಗರ ನಕ್ಸಲೈಟ್‌ಗಳು ಪತ್ರ ಬರೆದು ಒತ್ತಡ ಹಾಕಿದ್ದಾರೆ ಎಂದು ಮಾಧ್ಯಮಗಳಲ್ಲಿ ಫೋಟೋ ಸಮೇತ ಬಂದಿದೆ ಎಂದು ಟೀಕಿಸಿದರು. ಅನಾಮಧೇಯ ವ್ಯಕ್ತಿ ಬರುವಾಗ ಬುರುಡೆ ತೆಗೆದುಕೊಂಡು ಬಂದ. ಅದನ್ನು ಎಲ್ಲಿಂದ ತಂದ? ಹೂಳಿದ ಹೆಣ ತೆಗೆಯೋಕೆ ಅವಕಾಶ ಇಲ್ಲ, ತಹಸೀಲ್ದಾರ್ ಇರಬೇಕು. ಹಾಗಾದರೆ ಅವನು ಆ ಬುರುಡೆ ಎಲ್ಲಿಂದ ತಂದ. ಅವನು ಬುರುಡೆ ಎಲ್ಲಿಂದ ತಂದ?. ಅವನಿಗೆ ಹೆಣ ಅಗೆದು ತೆಗೆಯಲು ಬರುವುದಿಲ್ಲ. ಅವನನ್ನು ಮೊದಲು ಬಂಧನ ಮಾಡಬೇಕಿತ್ತು. ಅದನ್ನು ತನಿಖೆ ಮಾಡಿದ್ದರೆ, ಅವನು ಬುರುಡೆ ಬಿಡ್ತಾ ಇದ್ದಾನೋ ಇಲ್ಲವೋ ಅನ್ನೋದು ಗೊತ್ತಾಗುತ್ತದೆ ಎಂದು ಆಗ್ರಹಿಸಿದರು.

ಇದೇ ವೇಳೆ ಮಾತನಾಡಿದ ಶಾಸಕ ಸುನಿಲ್ ಕುಮಾರ್, ನಾವು ಎಸ್‌ಐಟಿಯನ್ನು ವಿರೋಧಿಸಿಲ್ಲ. ಯೂಟ್ಯೂಬ್ ಬಳಸಿ ಅಪಪ್ರಚಾರ ನಡೆದಿದೆ. ಇದಕ್ಕೆ ಏನು ಕಡಿವಾಣ ಹಾಕಿದ್ದೀರಾ ಎಂದು ಕೇಳಿದ್ದೇವೆ. ಈ ಪ್ರಕರಣದ ಹಿಂದೆ ಒಬ್ಬ ಮುಸುಕುಧಾರಿ ಇಲ್ಲ. ಹತ್ತಾರು ಜನ ಮುಸುಕು ಹಾಕಿ ಕೆಲಸ ಮಾಡುತ್ತಿದ್ದಾರೆ. ತನಿಖೆಗೆ ಯಾರು ಒತ್ತಾಯಿಸಿದ್ದರು? ಅವರ ಹಿನ್ನೆಲೆ ನೀವು ಮುನ್ನೆಲೆಗೆ ತಂದಿದ್ದೀರ. ಇದರ ಹಿಂದಿದ್ದವರು ಯಾರು. ಹಣಕಾಸು ನೆರವು ಎಲ್ಲಿಂದ ಬರುತ್ತಿದೆ. ಇದರ ಬಗ್ಗೆ ನೀವು ಏನೂ ಹೇಳಿಲ್ಲ. ಧರ್ಮಸ್ಥಳಕ್ಕೆ ಕೆಸರು ಎರಚೋದು ಅಷ್ಟೇ ಇದೆ. ಸರ್ಕಾರದ ಉದ್ದೇಶ ಕೂಡ ಅದೇ ಇದೆ. ಕಾಂಗ್ರೆಸ್ ಹೈಕಮಾಂಡ್ ನಿರ್ದೇಶನದ ಮೇರೆಗೆ ಎಸ್‌ಐಟಿ ಮಾಡಲಾಗಿದೆ ಎಂದು ದೂರಿದರು.

ಇದಕ್ಕೆ ಆಡಳಿತ ಪಕ್ಷದ ಶಾಸಕರು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ಸದನದಲ್ಲಿ ಪರಸ್ಪರ ವಾಕ್ಸಮರ ನಡೆಯಿತು. ಈ ವೇಳೆ ಆಡಳಿತ - ಪ್ರತಿಪಕ್ಷಗಳ ನಡುವೆ ಗದ್ದಲ ಉಂಟಾಯಿತು. ಆಗ ಸ್ಪೀಕರ್ ಸರಕಾರವೇ ಹುನ್ನಾರ ಮಾಡಿದೆ ಎಂಬ ಪದ ತೆಗೆಯಿರಿ ಎಂದು ಸೂಚಿಸಿದರು. ಇದಕ್ಕೆ ಸರಕಾರ, ಸ್ಪೀಕರ್ ಮೇಲೆ ಆಕ್ರೋಶ ಹೊರಹಾಕಿದ ಸುನಿಲ್ ಕುಮಾರ್, ಅಪಪ್ರಚಾರ ಮಾಡಿದ್ದೇ ಸರಕಾರ. ಇದಕ್ಕೆಲ್ಲಾ ಸರಕಾರವೇ ಕಾರಣ ಎಂದು ಆರೋಪಿಸಿದರು.

ಎಲ್ಲವೂ ಹೊರಬರಲಿದೆ, ತಾಳ್ಮೆಯಿಂದಿರಿ

ಪ್ರತಿ ವರ್ಷ ಸಿಎಂ ಸಿದ್ದರಾಮಯ್ಯ ಧರ್ಮಸ್ಥಳಕ್ಕೆ ಹೋಗಿ ಆರೋಗ್ಯ ತಪಾಸಣೆ ಮಾಡಿಸಿಕೊಂಡು ಬರುತ್ತಾರೆ. ಅವರಿಗೆ ನಂಬಿಕೆ ಇದೆ. ತಾಳ್ಮೆ ಇರಲಿ. ರಾಜಕಾರಣದಲ್ಲಿ ಧರ್ಮ ಇರಬೇಕು ಹೊರತು ಧರ್ಮದಲ್ಲಿ ರಾಜಕಾರಣ ಇರಬಾರದು. ನಿರ್ದಾಕ್ಷಿಣ್ಯವಾಗಿ ಯಾರನ್ನೂ ಬಲಿ ತೆಗೆದುಕೊಳ್ಳಬೇಕು. ಯಾರನ್ನೂ ಎಲ್ಲಿಗೆ ಕಳುಹಿಸಬೇಕು ಅದನ್ನು ಮಾಡಲಾಗುತ್ತದೆ. ತನಿಖೆಯಲ್ಲಿ ಎಲ್ಲವೂ ಹೊರಬರಲಿದೆ. ಮೂರು ನಾಲ್ಕು ದಿನಗಳ ಕಾಲ ತಾಳ್ಮೆಯಿಂದಿರಬೇಕು.

- ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಧರ್ಮಸ್ಥಳದ ಮರ್ಯಾದೆ ತೆಗೆದಿದ್ದೀರಾ..

ಬೆಟ್ಟ ಅಗೆಯುವಾಗ ಅರಣ್ಯ ಇಲಾಖೆ ಅನುಮತಿ ಕೇಳಲಾಗಿದೆಯೇ? ಎಸ್‌ಐಟಿ ಮಾಡಿ ಎಂದು ಕೋರ್ಟ್ ಹೇಳಿತ್ತಾ?. ಗೃಹ ಸಚಿವರಿಗೆ ದಿನ ಸಾವಿರ ದೂರುಗಳು ಬರುತ್ತವೆ. ಧರ್ಮಸ್ಥಳ ಪ್ರಕರಣಕ್ಕೆ ಮಾತ್ರ ಏಕೆ ಎಸ್‌ಐಟಿ ಮಾಡಿದ್ದಾರೆ? ಧರ್ಮಸ್ಥಳದ ಮರ್ಯಾದೆ ತೆಗೆದಿದ್ದೀರಾ. ಅದರ ಹಿಂದೆ ಇದ್ದವರ ವಿರುದ್ಧ ಕ್ರಮ ಆಗಬೇಕು. ಡಿಕೆಶಿ ಅವರು ಬಹಿರಂಗಪಡಿಸಬೇಕು. ಧರ್ಮಸ್ಥಳ ಪರ ಇರುವ ಡಿಕೆಶಿ ಹೇಳಲಿ. ಡಿಕೆಶಿ ಹೇಳಿಕೆಯನ್ನು ನಾನು ಬೆಂಬಲಿಸುತ್ತೇನೆ. ಡಿಕೆಶಿ ಷಡ್ಯಂತ್ರ ಮಾಡಿದ್ದಾರೆ ಅಂತ ಹೇಳಿದ್ದಾರೆ. ಆ ಷಡ್ಯಂತ್ರವನ್ನು ಬಹಿರಂಗ ಪಡಿಸಬೇಕು.

- ಆರ್.ಅಶೋಕ್, ಪ್ರತಿಪಕ್ಷ ನಾಯಕ

ತನಿಖೆಯನ್ನು ದಿಕ್ಕು ತಪ್ಪಿಸಲು ಅವಕಾಶವಿಲ್ಲ

ಮ್ಯಾಜಿಸ್ಟ್ರೇಟ್ ಆದೇಶದಂತೆ ದೂರು ದಾರನಿಗೆ ರಕ್ಷಣೆ ಕೊಡುವಂತೆ ಸೂಚನೆ ನೀಡಲಾಗಿದೆ. ತನಿಖೆ ಬಹಳ ಗಂಭೀರವಾಗಿ ನಡೆಯುತ್ತಿದೆ. ತನಿಖೆಯನ್ನು ದಿಕ್ಕು ತಪ್ಪಿಸಲು ಅವಕಾಶ ನೀಡುವುದಿಲ್ಲ. ಅವನು ಎಲ್ಲೆಲ್ಲಿ ತೋರಿಸುತ್ತಿದ್ದಾನೆ ಅಲ್ಲೆಲ್ಲ ಅಗೆಯುತ್ತಿದ್ದೇವೆ. ಮುಂದಕ್ಕೆ ಅಗೆಯಬೇಕಾ, ಬೇಡವೇ ಎಂಬ ತೀರ್ಮಾನವನ್ನು ನಾವು ಮಾಡುವುದಿಲ್ಲ. ಎಸ್‌ಐಟಿ ಮಾಡಲಿದೆ. ಈ ವಿಷಯದಲ್ಲಿ ಸರಕಾರ ಮಧ್ಯಪ್ರವೇಶಿಸಲ್ಲ. ಎಸ್‌ಐಟಿ ತನಿಖೆಗೆ ಸಿಎಂ, ನಾನು ಚರ್ಚೆ ಮಾಡಿ ಆದೇಶ ಮಾಡಲಾಗಿದೆ.

- ಡಾ.ಜಿ. ಪರಮೇಶ್ವರ, ಗೃಹ ಸಚಿವ

ಹೆಗ್ಗಡೆ ಕುಟುಂಬವೇ ಸ್ವಾಗತಿಸಿದೆ

ಅನಾಮಿಕ ವ್ಯಕ್ತಿಯ ದೂರು ಆಧರಿಸಿ ಧರ್ಮಸ್ಥಳದಲ್ಲಿ ಹೂತಿಟ್ಟ ಅಪರಿಚಿತ ಶವಗಳ ತನಿಖೆಗಾಗಿ ಸರಕಾರ ಎಸ್‌ಐಟಿ ತನಿಖೆ ಮಾಡಿತ್ತು. ಇದಕ್ಕೆ ಹರ್ಷೇಂದ್ರ ಹೆಗ್ಗಡೆ ಅವರೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿಯಾಗಿ ಎಸ್‌ಐಟಿ ರಚನೆಗೆ ಅಭಿನಂದನೆ ಸಲ್ಲಿಸಿದ್ದಾರೆ. ಅವರ ಸಹೋದರ ಸಿಎಂರನ್ನು ಭೇಟಿಯಾಗಿ ಅಭಿನಂದನೆ ಸಲ್ಲಿಸಿದ್ದಾರೆ. ಎಸ್‌ಐಟಿ ರಚನೆ ಮಾಡಿದಾಗ ಹೆಗ್ಗಡೆ ಅವರ ಸಹೋದರ ಸಿಎಂ ಮನೆಗೆ ಬಂದಿದ್ದರು. ಅವರೇ ವಿರೋಧಿಸದಿರುವಾಗ, ಬಿಜೆಪಿಯವರು ಏಕೆ ವಿರೋಧಿಸಬೇಕು? .

- ಬಾಲಕೃಷ್ಣ, ಕಾಂಗ್ರೆಸ್ ಶಾಸಕ

ಏಕರೂಪ ಹಾಲು ಖರೀದಿ ದರ ನಿಗದಿಪಡಿಸಿ

ವಿಧಾನಸಭೆ: ಕರ್ನಾಟಕ ಹಾಲು ಮಹಾಮಂಡಳಗಳ ಪೈಕಿ ಉತ್ತರ ಕರ್ನಾಟಕ ಭಾಗದ ಒಕ್ಕೂಟಗಳಲ್ಲಿ ರೈತರಿಗೆ ಪಾವತಿಸುವ ಹಾಲು ಖರೀದಿ ದರ ಅತ್ಯಂತ ಕಡಿಮೆ ಇದ್ದು, ರಾಜ್ಯಾದ್ಯಂತ ಏಕರೂಪದ ದರ ನಿಗದಿ ಮಾಡಬೇಕು ಎಂದು ವಿಧಾನಸಭೆಯಲ್ಲಿ ಶಾಸಕರು ಆಗ್ರಹಿಸಿದ ಘಟನೆ ಕೂಡ ನಡೆಯಿತು.

ಪ್ರಶ್ನೋತ್ತರದ ವೇಳೆ ಪ್ರತಿಪಕ್ಷದ ಉಪನಾಯಕ ಅರವಿಂದ ಬೆಲ್ಲದ್ ಅವರ ಪ್ರಶ್ನೆಗೆ ಉತ್ತರಿಸಿದ ಪಶುಸಂಗೋಪನ ಸಚಿವ ಕೆ ವೆಂಕಟೇಶ್ ಅವರು, ನಮ್ಮ ಸರಕಾರ ಅಧಿಕಾರಕ್ಕೆ ಬಂದ ದಿನದಿಂದ ಇದುವರೆಗೂ ಎರಡು ಹಂತದಲ್ಲಿ 3 ಮತ್ತು 4 ರು.ಗಳಂತೆ ಒಟ್ಟು ಏಳು ರು.ಗಳ ಹಾಲಿನ ದರ ಹೆಚ್ಚಳ ಮಾಡಲಾಗಿದೆ. ಏಪ್ರಿಲ್ 1ರಂದು ಹೆಚ್ಚಳ ಮಾಡಿದ 4ರು. ಹಾಲಿನ ದರವನ್ನು ನೇರ ಪಾವತಿ ವ್ಯವಸ್ಥೆಯ ಮೂಲಕ ರೈತರಿಗೆ ನೀಡಲಾಗುತ್ತಿದೆ ಎಂದು ವಿವರಿಸಿದರು. ಪಶು ಆಹಾರ, ಔಷಧಿ, ಲಸಿಕೆ ಹಾಗೂ ಮಾನವ ಬಳಕೆ ವೆಚ್ಚ ಹೆಚ್ಚಾದ ಹಿನ್ನೆಲೆಯಲ್ಲಿ ಹಾಲಿನ ಖರೀದಿ ದರವನ್ನು ಹೆಚ್ಚಿಸಿ ರೈತರಿಗೆ ನೆರವು ನೀಡಬೇಕು ಎಂದು ಶಾಸಕರು ಒತ್ತಾಯಿಸಿದರು. ಅದರ ಅನುಸಾರ ಸರಕಾರ ಕ್ರಮ ಕೈಗೊಂಡಿದೆ. ಮುಖ್ಯಮಂತ್ರಿ ಅವರು ಒಕ್ಕೂಟ ಪದಾಧಿಕಾರಿಗಳ ಜತೆ ಚರ್ಚೆ ಮಾಡಿ ಹೆಚ್ಚಳವಾಗಿರುವ ಹಾಲಿನ ದರವನ್ನು ರೈತರಿಗೆ ವರ್ಗಾವಣೆ ಮಾಡಬೇಕು ಮತ್ತು ಮುಂದಿನ ದಿನಗಳಲ್ಲಿ ಹಾಲಿನ ದರಕ್ಕೆ ಸಂಬಂಧಪಟ್ಟಂತೆ ಸರಕಾರದ ಗಮನಕ್ಕೆ ತರದೆ ಏಕಾಏಕಿ ಕ್ರಮ ಕೈಗೊಳ್ಳಬಾರದು ಎಂದು ಸೂಚಿಸಿರುವುದಾಗಿ ತಿಳಿಸಿದರು. ರಾಜ್ಯದಲ್ಲಿ 16 ಜಿಲ್ಲಾ ಹಾಲು ಒಕ್ಕೂಟಗಳಿದ್ದು 8.89 ಲಕ್ಷ ಸಕ್ರಿಯ ಸದಸ್ಯರಿದ್ದಾರೆ. ದಿನನಿತ್ಯ 99.6 ಲಕ್ಷ ಕೆಜಿ ಹಾಲು ಶೇಖರಣೆಯಾಗುತ್ತಿದೆ. ಪ್ರತಿ ಲೀಟರ್‌ಗೆ 31.31 ರು. ಖರೀದಿ ದರ ಇತ್ತು. 4 ರು. ಹೆಚ್ಚಳದ ಬಳಿಕ ಖರೀದಿ ದರ 35.30 ರು.ಗಳಾಗಿದೆ. ಗ್ರಾಹಕರಿಗೆ 46 ರುಪಾಯಿಗಳಿಗೆ ಹಾಲು ಮಾರಾಟವಾಗುತ್ತಿದೆ ಎಂದು ಮಾಹಿತಿ ನೀಡಿದರು.

ವಿಧಾನಪರಿಷತ್‌ನಲ್ಲಿ ಲೋಕಧ್ವನಿ ಪ್ರಸ್ತಾಪಿಸಿದ ಶಾಸಕಿ ಹೇಮಲತಾ ನಾಯಕ್

ಟಿಬಿ ಡ್ಯಾಮ್: ಮೂರು ರಾಜ್ಯಗಳ ಸಿಎಂ ಸಭೆ

ವಿಧಾನಸಭೆ: ತುಂಗಾ-ಭದ್ರ ಜಲಾಶಯಕ್ಕೆ ಸಂಬಂಧಿಸಿದಂತೆ ಈಗಾಗಲೇ ತೆಲಂಗಾಣ ಹಾಗೂ ಆಂಧ್ರಪ್ರದೇಶ ಮುಖ್ಯಮಂತ್ರಿಗಳ ಸಭೆಗೆ ಸಮಯ ಕೇಳಿದ್ದು, ಸಭೆಯ ಬಳಿಕ ವಿವರವಾದ ಉತ್ತರ ನೀಡುವುದಾಗಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸ್ಪಷ್ಟಪಡಿಸಿದರು.

ಶೂನ್ಯವೇಳೆಯಲ್ಲಿ ಬಿಜೆಪಿ ಶಾಸಕ ವಿಜಯೇಂದ್ರ ಪ್ರಸ್ತಾಪಿಸಿದ ವಿಷಯಕ್ಕೆ ಉತ್ತರಿಸಿದ ಅವರು, ಈಗಾಗಲೇ ಕಾಂಗ್ರೆಸ್ ಶಾಸಕ ಹಂಪನಗೌಡ ಬಾದರ್ಲಿ ಅವರು ಈ ವಿಚಾರ ಪ್ರಸ್ತಾಪಿಸಿದ್ದರು. ನಮ್ಮ ಜಿಲ್ಲಾ ಉಸ್ತುವಾರಿ ಮಂತ್ರಿಗಳು ಅಣೆಕಟ್ಟೆಗೆ ಭೇಟಿ ನೀಡಿದ್ದರು. ಇದು ಸೂಕ್ಷ್ಮ ವಿಚಾರ. ಹೀಗಾಗಿ ನಾನು ಅಂದೇ ಉತ್ತರ ನೀಡಲಿಲ್ಲ. ಅಣೆಕಟ್ಟೆಯ ವಿಚಾರ ಚರ್ಚೆ ಮಾಡಲು ತೆಲಂಗಾಣ ಹಾಗೂ ಆಂಧ್ರಪ್ರದೇಶ ಮುಖ್ಯಮಂತ್ರಿಗಳ ಸಭೆಗೆ ಸಮಯ ಕೇಳಿದ್ದೆ. ಈ ವಿಚಾರವನ್ನು ನಿಯಮ 69 ರ ಅಡಿಯಲ್ಲಿ ಚರ್ಚೆಗೆ ಸೇರಿಸಲಾಗಿದೆ. ಈ ವಿಚಾರವಾಗಿ ಅನೇಕರು ಚರ್ಚೆ ಮಾಡಲು ಸಿದ್ಧರಿದ್ದು, ಈ ಚರ್ಚೆ ವೇಳೆ ನಾನು ವಿವರವಾದ ಉತ್ತರ ನೀಡುತ್ತೇನೆ. ಈ ಉತ್ತರ ನಮ್ಮ ರಾಜ್ಯದ 4 ಜಿಲ್ಲೆಗಳು ಸೇರಿದಂತೆ ಆಂಧ್ರ ಪ್ರದೇಶ ಹಾಗೂ ತೆಲಂಗಾಣ ರಾಜ್ಯಗಳ ಮೇಲೆ ಪರಿಣಾಮ ಬೀರಲಿದೆ ಎಂದು ತಿಳಿಸಿದರು.

ಇದಕ್ಕೂ ಮೊದಲು ಮಾತನಾಡಿದ ಶಾಸಕ ವಿಜಯೇಂದ್ರ ಅವರು, ಕಳೆದ ಆಗಸ್ಟ್‌ನಲ್ಲಿ ಜಲಾಶಯದ 19ನೇ ಕ್ರಸ್ಟ್ ಗೇಟ್ ಮುರಿದುಬಿದ್ದಿತ್ತು. ಹೀಗಾಗಿ ಸಾವಿರಾರು ಕ್ಯುಸೆಕ್ ನೀರು ಹರಿದು ವ್ಯರ್ಥವಾಗಿದೆ. ಅದಕ್ಕೆ ಶಾಶ್ವತ ಪರಿಹಾರ ನೀಡಿದೆ ವಿಳಂಬ ಮಾಡಿದ್ದರಿಂದ ನೀರಿನ ಒತ್ತಡ ಇತರ ಗೇಟ್‌ಗಳ ಮೇಲೆ ಬಿದ್ದಿದೆ. ಇದರ ಪರಿಣಾಮವಾಗಿ ಎಲ್ಲ 33 ಕ್ರಸ್ಟ್ ಗೇಟನ್ನೂ ತಕ್ಷಣ ಬದಲಿಸಬೇಕಾದ ಪರಿಸ್ಥಿತಿ ಒದಗಿಬಂದಿದೆ. ಕೊಪ್ಪಳ, ರಾಯಚೂರು, ಬಳ್ಳಾರಿ ಮೊದಲಾದ ಜಿಲ್ಲೆಗಳ ರೈತರು ಪ್ರತಿವರ್ಷ 2 ಬೆಳೆ ಬೆಳೆಯುತ್ತಿದ್ದರು. ಆದರೆ, ರಾಜ್ಯ ಸರಕಾರ ಅಥವಾ ಸಂಬಂಧಿತ ಸಚಿವರು, ತುಂಗಭದ್ರಾ ಜಲಾಶಯ ನೀರಾವರಿ ಮಂಡಳಿಯಲ್ಲಿ ಚರ್ಚೆ ಮಾಡಿ, ಒತ್ತಡ ಹಾಕದ ಪರಿಣಾಮವಾಗಿ ಈ ಬಾರಿ ರೈತರು ಒಂದೇ ಬೆಳೆಗೆ ತೃಪ್ತಿ ಪಡುವ ಸಂದರ್ಭ ಬಂದಿದೆ ಎಂದು ಟೀಕಿಸಿದರು.

ಲೋಕಧ್ವನಿ ವರದಿ ಪ್ರಸ್ತಾಪ

ಲೋಕಧ್ವನಿ

ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ತಂಗಡಗಿ ಮಾಹಿತಿ ಇದೇ ವರ್ಷದಿಂದ ಡ್ಯಾಂ ಗೇಟ್ ಅಳವಡಿಕೆಗೆ ಚಿಂತನೆ

ತುಂಗಭದ್ರಾ ಡ್ಯಾಂನ 8 ಗೇಟ್ ಜಾಮ್!

ತುಂಗ ಭದ್ರ ಜಲಾಶಯದ 19ನೇ ಗೇಟ್ ಸೇರಿ ಒಟ್ಟು 8 ಕ್ರಸ್ಟ್ ಗೇಟ್ ನಿಷ್ಕ್ರಿಯಗೊಂಡಿದ್ದು ಮೇಲೆ ಎತ್ತಲು ಸಾಧ್ಯವಾಗುತ್ತಿಲ್ಲ.

ಕೊಪ್ಪಳ: ಕಳೆದ ವರ್ಷ ಕಿತ್ತು ಹೋಗಿದ್ದ ತುಂಗ ಭದ್ರ ಜಲಾಶಯದ 19ನೇ ಗೇಟ್ ಸೇರಿ ಒಟ್ಟು 8 ಕ್ರಸ್ಟ್ ಗೇಟ್ ನಿಷ್ಕ್ರಿಯಗೊಂಡಿದ್ದು, ಮೇಲೆ ಸಾಧ್ಯವಾಗುತ್ತಿಲ್ಲ. ಜೊತೆಗೆ 4ನೇ ಕ್ರಸ್ಟ್ ಗೇಟ್ ಕೇವಲ 2 ಫೀಟ್ ಮಾತ್ರ ಮೇಲೆ ಎತ್ತಲು ಸಾಧ್ಯವಾಗುತ್ತಿದೆ. ಇದರಿಂದ ಜಲಾಶಯದ ಒಟ್ಟು 8

ಇನ್ನು ಇದೇ ವಿಷಯವನ್ನು ವಿಧಾನಪರಿಷತ್‌ನ ಶೂನ್ಯವೇಳೆಯಲ್ಲಿ ಶಾಸಕಿ ಹೇಮಲತಾ ನಾಯಕ್ ಪ್ರಸ್ತಾಪಿಸಿದ್ದಾರೆ. ವಿಶ್ವವಾಣಿ ಸೋದರ ಪತ್ರಿಕೆ ಲೋಕಧ್ವನಿ ದಿನಪತ್ರಿಕೆಯಲ್ಲಿ ಪ್ರಕಟವಾದ ಸುದ್ದಿಯನ್ನು ಉಲ್ಲೇಖಿಸಿ ಮಾತನಾಡಿದ ಅವರು, ತುಂಗಾಭದ್ರ ಜಲಾಶಯದ ಸಾಮರ್ಥ್ಯ 105 ಟಿಎಂಸಿಯಿದ್ದು, ಕ್ರಸ್ಟ್ ಗೇಟ್‌ಗಳ ಸಮಸ್ಯೆಯಿಂದ ನೀರಿನ ಸಂಗ್ರಹ ಸಾಮ್ಯರ್ಥ 80 ಟಿಎಂಸಿಗೆ ಇಳಿಸಲಾಗಿದೆ. ತುಂಗಭದ್ರಾ ಜಲಾಶಯದ ಸುರಕ್ಷತೆ ಹಾಗೂ ರೈತರ ಹಿತದೃಷ್ಟಿಯಿಂದ ಎಲ್ಲಾ ಕ್ರಸ್ಟ್ ಗೇಟ್‌ಗಳನ್ನು ಸರಕಾರ ಸರಿಪಡಿಸಬೇಕು ಎಂದು ಆಗ್ರಹಿಸಿದರು. ಪ್ರಮುಖವಾಗಿ ಎಂಟು ಕ್ರಸ್ಟ್ ಗೇಟ್ ಜಾಮ್ ಆಗಿರುವುದು ಹಾಗೂ ಒಂದು ಗೇಟ್‌ಗಳನ್ನು ಪೂರ್ಣ ಪ್ರಮಾಣದಲ್ಲಿ ತೆರೆಯಲು ಸಾಧ್ಯವಾಗುವುದಿಲ್ಲ ಎನ್ನುವ ವರದಿಯಿದೆ. ಆದ್ದರಿಂದ ಇದನ್ನು ಸರಿಪಡಿಸಬೇಕು ಎಂದು ಆಗ್ರಹಿಸಿದರು.

ಸದನದಲ್ಲಿ ಸದಸ್ಯರೆಲ್ಲರೂ ಎದ್ದು ನಿಂತು ಅಗಲಿದ ಸಂತರಿಗೆ ಶ್ರದ್ಧಾಂಜಲಿ

ಅಪ್ಪ, ಚಂದ್ರಶೇಖರ್ ಸ್ವಾಮೀಜಿಗೆ ಸಂತಾಪ

ವಿಶ್ವವಾಣಿ ಸುದ್ದಿಮನೆ

ವಿಧಾನಸಭೆ: ಕಳೆದ ವಾರ ಮೃತಪಟ್ಟ ಜ್ಞಾನದಾಸೋಹಿ ಡಾ.ಶರಣಬಸವಪ್ಪ ಅಪ್ಪ ಹಾಗೂ ವಿಶ್ವ ಒಕ್ಕಲಿಗರ ಸಂಸ್ಥಾನ ಮಠದ ಶ್ರೀ ಕುಮಾರ ಚಂದ್ರಶೇಖರನಾಥ ಸ್ವಾಮಿ ಅವರಿಗೆ ವಿಧಾನಸಭೆಯಲ್ಲಿ ಸಂತಾಪ ಸಲ್ಲಿಸಲಾಯಿತು.

ವಿಧಾನಸಭೆಯ ಕಲಾಪ ಆರಂಭವಾಗುತ್ತಿದ್ದಂತೆ ಸಭಾಧ್ಯಕ್ಷ ಯು.ಟಿ.ಖಾದರ್, ಈ ಇಬ್ಬರು ಮಹಾನ್ ಸಂತರ ಅಗಲಿಕೆಯನ್ನು ಸದನಕ್ಕೆ ವಿಷಾದದಿಂದ ತಿಳಿಸಿದರು. ಶರಣ ಬಸವೇಶ್ವರ ದೇವಸ್ಥಾನದ ದಾಸೋಹ ಸಂಸ್ಥಾನದ 8ನೇ ಪೀಠಾಧಿಪತಿಯಾಗಿದ್ದ ಶ್ರೀಗಳು ಆಧ್ಯಾತ್ಮ ಸೇರಿದಂತೆ ಹಲವು ವಿಷಯಗಳಲ್ಲಿ ಅಪಾರ ಜ್ಞಾನ ಹೊಂದಿದ್ದಾರೆ. ಧಾರ್ಮಿಕ ಕ್ಷೇತ್ರದ ಜತೆಗೆ ಶರಣ ಬಸವೇಶ್ವರ ವಿಶ್ವವಿದ್ಯಾಲಯ, ಶರಣ ಬಸವೇಶ್ವರ ರೆಸಿಡೆನ್ಷಿಯಲ್ ಪಬ್ಲಿಕ್ ಸ್ಕೂಲ್ ಸೇರಿದಂತೆ 60ಕ್ಕೂ ಹೆಚ್ಚು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುವ ಮೂಲಕ ಕಲಬುರಗಿಯಲ್ಲಿ ಶೈಕ್ಷಣಿಕ ಕ್ರಾಂತಿ ಮಾಡಿದರು ಎಂದು ನೆನಪಿಸಿಕೊಂಡರು.

ಇನ್ನು ಶ್ರೀ ಕುಮಾರ ಚಂದ್ರಶೇಖರನಾಥ ಸ್ವಾಮೀಜಿ 1945, ಫೆ.10ರಂದು ಮಂಡ್ಯ ಜಿಲ್ಲೆಯ ಕೆ.ಆರ್. ಪೇಟೆಯ ಹಳ್ಳಿಯೊಂದರಲ್ಲಿ ಜನಿಸಿದರು. ಬಿಕಾಂ ಪದವೀಧರರಾಗಿದ್ದ ಶ್ರೀಗಳು ಬೆಂಗಳೂರಿನ ತಿರುಚಿ ಕೈಲಾಶ್ ಆಶ್ರಮದಲ್ಲಿ ಸಂಸ್ಕೃತ ವೇದ ಅಧ್ಯಯನ ಮಾಡಿದ್ದರು. 1968ರಲ್ಲಿ ಆದಿಚುಂಚನಗಿರಿ ಮಠದಲ್ಲಿ ಸನ್ಯಾಸ ದೀಕ್ಷೆ ಪಡೆದರು. 1983ರಲ್ಲಿ ಕೆಂಗೇರಿ ಬಳಿಯ 10 ಎಕರೆ ಜಮೀನಿನಲ್ಲಿ ಶ್ರೀ ಗುರು ಜ್ಞಾನಕೇಂದ್ರ ಟ್ರಸ್ಟ್ ಹೆಸರಿನಲ್ಲಿ ಶಾಲೆ, ಕಾಲೇಜು ಆರಂಭಿಸಿದರು. ನಂತರ 2002ರಲ್ಲಿ ಅದು ವಿಶ್ವ ಒಕ್ಕಲಿಗರ ಸಂಸ್ಥಾನ ಮಠ ಎಂದು ನಾಮಕರಣಗೊಂಡಿತು ಎಂದು ಸಭಾಧ್ಯಕ್ಷರು ವಿವರಿಸಿದರು. ಜವಳಿ ಸಚಿವ ಶಿವಾನಂದ ಪಾಟೀಲ್ ಮಾತನಾಡಿ, ಡಾ.ಶರಣಬಸವಪ್ಪ ಅಪ್ಪ ಅವರು ಹೈದರಾಬಾದ್ ಕರ್ನಾಟಕ ಭಾಗದಲ್ಲಿ ಶಿಕ್ಷಣ ಕ್ರಾಂತಿ ಮಾಡಿದ್ದಾರೆ. ಹೆಣ್ಣು ಮಕ್ಕಳ ಶಿಕ್ಷಣ ನೀಡಿ, ಗೋಶಾಲೆ ಸ್ಥಾಪಿಸಿದ್ದಾರೆ. ವಿದ್ವಾಂಸರಾಗಿದ್ದ ಅವರು ಬಹುಮುಖ ವ್ಯಕ್ತಿತ್ವ ಉಳ್ಳವರು, ಅಪ್ಪ ಅವರು ಹಾಗೂ ಶ್ರೀ ಚಂದ್ರಶೇಖರನಾಥ ಸ್ವಾಮೀಜಿಯವರನ್ನು ಕಳೆದುಕೊಂಡು ಕರ್ನಾಟಕ ಬಡವಾಗಿದೆ ಎಂದರು.

ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಮಾತನಾಡಿ, ಕಲ್ಯಾಣ ಕರ್ನಾಟಕ ಭಾಗದಲ್ಲಿ ಅಪ್ಪ ಅವರು ವಿದ್ಯಾ ಕ್ರಾಂತಿ ಮಾಡಿದ್ದರು. ಕುಮಾರ ಚಂದ್ರಶೇಖರನಾಥ ಸ್ವಾಮೀಜಿ ಅವರು ಧರ್ಮದ ಬಗ್ಗೆ ಹೆಚ್ಚು ಜಾಗೃತಿ ಮೂಡಿಸಿದ್ದರು. ಇಬ್ಬರು ಸಂತರು ಸಮಾಜಕ್ಕೆ ಒಳ್ಳೆಯ ಕೆಲಸ ಮಾಡಿದ್ದರು. ಅವರ ಅಗಲಿಕೆ ತುಂಬಲಾರದ ನಷ್ಟವಾಗಿದೆ ಎಂದರು.

ಕೃಷಿ ಸಚಿವ ಚಲುವರಾಯಸ್ವಾಮಿ, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಪ್ರತಿಪಕ್ಷದ ಉಪನಾಯಕ ಅರ ವಿಂದ ಬೆಲ್ಲದ್, ಶಾಸಕ ಬಸವರಾಜ ಮತ್ತಿ ಮೋಡ್, ಡಾ. ಅವಿನಾಶ್ ಜಾದವ್, ಜಿ.ಟಿ.ದೇವೇಗೌಡ ಸಂತಾಪ ಸೂಚಿಸಿದರು. ಬಳಿಕ ಸದನದಲ್ಲಿ ಸದಸ್ಯ ರೆಲ್ಲರೂ ಎದ್ದು ನಿಂತು ಅಗಲಿತ ಸಂತರಿಗೆ ಮೌನ ಆಚರಿಸುವ ಮೂಲಕ ಶ್ರದ್ಧಾಂಜಲಿ ಅರ್ಪಿಸಿದರು.

ಶರಣಬಸವಪ್ಪ ಅಪ್ಪ ಹಾಗೂ ಶ್ರೀ ಕುಮಾರ ಚಂದ್ರಶೇಖರನಾಥ ಸ್ವಾಮೀಜಿಗಳು ಶಿಕ್ಷಣ ಹಾಗೂ ಧಾರ್ಮಿಕ ಕ್ಷೇತ್ರದಲ್ಲಿ ಅಪಾರ ಕೊಡುಗೆ ನೀಡಿದ್ದಾರೆ. ಅವರ ಸಂತರಿಬ್ಬರ ಅಗಲಿಕೆ ನಾಡಿಗೆ ತುಂಬಲಾರದ ನಷ್ಟ.

- ಬಿ.ವೈ. ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ಟೆಲಿ ಇಸಿಜಿ ವ್ಯವಸ್ಥೆ ರಾಜ್ಯಾದ್ಯಂತ ವಿಸ್ತರಣೆ

ವಿಧಾನ ಪರಿಷತ್: ಹೃದಯಾಘಾತ ಇಲ್ಲವೇ ಬೇರೆ ಅವಘಡಗಳು ಸಂಭವಿಸಿದಾಗ ತಕ್ಷಣವೇ ರೋಗಿಗೆ ಚಿಕಿತ್ಸೆ ಒದಗಿಸಿ ಜೀವ ಉಳಿಸಲು ಅನುಕೂಲವಾಗುವಂತೆ ರಾಜ್ಯಾದ್ಯಂತ ಟೆಲಿ ಇಸಿಜಿ ವ್ಯವಸ್ಥೆ ರಾಜ್ಯಾದ್ಯಂತ ವಿಸ್ತರಣೆ ಮಾಡುತ್ತೇವೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ವಿಧಾನಪರಿಷತ್‌ನಲ್ಲಿ ಸದಸ್ಯ ಡಾ. ಧನಂಜಯ ಸರ್ಜಿ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಟೆಲಿ ಇಸಿಜಿ ವ್ಯವಸ್ಥೆ ಕೆಲವೇ ಆಸ್ಪತ್ರೆಗಳಲ್ಲಿ ಮಾತ್ರ ಇವೆ.45 ವರ್ಷದೊಳಗಿನವರು ಹಠಾತ್ ಹೃದಾಯಾಘಾತದಿಂದ ಮೃತಪಡುತ್ತಿರುವುದು ಸರಕಾರದ ಗಮನಕ್ಕಿದೆ. ಕಳೆದ ಮೂರು ವರ್ಷಗಳಲ್ಲಿ 1004 ಜನ ಹೃದಯಾಘಾತದಿಂದ ಮೃತಪಟ್ಟಿದ್ದಾರೆ. ಮೂರು ವರ್ಷದಲ್ಲಿ ಜಯದೇವದಲ್ಲಿ 61299 ಜನ ದಾಖಲಾಗಿದ್ದು, ಇವರಲ್ಲಿ 45 ವರ್ಷದೊಳಗಿನ 472 ಜನ ಹಠಾತ್ ಹೃದಯಾಘಾತಕ್ಕೆ ಒಳಗಾಗಿದ್ದಾರೆ ಎಂದು ವಿವರಿಸಿದರು. ಕಾರ್ಡಿಯಾಕ್ ಬೈಪಾಸ್ ಸರ್ಜರಿಗೆ ಮಧ್ಯ ಕರ್ನಾಟಕ ಭಾಗದಲ್ಲಿ ವ್ಯವಸ್ಥೆ ಮಾಡಬೇಕು. ಆರೋಗ್ಯದ ಬಗ್ಗೆಯೂ ಜನತೆಗೆ ಮಾಹಿತಿ ನೀಡಬೇಕು. ಎಲ್ಲ ಜಿಲ್ಲೆಗಳಲ್ಲಿ ಕ್ಯಾತಲ್ಯಾಬ್ ವ್ಯವಸ್ಥೆ ಮಾಡಬೇಕು ಎಂದು ಧನಂಜಯ ಸರ್ಜಿ ಮನವಿ ಮಾಡಿದರು.

ಇದಕ್ಕೆ ಉತ್ತರಿಸಿದ ಸಚಿವರು, ಅತಿಯಾದ ಮಾಲಿನ್ಯದಿಂದ ಹೃದಯಾಘಾತ ಆಗುತ್ತಿದೆ. ಮಾನಸಿಕ ಒತ್ತಡ, ಬೊಜ್ಜುತನವೂ ಕಾರಣ. ಬಿಪಿ, ಶುಗರ್ ಇರುವವರಿಗೆ ಶಾಶ್ವತವಾಗಿ ಔಷಧ ನೀಡಬೇಕು. ಇದನ್ನ ನಿಯಂತ್ರಿಸಿದರೆ ಉಳಿದ ಖಾಯಿಲೆ ನಿಯಂತ್ರಣವಾಗಲಿದೆ ಎಂದರು. 86 ಆಸ್ಪತ್ರೆಗಳಲ್ಲಿ ಕ್ಯಾತ್‌ಲ್ಯಾಬ್ ಇದೆ. ಟೆಲಿ ಇಸಿಜಿ ಇಡಿ ರಾಜ್ಯಕ್ಕೆ ವಿಸ್ತರಣೆ ಮಾಡುತ್ತಿದ್ದೇವೆ. ಟೆನೆಕ್ಟೆಪ್ಲೆಸ್ ಇಂಜೆಕ್ಷನ್ ಕೂಡ ಟೆಲಿ ಇಸಿಜಿ ಇರುವ ಕಡೆ ಇರಲಿದೆ (ಉಚಿತ) ಏಡ್(ಎಐಡಿಡಿ) ಡಿವೈಸ್ ಕೂಡ ಎಲ್ಲ ಆಸ್ಪತ್ರೆಗೆ ನೀಡುತ್ತಿದ್ದೇವೆ ಎಂದು ಸಚಿವರು ಮಾಹಿತಿ ನೀಡಿದರು.

ವಿಶ್ವವಾಣಿ

ಸಂಪಾದಕೀಯ

ಕಾಣದ ಕೈಗಳನ್ನು ಪತ್ತೆ ಹಚ್ಚಿ

ಧರ್ಮಸ್ಥಳದ ಸುತ್ತಮುತ್ತ ಅತ್ಯಾಚಾರ, ಕೊಲೆಯಾದವರ ಶವಗಳನ್ನು ಸಾಮೂಹಿಕವಾಗಿ ಹೂತಿದ್ದೇನೆ ಎಂದು ಅನಾಮಿಕ ವ್ಯಕ್ತಿಯೊಬ್ಬ ನೀಡಿದ್ದ ದೂರಿನ ಆಧಾರದ ಮೇಲೆ ರಾಜ್ಯ ಸರಕಾರ ಎಸ್‌ಐಟಿ ರಚಿಸಿ, 17 ಗುಂಡಿಗಳಲ್ಲಿ ಉತ್ಖನನ ನಡೆಸಿದೆ. ಆದರೆ ಆ ಜಾಗಗಳಲ್ಲಿ ಯಾವುದೇ ಶವಗಳು ಪತ್ತೆಯಾಗಿಲ್ಲ. ಇದೀಗ ಅನಾಮಿಕ ವ್ಯಕ್ತಿಯು ತಾನೇ ಸುಳ್ಳು ಹೇಳಿರುವುದಾಗಿ ತಪ್ಪೊಪ್ಪಿಕೊಂಡಿದ್ದಾನೆ ಎನ್ನಲಾಗಿದೆ. ಧರ್ಮಸ್ಥಳ ದೇವಸ್ಥಾನವನ್ನು ಜೈನ ಸಮುದಾಯಕ್ಕೆ ಸೇರಿದ ಕುಟುಂಬವೊಂದು ನಿರ್ವಹಿಸುತ್ತಿದೆ ಎನ್ನುವುದು ಕೂಡ ಕೆಲವರಿಗೆ ಅಪಥ್ಯವಾಗಿದೆ. ಆದರೆ, ಇದಕ್ಕೆ ಸುಪ್ರೀಂಕೋರ್ಟ್ 1976ರಲ್ಲೇ ಸ್ಪಷ್ಟವಾಗಿ ಉತ್ತರ ನೀಡಿದೆ. ದೇವಸ್ಥಾನವು ಹೆಗ್ಗಡೆ ಕುಟುಂಬದ್ದು, ಅದರ ಆಡಳಿತ ನಿರ್ವಹಣೆಯು ವಂಶಪಾರಂಪರ್ಯವಾಗಿ ಧರ್ಮಾಧಿಕಾರಿಯ ಕೈಯಲ್ಲಿ ಇರುತ್ತದೆ ಎಂದು ಕೋರ್ಟ್ ಹೇಳಿದೆ. ಸುಪ್ರೀಂಕೋರ್ಟ್‌ನ ಆದೇಶವನ್ನು ಅರಗಿಸಿಕೊಳ್ಳಲಾಗದ ಗುಂಪೊಂದು ಹೆಗ್ಗಡೆ ಕುಟುಂಬಕ್ಕೆ ಮಸಿ ಬಳಿಯಲು ಪ್ರಯತ್ನಿಸುತ್ತಿದೆ. ಅದರ ಮುಂದುವರಿದ ಭಾಗವೇ ಈ ಅನಾಮಿಕನ ಹೇಳಿಕೆ ಎಂಬುದು ಕೂಡ ಸಾರ್ವಜನಿಕ ವಲಯದಲ್ಲಿ ಚರ್ಚೆಯಲ್ಲಿದೆ. ಇಷ್ಟು ದಿನ ರಾಜ್ಯ ಸರಕಾರ ಮತ್ತು ಪೊಲೀಸ್ ವ್ಯವಸ್ಥೆಯೊಂದಿಗೆ 'ಆಟ'ವಾಡಿದ ವ್ಯಕ್ತಿಯು ಇದೀಗ ಇದ್ದಕ್ಕಿದ್ದಂತೆ ಉಲ್ಟಾ ಹೊಡೆದಿರುವುದನ್ನು ನೋಡಿದರೆ ಈತ ಒಬ್ಬಂಟಿಯಲ್ಲ, ಈತನ ಹಿಂದೆ ದೊಡ್ಡ ಗುಂಪೇ ಇದೆ ಎಂಬುದು ಸ್ಪಷ್ಟ. ಹಾಗಾದರೆ ಆ ಗುಂಪು ಯಾವ ಕಾರಣಕ್ಕೆ ಇಂತಹ ಆರೋಪ ಮಾಡಿತು? ಇದರ ಹಿಂದೆ ಯಾರ್‍ಯಾರಿದ್ದಾರೆ? ಎಂಬುದನ್ನು ಪತ್ತೆ ಹಚ್ಚಬೇಕಿದೆ. ಅಲ್ಲದೆ ಸಾಕ್ಷ್ಯ ಎಂಬುದಾಗಿ ಹೇಳಿಕೊಂಡು 8,000ಕ್ಕೂ ಹೆಚ್ಚಿನ ವೆಬ್‌ಕೊಂಡಿಗಳನ್ನು ವೆಬ್‌ಸೈಟ್‌ಗಳಲ್ಲಿ ಪ್ರಕಟಿಸಿರುವ ವಿವಿಧ ಯೂಟ್ಯೂಬರ್‌ಗಳು ಹಾಗೂ ಸ್ಥಳೀಯ ಸಾಮಾಜಿಕ ಕಾರ್ಯಕರ್ತರನ್ನು ಕೂಡ ತನಿಖೆಗೊಳಪಡಿಸಬೇಕಿದೆ. ಇಲ್ಲಿ ನಡೆದಿರುವುದು ದುರುದ್ದೇಶದ, ಕೆಟ್ಟ ಹೆಸರು ತರುವ ಅಭಿಯಾನವೋ ಅಥವಾ ಸತ್ಯವನ್ನು ಮುಚ್ಚಿಹಾಕುವ ಪ್ರಯತ್ನವೋ ಎಂಬುದು ತನಿಖೆಯಿಂದ ಬಯಲಾಗಬೇಕು. ಎಸ್‌ಐಟಿಯು ಅಗತ್ಯವಿರುವ ಎಲ್ಲ ಆಯಾಮಗಳಿಂದ ತನಿಖೆ ನಡೆಸಬೇಕು. ಸತ್ಯವನ್ನು ಅನುಮಾನಗಳಿಗೆ ಎಡೆಯಿಲ್ಲದಂತೆ ಸಾಬೀತು ಮಾಡುವ ಗುರಿಯನ್ನು ಎಸ್‌ಐಟಿ ಇರಿಸಿಕೊಳ್ಳಬೇಕು.

ಸೊಂಪಾದಕೀಯ

ನಮ್ಗೆ ಚಾಟ್ ಜಿಪಿಟಿ ಗೊತ್ತಿಲ್ಲ

ರಾಜ್ಯದಲ್ಲಿ ಈಗ ದರ್ಶನ್ ಪ್ರಕರಣ, ಧರ್ಮಸ್ಥಳದ ವಿಚಾರ ಸೇರಿದಂತೆ ಪ್ರತಿನಿತ್ಯ ಪೇಪರ್ ತೆರೆದರೆ ಹಲವಾರು ಕ್ರೈಂ ವರದಿಗಳು ಕಾಣಸಿಗುತ್ತವೆ. ಅಷ್ಟೇ ಅಲ್ಲದೇ ಇತ್ಯರ್ಥ ಆಗದೇ ಉಳಿದ ಅನೇಕ ಪ್ರಕರಣಗಳಲ್ಲಿ ಇನ್ನೂ ಜನ ನ್ಯಾಯ ಸಿಗದೇ ಪರದಾಡುತ್ತಿದ್ದಾರೆ. ಆದರೂ ನಮ್ಮ ಗೃಹಸಚಿವ ಪರಮೇಶ್ವರ್ ದೇಶದಲ್ಲಿ ನಾನೇ ನಂಬರ್ ಒನ್ ಹೋಮ್ ಮಿನಿಸ್ಟರ್ ಅಂತ ಎದೆ ತಟ್ಟಿಕೊಂಡು ಹೇಳಿಕೊಂಡು ಓಡಾಡುತ್ತಿದ್ದಾರೆ. ಮಾಧ್ಯಮದವರು ಇತ್ತೀಚೆಗೆ ನೀವು ಗೊತ್ತಿಲ್ಲ ಮಿನಿಸ್ಟರ್' ಅಂತಲೇ ಫೇಮಸ್ ಆಗ್ತಾ ಇದ್ದೀರಲ್ಲ ಅಂದ್ರೆ, ಚಾಟ್ ಜಿಪಿಟಿ ತೆರೆದು ನೋಡಿ, ನಾನೇ ದೇಶದ ನಂಬರ್ ಒನ್ ಹೋಮ್ ಮಿನಿಸ್ಟರ್ ಎಂದು ಕೌಂಟರ್ ಕೊಟ್ಟಿದ್ದಾರೆ ಪರಮ್. ಇದು ನಮ್ಮ ಗೃಹಸಚಿವರ ಇಂಟೆಲಿಜೆನ್ಸ್ ಅಂತ ಹೇಳೋದು ಕಷ್ಟ. ಯಾಕಂದ್ರೆ ಅವರು ಉದಾಹರಣೆ ಕೊಟ್ಟಿರೋದು ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ನದ್ದು. ಇನ್ನು ಧರ್ಮಸ್ಥಳದ ಕೇಸುಗಳ ವಿಚಾರದಲ್ಲಿ ಈಗ ಪರಮ್ ಅವರು ದೂರುದಾರನ ವಿರುದ್ಧವೇ ವಿಚಾರಣೆ ಆರಂಭಿಸುತ್ತಾರಂತೆ. ಅಲ್ಲದೆ ಸೌಜನ್ಯ ಪ್ರಕರಣದಲ್ಲಿ ನ್ಯಾಯ ಕೊಡಿಸಲು ಹೋರಾಡುತ್ತಿರೋ ತಿಮ್ಮರೋಡಿ ಅವರನ್ನು ಸಿಎಂ ಬಗ್ಗೆ ಅವರು ಕೊಟ್ಟ ಹೇಳಿಕೆಗಾಗಿ ಬಂಧಿಸುತ್ತಾರಂತೆ. ನಂಬರ್ ಒನ್ ಹೋಮ್ ಮಿನಿಸ್ಟರ್ ಆದ ಮೇಲೆ ಇದನ್ನು ಅವರು ಮಾಡಲೇಬೇಕಿತ್ತು. ಆದರೆ ಮಹೇಶ್ ತಿಮ್ಮರೋಡಿ ಸಿಎಂ ಕೊಲೆಗಡುಕ ಅನ್ನೋ ಹೇಳಿಕೆ ಕೊಟ್ಟ ಏಕೀ ಮಿನಿಟ್ ನಲ್ಲೇ ಅವರನ್ನು ಬಂಧಿಸಬೇಕಿತ್ತು. ಆದರೆ 48 ಗಂಟೆಗಳ ನಂತರ ಈ ಬಗ್ಗೆ ಹೇಳಿಕೆ ಕೊಟ್ಟಿದ್ದಾರೆ ಪರಂ. ಅಂದರೆ, ಅದರ ಬಗ್ಗೆ ಗೊತ್ತಿಲ್ಲದ ನಮ್ಮ ಗೃಹಸಚಿವರು ಈಗ ಎಚ್ಚೆತ್ತುಕೊಂಡು ಆಕ್ಷನ್ ಗೆ ಮುಂದಾಗಿದ್ದಾರೆ. ನಂಬರ್ ಒನ್ ಅಂತ ತಮ್ಮನ್ನು ತಾವು ಕರೆದುಕೊಂಡಿರುವ ಅವರು ಧರ್ಮಸ್ಥಳದ ಪ್ರಕರಣಗಳನ್ನು ಹೇಗೆ ನಿಭಾಯಿಸುತ್ತಿದ್ದಾರೆ ಅನ್ನೋದು ಎಲ್ಲರಿಗೂ ಕಾಣಿಸುತ್ತಿದೆ. ಆದರೆ ಇದಕ್ಕೆ ಪರಂ ಅವರು ಹೇಗೆ ತಾರ್ಕಿಕ ಅಂತ್ಯ ಕಾಣಿಸುತ್ತಾರೆ ಅನ್ನೋದು ಮುಂದಿನ ಕುತೂಹಲ. ಅದೆಲ್ಲಾ ಏನೇ ಇರಲಿ, ಅವರು ಚಾಟ್ ಜಿಪಿಟಿಯಲ್ಲಿ ನಾನೇ ನಂಬರ್ 1 ಹೋಮ್ ಮಿನಿಸ್ಟರ್ ಅಂತ ಹೇಳಿದ್ದನ್ನು ಕೇಳಿದವರು ಮಾತ್ರ, ಚಾಟ್ ಜಿಪಿಟಿ ಬಗ್ಗೆ ನಮಗೆ ಗೊತ್ತಿಲ್ಲ , ಅದರ ಬಗ್ಗೆ ಮಾಹಿತಿ ತರಿಸಿಕೊಳ್ತೀವಿ ಅಂತ ಹೇಳಿ ಅಲ್ಲಿಂದ ಜಾರಿಕೊಂಡಿರೋದಂತೂ ಸತ್ಯ.

ಸಂಪಾದಕರ ಸದ್ಯಶೋಧನೆ

ವಿಮಾನದಲ್ಲಿ ಬಿಸಿ ಆಹಾರ ಹೇಗೆ?

ವಿಮಾನದಲ್ಲಿ ಪ್ರಯಾಣಿಕರಿಗೆ ನೀಡುವ ಆಹಾರ ಯಾವತ್ತೂ ಬಿಸಿಬಿಸಿ ಆಗಿರುತ್ತದೆ. ಹಾಗೆ ಕಾಫಿ, ಚಹಾವೂ. ವಿಮಾನದಲ್ಲಿ ಒಲೆ ಉರಿಸುವುದಿಲ್ಲ ಮತ್ತು ಗ್ಯಾಸ್ ಸಿಲಿಂಡರ್ ಇಡುವುದಿಲ್ಲ. ಹಾಗಾದರೆ ವಿಮಾನದಲ್ಲಿ ಆಹಾರವನ್ನು ಹೇಗೆ ಬಿಸಿ ಮಾಡುತ್ತಾರೆ? ವಿಮಾನದಲ್ಲಿ ಬಿಸಿ ಮಾಡುವ ವಿಧಾನವು ಸುರಕ್ಷತೆ, ಸ್ಥಳದ ಕೊರತೆ ಮತ್ತು ದಕ್ಷತೆಯನ್ನು ಗಮನದಲ್ಲಿಟ್ಟುಕೊಂಡು ವಿನ್ಯಾಸ ಮಾಡಿರುವುದು ಗಮನಾರ್ಹ. ವಿಮಾನದಲ್ಲಿ ಆಹಾರವನ್ನು ತಯಾರಿಸುವುದಿಲ್ಲ. ಬದಲಿಗೆ, ನೆಲದ ಮೇಲೆ ತಯಾರಿಸಿ ವಿಮಾನದಲ್ಲಿ ಮರುಬಿಸಿ ಮಾಡಲಾಗುತ್ತದೆ. ಆಹಾರವನ್ನು ವಿಮಾನಯಾನ ಕಂಪನಿಗಳು ಅಥವಾ ಅವರೊಂದಿಗೆ ಒಪ್ಪಂದ ಮಾಡಿಕೊಂಡ ಕ್ಯಾಟರಿಂಗ್ ಕಂಪನಿಗಳು ನೆಲದಲ್ಲಿ ತಯಾರಿಸುತ್ತವೆ. ಮಾಂಸಾಹಾರಿ ಭಕ್ಷ್ಯಗಳನ್ನು ಭಾಗಶಃ ಪಾಕ ಮಾಡಲಾಗುತ್ತದೆ: ಉದಾಹರಣೆಗೆ, ಚಿಕನ್ ಅನ್ನು ಶೇ.60 ಮತ್ತು ಬೀಫ್ ಅನ್ನು ಶೇ.30 ಬೇಯಿಸಿ, ನಂತರ ಬ್ಲಾಸ್ಟ್ ಚಿಲ್ಲರ್‌ಗಳಲ್ಲಿ ತ್ವರಿತವಾಗಿ ತಂಪುಗೊಳಿಸಲಾಗುತ್ತದೆ. ಇದು ಆಹಾರವನ್ನು ಹೆಪ್ಪುಗೊಳಿಸದೇ ಸುರಕ್ಷಿತ ತಾಪಮಾನಕ್ಕೆ ತಂದು ನಿಲ್ಲಿಸುತ್ತದೆ. ನಂತರ ಆಹಾರವನ್ನು ಪ್ಲಾಸ್ಟಿಕ್ ಅಥವಾ ಫಾಯಿಲ್ ಕಂಟೇನರ್‌ಗಳಲ್ಲಿ ಪ್ಯಾಕ್ ಮಾಡಲಾಗುತ್ತದೆ. ತಯಾರಿಸಿದ ಆಹಾರವನ್ನು ಚಿಲ್ಲರ್‌ಗಳಲ್ಲಿ ಸಂಗ್ರಹಿಸಿ ವಿಮಾನ ನಿಲ್ದಾಣಕ್ಕೆ ಸಾಗಿಸಲಾಗುತ್ತದೆ. ವಿಮಾನದ ಗ್ಯಾಲಿ (ಕಿಚನ್ ಏರಿಯಾ)ಯಲ್ಲಿ ವಿಶೇಷ ರೆಫ್ರಿಜರೇಟರ್‌ಗಳಲ್ಲಿ ಇರಿಸಲಾಗುತ್ತದೆ. ಇದು ಆಹಾರವನ್ನು ಸುರಕ್ಷಿತವಾಗಿ ಇಟ್ಟುಕೊಳ್ಳುತ್ತದೆ ಮತ್ತು ಬ್ಯಾಕ್ಟೀರಿಯಾ ಬೆಳವಣಿಗೆಯನ್ನು ತಡೆಯುತ್ತದೆ. ವಿಮಾನದಲ್ಲಿ ಬಳಸುವ ಎಲ್ಲ ಉಪಕರಣಗಳಂತೆ, ಗ್ಯಾಲಿ ಓವನ್ಗಳು ಕೂಡ ಕಠಿಣ ಸುರಕ್ಷತಾ ಪರೀಕ್ಷೆಗಳಿಗೆ ಒಳಪಟ್ಟಿವೆ. ವಿದ್ಯುತ್ ಶಾರ್ಟ್ ಸರ್ಕ್ಯೂಟ್ ಅಥವಾ ಇತರ ಅಪಾಯಗಳನ್ನು ತಪ್ಪಿಸಲು ವಿಶೇಷವಾಗಿ ವಿನ್ಯಾಸಗೊಳಿಸಲಾಗಿರುತ್ತದೆ. ವಿಮಾನದಲ್ಲಿ ಆಹಾರವನ್ನು ಬಿಸಿ ಮಾಡಲು ಗ್ಯಾಲಿಯಲ್ಲಿ ವಿಶೇಷ ಓವನ್‌ಗಳನ್ನು ಬಳಸಲಾಗುತ್ತದೆ. ಮುಖ್ಯವಾಗಿ ಕನ್ವೆಕ್ಷನ್ ಓವನ್‌ಗಳು (convection ovens) ಫ್ಯಾನ್ ಬಳಸಿ ಬಿಸಿ ಗಾಳಿಯನ್ನು ಆಹಾರದ ಮೇಲೆ ಬೀಸುತ್ತವೆ. ಇದರಿಂದ ಕಡಿಮೆ ತಾಪಮಾನದಲ್ಲಿ ತ್ವರಿತವಾಗಿ ಬಿಸಿ ಮಾಡಬಹುದು. ಕೆಲವು ವಿಮಾನಗಳಲ್ಲಿ ಸ್ಟೀಮ್ ಓವನ್‌ಗಳು (steam ovens) ಕೂಡ ಇದ್ದು, ಆವಿಯನ್ನು ಬಳಸಿ ಆಹಾರವನ್ನು ತೇವಗೊಳಿಸಿ ಬಿಸಿ ಮಾಡುತ್ತವೆ. ಮೈಕ್ರೋವೇವ್‌ಗಳನ್ನು ಸಾಮಾನ್ಯವಾಗಿ ಬಳಸುವುದಿಲ್ಲ (ಆರಂಭಿಕ 747 ವಿಮಾನಗಳಲ್ಲಿ ಮಾತ್ರ ಈ ಸೌಲಭ್ಯ ಇದ್ದವು). ಆಹಾರ ಟ್ರೇಗಳನ್ನು ಓವನ್‌ಗಳಲ್ಲಿ ಇರಿಸಿ ಸುಮಾರು 20 ನಿಮಿಷಗಳ ಕಾಲ ಬಿಸಿ ಮಾಡಲಾಗುತ್ತದೆ. ಇದನ್ನು ಬ್ಯಾಚ್‌ಗಳಲ್ಲಿ ಮಾಡಿ, ಟ್ರಾಲಿಗಳ ಮೂಲಕ ಪ್ರಯಾಣಿಕರಿಗೆ ವಿತರಿಸಲಾಗುತ್ತದೆ. ಬಿಸಿನೆಸ್ ಅಥವಾ ಫಸ್ಟ್ ಕ್ಲಾಸ್‌ಗಳಲ್ಲಿ ಆನ್‌ಬೋರ್ಡ್ ಶೆಫ್‌ಗಳು (ಪ್ರಶಿಕ್ಷಿತ ಫ್ಲೈಟ್ ಅಟೆಂಡೆಂಟ್‌ಗಳು) ಇದ್ದು, ಸಲಾಡ್ ಮಿಶ್ರಣ, ಸಾಸ್ ಹಾಕುವುದು ಅಥವಾ ಸೊಪ್ಪು ಬೇಯಿಸುವುದು ಮುಂತಾದ ಫಿನಿಶಿಂಗ್ ಟಚ್‌ಗಳನ್ನು ಮಾಡುತ್ತಾರೆ. ಕೆಲವು ಏರ್‌ಲೈನ್‌ಗಳು (ಉದಾ: ಎಮಿರೇಟ್ಸ್) ಪ್ರೀಮಿಯಂ ಪ್ರಯಾಣಿಕರಿಗೆ ಆನ್‌ಬೋರ್ಡ್‌ನಲ್ಲಿ ಕೆಲವು ಭಕ್ಷ್ಯಗಳನ್ನು ತಯಾರಿಸುತ್ತವೆ. ಎತ್ತರದಲ್ಲಿ ವಿಮಾನದ ಒತ್ತಡ ಮತ್ತು ಕಡಿಮೆ ಆರ್ದ್ರತೆಯಿಂದಾಗಿ ರುಚಿ ಬದಲಾಗುತ್ತದೆ – ಉಪ್ಪು ಮತ್ತು ಸಿಹಿಯನ್ನು ಕಡಿಮೆ ಅನುಭವಿಸುತ್ತೇವೆ, ಆಹಾರ ಒಣಗಿ ನೀರಸವಾಗಿ ಕಾಣುತ್ತದೆ. ಹೀಗಾಗಿ ಆಹಾರವನ್ನು ಹೆಚ್ಚು ಮಸಾಲೆಯೊಂದಿಗೆ ತಯಾರಿಸಿ ತೇವಾಂಶವನ್ನು ಉಳಿಸಿಕೊಳ್ಳುವಂತೆ ನೋಡಿಕೊಳ್ಳಲಾಗುತ್ತದೆ. ಆಹಾರ ವಿಷಕಾರಿ ತಡೆಗಟ್ಟಲು ಕಟ್ಟುನಿಟ್ಟಾದ ಮಾರ್ಗಸೂಚಿಗಳಿವೆ (ಉದಾ: ಇಂಟರ್‌ನ್ಯಾಷನಲ್ ಫ್ಲೈಟ್ ಸರ್ವಿಸ್ ಅಸೋಸಿಯೇಷನ್ ನಿಯಮಗಳು). ಆಹಾರವನ್ನು ತ್ವರಿತವಾಗಿ ತಂಪುಗೊಳಿಸಿ, ಸರಿಯಾಗಿ ಬಿಸಿ ಮಾಡಬೇಕು. ಕೋಶರ್ ಅಥವಾ ಹಲಾಲ್ ಮೀಲ್‌ಗಳಂಥ ವಿಶೇಷ ಆಹಾರಗಳನ್ನು ಡಬಲ್ ಫಾಯಿಲ್‌ನಲ್ಲಿ ಪ್ಯಾಕ್ ಮಾಡಿ ಬಿಸಿ ಮಾಡಲಾಗುತ್ತದೆ. ಬಿಜಿನೆಸ್ ಮತ್ತು ಫಸ್ಟ್ ಕ್ಲಾಸ್‌ನಲ್ಲಿ ವಿತರಿಸುವ ಆಹಾರಗಳಿಗೂ, ಎಕಾನಮಿ ಕ್ಲಾಸಿನಲ್ಲಿ ವಿತರಿಸುವ ಆಹಾರಗಳಿಗೂ ಸಾಕಷ್ಟು ವ್ಯತ್ಯಾಸಗಳಿರುತ್ತವೆ. ವಿಮಾನ ಸಿಬ್ಬಂದಿ ವಿವಿಧ ಆಹಾರಗಳಿಗೆ ಬೇಕಾದ ತಾಪಮಾನ ಮತ್ತು ಸಮಯವನ್ನು ನಿಖರವಾಗಿ ನಿಯಂತ್ರಿಸಬಹುದು. ಇದು ಆಹಾರವು ಸರಿಯಾದ ತಾಪಮಾನದಲ್ಲಿರುವುದನ್ನು ಖಚಿತಪಡಿಸುತ್ತದೆ.

ಬುರುಡೆ ಪ್ರಕರಣದಲ್ಲಿ ಕೊನೆಗೆ ಸಿಕ್ಕಿದ್ದೇನು?

ಅಶ್ವತ್ಥಕಟ್ಟೆ
ರಂಜಿತ್ ಎಚ್. ಅಶ್ವತ್ಥ
vveditoped@gmail.com
ranjith.hoskere@gmail.com

ರಾಜಕೀಯದಲ್ಲಿ ಯಾವಾಗ ಏನು ಮಾತನಾಡಬೇಕು ಎನ್ನುವುದು ಬಹುಮುಖ್ಯವಾದ ಅಂಶ ಎನ್ನುವುದನ್ನು ಈ ಹಿಂದೆ ಹಲವು ಸಮಯದಲ್ಲಿ ಇದೇ ಅಂಕಣದಲ್ಲಿ ಪ್ರಸ್ತಾಪಿಸಲಾಗಿತ್ತು. ಮತ್ತೊಮ್ಮೆ ಅದೇ ವಿಷಯವನ್ನು ಪ್ರಸ್ತಾಪಿಸುವುದಕ್ಕೆ ಈ ಸಮಯಕ್ಕಿಂತ ಉತ್ತಮ ಉದಾಹರಣೆ ಮತ್ತೊಂದಿಲ್ಲ ಎಂದರೆ ತಪ್ಪಾಗುವುದಿಲ್ಲ. ಕಳೆದೊಂದು ತಿಂಗಳಿನಿಂದ ರಾಜ್ಯದ ಅರಳಿಕಟ್ಟೆಗಳಿಂದ ಹಿಡಿದು ಸಾಮಾಜಿಕ ಜಾಲತಾಣ, ಮಾಧ್ಯಮ ಸೇರಿದಂತೆ ರಾಷ್ಟ್ರೀಯ ಮಾಧ್ಯಮಗಳಲ್ಲಿಯೂ ಸದ್ದಾಗುತ್ತಿರುವ ಏಕೈಕ ವಿಷಯ ಧರ್ಮಸ್ಥಳದ ಅನಾಮಧೇಯ ವ್ಯಕ್ತಿಯ ಬುರುಡೆ ಪ್ರಕರಣ. ವ್ಯಕ್ತಿ ಧರ್ಮಸ್ಥಳ ಪೊಲೀಸ್ ಠಾಣೆಗೆ ಬುರುಡೆ ಸಮೇತ ಬಂದಿದ್ದು, ಬಳಿಕ ನ್ಯಾಯಾಧೀಶರ ಮುಂದೆ ಹೇಳಿಕೆ ದಾಖಲಿಸಿದ್ದು, ನಂತರ ಎಸ್‌ಐಟಿ ರಚನೆಯಾಗಿದ್ದು ಎಲ್ಲವೂ ಎಲ್ಲರಿಗೂ ಗೊತ್ತಿರುವ ವಿಷಯ. ಆದರೆ ಇಡೀ ಪ್ರಹಸನದ ಸಮಯದಲ್ಲಿ 'ಮೌನ'ವಾಗಿದ್ದ ಬಿಜೆಪಿ ಈಗ ಏಕಾಏಕಿ ಧರ್ಮಸ್ಥಳದ ಪರವಾಗಿ ಬಹುದೊಡ್ಡ ಪ್ರಮಾಣದಲ್ಲಿ ಧ್ವನಿ ಎತ್ತಿದೆ.

ಈಗ ಧರ್ಮಸ್ಥಳ ರ್‍ಯಾಲಿ ಮಾಡುತ್ತಿರುವ ಬಿಜೆಪಿ ಈ ಹಿಂದೆ ಎಸ್‌ಐಟಿ ರಚನೆಯ ಸಮಯದಲ್ಲಿ ಮೌನವಾಗಿದ್ದು ಏಕೆ? ಎನ್ನುವ ಪ್ರಶ್ನೆಗೆ ಬಿಜೆಪಿಯ ಬಳಿ ಉತ್ತರವಿಲ್ಲ. ಅದರ ಬಗ್ಗೆ ಪ್ರಸ್ತಾಪಿಸುವ ಮೊದಲು ರಾಜ್ಯದಲ್ಲಿ ಕಳೆದೊಂದು ತಿಂಗಳಿನಿಂದ ಹತ್ತು-ಹಲವು ವಿದ್ಯಮಾನ ನಡೆದರೂ, ಇಡೀ ರಾಜ್ಯದ ಗಮನ ಸೆಳೆದದ್ದು ಮಾತ್ರ 'ಮಾಸ್ಕ್' ಮ್ಯಾನ್‌ನ ಆರೋಪ ಹಾಗೂ ಅದರ ಸುತ್ತಮುತ್ತಲಿನ ಬೆಳವಣಿಗೆ. ಮಳೆಗಾಲದ ಅಧಿವೇಶನ, ಒಳ ಮೀಸಲು, ದರ್ಶನ್ ಮರಳಿ ಜೈಲಿಗೆ ಸೇರಿದಂತೆ ಹಲವಾರು ಸುದ್ದಿಗಳು ಬಂದರೂ, ಧರ್ಮಸ್ಥಳದ ಬುರುಡೆ ಪ್ರಕರಣ ತೀವ್ರ ಚರ್ಚೆಗೆ ಗ್ರಾಸವಾಗಿತ್ತು.

ಹಾಗೇ ನೋಡಿದರೆ, ಧರ್ಮಸ್ಥಳದಲ್ಲಿ ದೇವಾಲಯ ಆಡಳಿತ ಮಂಡಳಿ ಸೂಚನೆ ಮೇರೆಗೆ ನೂರಾರು ಶವಗಳನ್ನು ಹೂತಿಟ್ಟಿರುವುದಾಗಿ ಹೇಳಿಕೊಂಡು ಬಂದ 'ಭೀಮ' ಪೊಲೀಸರಿಗೆ ದೂರು ಸಲ್ಲಿಸಿ, ಬಳಿಕ ನ್ಯಾಯಾಧೀಶರ ಮುಂದೆ 'ಬುರುಡೆ'ಗೆ ಸಂಬಂಧಿಸಿದಂತೆ ಹೇಳಿಕೆ ದಾಖಲಿಸಿದ್ದ. ಈ ಅನಾಮಿಕ ಭೀಮನ ಆರೋಪವನ್ನು ಆರಂಭದಲ್ಲಿ ಹೆಚ್ಚು ತಲೆಕೆಡಿಸಿಕೊಂಡಿರಲಿಲ್ಲ. ಏಕೆಂದರೆ, ಸೌಜನ್ಯ ಪ್ರಕರಣದ ಬಳಿಕ ಈ ರೀತಿಯ ಆರೋಪ ಮಾಡಿಕೊಂಡು ಬರುವ ಜನರ ಸಂಖ್ಯೆಗೇನು ಧರ್ಮಸ್ಥಳದಲ್ಲಿ ಕಡಿಮೆಯಿಲ್ಲ. ವರ್ಷಕ್ಕೊಮ್ಮೆ, ಎರಡು ವರ್ಷಕ್ಕೊಮ್ಮೆ ನಾನು ನೋಡಿದ್ದೆ, ನಾನು ಮಾಡಿದ್ದೆ ಎಂದು ಹೇಳಿಕೊಂಡು ಬರುವವರನ್ನು ನೋಡಿರುವುದರಿಂದ ಆರಂಭದಲ್ಲಿ ಈ ಆರೋಪಕ್ಕೆ ಏಕೆ ಹೆಚ್ಚು ಪ್ರಾಶಸ್ತ್ಯ ಸಿಗಲಿಲ್ಲ ಎನ್ನುವುದು ಸ್ಪಷ್ಟವಾಗುತ್ತದೆ. ಆದರೆ ಈ ಬಾರಿ ಸಾಮಾಜಿಕ ಜಾಲತಾಣ ಹಾಗೂ ಯುಟ್ಯೂಬ್‌ನಲ್ಲಿ ಆರಂಭವಾಗಿರುವ ಕೆಲ ಚಾನೆಲ್‌ಗಳನ್ನು ಬಳಸಿಕೊಂಡು ಒಂದು ಗುಂಪು ಸಾಮಾಜಿಕ ಜಾಲತಾಣದಲ್ಲಿ ಇದೇ ವಿಷಯ ಹರಡುವಂತೆ ನೋಡಿಕೊಂಡಿತ್ತು. ಈ ಸುದ್ದಿಯನ್ನು ಹರಡಿಸುವವರ ಸಂಖ್ಯೆ ಕಡಿಮೆಯಿದ್ದರೂ, 'ವ್ಯವಸ್ಥಿತ'ವಾಗಿ ಎಲ್ಲರಿಗೂ ರೀಚ್ ಆಗುವಂತೆ ನೋಡಿಕೊಂಡಿತ್ತು. ಈ ತಂಡ ಕೇವಲ ಮಂಗಳೂರು ಅಥವಾ ಕರ್ನಾಟಕಕ್ಕೆ ಸೀಮಿತವಾಗದೇ, ನೆರೆಯ ಕೇರಳದ ಮೂಲಕವೂ ತನ್ನ ಬೇಳೆ ಬೇಯಿಸಿಕೊಳ್ಳುವ ಪ್ರಯತ್ನ ನಡೆಸಿತ್ತು. ಮೊದಲೇ ಕಮ್ಯುನಿಸ್ಟರ ಪ್ರಭಾವದಲ್ಲಿರುವ ಕೇರಳದಲ್ಲಿ, ಧರ್ಮಸ್ಥಳದ ಬಗ್ಗೆ ಏನೇ ಮಾತಾಡಿದರೂ, ಅದು 'ಮತಗಳಿಕೆ'ಗೆ ಹೊಡೆತ ಬೀಳುವುದಿಲ್ಲ ಎನ್ನುವುದು ಅಲ್ಲಿನ ರಾಜಕಾರಣಿಗಳಿಗೆ ಗೊತ್ತಿರುವುದರಿಂದ, ವಿಷಯವನ್ನು ರಾಷ್ಟ್ರೀಯ ಮಟ್ಟದಲ್ಲಿ ಕಾಣಿಸಿಕೊಳ್ಳುವಂತೆ ಮಾಡಿದರು.

ಹೀಗೆ ಅನಾಮಧೇಯ ವ್ಯಕ್ತಿಯ ಬುರುಡೆ ಪ್ರಕರಣ ರಾಷ್ಟ್ರೀಯ ಮಟ್ಟದಲ್ಲಿ ಸುದ್ದಿಯಾಗುತ್ತಿದ್ದರೂ, ಕರ್ನಾಟಕದ ಕಾಂಗ್ರೆಸ್ ನಾಯಕರು ಹೆಚ್ಚೇನು ತಲೆಕೆಡಿಸಿಕೊಂಡಿರಲಿಲ್ಲ. ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಕರಣಕ್ಕೆ ಎಸ್‌ಐಟಿಯ ಅಗತ್ಯವಿಲ್ಲ ಎಂದಿದ್ದರು. ಆದರೆ ಕೇರಳದ ಲಾಭಿ ಹಾಗೂ ಕರ್ನಾಟಕದಲ್ಲಿಯೇ ಇರುವ ಕೆಲ ಬುದ್ಧಿಜೀವಿಗಳು ಕಾಂಗ್ರೆಸ್‌ನ ದಿಲ್ಲಿ ನಾಯಕರ ಮೂಲಕ

ರಾಜ್ಯ ಸರಕಾರದ ಮೇಲೆ ಒತ್ತಡ ಹೇರಿದ್ದರು. ಇದರ ಫಲವೇ ಹಿಂದಿನ ದಿನವಿನ್ನೂ ಎಸ್‌ಐಟಿ ರಚನೆಯ ಅಗತ್ಯವಿಲ್ಲ ಎಂದಿದ್ದ ಸರಕಾರ, ಮರುದಿನ ಪ್ರಣಬ್ ಮೊಹಂತಿ ನೇತೃತ್ವದಲ್ಲಿ ವಿಶೇಷ ತನಿಖಾ ತಂಡವನ್ನು ರಚಿಸಿ ಆದೇಶ ಹೊರಡಿಸಿದರು. ಆದೇಶ ಹೊರಡಿಸುವಂತೆ ಒತ್ತಡ ಹೇರಿದವರಿಗೆ ಆತ ಹೇಳಿದ ಜಾಗದಲ್ಲಿ ನೂರಾರು ಹೋಗಲಿ, ಬೆರಳೆಣಿಕೆಯಷ್ಟು ಶವಗಳ ಕುರುಹು ಸಿಕ್ಕಿದ್ದರೂ, ಇಂದು ಇಡೀ ಧರ್ಮಸ್ಥಳವನ್ನು ಬೀದಿಗೆ ತಂದು ನಿಲ್ಲಿಸುತ್ತಿದ್ದರು ಎನ್ನುವುದರಲ್ಲಿ ಅನುಮಾನವಿರಲಿಲ್ಲ.

ಆದರೆ ಈ ರೀತಿಯ ಆದೇಶ ಹೊರಡಿಸಿದ ಬಹುತೇಕರಿಗೆ ಅನಾಮಧೇಯ ವ್ಯಕ್ತಿ ಹೇಳುತ್ತಿರುವ ನೂರಾರು ಶವಗಳ ಆರೋಪ 'ಅತಿಶಯೋಕ್ತಿ'ಯಿಂದ ಕೂಡಿದೆ ಎನ್ನುವುದು ತಿಳಿದಿತ್ತು. ವ್ಯವಸ್ಥಿತ ಪಿತೂರಿಯ ಭಾಗವಾಗಿಯೇ ವಿಶೇಷ ತನಿಖಾ ತಂಡ ರಚನೆಯಾಗುವಂತೆ ನೋಡಿಕೊಂಡಿದ್ದ ತಂಡಕ್ಕೆ ಸೌಜನ್ಯ ಸಾವಿಗೆ ನ್ಯಾಯ ಎನ್ನುವುದಕ್ಕಿಂತ ಹೆಚ್ಚಾಗಿ ಧರ್ಮಸ್ಥಳದ ವಿರುದ್ಧ ಮಾತನಾಡಲು ಒಂದು ಅಸ್ತ್ರ ಬೇಕಿತ್ತಷ್ಟೆ. ಈ ವಿಷಯ ರಾಜ್ಯ ಬಿಜೆಪಿ, ಕಾಂಗ್ರೆಸ್ ಸೇರಿದಂತೆ ಎಲ್ಲರಿಗೂ ಗೊತ್ತಿರುವ ಸಂಗತಿ. ಆದರೆ ಈಗ ಧರ್ಮಸ್ಥಳದ ಬಗ್ಗೆ ಪುಂಖಾನುಪುಂಖವಾಗಿ ಮಾತನಾಡುತ್ತಿರುವ ಯಾವೊಬ್ಬ ನಾಯಕರೂ ಅಂದು ಧರ್ಮಸ್ಥಳದ ಪರವಾಗಿ ಒಂದೇ ಒಂದು ಹೇಳಿಕೆಯನ್ನು ನೀಡಲಿಲ್ಲ. ಇಂದು ಬಿಜೆಪಿಯವರು ಎಸ್‌ಐಟಿ ರಚನೆಯ ಸಮಯದಲ್ಲಿ ಏಕೆ ಮೌನವಾಗಿದ್ದರು ಎಂದು ಪ್ರಶ್ನಿಸುವ ಉಪಮುಖ್ಯಮಂತ್ರಿ, ಡಿ.ಕೆ.ಶಿವಕುಮಾರ್, ಎಸ್‌ಐಟಿ ರಚನೆಯ ಸಮಯದಲ್ಲಿ ಈ ಪ್ರಶ್ನೆಯನ್ನು ಸರಕಾರದಲ್ಲಿಯೇ ಕೇಳಿರಲಿಲ್ಲ, ಧರ್ಮಸ್ಥಳದ ವಿರುದ್ಧ ಕೇಳಿಬಂದಿರುವ ದೂರಿನ ಬಗ್ಗೆ ಎಲ್ಲರಿಗೂ ಅನುಮಾನವಿದ್ದರೂ, 'ನಮಗೇಕೆ ರಿಸ್ಕ್' ಎನ್ನುವ ಮನಸ್ಥಿತಿಯಲ್ಲಿ ಮೌನಕ್ಕೆ ಶರಣಾಗಿದ್ದರು. ಗುಂಡಿ ಅಗೆಯಲು ಆರಂಭವಾದಾಗಲೂ, ಎಲ್ಲರೂ ಕುತೂಹಲದಿಂದ ಗುಂಡಿಗಳತ್ತಲೇ ಗಮನಹರಿಸಿದ್ದರು. ಕೇವಲ ರಾಜಕಾರಣಿಗಳು ಮಾತ್ರವಲ್ಲದೇ, ಧರ್ಮಸ್ಥಳವನ್ನು ನಂಬುವ ಭಕ್ತರೂ ಇದೇ ಮನಸ್ಥಿತಿಗೆ ಬಂದಿದ್ದರು. ಆದರೆ ಆರಂಭ ಏಳೆಂಟು ಗುಂಡಿಗಳನ್ನು ಅಗೆದಾಗ 'ಮಣ್ಣು' ಬಿಟ್ಟು ಬೇರೇನು ಸಿಗಲಿಲ್ಲವೆಂದು ಸ್ಪಷ್ಟವಾಯಿತೋ ಆಗ, ತಮ್ಮ ನಿಲುವುಗಳು ಏನಿರಬೇಕೆಂಬ ಲೆಕ್ಕಾಚಾರವನ್ನು ಆರಂಭಿಸಿದರು.

ಈ ಎಲ್ಲ ಘಟನಾವಳಿಗಳ ನಡುವೆಯೇ, ಬುರುಡೆ ಪ್ರಕರಣದಲ್ಲಿ ಹುರುಳಿಲ್ಲ ಎನ್ನುವುದು ಅರಿವಾಗುತ್ತಿದ್ದಂತೆ ಧರ್ಮಸ್ಥಳದ ಪರ ಮಾತನಾಡುವವರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಾ ಹೋಯಿತು. ಇದನ್ನು ಗಮನಿಸಿದ ಬಿಜೆಪಿ ನಾಯಕರು, ಈ ಹಂತದಲ್ಲಿಯೂ ನಾವು ಧರ್ಮಸ್ಥಳದ ಪರವಾಗಿ ನಿಲ್ಲದಿದ್ದರೆ ಲಾಭಕ್ಕಿಂತ ನಷ್ಟವೇ ಹೆಚ್ಚು ಎನ್ನುವುದು ಅರಿವಾಗಿ, ಒಬ್ಬೊಬ್ಬರೇ ವಿಶೇಷ ತನಿಖಾ ತಂಡವನ್ನು ಪ್ರಶ್ನಿಸಲು ಶುರು ಮಾಡಿದರು. ಆದರೆ ಆ ವೇಳೆಗಾಗಲೇ ಗುಂಡಿ ಅಗೆಯುವ ಕಾರ್ಯ ಬಾಹುಬಲಿ ಬೆಟ್ಟದ ಬುಡಕ್ಕೆ ಬಂದಿತ್ತು ಎನ್ನುವುದು ವಾಸ್ತವ!

ಬಿಜೆಪಿ ನಾಯಕರು ಈ ವಿಷಯವನ್ನು ಮುಂದಿಟ್ಟುಕೊಂಡು ಹೋರಾಟ ಮಾಡಲು ಸಿದ್ಧತೆ ನಡೆಸಿಕೊಳ್ಳುತ್ತಿದ್ದಂತೆ ಕಾಂಗ್ರೆಸ್ ಶಾಸಕರಿಗೆ ತಮ್ಮ ಕ್ಷೇತ್ರಗಳಲ್ಲಿರುವ ಧರ್ಮಸ್ಥಳದ ಭಕ್ತರು ನೆನಪಾಗಿದ್ದಾರೆ. ಈ ವಿಷಯವನ್ನು ಇಲ್ಲಿಗೆ ನಿಲ್ಲಿಸದಿದ್ದರೆ ಮುಂದಿನ ಚುನಾವಣೆಯಲ್ಲಿ ನಮಗೆ ಬಹುದೊಡ್ಡ 'ನಷ್ಟ' ಎನ್ನುವುದು ಅರಿವಾಗುತ್ತಿದ್ದಂತೆ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ ಕೆಲ ಹಿರಿಯ ಸಚಿವರು ಸೇರಿದಂತೆ, ಅನೇಕ ಶಾಸಕರು ಗುಂಡಿ ಕಾರ್ಯವನ್ನು ಸ್ಥಗಿತಗೊಳಿಸಬೇಕು ಎನ್ನುವ ಒತ್ತಡವನ್ನು ಹೇರಿದ್ದಾರೆ. ಏಕೆಂದರೆ, ರಾಜ್ಯದಲ್ಲಿರುವ 224 ಕ್ಷೇತ್ರಗಳ ಪೈಕಿ ನೂರಕ್ಕೂ ಹೆಚ್ಚು ಕ್ಷೇತ್ರದಲ್ಲಿ ಧರ್ಮಸ್ಥಳದ ಭಕ್ತಗಣ ದೊಡ್ಡ ಪ್ರಮಾಣದಲ್ಲಿದೆ. ಈ ಒಂದು ವಿಷಯದಲ್ಲಿ ಸರಾಸರಿ 15ರಿಂದ 20 ಸಾವಿರ ಮತಗಳು ಆಚೀಚೆಯಾಗುವ ಸಾಧ್ಯತೆಯಿತ್ತು. ವಿಧಾನಸಭಾ ಕ್ಷೇತ್ರವೊಂದರಲ್ಲಿ ಈ 'ಅಂತರ' ಗೆಲುವು ಸೋಲನ್ನು ತೀರ್ಮಾನಿಸುತ್ತದೆ!

ಈ ವಾಸ್ತವಾಂಶ ತಿಳಿಯುತ್ತಿದ್ದಂತೆ ಆರಂಭವಾಗಿದ್ದು, ಸ್ಪಷ್ಟ 'ರಾಜಕೀಯ'. ವಿಧಾನಸಭೆಯಲ್ಲಿ ಸುನೀಲ್ ಕುಮಾರ್ ಧರ್ಮಸ್ಥಳ ವಿಚಾರದಲ್ಲಿ ಆಗುತ್ತಿರುವ 'ಟೂಲ್‌ಕಿಟ್' ಬಗ್ಗೆ ಮಾತನಾಡಲು ಆರಂಭಿಸಿದ ಕೆಲವೇ ಕ್ಷಣದಲ್ಲಿ ಕಾಂಗ್ರೆಸ್ ನಾಯಕರಿಗೆ ಇದರಿಂದ ಆಗಬಹುದಾದ ಡ್ಯಾಮೇಜ್ ಅರಿವಾಯಿತು. ಈ ಡ್ಯಾಮೇಜ್ ಕಂಟ್ರೋಲ್ ಮಾಡುವುದಕ್ಕಾಗಿಯೇ ಉಪಮುಖ್ಯಮಂತ್ರಿ ಡಿಕೆ. ಶಿವಕುಮಾರ್ ಮಧ್ಯಪ್ರವೇಶಿಸಿ 'ವೀರೇಂದ್ರ ಹೆಗಡೆಯವರ ಮೇಲೆ ಹಾಗೂ ಧರ್ಮಸ್ಥಳದ ಮಂಜುನಾಥೇಶ್ವರನ ಮೇಲೆ ನಮಗೆ ವಿಶ್ವಾಸವಿದೆ' ಎನ್ನುವ ಮೂಲಕ ಇಡೀ ಪ್ರಕರಣದ ಷರಾ ಬರೆದರು. ಈಗ ಏನೇ ನಡೆದರೂ, ಅದು ಕೇವಲ ಕಾನೂನಾತ್ಮಕ ಪ್ರಕ್ರಿಯೆ ಅಷ್ಟೆ.

ಈಗ ವಿಶೇಷ ತನಿಖಾ ತಂಡವನ್ನು ವಿಸರ್ಜನೆ ಮಾಡಲಾಗುವುದು ಎನ್ನುವ ಮಾತುಗಳು ಕೇಳಿಬರುತ್ತಿದೆ. ಆದರೆ ಅನಾಮಿಕ ವ್ಯಕ್ತಿಯ ಮಾತು ಕೇಳಿಕೊಂಡು ರಚಿಸಿದ್ದ ವಿಶೇಷ ತನಿಖಾ ತಂಡವನ್ನು ವಿಸರ್ಜನೆ ಮಾಡುವುದು ಸುಲಭವಲ್ಲ. ಈಗಾಗಲೇ ಅನಾಮಿಕ ವ್ಯಕ್ತಿ ನ್ಯಾಯಾಧೀಶರ ಮುಂದೆ ನೀಡಿರುವ ಹೇಳಿಕೆಗೆ ಸಂಬಂಧಿಸಿದಂತೆ ತನಿಖೆ ನಡೆಸುವಂತೆ ನ್ಯಾಯಾಲಯ ಹೇಳಿದೆ. ಇದೀಗ ಎಸ್‌ಐಟಿ ರದ್ದುಪಡಿಸಿದರೂ, ಇಡೀ ಪ್ರಕರಣವನ್ನು ಸ್ಥಳೀಯ ಪೊಲೀಸರು ನಡೆಸಲೇಬೇಕು. ಇದರೊಂದಿಗೆ ಅನಾಮಧೇಯ ವ್ಯಕ್ತಿಯ ಹಿನ್ನೆಲೆ, ಆತ ಆರೋಪ ಮಾಡಿದ ಸಮಯದಲ್ಲಿ ತಂದಿದ್ದ ಬುರುಡೆಯ ಹಿನ್ನೆಲೆ ಹಾಗೂ ಆತನಿಗೆ ಬೆಂಬಲವಾಗಿರುವವರು ಯಾರು ಎನ್ನುವ ಬಗ್ಗೆ ತನಿಖೆ ನಡೆಸಬೇಕಿದೆ. ಆದ್ದರಿಂದ ಗುಂಡಿ ಅಗೆಯುವುದನ್ನು ಬಿಟ್ಟರೂ, ಇನ್ನೊಂದು ಆಯಾಮದ ತನಿಖೆಯನ್ನು ನಡೆಸಬೇಕಾದ ಅನಿವಾರ್ಯತೆಯಿದೆ.

ಆರೋಪಗಳನ್ನು, ಸೈದ್ಧಾಂತಿಕ ಭಿನ್ನಾಭಿಪ್ರಾಯ ಮೀರಿ, ರಾಜಕೀಯ ತಿರುವು ಪಡೆದಿದ್ದ ಧರ್ಮಸ್ಥಳ 'ಅನಾಮಧೇಯ' ವ್ಯಕ್ತಿಯ ಆರೋಪದ ಸತ್ಯಾಸತ್ಯತೆ ಇನ್ನು ಬಹಿರಂಗವಾಗಬೇಕಿದೆ. ಆತ ನ್ಯಾಯಾಧೀಶರ ಮುಂದೆ ನೀಡಿದ್ದ ಹೇಳಿಕೆಗೆ ಪೂರಕವಾಗಿ ಕಳೆದ ಮೂರು ವಾರದ ಕಾರ್ಯಚರಣೆಯಲ್ಲಿ ಗಟ್ಟಿ ಸಾಕ್ಷಿ ಸಿಕ್ಕಿಲ್ಲ. ನೂರಾರು ಶವ ಹೂತಿಟ್ಟಿದ್ದಾಗಿ ಹೇಳಿದ್ದ ಅನಾಮಿಕ ತೋರಿಸಿದ್ದ ಜಾಗದಲ್ಲಿ 10 ಬುರುಡೆ ಸಿಕ್ಕಿದ್ದರೂ ಪರಿಸ್ಥಿತಿ ಹೀಗಿರುತ್ತಿರಲಿಲ್ಲ.

ಆದರೆ ಹುಡುಕಾಟದಲ್ಲಿ ಯಾವುದೇ ಬುರುಡೆ ಸಿಗದಿದ್ದರೂ, ಅದಕ್ಕೊಂದು ಹೊಸ 'ಥಿಯರಿ'ಯೊಂದಿಗೆ ಇನ್ನಷ್ಟು ತಿಂಗಳ ಬಳಿಕ ಮತ್ತೆ ಸೋಕಾಲ್ಡ್ ಹೋರಾಟಗಾರರು ಯುಟ್ಯೂಬ್ ಅಥವಾ ಫೇಸ್‌ಬುಕ್ ಲೈವ್ ಬರುವುದು ನಿಶ್ಚಿತ. ಆದ್ದರಿಂದ ಬುರುಡೆ ಪ್ರಕರಣದಿಂದ ಪಾಠ ಕಲಿತಿರುವ ರಾಜ್ಯ ಸರಕಾರ, ಈ ವಿಷಯಕ್ಕೆ ತಾರ್ಕಿಕ ಅಂತ್ಯವನ್ನು ತೋರಿಸಬೇಕಿದೆ. ರಾಜಕೀಯ ಲಾಭ-ನಷ್ಟಗಳನ್ನು ಮೀರಿ, ಕೋಟ್ಯಂತರ ಭಕ್ತರ ಭಾವನೆಗಳನ್ನು ಗಮನದಲ್ಲಿರಿಸಿಕೊಂಡು ಸರಕಾರ ತೀರ್ಮಾನಿಸಬೇಕಿದೆ. ಇಲ್ಲವಾದರೆ, ಕೆಲವೊಂದಷ್ಟು ದಿನದ ಅಂತರದ ಬಳಿಕ ಮತ್ತೊಂದು ಗುಂಪು ಇನ್ನೊಂದು ಥಿಯರಿಯೊಂದಿಗೆ ಜನರ ಮುಂದೆ ಬರುತ್ತದೆ. ಧರ್ಮಸ್ಥಳ ಧರ್ಮಾಧಿಕಾರಿ ಹಾಗೂ ಕುಟುಂಬದವರನ್ನು ತಪ್ಪಿತಸ್ಥ ಸ್ಥಾನದಲ್ಲಿ ನಿಲ್ಲಿಸಿ ಹೊಸ ಹೊಸ ಕಥೆ ಹೇಳುವ ಬಹುತೇಕರಿಗೆ ನ್ಯಾಯಾಲಯದಲ್ಲಿ ಇತ್ಯರ್ಥವಾಗಿ ಅನ್ಯಾಯಕ್ಕೆ ಒಳಗಾದವರಿಗೆ ನ್ಯಾಯ ಸಿಗಬೇಕು ಎನ್ನುವುದಕ್ಕಿಂತ, ಸಾರ್ವಜನಿಕ ವಲಯದಲ್ಲಿ 'ಸುದ್ದಿ'ಯಲ್ಲಿರಬೇಕು ಎನ್ನುವುದಷ್ಟೇ ಮುಖ್ಯವಾಗಿದೆ ಎನ್ನುವುದನ್ನು ಮರೆಯುವಂತಿಲ್ಲ.

ಒಂದು ವೇಳೆ ಅನ್ಯಾಯಕ್ಕೆ ಒಳದಾವರಿಗೆ ನ್ಯಾಯ ಸಿಗಬೇಕೆಂದು ಹೋರಾಡುವುದೇ ಆಗಿದ್ದರೆ, ಅವರು ನ್ಯಾಯಾಲಯದ ಕದ ತಟ್ಟುತ್ತಿದ್ದರೇ ಹೊರತು, ಯೂಟ್ಯೂಬ್ ಚಾನೆಲ್‌ಗಳ ಕದವನ್ನಲ್ಲ!

ಕೊಂಚ ತಡವಾದರೂ ದುಷ್ಟಶಿಕ್ಷಣ, ಧರ್ಮರಕ್ಷಣ ಶತಸಿದ್ಧ!

ಇಷ್ಟೆಲ್ಲ ಆದನಂತರ ಸರಕಾರದ ತಕ್ಷಣದ ನಡೆ ಏನಿರಬೇಕು? ಮೊದಲು ಅಪಪ್ರಚಾರಕ್ಕೆ ಇಳಿದಿದ್ದ ಈ ಕಿಂಗ್ ಪಿನ್ ಗಳ ವಿರುದ್ಧ ಕೇಸ್ ದಾಖಲಿಸಿಕೊಂಡು ಜೈಲಿಗೆ ತಳ್ಳುವುದು. ಬುರುಡೆಶೋಧಕ್ಕೆ ಬಂದಿದ್ದ ಮಾಸ್ಕ್ ಮ್ಯಾನ್ ನಿಂದ ಅಗಿರುವ ಖರ್ಚು, ರಾಜ್ಯದ ಶಾಂತಿಭಂಗ, ಧರ್ಮಸ್ಥಳದ ಭಕ್ತರಿಗೆ ಆದ ಆತಂಕ, ಪೊಲೀಸ್ ಇಲಾಖೆಯ ದುರುಪಯೋಗ, ಇದಕ್ಕೆ ಶಿಕ್ಷೆ ನೀಡಿ ಬಡ್ಡಿ ಸಮೇತ ದಂಡ ಕೀಳುವುದು.

ಪದಸಾಗರ
ನವೀನ್ ಸಾಗರ್
vveditoped@gmail.com

ಇತ್ತೀಚೆಗೆ ನನ್ನ ತಮ್ಮ ಮಧ್ಯ ಏಷಿಯಾದ ಕಜಖ್‌ಸ್ತಾನ್ ಗೆ ಹೋಗಿದ್ದ. ಅಲ್ಲಿನ ಕೆಲವು ಅಪರೂಪದ ಅನುಭವಗಳನ್ನು ಹಂಚಿಕೊಳ್ಳುತ್ತಿದ್ದಾಗ ಕೆಲವು ವಿಷಯಗಳು ಅಚ್ಚರಿ ತಂದವು. ಆತನನ್ನು ಸ್ವಾಗತಿಸಿದ ಗೈಡ್ ಆಡಿದ ಕೇಳಿದ ಮೊದಲ ಪ್ರಶ್ನೆಯೇ, ನೀನು ಇಂಡಿಯನ್ ಹಿಂದೂನಾ ಅಥವಾ ಇಂಡಿಯನ್ ಮುಸ್ಲಿಮನಾ ಅಂತ. ಹಿಂದೂ ಅಂದಾಕ್ಷಣ ಆತನ ರಿಯಾಕ್ಷನ್ ಏನು ಗೊತ್ತಾ? ನಿಮ್ಮ ದೇಶದಲ್ಲಿ ನಿಮಗಿಂತ ಮುಸ್ಲಿಮರ ಸಂಖ್ಯೆಯೇ ಜಾಸ್ತಿ ಇದೆ. ನಾವೇ ಹೆಚ್ಚು ಇದೀವಿ!

ಅಷ್ಟರಲ್ಲೊಬ್ಬ ವಿದೇಶಿ ಪ್ರವಾಸಿಯೂ ಅವರೊಂದಿಗೆ ಸೇರಿಕೊಂಡನಂತೆ. ಆತ ಫ್ರಾನ್ಸ್ ನ ಪ್ರಜೆ. ಇಸ್ಲಾಮಿಗೆ ಮತಾಂತರ ಹೊಂದಿದವ. ಕಜಖ್‌ಸ್ತಾನ್ ಗೆ ಪ್ರವಾಸ ಬಂದಿದ್ದಾನೆ. ಈ ಮತಾಂತರಿ ಎಷ್ಟು ಕರ್ಮಠವಾಗಿ ಇಸ್ಲಾಮ್ ಪಾಲಿಸುತ್ತಿದ್ದಾನೆ ಅಂದರೆ, ಆ ಒಣಭೂಮಿಯಲ್ಲಿ ಯಾವ್ಯಾವುದೋ ಹೊತ್ತಲ್ಲೆಲ್ಲಾ ಶಿಸ್ತಾಗಿ ಮ್ಯಾಟ್ ಹಾಸಿ ಸುತ್ತ ಒಂದು ಕಿಲೋಮೀಟರ್ ಕೇಳಿಸುವ ಹಾಗೆ ನಮಾಜ್ ಮಾಡುತ್ತಿದ್ದನಂತೆ. ಅಷ್ಟೇ ಅಲ್ಲದೆ ಗೈಡ್‌ನನ್ನೂ ತನ್ನೊಂದಿಗೆ ಸೇರಿಸಿಕೊಂಡು ಇಡೀ ಪ್ರವಾಸದಲ್ಲೆಲ್ಲ ದಿನಕ್ಕೆ ಮೂರು ಬಾರಿ ಸಾರ್ವಜನಿಕ ಸ್ಥಳ, ರೈಲು, ವಿಮಾನನಿಲ್ದಾಣ ಎಲ್ಲೆಂದರಲ್ಲಿ ನಮಾಜ್ ಮಾಡಿದ್ದನಂತೆ.

ಹಿಂದೂಗಳಿಂದ ಇದನ್ನು ನಿರೀಕ್ಷಿಸಲು ಸಾಧ್ಯವಾ? ಹಿಂದೂಗಳಿಗೆ ತಮ್ಮ ಧರ್ಮ ಉಳಿಸಿಕೊಳ್ಳೋದು, ಬೆಳೆಸೋದು, ಕಡೆ ಪಕ್ಷ ಹೇಳಿಕೊಳ್ಳೋಕೂ ಬಿಗುಮಾನ. ಇಲ್ಲ ನಮ್ಮಲ್ಲಿ ಧರ್ಮಾಭಿಮಾನದ ಕೊರತೆ ಇದೆ. ಅದಕ್ಕೆ ಮೂಲ ಕಾರಣ ಜಾತಿಗಳಲ್ಲಿ ಒಡೆದು ಹೋಗಿರುವುದು. ಇದಿಷ್ಟರ ಜೊತೆ ಆಸ್ತಿಕತೆ ನಾಸ್ತಿಕತೆ ಎಂಬ ವಿಂಗಡನೆ. ದೇವರನ್ನು ನಂಬದಿರುವಿಕೆಯ ಫ್ಯಾಷನ್ನು. ದೇವರನ್ನು, ದೇವಸ್ಥಾನಗಳನ್ನು ಮೂಢನಂಬಿಕೆ ಹೆಸರಲ್ಲಿ ಅಥವಾ ಇಲ್ಲಸಲ್ಲದ ಆಪಾದನೆಗಳ ಹೆಸರಲ್ಲಿ ಕೀಳಾಗಿ ನೋಡಿ ಧರ್ಮದ ಅವಹೇಳನಕ್ಕಿಳಿಯುವುದು.

ಧರ್ಮಸ್ಥಳದ ಬೆಳವಣಿಗೆಗಳನ್ನು ಗಮನಿಸಿದಾಗ ಅನಿಸಿದ್ದೇ ಇದು. ನಮ್ಮಲ್ಲಿ ಕಟ್ಟರ್ ತನವಿಲ್ಲದ್ದೇ ಇದೆಲ್ಲದಕ್ಕೂ ಕಾರಣವಾಗಿ ಹೋಯ್ತಾ ಅಂತ. ದೇವರನ್ನು ಬಯ್ಯಬಹುದು, ಧರ್ಮಗುರುಗಳನ್ನು ನಿಂದಿಸಬಹುದು, ಪ್ರಶ್ನಿಸಬಹುದು, ಆಪಾದನೆ ಹೇರಬಹುದು. ಇಲ್ಯಾವುದೂ ನಿಷಿದ್ಧವಲ್ಲ. ಅದೇ ಕೆಲಸ ಅನ್ಯಧರ್ಮದಲ್ಲಿ ಮಾಡಿ ಬದುಕು ವುದು ಸಾಧ್ಯವಾ? ನಮಗ್ಯಾವಾಗ ಬುದ್ಧಿ ಬರುವುದು?

ಧರ್ಮಸ್ಥಳ ಶತಮಾನಗಳ ನಂಬಿಕೆಯ ಮೇಲೆ ನಿಂತ ಶಕ್ತಿಸ್ಥಳ. ಕೋಟ್ಯಂತರ ಭಕ್ತರಿಗೆ ಮಂಜುನಾಥಸ್ವಾಮಿಯ ಮೇಲಿಟ್ಟ ನಂಬಿಕೆ ಫಲ ಕೊಟ್ಟಿದೆ. ಅದೇ ರೀತಿ ಅಲ್ಲಿನ ಧರ್ಮಾಧಿಕಾರಿಗಳನ್ನು ಶತಶತಮಾನದಿಂದ ಭಕ್ತರು ದೇವರ ಸ್ಥಾನದಲ್ಲೇ ನೋಡುತ್ತಾರೆ. ಅದು ಮೂಢನಂಬಿಕೆ ಅಲ್ಲ, ಮನುಷ್ಯರೂಪದಲ್ಲಿರುವ ಧರ್ಮಾಧಿಕಾರಿಗಳು ದೇವರ ಪರವಾಗಿ ಭಕ್ತರ ಸೇವೆ ಮಾಡಿಕೊಂಡು ಬಂದಿದ್ದಾರೆ. ಅನ್ನದಾಸೋಹದಿಂದ ಹಿಡಿದು ಆರೋಗ್ಯ ಶಿಕ್ಷಣ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಧರ್ಮಸ್ಥಳದ ಧರ್ಮಾಧಿಕಾರಿಗಳು ಸಮಾಜಕ್ಕೆ ಕೊಡುಗೆ ನೀಡಿದ್ದಾರೆ.

ಇಂಥ ಶತಶತಮಾನದ ನಂಬಿಕೆಯನ್ನು ಹೊಡೆಯುವ ಷಡ್ಯಂತ್ರ ಶುರುವಾಗಿದ್ದಾದರೂ ಯಾಕೆ? ಧರ್ಮಸ್ಥಳದ ಧರ್ಮಾಧಿಕಾರಿಗಳಿಗೆ ವಯಸ್ಸಾಗಿದೆ. ಈ ಸಮಯದಲ್ಲಿ ಅವರನ್ನು ಸಾಮಾಜಿಕವಾಗಿ, ಮಾನಸಿಕವಾಗಿ ಕುಗ್ಗಿಸಿಬಿಡೋಣ ಅಂತಲಾ? ಅವರ ನಂತರ ಧರ್ಮಸ್ಥಳ ಕ್ಷೇತ್ರ ನಶಿಸಿಹೋಗಬೇಕು, ಪರ್ಯಾಯವೇನೋ ಸೃಷ್ಟಿಯಾಗಬೇಕು ಎಂಬ ಹುನ್ನಾರವಾ? ಧರ್ಮಸ್ಥಳದ ಮೇಲಿನ ಬೃಹತ್ ಹಿಂದೂ ಧಾರ್ಮಿಕ ನಂಬಿಕೆಯನ್ನು ಸಂಪೂರ್ಣವಾಗಿ ಹೊಸಕಿ ಹಾಕಿಬಿಡುವ ಸಂಘಟಿತ ಷಡ್ಯಂತ್ರವಾ?

ಇದರಲ್ಲಿ ಕ್ರಿಶ್ಚಿಯನ್ ಮಿಶನರಿಗಳ, ವಿದೇಶಿ ಸಂಚುಕೋರರ, ಮಹಾನ್ ಫಂಡರ್ ಗಳ, ರಾಜಕೀಯ ವ್ಯಕ್ತಿಗಳ ಕೈವಾಡ ಇಲ್ಲ ಅನ್ನಲಾದೀತಾ? ಆದರೆ ಇವೆಲ್ಲವೂ ವರ್ಕ್ ಆಗ್ತಾ ಇದ್ದದ್ದಕ್ಕೆ ಕಾರಣ ಯಾರು? ಹಿಂದೂಗಳಲ್ಲಿರುವ ನಮಕ್ ಹರಾಮ್‌ಗಳು, ಎಡಪಂಥದ ಭ್ರಮೆಯಲ್ಲಿ ಬಿದ್ದಿರುವ ಹಿಂದೂಗಳು, ಹಣದ, ಅಧಿಕಾರದ ಆಸೆಗೆ ಬಿದ್ದು ಧರ್ಮವನ್ನೇ ಬಲಿಕೊಡಲು ಹೊರಟಿರುವ ಧರ್ಮದ್ರೋಹಿಗಳು. ಇವರಿಗೆ ಸಿಕ್ಕ ಅಸ್ತ್ರ ಸೌಜನ್ಯಾ ಎಂಬ ವಿದ್ಯಾರ್ಥಿನಿಯ ಹತ್ಯೆ.

ಸೌಜನ್ಯಾ ಹತ್ಯೆ ಪ್ರಕರಣ ವಿಸ್ತೃತ ತನಿಖೆಗೆ ಒಳಪಟ್ಟಿದೆ. ಬಹಳ ಉನ್ನತ ಮಟ್ಟದಲ್ಲಿಯೇ ವಿಚಾರಣೆಗಳಾಗಿವೆ.

ನ್ಯಾಯಾಲಯವು ವೀರೇಂದ್ರ ಹೆಗ್ಗಡೆಯವರನ್ನು, ಧರ್ಮಸ್ಥಳ ಕ್ಷೇತ್ರವನ್ನು, ಬಹಳ ಸ್ಪಷ್ಟವಾಗಿ ಈ ಪ್ರಕರಣದ ಭಾಗವಲ್ಲ ಎಂದಿದೆ. ಆದರೂ ಮಹೇಶ್ ತಿಮರೋಡಿ ಮತ್ತು ಗಿರೀಶ್ ಮಟ್ಟಣ್ಣನವರ್ ಈ ಪ್ರಕರಣಕ್ಕೆ ಬೇರೆ ಬಣ್ಣ ಬಳಿಯಲು ಇನ್ನಿಲ್ಲದ ಪ್ರಯತ್ನಕ್ಕೆ ಇಳಿದುಬಿಟ್ಟರು. ಗಿರೀಶ್ ಮಟ್ಟಣ್ಣನವರ್ ಮತ್ತು ಮಹೇಶ್ ತಿಮರೊಡಿಗೆ ಸ್ಪಷ್ಟವಾಗಿ ಗೊತ್ತಿದ್ದರೂ, ಸಮೀರ್ ಎಂಬ ಮುಸಲ್ಮಾನನನ್ನು ಬಳಸಿ ತಂತ್ರಜ್ಞಾನದ ದುರ್ಬಳಕೆ ಮಾಡಿ ಇಡೀ ರಾಜ್ಯದ ದಿಕ್ಕುತಪ್ಪಿಸಲು ಹೊರಟರು.

ಯಾವ ಅಧ್ಯಯನವೂ ಇಲ್ಲದ, ಕೋರ್ಟ್ ದಾಖಲಾತಿಗಳನ್ನು, ಕೇಸಿನ ಪೇಪರ್ ಗಳನ್ನು ಸ್ಟಡಿ ಮಾಡದೇ ಧರ್ಮಸ್ಥಳದ ವಿರುದ್ಧ ವಿಡಿಯೋ ಮಾಡಿದರೆ ವಿಡಿಯೋದಿಂದಲೂ ಹಣ ಬರುತ್ತದೆ, ಫಂಡರ್ ಗಳಿಂದಲೂ ಹಣ ಬರುತ್ತದೆ ಎಂಬ ಸತ್ಯ ತಿಳಿಯುತ್ತಲೇ ಡಿಜಿಟಲ್ ಮೀಡಿಯಾಗಳು ಯಾವ ಭಯವೂ ಇಲ್ಲದೆ, ಯಾವ ಆತ್ಮಸಾಕ್ಷಿಗೂ ಬೆಲೆಕೊಡದೆ, ಧರ್ಮಸ್ಥಳ ಮತ್ತು ಧರ್ಮಾಧಿಕಾರಿಗಳನ್ನು ನಿಂದಿಸತೊಡಗಿದರು. ಧರ್ಮಸ್ಥಳದ ಪರ ಮಾತನಾಡುವವರನ್ನು ಸೌಜನ್ಯ ವಿರೋಧಿ ಎಂದು ಬಿಂಬಿಸಿ ಟಾರ್ಗೆಟ್ ಮಾಡಲಾಯಿತು. ಅವರಿಗೆ ಧರ್ಮಸ್ಥಳದಿಂದ ಹಣ ಬರುತ್ತಿದೆ ಎಂಬ ಕಥೆ ಕಟ್ಟಲಾಯ್ತು. ಧರ್ಮಾಧಿಕಾರಿಗಳು ದೇಶದ ಕಾನೂನು ವ್ಯವಸ್ಥೆಯನ್ನೇ ಕೊಂಡುಕೊಂಡಿದ್ದಾರೆ. ಹಿಡಿತದಲ್ಲಿಟ್ಟುಕೊಂಡಿದ್ದಾರೆ ಎಂದೆಲ್ಲ ನಂಬಿಸುವ ಯತ್ನ ನಡೆಯಿತು. ಸೌಜನ್ಯ ಪ್ರಕರಣದಿಂದ ಧರ್ಮಸ್ಥಳವನ್ನು ಅಲ್ಲಾಡಿಸುವುದು ಸಾಧ್ಯವಿಲ್ಲ ಎಂದು ಅರ್ಥ ಆಗುತ್ತಿದ್ದಂತೆ, ಧರ್ಮಸ್ಥಳ ಸ್ವಸಹಾಯ ಸಂಘಗಳಲ್ಲಿ ದೌರ್ಜನ್ಯ ನಡೆಯುತ್ತಿದೆ ಎಂಬ ನರೇಟಿವ್ ಹಬ್ಬಿಸಲು ಮಟ್ಟಣ್ಣನವರ್ ಜನರನ್ನು ಎತ್ತಿಕಟ್ಟಲು ನೋಡಿದರು. ತಲೆಬುರುಡೆ ಕಥಾನಕವನ್ನು ಸೃಷ್ಟಿಸಲಾಯಿತು. ಕೊನೆಗೆ ಸುಜಾತಾ ಭಟ್ ಅನನ್ಯಾ ಭಟ್ ಪ್ರಹಸನವೂ ಮುನ್ನೆಲೆಗೆ ತಂದದ್ದಾಯ್ತು.

ಇದೀಗ ಅವರ ಪ್ರತಿ ಅಸ್ತ್ರವೂ ಅಡ್ಡಡ್ಡ ಮಲಗಿವೆ. ಹತಾಶೆಯ ಪರಮಾವಧಿ ತಲುಪಿದ್ದಾರೆ, ಮಟ್ಟಣ್ಣನವರ್, ತಿಮರೋಡಿ ಮತ್ತು ಸಮೀರ್ ಇವರೊಂದಿಗೆ ತೆರೆಮರೆಯಲ್ಲಿ ಇದ್ದ ಇನ್ನೂ ಸಾಕಷ್ಟು ಮಂದಿಗೂ ನಿರಾಸೆಯಾಗಿದೆ. ಅಂತಿಮವಾಗಿ ಧರ್ಮಕ್ಕೆ ಜಯ ಸಿಗುತ್ತಿದೆ ಅನ್ನಬಹುದಾ? ಆ ದಿನ ಹತ್ತಿರವಂತೂ ಬಂದಿದೆ.

ಭಾರತದಲ್ಲಿ ದೇವಾಲಯಗಳ ಮೇಲೆ, ಧರ್ಮಗುರುಗಳ,ಸ್ವಾಮಿಗಳ ಮೇಲೆ ಸಾಕಷ್ಟು ಭಾರಿ ಆರೋಪಗಳು ಬಂದಿವೆ. ಪ್ರಕರಣ ದಾಖಲಾಗಿವೆ. ಶಿಕ್ಷೆಯೂ ಆಗಿದೆ. ಭಾರತದ ಕಾನೂನು ನಿಜಕ್ಕೂ ಬಲಿಷ್ಠವಾಗಿದೆ. ಎಂಥೆಂಥ ರಾಜಕಾರಣಿಗಳನ್ನು ಜೈಲಿಗಟ್ಟಿದೆ. ಸ್ವಾಮೀಜಿಗಳು ಜೈಲಿನಲ್ಲಿ ಕಳೆಯುವಂತಾಗಿದೆ. ಇತ್ತೀಚಿನ ಉದಾಹರಣೆಯಾಗಿ ನೋಡಿದರೆ ಸಿನಿಮಾ ನಟರು, ಸಂಸದರು ಯಾವ ರೀತಿಯಲ್ಲಿ ಅಶಕ್ತರಿದ್ದರು? ಹಣಬಲ ಜನ ಬಲ ರಾಜಕೀಯಬಲ ಎಲ್ಲವೂ ಇದ್ದರೂ ಜೈಲು ತಪ್ಪಲಿಲ್ಲ, ಇಂಥ ವ್ಯವಸ್ಥೆಯಲ್ಲಿ ಧರ್ಮಸ್ಥಳದಲ್ಲಿ ಧರ್ಮಾಧಿಕಾರಿಗಳಿಂದ ತಪ್ಪು ನಡೆದಿದ್ದರೆ ಕಾನೂನಿನ ಕೈಯ್ಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿತ್ತಾ? ಖಂಡಿತ ಇಲ್ಲ.

ಅದರಲ್ಲೂ ಧರ್ಮಸ್ಥಳ ಅಲ್ಪಸಂಖ್ಯಾತ ಜೈನ ಸಮುದಾಯದವರ ದೇವಸ್ಥಾನ. ಅಲ್ಪಸಂಖ್ಯಾತರಲ್ಲಿ ಅತಿ ಸಾತ್ವಿಕರು ಮತ್ತು ದುರ್ಬಲರು ಅಂದರೆ ಬಹುಶಃ ಜೈನ ಸಮುದಾಯವೇ ಅನಿಸುತ್ತದೆ. ಇದೇ ಕಾರಣಕ್ಕೆ ಹಿಂದೂಗಳನ್ನೇ ಎತ್ತಿಕಟ್ಟಿ ಜೈನ ಸುಪರ್ದಿಯಲ್ಲಿರುವ ದೇವಸ್ಥಾನವನ್ನು ವಶ ಮಾಡಿಕೊಳ್ಳುವ ಹುನ್ನಾರವೂ ಇಲ್ಲಿ ಕಾಣುತ್ತಿದೆ. ಆದರೆ ಒಂದು ಅರ್ಥವಾಗಬೇಕು. ಜೈನರಿಂದ ನಿರ್ಮಿಸಲ್ಪಟ್ಟ ದೇವಾಲಯವಾದರೂ ಹಿಂದೂಗಳ ಆರಾಧ್ಯದೈವವಾಗಿ ಮಂಜುನಾಥಸ್ವಾಮಿ ದೇವಾಲಯ ಜಗದ್ವಿಖ್ಯಾತಿ ಪಡೆದಿದೆ. ಇಂದಿಗೂ ಧರ್ಮದ ಭೇದವಿಲ್ಲದೇ ಭಕ್ತರನ್ನು ಸಲಹುತ್ತಿದೆ ಧರ್ಮಸ್ಥಳ. ಇಂಥ ಪವಿತ್ರ ಕ್ಷೇತ್ರದ ಮೇಲ್ಯಾಕೆ ಇಂಥ ದ್ವೇಷ? ಯಾವ ಲಾಭಕ್ಕಾಗಿ?

ನಮ್ಮ ಹಿಂದೂಗಳನ್ನು ನಂಬಿಸುವುದು, ನಂಬಿಕೆ ಒಡೆಯುವುದು ಬಹಳ ಸುಲಭ. ಧರ್ಮಸ್ಥಳದಲ್ಲಿ ಹೀಗೊಂದು ಅತ್ಯಾಚಾರವಂತೆ, ಸಾವಂತೆ, ಅದನ್ನು ಮಾಡಿದ್ದು ಅವರಂತೆ.. ಅಂತೆ ಅಂತೆ ಕಥೆ ಹುಟ್ಟಿದರೆ ಸಾಕು, ಪ್ರಶ್ನಿಸುವ ಬದಲು, ಅನುಮಾನಿಸುವ ಬದಲು, ಇದ್ದರೂ ಇರಬಹುದು ಎಂಬ ತೀರ್ಮಾನಕ್ಕೆ ಬಂದುಬಿಡ್ತಾರೆ. ಪೊಲಿಟಿಕಲೀ ಕರೆಕ್ಟ್ , ನ್ಯಾಯದ ಪರ ನಾವು ಅಂತೆಲ್ಲ ಗುರುತಿಸಿಕೊಳ್ಳುವ ಹುಕಿಯಲ್ಲಿ ಸುಳ್ಳುಗಳ ಪರವೇ ಬ್ಯಾಟಿಂಗ್ ಶುರು ಮಾಡುತ್ತಾರೆ.

ಸಮೀರನ ವಿಡಿಯೋ ಬಂದಾಗ ಹಿಂದುಮುಂದು ಯೋಚಿಸದೇ ಅದನ್ನು ನಂಬಿ, ಶೇರ್ ಮಾಡಿ ಆತನನ್ನು ಫೇಮಸ್ ಮಾಡಿದವರು, ಆತನಿಗೆ ಕೋಟಿಗಟ್ಟಲೆ ಆದಾಯ ಹುಟ್ಟಿಸಿಕೊಟ್ಟವರು ನಮ್ಮವರೇ. ಖುದ್ದು ಆತನೇ ಡಿಸ್‌ಕ್ಲೈಮರ್ ಹಾಕಿಕೊಳ್ಳುತ್ತಾನೆ, ನಾನು ಈ ಪ್ರಕರಣದ ಸಾಕ್ಷಿಗಳನ್ನು ಮಾತನಾಡಿಸಿಲ್ಲ, ನ್ಯಾಯಾಲಯದ ಪೇಪರ್ ಗಳನ್ನು ಓದಿಲ್ಲ. ಒಂದಷ್ಟು ಕೇಳಿದ್ದು, ಒಂದಷ್ಟು ಕಲ್ಪಿಸಿಕೊಂಡದ್ದು ಎಲ್ಲವನ್ನೂ ಸೇರಿಸಿ ವಿಡಿಯೋ ಮಾಡಿದ್ದೇನೆ ಅಂತ. ಮಟ್ಟಣ್ಣನವರ್ ಮತ್ತು ತಿಮರೋಡಿಯೇ ತನ್ನ ನ್ಯೂಸ್ ಸೋರ್ಸ್ ಎಂದೂ ಹೇಳಿಕೊಳ್ಳುತ್ತಾನೆ. ಅತ್ತ ಅವರಿಬ್ಬರ ಕಥೆಗಳು ಸಾವಿರ ಇವೆ. ಅವರ ಸುಳ್ಳುಗಳು ಬಟಾಬಯಲಾಗಿವೆ. ಸಂಚಿನ ಹಿಂದಿರೋ ಉದ್ದೇಶ ಬಹಿರಂಗವಾಗಿವೆ. ಆದರೂ ಜನ ಮಾತ್ರ ಅವರಿಗೆ ಉಘೇ ಉಘೇ ಅಂದರು. ಮೊಬೈಲಲ್ಲಿ ಸಾಕ್ಷಿ ಇದೆ ಅಂತ ಹೇಳುವ ಮಟ್ಟಣ್ಣ ಅದನ್ನು ತನಿಖಾಧಿಕಾರಿಗಳಿಗೆ ಯಾಕೆ ಕೊಡ್ತಾ ಇಲ್ಲ ಅನ್ನೋದಕ್ಕೆ ಉತ್ತರವಿಲ್ಲ. ಕಣ್ಣಮುಂದೆ ಅವರ ನಾಟಕಗಳೆಲ್ಲ ಬಯಲಾದರೂ ಕೆಲವರಿಗೆ ಧರ್ಮಸ್ಥಳದ ಮೇಲೆಯೇ ಅನುಮಾನ. ಕಾರಣ ಮನಸ್ಥಿತಿ.

ತಲೆಬುರುಡೆ ಪ್ರಕರಣ ಸುಳ್ಳು ಎಂದು ಪ್ರೂವ್ ಆಗುವ ತನಕ ರಾಜಕೀಯ ವ್ಯಕ್ತಿಗಳಾಗಲೀ, ಪತ್ರಿಕೆಗಳಾಗಲೀ, ಟಿವಿ ಮಾಧ್ಯಮಗಳಾಗಲೀ ಮುನ್ನೆಲೆಗೆ ಬಂದು ಮಟ್ಟಣ್ಣ ತಿಮ್ಮರೋಡಿ ಗ್ಯಾಂಗನ್ನು ಕೌಂಟರ್ ಮಾಡುವ ಮತ್ತು ಧರ್ಮಸ್ಥಳವನ್ನು ಬೆಂಬಲಿಸುವ ಧೈರ್ಯವನ್ನೇ ತೋರಲಿಲ್ಲ, ಅಥವಾ ಒಂದಲ್ಲಾ ಒಂದು ದಿನ ತಾನಾಗಿ ಸತ್ಯ ಹೊರಬರುತ್ತದೆ ಎಂದು ಕಾದುಕೂತಿದ್ದರಾ? ನಿಜ ಹೇಳಬೇಕೆಂದರೆ, ಧರ್ಮಸ್ಥಳದ ಧರ್ಮಾಧಿಕಾರಿಗಳು ಕೂಡ, ಇಷ್ಟೆಲ್ಲ ತಮ್ಮ ವಿರುದ್ಧ ಆರೋಪ, ಸಂಚು ನಡೆಯುತ್ತಿದ್ದರೂ ಅದನ್ನು ಹತ್ತಿಕ್ಕಲು ಹೋಗಲೇ ಇಲ್ಲ, ಕಾನೂನು ಮತ್ತು ದೇವರು ನೋಡಿ ಕೊಳ್ಳಲಿ ಎಂಬಂತೆ ಸುಮ್ಮನೇ ಇದ್ದುಬಿಟ್ಟರು. ಇದರಿಂದಲೇ ಆ ಗ್ಯಾಂಗ್ ಇನ್ನಷ್ಟು ಹೆಚ್ಚಿಕೊಂಡದ್ದು.

ಆದರೆ ಇದೀಗ ಇಡೀ ರಾಜ್ಯಕ್ಕೆ, ದೇಶಕ್ಕೆ ಗ್ಯಾಂಗಿನ ಅಸಲಿತನ ಗೊತ್ತಾಗಿದೆ. ಸೌಜನ್ಯಾ ಹತ್ಯೆಗೆ ನ್ಯಾಯ ಕೊಡಿಸುವ ಯಾವ ಉದ್ದೇಶವೂ ಇವರಿಗಿಲ್ಲ ಎಂಬುದೂ ತಿಳಿದಿದೆ. ಸ್ವಲಾಭಕ್ಕಾಗಿ, ಹೆಗ್ಗಡೆ ಕುಟುಂಬದ ಮೇಲಿನ ದ್ವೇಷಕ್ಕಾಗಿ, ಧರ್ಮಸ್ಥಳದ ಮಂಜುನಾಥ ಸ್ವಾಮಿ ದೇವಸ್ಥಾನದ ವರ್ಚಸ್ಸನ್ನು ಕೆಡಿಸುವುದಕ್ಕಾಗಿ, ಧಾರ್ಮಿಕ ನಂಬಿಕೆಯನ್ನು ಘಾಸಿಗೊಳಿಸುವುದಕ್ಕಾಗಿ ನಡೆದ ಷಡ್ಯಂತ್ರವಿದು ಎಂಬುದು ಇಡೀ ರಾಜ್ಯಕ್ಕೆ ಈಗ ಗೊತ್ತಾಗಿದೆ. ತಿಮರೋಡಿ, ಮಟ್ಟಣ್ಣನವರ್, ಸಮೀರ್, ಹತಾಶೆ ತಾಳಲಾಗದೆ ಬಡಬಡಿಸಲು ಶುರು ಮಾಡಿದ್ದಾರೆ. ವಿಡಿಯೋಗಳನ್ನು ತಿರುಚಿ ಬೆಂಬಲಿಗರನ್ನು ಕೌಂಟರ್ ಮಾಡಲು ಹೊರಟಿದ್ದಾರೆ. ಇನ್ನು ಕೆಲವೇ ದಿನಗಳಲ್ಲಿ ಸಂಪೂರ್ಣವಾಗಿ ನಕಲಿ ಗ್ಯಾಂಗು ಬೆತ್ತಲೆಯಾಗುತ್ತದೆ. ಧರ್ಮಸ್ಥಳದ ಮಂಜುನಾಥಸ್ವಾಮಿ ಮತ್ತು ವೀರೇಂದ್ರ ಹೆಗ್ಗಡೆಯವರ ಚಾರಿತ್ರ್ಯವಧೆಯ ಪ್ರಯತ್ನ ಸಂಪೂರ್ಣ ನಿಲ್ಲಲೇಬೇಕಾಗುತ್ತದೆ.

ಇಷ್ಟೆಲ್ಲ ಆದನಂತರ ಸರಕಾರದ ತಕ್ಷಣದ ನಡೆ ಏನಿರಬೇಕು? ಮೊದಲು ಅಪಪ್ರಚಾರಕ್ಕೆ ಇಳಿದಿದ್ದ ಈ ಕಿಂಗ್ ಪಿನ್ ಗಳ ವಿರುದ್ಧ ಕೇಸ್ ದಾಖಲಿಸಿಕೊಂಡು ಜೈಲಿಗೆ ತಳ್ಳುವುದು. ಬುರುಡೆಶೋಧಕ್ಕೆ ಬಂದಿದ್ದ ಮಾಸ್ಕ್ ಮ್ಯಾನ್ ನಿಂದ ಅಗಿರುವ ಖರ್ಚು, ರಾಜ್ಯದ ಶಾಂತಿಭಂಗ, ಧರ್ಮಸ್ಥಳದ ಭಕ್ತರಿಗೆ ಆದ ಆತಂಕ, ಪೊಲೀಸ್ ಇಲಾಖೆಯ ದುರುಪಯೋಗ, ಇದಕ್ಕೆ ಶಿಕ್ಷೆ ನೀಡಿ ಬಡ್ಡಿ ಸಮೇತ ದಂಡ ಕೀಳುವುದು. ಇದು ಆಗಲೇಬೇಕು. ಇಡೀ ರಾಜ್ಯದ ಧಾರ್ಮಿಕ ನಂಬಿಕೆಯನ್ನು ಹೊಡೆದುಹಾಕುವ ಅಧಿಕಾರ ಇವರಿಗೆ ಕೊಟ್ಟವರಾರು? ಇವರನ್ನು ಬಂಧಿಸಿ, ಇವರ ಈ ಷಡ್ಯಂತ್ರದ ಹಿಂದಿರುವ ಕಾರಣ, ಹಿಂದಿರುವ ವ್ಯಕ್ತಿಗಳು ಎಲ್ಲವೂ ಹೊರಬರಬೇಕು. ನಂತರ ಕಠಿಣ ಶಿಕ್ಷೆಯೂ ಆಗಬೇಕು. ಸೌಜನ್ಯ ಆತ್ಮಕ್ಕೆ ನಿಜಕ್ಕೂ ಶಾಂತಿ ಸಿಗುವುದು ಈ ಗ್ಯಾಂಗ್ ಗೆ ಶಿಕ್ಷೆಯಾದರೆ ಮಾತ್ರ. ಸೌಜನ್ಯ ಸಾವಿನ ಲಾಭ ಪಡೆದ ಇಂಥವರನ್ನು ಮಂಜುನಾಥ ನೋಡಿಕೊಳ್ಳುತ್ತಾನೆ ಎನ್ನುತ್ತಿದ್ದಾರೆ ಜನ. ಹಾಗಾದಲ್ಲಿ ಅದಕ್ಕಿಂತ ಸಮಾಧಾನ ಮತ್ತೊಂದಿಲ್ಲ. ಈ ಘಟನೆಯ ನಂತರವಾದರೂ ಹಿಂದೂಗಳು ಎಚ್ಚೆತ್ತುಕೊಂಡು ಒಗ್ಗಟ್ಟಿನಿಂದ ಧರ್ಮ ರಕ್ಷಣೆಗೆ ನಿಲ್ಲುತ್ತಾರೆಂಬ ನಿರೀಕ್ಷೆ ಇಟ್ಟುಕೊಳ್ಳಬಹುದಾ? ಇಲ್ಲದಿದ್ದಲ್ಲಿ, ಇಂದು ಧರ್ಮಸ್ಥಳ ಕಂಡ ಸಂಕಷ್ಟ ಇನ್ನೊಂದು ಧಾರ್ಮಿಕ ಕ್ಷೇತ್ರವೂ ಕಾಣಬೇಕಾಗುತ್ತದೆ. ಅಂತಿಮವಾಗಿ ಧರ್ಮಕ್ಕೆ ಜಯ ಸಿಗಬಹುದು. ಆದರೆ ಆ ಹಾದಿಯಲ್ಲಿ ಏನೇನೆಲ್ಲ ನೋಡಬೇಕಾದೀತು?

ಭಟ್ಟರ್ ಸ್ಕಾಚ್

- **ರಾಜು ಪತ್ತಾರ, ಹುಬ್ಬಳ್ಳಿ**
  ಭಟ್ರೇ, ಹೆಂಡತಿ ತವರಿಗೆ ಹೋದ ನಂತರ ನನ್ನ ಮನಸ್ಸನ್ನು ನಿಗ್ರಹಿಸಿಕೊಳ್ಳಲು ಸಾಧ್ಯವಾಗ್ತಾ ಇಲ್ಲವಲ್ಲ?
  – **ನಿಗ್ರಹಿಸಿಕೊಳ್ಳಲು ಸಾಧ್ಯವಾಗಿದ್ದರೆ ಆಕೆ ತವರಿಗೆ ಹೋಗ್ತಾನೇ ಇರಲಿಲ್ಲ!**

- **ವಸಂತ ಭಟ್, ಶಿರಸಿ**
  ಭಟ್ರೇ, ಸುಳ್ಳು ಅಂತ ಗೊತ್ತಿರುತ್ತದೆ ಆದರೂ ನಂಬುತ್ತೇವೆ. ಅದು ಯಾವುದು?
  – **'ಹುಟ್ಟಿಸಿದ ದೇವರು ಹುಲ್ಲು ಮೇಯಿಸುವುದಿಲ್ಲ' ಅಂತ ಭಾವಿಸೋದು!**

- **ರೂಪಶ್ರೀ ಉಡುಪ, ಬೈಂದೂರು**
  ಭಟ್ರೇ, ನನ್ನ ಗಂಡ ಸದಾ ನನ್ನನ್ನೇ ನೋಡಬೇಕು, ಅದಕ್ಕೆ ನಾನೇನು ಮಾಡಬೇಕು?
  – **ಹಾಗಾದ್ರೆ ನೀನು ಜೀವನವಿಡೀ ಮೊಬೈಲ್ ಆಗಿರಬೇಕು!**

- **ಸತ್ಯನಾರಾಯಣ ಕೆ.ಸಿ., ಗಿರಿನಗರ**
  ಭಟ್ರೇ, ಇತ್ತೀಚಿನ ದಿನಗಳಲ್ಲಿ ಯಾರೂ ಕನ್ನಡ ಚಳವಳಿಯನ್ನೇ ಮಾಡುತ್ತಿಲ್ಲವಲ್ಲ?
  – **ಅದನ್ನು ವರ್ಷವಿಡೀ ಮಾಡ್ತಾರಾ? ನವೆಂಬರ್‌ನಲ್ಲಿ ಮಾಡ್ತಾರಪ್ಪಾ!**

- **ವಿದ್ಯಾಧರ, (ಇಮೇಲ್ ಮೂಲಕ)**
  ಭಟ್ರೇ, 'ಗುಡ್ಡಕ್ಕೆ ಮಣ್ಣು ಹೊತ್ತಂತೆ' ಅಂತಾರಲ್ಲ, ಹಾಗಂದ್ರೆ ಏನು?
  – **ಅದು ಹಳೆಯದಾಯ್ತು.. ಈಗ ಧರ್ಮಸ್ಥಳದಲ್ಲಿ ಗುಂಡಿ ತೋಡಿದಂತೆ' ಅಂತಾರೆ!**

- **ಕಗ್ಗಳವಾಡಿ ಅನಂತ, ಬೆಂಗಳೂರು**
  ಭಟ್ರೇ, ಆಕೆ ಸದಾ ತೇಲುತ್ತಲೇ ಇರುವಂತೆ ಭಾಸವಾಗುತ್ತಿದೆಯಲ್ಲ?
  – **ಗಗನಸಖಿಯರ ಬಗ್ಗೆ ಜಾಸ್ತಿ ಯೋಚಿಸಬೇಡ ಅಂತ ಹೇಳಿದ್ರೂ ನೀನು ಕೇಳೊಲ್ಲ!**

- **ಭಾಸ್ಕರ ಶೆಟ್ಟಿ, ಬೆಂಗಳೂರು**
  ಭಟ್ರೇ, ಕ್ವಾರ್ಟರ್ಸ್ ಕೊಡದಿದ್ದರೆ ಮುಷ್ಕರ ಅಂತ ಪೌರ ಕಾರ್ಮಿಕರ ಹೆಂಡತಿಯರು ಬೆದರಿಸುತ್ತಿದ್ದಾರಲ್ಲ?
  – **ಅವರ ಗಂಡಂದಿರಿಗೆ ಕ್ವಾರ್ಟರ್ ಇದ್ರೆ ಸಾಕು!**

- **ರಂಜಿತ್ ಗೌಡ, ಕೊಳ್ಳೇಗಾಲ**
  ಭಟ್ರೇ, ನಿಮ್ಮ ಥರ ಶರ್ಟ್ ಹಾಕಬೇಕು ಅಂತಿದೀನಿ ಓಕೆನಾ?
  – **ಅದಕ್ಕಿಂತ ಮೊದಲು ಪ್ಯಾಂಟಿನ ಜಿಪ್ಪನ್ನು ಸರಿಯಾಗಿ ಹಾಕಿಕೋ!**

- **ರಾಜೇಶ ಮುನಿಯಪ್ಪ, ಗುಡಿಬಂಡೆ**
  ಭಟ್ರೇ, ಈಗಲೇ ತಕ್ಷಣ ಹೇಳು ಅಂತಾಳಲ್ಲ ಏನ್ಮಾಡ್ಲಿ?
  – **ಬಾಲ್ಯದಲ್ಲಿ 'ಸಂಜೆವಾಣಿ' ಓದಿ ಬೆಳೆದವಳಿರಬೇಕು!**

- **ಸುರೇಶ ನಾಯಕ, ನಾಯಂಡಹಳ್ಳಿ**
  ಭಟ್ರೇ, ಒಂದು ಮುತ್ತು ಕೊಟ್ರೆ ಎಲ್ಲ ಮಾಫ್ ಅಂತಾಳಲ್ಲ?
  – **ಕೊಡಬಾರದೇ? ಅದಕ್ಕೂ ನನ್ನ ಸಹಾಯ ಬೇಕಾ?!**

ಅದೇ ಭೂಮಿ, ಆಕಾಶ; ಬದುಕಿನಲ್ಲೆಷ್ಟು ವ್ಯತ್ಯಾಸ!

ಯೂರೋಪಿನ ಎಲ್ಲಾ ನಗರ ಪ್ರದೇಶದಲ್ಲಿ ವಾರಕ್ಕೊಂದು ಬಾರಿ ಹಳೆ ಪದಾರ್ಥಗಳ ಮಾರಾಟಕ್ಕೆಂದು ಕೂಡ ಒಂದು ಸಂತೆ ಅಥವಾ ಮಾರುಕಟ್ಟೆ ಏರ್ಪಡಿಸುತ್ತಾರೆ. ಈ ಸಂತೆಯಲ್ಲಿ ಜನ ಸಾಮಾನ್ಯರು ತಮಗೆ ಬೇಡದ ವಸ್ತುಗಳನ್ನ ಮಾರಾಟ ಮಾಡುತ್ತಾರೆ. ಇವರು ಪೂರ್ಣಾವಧಿ ವ್ಯಾಪಾರಿಗಳಾಗಿರಬೇಕು ಎಂದೇನೂ ಇಲ್ಲ.

ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ
vveditoped@gmail.com
mookanahalli@gmail.com

ನಾವು ಚಿಕ್ಕವರಾಗಿದ್ದಾಗ ಮನೆಗೆ ಬೇಕಾಗುವ ಆಹಾರ ಪದಾರ್ಥಗಳನ್ನು ಶೆಟ್ಟರ ಅಂಗಡಿಯಿಂದ ತರುತ್ತಿದ್ದೆವು. ಇಲ್ಲವೇ ಊರಿನಲ್ಲಿದ್ದ ಇತರ ಅಂಗಡಿಯಲ್ಲಿ ಖರೀದಿ ಮಾಡಿ ತರುತ್ತಿದ್ದೆವು ಅಲ್ಲವೇ ? ಇಂತಹ ಅಂಗಡಿಗಳಲ್ಲಿ ಅ ಅಕ್ಕಿ ,ಬೇಳೆ, ಬೆಲ್ಲ, ಇನ್ನಿತರೇ ದಿನಸಿ ಪದಾರ್ಥಗಳೆಲ್ಲವನ್ನ ಗೋಣಿಚೀಲದಲ್ಲಿ ಇಟ್ಟಿರುತ್ತಿದ್ದರು. ಎಲ್ಲವೂ ಗ್ರಾಹಕನ ಕಣ್ಣಿಗೆ ಕಾಣುತ್ತಿತ್ತು. ಆದರೆ ಯಾರೂ ಅದನ್ನ ಮುಟ್ಟುವ ಆಗಿರಲಿಲ್ಲ. ಎಷ್ಟು ಬೇಕು ಅಂತ ಕೇಳಿ ಶೆಟ್ಟರು ಅಥವಾ ಅವರ ಅಂಗಡಿಯಲ್ಲಿ ಕೆಲಸ ಮಾಡುವ ಸಹಾಯಕ ತೂಗಿ ಕೊಡುತ್ತಿದ್ದರು. ನ್ಯೂಸ್ ಪೇಪರ್‌ನಲ್ಲಿ ಕಟ್ಟಿ ಕೊಡುವುದು ಕೂಡ ವಾಡಿಕೆಯಾಗಿತ್ತು . ಆಮೇಲೆ ಬಂದ ಮಲಯಾಳಿ ಕಾಕಾ ಅಂಗಡಿಯವರದ್ದು ಕೂಡ ಹೆಚ್ಚು ಕಡಿಮೆ ಇದೆ ವ್ಯವಸಾಯ. ಬದಲಾವಣೆಯ ಹೆಸರಲ್ಲಿ ಎಷ್ಟು ನೀರು ಹರಿದು ಹೋಯಿತು ನೀವೇ ನೋಡಿ ! ನಾವು ಮಾಲ್‌ಗಳನ್ನ ತಂದೆವು. ಇವರುಗಳು ಗೊತ್ತಿಲ್ಲದ ಹಾಗೆ ಮಾಯವಾದರು ಇಲ್ಲವೇ ಅವರೂ ಕೂಡ ಡಿಪಾರ್ಟ್ಮೆಂಟಲ್ ಸ್ಟೋರ್ ಹೆಸರಲ್ಲಿ ಎಲ್ಲವನ್ನೂ ಪ್ಲಾಸ್ಟಿಕ್ ಕವರ್‌ನಲ್ಲಿ ಪ್ಯಾಕ್ ಮಾಡಿರುವ ಯಾವುದೂ ಬ್ರಾಂಡ್ ಹೆಸರಿರುವ ಅದೇ ಪದಾರ್ಥಗಳನ್ನ ಮಾರಲು ತೊಡಗಿದರು . ಮೊದಲೆಲ್ಲ ಬರುವ ಗ್ರಾಹಕನ ಪೂರ್ಣ ಮಾಹಿತಿ ಶೆಟ್ಟರಿಗೆ ಗೊತ್ತಿರುತ್ತಿತ್ತು. ಆದರೆ ಅವರು ಎಂದೂ ಅದನ್ನ ಸ್ವಂತಕ್ಕೆ ಬಳಸಿ ಕೊಳ್ಳುತ್ತಿರಲಿಲ್ಲ. ಇದೀಗ ಅಂಗಡಿಯ ಮಾಲಿಕನಿಗೆ ಬರುವ ಗ್ರಾಹಕರ ಮುಖ ಪರಿಚಯ ಕೂಡ ಇರುವುದಿಲ್ಲ. ಆದರೆ ವಿಪರ್ಯಾಸ ನೋಡಿ ಕಲೆಕ್ಷನ್ ಹೆಸರಲ್ಲಿ ನಮ್ಮ ಜಾತಕ ಅವರ ಬಳಿ ಸೇರುತ್ತೆ. ಅದು ಮತ್ತೆಲ್ಲೂ ಕಂಡು ಕೇಳದವರಿಗೂ ಸಿಗುತ್ತದೆ. ಮೊದಲೆಲ್ಲಾ ಐದು ಅಥವಾ ಹತ್ತು ರೂಪಾಯಿ ಇರದಿದ್ದರೆ ಅಥವಾ ಕೆಲವೊಮ್ಮೆ ಹಣವನ್ನ ಮರೆತು ಹೋಗಿದ್ದರೆ ಕೂಡ ಅಂಗಡಿಯವರು ಪರವಾಗಿಲ್ಲ ತೆಗೆದು ಕೊಂಡು ಹೋಗಿ ಎಂದ ಉದಾಹರಣೆಗಳು ಅನೇಕ. ಇವತ್ತಿನ ಬದಲಾದ ಕಾಲಘಟ್ಟದಲ್ಲಿ ವ್ಯಾಪಾರ ಪ್ರಾಮುಖ್ಯತೆ ಪಡೆದು ಮನುಷ್ಯನ ಸಂಬಂಧಗಳು ಹಿಂಬದಿಗೆ ಸರಿದಿವೆ. ಎರಡು ಅಥವಾ ಮೂರು ದಶಕಗಳ ಹಿಂದೆ ಉಭಯ ಕುಶಲೋಪರಿ ಇಲ್ಲದೆ ಯಾವುದೇ ಕೆಲಸ ಪ್ರಾರಂಭಿಸುತ್ತಿರಲಿಲ್ಲ. ಭಾರತದ ಬದಲಾಗಿದೆ, ಅಭಿವೃದ್ಧಿ ಹೆಸರಿನಲ್ಲಿ ನಾವು ಯಾಂತ್ರಿಕ ಬದುಕಿನತ್ತ ಸಾಗಿದ್ದೇವೆ.

ಇತಿಹಾಸ ಪುನರಾವರ್ತನೆ ಆಗುತ್ತೆ. ಮೇಲೇರಿದ್ದು ಕೆಳಗೆ ಬರಲೇ ಬೇಕಲ್ಲವೇ ? ಅದು ಪ್ರಕೃತಿ ನಿಯಮವಲ್ಲವೇ ? ಸ್ಪೇನ್ ನ ರಾಜಧಾನಿ ಮ್ಯಾಡ್ರಿಡ್ ನಲ್ಲಿ ಇತ್ತೀಚಿಗೆ ನಮ್ಮ ಶೆಟ್ಟರ ಅಂಗಡಿಯನ್ನ ಹೋಲುವ ಎಲ್ಲವನ್ನೂ ಗೋಣಿ ಚೀಲದಲ್ಲಿ ತುಂಬಿಡುವ ಅಂಗಡಿಗಳಲ್ಲಿ ಮಾರಾಟ ಹೆಚ್ಚಾಗುತ್ತಿದೆ . ಜನ ನಿಧಾನವಾಗಿ ಮಾಲ್‌ಗಳಿಗೆ ಆದಿಯೋಸ್ (ಬಾಯ್) ಹೇಳುತ್ತಿದ್ದಾರೆ . ಸ್ಪೇನ್ ಸರಕಾರ ಪ್ಲಾಸ್ಟಿಕ್ ವಿರುದ್ಧ ಸೀರಿಯಸ್ ಆಗಿ ಸಮರ ಸಾರಿರುವುದರ ಫಲಿತಾಂಶವಿದು. ಜನ ತಮಗೆ ಬೇಕಾದ ಪದಾರ್ಥಗಳನ್ನು ಎಷ್ಟು ಬೇಕು ಅಷ್ಟು ತೂಕ ಮಾಡಿ ಕೊಳ್ಳುವ ಪರಿಪಾಠ ಬೆಳೆಯುತ್ತಿದೆ. ಫ್ರೆಶ್ ಹಾಲು , ಮೊಸರು ಜೊತೆಗೆ ಎಲ್ಲವನ್ನೂ ಸಾವಯವ ಕೊಳ್ಳಬೇಕು ಎನ್ನುವ ಕೂಗು ಕೂಡ ಹೆಚ್ಚಾಗುತ್ತಿದೆ. ಆಹಾರ ಪದಾರ್ಥಗಳ ವಿಷಯದಲ್ಲಿ ಈ ರೀತಿಯ ಬದಲಾವಣೆಯನ್ನು ವಿಶ್ವದ ಎಲ್ಲೆಡೆ ಇಂದು ಕಾಣಬಹುದು. ಆದರೆ ಸ್ಪೇನ್ ದೇಶದಲ್ಲಿ ಜನರ ನಡುವಿನ ಬಾಂಧವ್ಯ ಮಾತ್ರ ಇಲ್ಲಿನಷ್ಟು ಹದಗೆಟ್ಟಿಲ್ಲ ಎಂದು ಧೈರ್ಯವಾಗಿ ಹೇಳಬಹುದು. ಅದು ಬ್ಯಾಂಕಿರಲಿ ಅಥವಾ ತರಕಾರಿ ಅಂಗಡಿ , ಪದೇ ಪದೇ ಅದೇ ಅಂಗಡಿಗೆ ನಾವು ಭೇಟಿ ಕೊಡಲು ಶುರು ಮಾಡಿದರೆ , ಉಭಯ ಕುಶಲೋಪರಿ ಇಲ್ಲದೆ ವ್ಯಾಪಾರ ಶುರುವಾಗುವುದೇ ಇಲ್ಲ. ಅಷ್ಟರ ಮಟ್ಟಿಗೆ ಇಲ್ಲಿನ ಜನರಲ್ಲಿ ಭೂತದಯೆ ಉಳಿದುಕೊಂಡಿದೆ.

ಸ್ಪೇನ್ ಎಂದಲ್ಲ. ಯೂರೋಪಿನ ದೇಶಗಳಲ್ಲಿ ಕೂಡ ಕೇವಲ 20/30 ವರ್ಷಗಳ ಹಿಂದೆ ಮಾಲ್ ಪ್ರಾರಂಭವಾದರೆ ಅದೇನೋ ದೊಡ್ಡದು ಎನ್ನುವ ಭಾವನೆಯಿತ್ತು. ಬಡಾವಣೆ ಅಭಿವೃದ್ಧಿ ಹೊಂದುತ್ತಿದೆ ಎನ್ನುವ ಖುಷಿ ಜನರಲ್ಲಿ ಕೂಡ ಇತ್ತು. ಕೇವಲ ಎರಡು ಮೂರು ದಶಕದಲ್ಲಿ ಅದೆಷ್ಟು ಬದಲಾವಣೆ ! ಜನರಿಗೆ ಸರಿ ತಪ್ಪುಗಳ ಪಾಠವನ್ನು

ಆರ್ಥಿಕ ಕುಸಿತ ಮತ್ತು ಆ ನಂತರ ಬಂದ ಕರೋನ ಒಂದಷ್ಟು ಕಲಿಸಿದೆ. ಒಂದು ಪದಾರ್ಥದ ಬೆಲೆಯನ್ನು ಸುಖಾಸುಮ್ಮನೆ ಏರಿಸುವುದರಿಂದ ಹೀಗೆ ಏರಿಕೆಯಾದ ಪದಾರ್ಥವನ್ನ ಕೊಂಡು ನಾವೇನೂ ದೊಡ್ಡ ಮನುಷ್ಯರು ಎಂದು ಹಿಗ್ಗುವುದರಲ್ಲಿ ಪ್ರಯೋಜನವಿಲ್ಲ ಎನ್ನುವುದನ್ನ ಜನತೆ ಅರ್ಥ ಮಾಡಿಕೊಂಡಿದ್ದಾರೆ.

ಯೂರೋಪು ಇಂದಿಗೂ ತನ್ನತನವನ್ನ ಬಿಟ್ಟು ಕೊಡದ ಪುಟಾಣಿ ಹಳ್ಳಿಗಳ ಒಕ್ಕೂಟ ಎನ್ನಬಹುದು. ಹೀಗೆ ಹೇಳಲು ಪ್ರಮುಖ ಕಾರಣ ಇಂದಿಗೂ ಇಲ್ಲಿ ತಮ್ಮ ಹಳೆಯ ಯಾವುದೇ ಪದ್ಧತಿಗಳನ್ನು ಜನರು ಬಿಟ್ಟಿಲ್ಲ. ಬುಧವಾರ, ಶುಕ್ರವಾರ ಮತ್ತು ಭಾನುವಾರ ಸಂತೆ ನಡೆಯುತ್ತದೆ. ಹಲವು ಕಡೆ ದಿನಗಳ ಬದಲಾವಣೆ ಇರುತ್ತದೆ. ಆದರೆ ಸಂತೆಯಂತೂ ಇದ್ದೆ ಇರುತ್ತದೆ. ಸಂತೆಯಲ್ಲಿ ತರಕಾರಿ ಹಣ್ಣು , ಬಟ್ಟೆ , ಲೆದರ್ ಬ್ಯಾಗ್ , ಜಾಕೆಟ್ , ಪಾದರಕ್ಷೆಯಿಂದ , ತಿನ್ನಲು ಖಾದ್ಯಗಳು ಕೂಡ ಸಿಗುತ್ತದೆ. ಬೆಳಿಗ್ಗೆ ಏಳರ ಆಸುಪಾಸಿನಲ್ಲಿ ಶುರುವಾಗುವ ಇಂತಹ ಸಂತೆಗಳು ಮಧ್ಯಾಹ್ನ ಮೂರಕ್ಕೆ ಮುಕ್ತಾಯವಾಗುತ್ತವೆ. ಸಾಯಂಕಾಲ ನಾಲ್ಕರ ವೇಳೆಗೆ ಸಂತೆ ನಡೆದಿತ್ತು ಎನ್ನುವುದರ ಕುರುಹು ಕೂಡ ಕಾಣದಷ್ಟು ಸ್ವಚ್ಛ ಮಾಡುತ್ತಾರೆ.

ಯೂರೋಪಿನ ಎಲ್ಲಾ ನಗರ ಪ್ರದೇಶದಲ್ಲಿ ವಾರಕ್ಕೊಂದು ಬಾರಿ ಹಳೆ ಪದಾರ್ಥಗಳ ಮಾರಾಟಕ್ಕೆಂದು ಕೂಡ ಒಂದು ಸಂತೆ ಅಥವಾ ಮಾರುಕಟ್ಟೆ ಏರ್ಪಡಿಸುತ್ತಾರೆ. ಈ ಸಂತೆಯಲ್ಲಿ ಜನ ಸಾಮಾನ್ಯರು ಅಂದರೆ ಅವರು ಪೂರ್ಣಾವಧಿ ವ್ಯಾಪಾರಿಗಳಾಗಿರಬೇಕು ಎಂದೇನೂ ಇಲ್ಲ. ತಮಗೆ ಬೇಡದ ವಸ್ತುಗಳನ್ನ ಮಾರಾಟ ಮಾಡುತ್ತಾರೆ. ಅಂದರೆ ನಿಮ್ಮ ಬಳಿ ಇರುವ ಪಾದರಕ್ಷೆ ನಿಮಗೆ ಇಷ್ಟವಿಲ್ಲ ಅಥವಾ ನಿಮ್ಮ ಮನೆಯಲ್ಲಿ ಇರುವ ಹಳೆಯ ಟೇಬಲ್ ಅಥವಾ ಛೇರುಗಳನ್ನ ಮಾರಬೇಕಿದೆ. ಇಲ್ಲಿ ಅದನ್ನು ಮಾರಾಟ ಮಾಡಬಹುದು. ಹೀಗೆ ಇಲ್ಲಿ ಸಿಗದ ವಸ್ತುವಿಲ್ಲ ಎನ್ನಬಹುದು. ಇಲ್ಲಿನ ಜನ ಸಾಮಾನ್ಯರು ಅಥವಾ ಮಧ್ಯಮ ವರ್ಗದ ಜನರಲ್ಲಿ ಭಾರತೀಯ ಮಧ್ಯಮವರ್ಗದ ಜನರಲ್ಲಿ ಇರುವ 'ಒಣ ಜಂಬ ಅಥವಾ ಸುಳ್ಳು ಪ್ರತಿಷ್ಠೆ' ಇಲ್ಲ. ತಮ್ಮ ಬಳಿ ಇಲ್ಲದ ವಿಷಯದ ಬಗ್ಗೆ ಇದೆಯೆಂದು ತೋರಿಸಿಕೊಳ್ಳುವ ಗುಣ ಕೂಡ ಕಡಿಮೆ.

ನಮ್ಮಲ್ಲಿ ಎರಡು ಮೂರು ದಶಕದ ಹಿಂದೆ ನೆಂಟರ ಮಕ್ಕಳ ಬಟ್ಟೆಯನ್ನು ಅವರಿಗೆ ಚಿಕ್ಕದಾಯಿತು ಎಂದು ನಾವು ಹಾಕುತ್ತಿದ್ದೆವು. ಇಂದಿಗೆ ಈ ರೀತಿಯ ವಿಷಯವನ್ನು ಊಹಿಸಿಕೊಳ್ಳುವುದು ಕೂಡ ಅಸಾಧ್ಯ. ಈ ವಿಷಯದಲ್ಲಿ ಯೂರೋಪು ಇಂದಿಗೂ ತನ್ನ ಹಳೆಯತನವನ್ನು ಉಳಿಸಿಕೊಂಡಿದೆ. ಅತಿ ಕಡಿಮೆ ಬೆಲೆಯಲ್ಲಿ ಹೀಗೆ ಬಳಸಿದ ಬಟ್ಟೆ , ಶೂಸ್ ನಿಂದ ದಿನ ನಿತ್ಯದ ಬದುಕಿಗೆ ಬೇಕಾಗುವ ಹಲವಾರು ವಸ್ತುಗಳನ್ನ ಇಲ್ಲಿ ಕೊಳ್ಳಬಹುದು . ಮೊದಲೇ ಹೇಳಿದಂತೆ ಈ ಸಮಾಜದಲ್ಲಿ ಇದನ್ನ ಪ್ರತಿಷ್ಠೆಗೆ ಕುಂದು ಎನ್ನುವಂತೆ ನೋಡುವುದಿಲ್ಲ. ಬದಲಿಗೆ ಪದಾರ್ಥಗಳ ಪೂರ್ಣ ಬಳಕೆಯಾದಂತೆ ಆಯ್ತು ಎಂದು ನೋಡುತ್ತಾರೆ.

ಊಟ ತಿಂಡಿಯ ವಿಷಯದಲ್ಲಿ ಸಹ ಈ ಮಾತು ಅನ್ವಯ, ಅಂದರೆ ಯಾರೋ ತಿಂದು ಬಿಟ್ಟ ಆಹಾರ ಇನ್ನೊಬ್ಬರು ತಿನ್ನುತ್ತಾರೆ ಎಂದಲ್ಲ. ಆದರೆ ನಾವು ಯಾವುದಾದರೂ ಹೋಟೆಲ್ ಗೆ ಹೋಗಿ ನಾವು ಆದೇಶ ನೀಡಿದ್ದ ಆಹಾರ ಹೆಚ್ಚಾದರೆ , ಅದೆಷ್ಟೇ ಉಳಿದಿರಲಿ ಅದನ್ನ ಹೋಟೆಲ್ ನವರು ಪ್ಯಾಕ್ ಮಾಡಿ ಗ್ರಾಹಕರ ಕೈಲಿಡುತ್ತಾರೆ. ಬಿಸಾಡುವುದನ್ನು ಇಲ್ಲಿ ಅಷ್ಟೇನೂ ಗೌರವಯುತವಾಗಿ ಜನ ಕಾಣುವುದಿಲ್ಲ. ಕೇವಲ ಅರ್ಧ ರೋಟಿ, ಎರಡು ಚಮಚ ದಾಲ್ ಮಿಕ್ಕಿದ್ದರೂ ಕೂಡ ಅದನ್ನು ಪ್ಯಾಕ್ ಮಾಡಿಕೊಡುತ್ತಾರೆ. ಆಹಾರ ಪೋಲು ಮಾಡುವುದನ್ನು ಇಲ್ಲಿನ ಜನ ಮೆಚ್ಚುವುದಿಲ್ಲ. ಭಾರತದಲ್ಲಿ ಆಹಾರದ ಕೊರತೆಯಿಂದ ನಿತ್ಯವೂ ಸಾಕಷ್ಟು ಮರಣವಾಗುತ್ತದೆ. ಅದರ ಜೊತೆ ಜೊತೆಗೆ ನಿತ್ಯವೂ ಟನ್‌ಗಟ್ಟಲೆ ಆಹಾರ ಕೂಡ ಪೋಲಾಗುತ್ತದೆ.

ನಮ್ಮಲ್ಲಿ ಸಭೆ , ಸಮಾರಂಭದ ಹೆಸರಿನಲ್ಲಿ ಬಹಳಷ್ಟು ಆಹಾರ ಪದಾರ್ಥವನ್ನ ಪೋಲು ಮಾಡುತ್ತೇವೆ. ಮದುವೆಗೆ ಅಥವಾ ಇನ್ನಿತರ ಸಮಾರಂಭಕ್ಕೆ ನಾವು ಆಮಂತ್ರಣವನ್ನು ನೀಡುತ್ತೇವೆ. ಆದರೆ ಅವರಲ್ಲಿ ಎಷ್ಟು ಜನ ಬರುತ್ತಾರೆ ? ಅಥವಾ ಇಲ್ಲ ? ಎನ್ನುವ ನಿಖರತೆ ನಮಗಿರುವುದಿಲ್ಲ.

ಸ್ಪ್ಯಾನಿಷರು ಈ ವಿಷಯದಲ್ಲಿ ನಮಗಿಂತ ಬಹಳ ಭಿನ್ನ. ಮದುವೆಯಂತಹ ಸಮಾರಂಭಕ್ಕೆ ನೂರು ಜನರ ಮೇಲೆ ಕರೆಯುವುದಿಲ್ಲ . ಮದುವೆ ಇಂತಹ ದಿನ, ಇಂತಹ ಜಾಗದಲ್ಲಿ ಎನ್ನುವ ಮಾಹಿತಿಯ ಜೊತೆಗೆ ಹೊಸ ದಂಪತಿಗಳಿಗೆ ಯಾವ ವಸ್ತುಗಳ ಅವಶ್ಯಕತೆಯಿದೆ ಎನ್ನುವ ಪಟ್ಟಿಯನ್ನು ಕೂಡ ಹಾಕಿರುತ್ತಾರೆ. ಯಾರನ್ನು ಕರೆಯುತ್ತಾರೆ ಅವರಿಗೆಲ್ಲಾ ಈ ವೆಬ್ ಸೈಟ್ ಲಿಂಕ್ ಕೂಡ ಕಳುಹಿಸುತ್ತಾರೆ. ಉದಾಹರಣೆಗೆ ನವ ದಂಪತಿಗಳಾಗುವರಿಗೆ ವಾಷಿಂಗ್ ಮಷೀನ್ ಅವಶ್ಯಕತೆಯಿದೆ ಎಂದುಕೊಳ್ಳಿ. ಅದರ ಬೆಲೆ 500 ಯುರೋ ಆದರೆ ನಿಮಗೆ 500 ಕೊಡಲು ಆಗುವುದಿಲ್ಲ. ನೀವು 100 ಯುರೋವನ್ನ ವಾಷಿಂಗ್ ಮಷೀನ್ ಖರೀದಿಗೆ ಎಂದು ನೀಡಬಹುದು. ಅದು ಮುಗಿದ ನಂತರ ಲಿಸ್ಟ್ ನಿಂದ ಆ ವಸ್ತುವನ್ನ ತೆಗೆದು ಹಾಕುತ್ತಾರೆ. ನೀವು ಈ ರೀತಿಯ ಪಟ್ಟಿಯನ್ನು ನೋಡುವ ವೇಳೆ ಎಲ್ಲಾ ಬೇಡಿಕೆಗಳು ಮುಗಿದು ಹೋಗಿದ್ದರೆ ನೀವು ಗಿಫ್ಟ್ ಕೂಪನ್ ಖರೀದಿಸಿ ನೀಡಬಹುದು. ನಮ್ಮಂತೆ ಹಣ ನೀಡುವ ಸಂಪ್ರದಾಯ ಇಲ್ಲ. ಇದರಿಂದ ಒಂದೇ ವಸ್ತುವನ್ನು ಹಲವರು ನೀಡುವುದು ತಪ್ಪುತ್ತದೆ. ಹಣವೂ ಸದುಪಯೋಗವಾಗುತ್ತದೆ. ಇದೊಂದು ಉತ್ತಮ ಪದ್ಧತಿ . ಭಾರತೀಯರು ಕೂಡ ಇದನ್ನ ಅಳವಡಿಸಿಕೊಂಡರೆ ಒಳ್ಳೆಯದು. ಹತ್ತಾರು ಫೋಟೋ ಫ್ರೇಮ್‌ಗಳು, ಗಡಿಯಾರ ಪುನರಾವರ್ತನೆಯಾಗುವುದು ತಪ್ಪುತ್ತದೆ.

ಇಲ್ಲಿ ಎಲ್ಲಾ ಪದಾರ್ಥಗಳ ಬೆಲೆ ಹೆಚ್ಚಿರುವುದರಿಂದ ಜನರಿಗೆ ವಸ್ತುವಿನ ಮೌಲ್ಯದ ಅರಿವಿದೆ. ಹೀಗಾಗಿ ಸಣ್ಣ ಪುಟ್ಟ ವಿಷಯಗಳನ್ನ ಸಹ ಜನತೆ ಬಹಳ ಕಕ್ಕುಲಾತಿಯಿಂದ ಕಾಣುತ್ತಾರೆ. ಇಲ್ಲಿ ಭಾರತದ ಮಧ್ಯಮವರ್ಗದ ಜನ ಅನುಭವಿಸುವ ಯಾವುದೇ ಸವಲತ್ತು ಅಥವಾ ಸೌಲಭ್ಯವನ್ನ ಹೊಂದಲು ಕಷ್ಟ ಸಾಧ್ಯ. ಮನೆ ಕೆಲಸದವರನ್ನು ಹೊಂದುವುದು , ಬಟ್ಟೆಯನ್ನು ಇಸ್ತ್ರಿಗೆ ನೀಡುವುದು , ಮನೆಯ ಸುಣ್ಣ ಬಣ್ಣಕ್ಕೆ ಜನರನ್ನ ನೇಮಕ ಮಾಡುವುದು, ಮಕ್ಕಳನ್ನು ನೋಡಿಕೊಳ್ಳಲು ಆಯಾಳನ್ನು ಇಟ್ಟುಕೊಳ್ಳುವುದು , ಕಾರಿಗೆ ಡ್ರೈವರ್‌ನನ್ನು ನೇಮಿಸಿಕೊಳ್ಳುವುದು ಹೀಗೆ ಇವೆಲ್ಲಾ ಇಲ್ಲಿ ಲಕ್ಸುರಿ ಪಟ್ಟಿಗೆ ಸೇರಿಕೊಳ್ಳುತ್ತವೆ. ದಿನ ನಿತ್ಯದ ಮನೆ ಕಸ ಮುಸುರೆ , ಬಟ್ಟೆ , ಎಲ್ಲವೂ ಓಕೆ. ಆದರೆ ಮನೆಯನ್ನು ಎರಡು ವರ್ಷಕ್ಕೊಮ್ಮೆ ಪೈಂಟ್ ಮಾಡಲು ಕೂಡ ಜನ ಇಲ್ಲಿ ಬೇರೆಯವರನ್ನು ನೇಮಕ ಮಾಡಿಕೊಳ್ಳುವುದಿಲ್ಲ. ವಾರಾಂತ್ಯದಲ್ಲಿ ಮತ್ತು ಬಿಡುವಿನ ವೇಳೆಯಲ್ಲಿ ಅವರೇ ಈ ಕೆಲಸವನ್ನ ಕೂಡ ಮಾಡುತ್ತಾರೆ. ಮನೆಯಲ್ಲಿ ಆಗುವ ಸಣ್ಣ ಪುಟ್ಟ ರಿಪೇರಿ ಕೆಲಸವನ್ನು ಕೂಡ ಕಲಿತಿರುತ್ತಾರೆ. ಆ ನಿಟ್ಟಿನಲ್ಲಿ ನೋಡುವುದಾದರೆ ಭಾರತೀಯ ಮಧ್ಯಮ ವರ್ಗದ ಜನ ಸುಖದ ಸುಪ್ಪತ್ತಿಗೆಯಲ್ಲಿ ತೇಲಾಡುತ್ತಿದ್ದಾರೆ ಎಂದು ಧಾರಾಳವಾಗಿ ಹೇಳಬಹುದು. ಇದೆಲ್ಲದರ ಜೊತೆಗೆ ವರ್ಷದ ಆರೆಂಟು ತಿಂಗಳು ಕಾಡುವ ಚಳಿ ಇವರನ್ನು ಇನ್ನಷ್ಟು ಮನುಷ್ಯರನ್ನಾಗಿ ಮಾಡಿದೆ. ಮೂಲದಲ್ಲಿ ನಾವೆಲ್ಲಾ ಒಂದೇ ಎಂದಾದರೂ ಪರಿಸರ , ಸನ್ನಿವೇಶಗಳು ಮನುಷ್ಯ ಬದುಕುವ ರೀತಿಯನ್ನು ಬದಲಾಯಿಸುವ ರೀತಿ ಸೋಜಿಗ ಹುಟ್ಟಿಸುತ್ತದೆ.

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಮುಖ್ಯಮಂತ್ರಿಗಳು ಶೀಘ್ರ ಉದ್ಯೋಗ ಭಾಗ್ಯ ಕರುಣಿಸಲಿ

ಮಾನ್ಯರೇ,

ಕಳೆದ 10 ತಿಂಗಳುಗಳಿಂದ ರಾಜ್ಯದಲ್ಲಿ ಖಾಲಿಯಿರುವ ಹುದ್ದೆಗಳ ನೇಮಕಾತಿಗಾಗಿ ರಾಜ್ಯ ಸರಕಾರವು ಯಾವುದೇ ಅಧಿಸೂಚನೆಗಳನ್ನೇ ಹೊರಡಿಸದೆ ನೇಮಕಾತಿ ಪ್ರಕ್ರಿಯೆಗಳು ಸಂಪೂರ್ಣ ಸ್ಥಗಿತಗೊಂಡಿರುವ ಕಾರಣ ಲಕ್ಷಾಂತರ ಬಡ ಹಾಗೂ ಗ್ರಾಮೀಣ ನಿರುದ್ಯೋಗಿ ಅಭ್ಯರ್ಥಿಗಳು ಚಾತಕ ಪಕ್ಷಿಗಳಂತೆ ಕಾಯುವಂತಾಗಿದೆ, ಅಲ್ಲದೇ ಸರಕಾರದ ವಿವಿಧ ಇಲಾಖೆಗಳಲ್ಲಿ ಸಿಬ್ಬಂದಿಗಳ ಕೊರತೆಯಿಂದಾಗಿ ಆಡಳಿತದಲ್ಲಿಯೂ ಅಡಚಣೆ ಉಂಟಾಗುತ್ತಿದೆ. ಹಲವಾರು ಜನಪರ ಯೋಜನೆಗಳನ್ನು ಜಾರಿಗೆ ತಂದ ಮಾನ್ಯ ಮುಖ್ಯಮಂತ್ರಿಗಳು ರಾಜ್ಯದ ಲಕ್ಷಾಂತರ ಅಭ್ಯರ್ಥಿಗಳ ಹಿತದೃಷ್ಟಿಯಿಂದ ತಾವು ಚುನಾವಣೆಯ ಸಂದರ್ಭದಲ್ಲಿ ಗ್ಯಾರಂಟಿ ಉದ್ಯೋಗ ನೀಡುವ ಬಗ್ಗೆ ಭರವಸೆ ನೀಡಿರುವಂತೆ ಒಳ ಮೀಸಲಾತಿ ಜಾರಿಯಾಗುವವರೆಗೂ ಎಲ್ಲ ಸಮುದಾಯಗಳಲ್ಲಿ ಮನವರಿಕೆ ಮಾಡಿ ವಿಶ್ವಾಸಕ್ಕೆ ಪಡೆದು ಆದಷ್ಟು ಬೇಗ ನಿಯಮಾನುಸಾರ ಹಾಲಿ ಮೀಸಲಾತಿಯಂತೆ ನೇಮಕಾತಿ ಪ್ರಕ್ರಿಯೆಗಳಿಗೆ ಚಾಲನೆ ನೀಡಿ ವಯೋಮಿತಿ ಸಡಿಲಿಕೆಗೆ ಅವಕಾಶ ನೀಡಬೇಕೆಂಬುದು ಎಲ್ಲ ಅಭ್ಯರ್ಥಿಗಳ ಒತ್ತಾಸೆಯಾಗಿದೆ. ಇಲ್ಲವಾದರೆ, ಹೊಸ ನೇಮಕಾತಿ ಪ್ರಕ್ರಿಯೆಗಳು ಪ್ರಾರಂಭವಾಗು ವವರೆಗೂ ಯುವನಿಧಿ ಯೋಜನೆಯನ್ನು ವಿಸ್ತರಿಸಿ ಅಥವಾ ನಿರುದ್ಯೋಗ ಭತ್ಯೆಯನ್ನಾದರೂ ನೀಡಿ.

- ಶಿವರಾಜ್ ನಡಗೇರಿ, ಕಲಬುರಗಿ

ವಿಶ್ವಕರ್ಮ ದಿನಾಚರಣೆ ಎಂದಾಗಲಿ

ಕರ್ನಾಟಕ ಸರಕಾರವು ವಿಶ್ವಕರ್ಮ ಜಯಂತಿಯನ್ನು ಸೆಪ್ಟೆಂಬರ್ 17 (ಅಥವಾ ಸೂಕ್ತವಾದ ಇನ್ನೊಂದು ದಿನ) ರಂದು ಆಚರಿಸಲು ನಿರ್ಧರಿಸಿರುವುದು ಎಲ್ಲರಿಗೂ ತಿಳಿದ ವಿಷಯ. ವಿಶ್ವಕರ್ಮ ಸಮುದಾಯದ ಬೆಳವಣಿಗೆಗೆ ಹಾಗೂ ಅದರ ಉನ್ನತಿಯ ದೃಷ್ಟಿಯಲ್ಲಿ ಸಹಕಾರಿಯಾಗಲಿರುವ ಸರಕಾರದ ಈ ಕಾರ್ಯಕ್ರಮ ಸ್ವಾಗತಾರ್ಹ. ಆದರೆ, ಜಯಂತಿ ಎಂಬ ಕಾರ್ಯಕ್ರಮವೆಂದರೆ ಓರ್ವ ವ್ಯಕ್ತಿಯ ಹುಟ್ಟಿದ ದಿನವನ್ನು ಆಚರಿಸುವ ಕಾರ್ಯಕ್ರಮವಾಗಿದ್ದು, ರಾಮನವಮಿ, ಕೃಷ್ಣಾಷ್ಟಮಿ, ಅಂಬೇಡ್ಕರ್ ಜಯಂತಿ, ಗಾಂಧಿ ಜಯಂತಿ ಇತ್ಯಾದಿಗಳು ಈ ತರದ ಮಹಾನ್ ವ್ಯಕ್ತಿಗಳ ಅಥವಾ ಮಾನವ ಜನ್ಮವೆತ್ತಿದ ಅವತಾರ ಪುರುಷರ ಹುಟ್ಟಿದ ದಿನವನ್ನು ಸಂಭ್ರಮಿಸುವುದಾಗಿರುತ್ತದೆ. ಆದರೆ ವಿಶ್ವಕರ್ಮನು ಜನ್ಮವೆತ್ತಿದ ಅವತಾರ ಪುರುಷನಾಗಲೀ, ಮಾನವನಾ ಗಲೀ ಆಗಿರದೇ, ಸೃಷ್ಟಿಕರ್ತ ಬ್ರಹ್ಮನ ರಚನಾ ಶಕ್ತಿಯ ಅವಿರ್ಭೂತ ಅಂಶವೆಂದು ವೇದಗಳಲ್ಲೇ ತಿಳಿಸಲಾಗಿದೆ (ಯಜುರ್ವೇದ ಪುರು ಷಸೂಕ್ತ). ಆದುದರಿಂದ, ವಿಶ್ವಕರ್ಮ ಜಯಂತಿ ಎಂದು ಆಚರಿಸದೆ ವಿಶ್ವಕರ್ಮ ಮಹೋತ್ಸವ ಅಥವಾ ವಿಶ್ವಕರ್ಮ ದಿನಾಚರಣೆ ಎಂದು ಆಚರಿಸುವುದು ಸೂಕ್ತ.

-ಅಮೇಯ್ ಚಂದ್ರಶೇಖರ್, ಬೆಂಗಳೂರು

ಮಳೆ ರಜೆ: ಪೂರ್ವ ನಿಗದಿತ ಘೋಷಣೆಯಾಗಲಿ

ರಾಜ್ಯದ ಕೆಲವು ಜಿಲ್ಲೆಯಲ್ಲಿ ತೀವ್ರ ಮಳೆಯ ಮುನ್ಸೂಚನೆ ಮಾಹಿತಿ ಇದ್ದಾಗ ಹಾಗೂ ತೀವ್ರ ಮಳೆಯಿದ್ದಾಗ ಪರಿಸ್ಥಿತಿ ಅವಲೋಕಿಸಿ ಜಿಲ್ಲಾಧಿಕಾರಿಗಳು ಶಾಲಾ-ಕಾಲೇಜುಗಳಿಗೆ ರಜೆ ಘೋಷಣೆ ಮಾಡುವುದು ಸಾಮಾನ್ಯ. ಆದರೆ ಮಳೆ ರಜೆಯ ಆದೇಶವನ್ನು ತುರ್ತಾಗಿ ಬೆಳಿಗ್ಗೆ 8-9 ಗಂಟೆಯ ಅವಧಿಯಲ್ಲಿ ಘೋಷಣೆಯಾದರೆ, ಆ ಆದೇಶವು ಸಂಬಂಧಪಟ್ಟ ಶಾಲೆಗಳಿಗೆ ತಲುಪಲು ಇನ್ನಷ್ಟು ಸಮಯ ತೆಗೆದುಕೊಳ್ಳುತ್ತದೆ. ಅಷ್ಟೊತ್ತಿಗಾಗಲೇ ಶೇ.80ರಷ್ಟು ಮಕ್ಕಳು ಬೆಳಿಗ್ಗೆ 8.30ರೊಳಗೆ ಶಾಲೆಗೆ ತಲುಪಿರುತ್ತಾರೆ, ಕಾರಣ ಬಹಳಷ್ಟು ಶಾಲಾ ವಾಹನಗಳು ಬೆಳಿಗ್ಗೆ 7 ಗಂಟೆಗೆ ಮಕ್ಕಳನ್ನು ಕರೆ ತರಲು ಹಳ್ಳಿಗಳಿಗೆ ತೆರಳಿರುತ್ತವೆ. ಇದರಿಂದ ಮಕ್ಕಳಿಗೆ ಸಮಸ್ಯೆ ಎದುರಾಗುತ್ತದೆ. ಹಾಗಾಗಿ ಏಕಾಏಕಿ ರಜೆ ಘೋಷಣೆಯಿಂದ ಏನು ಮಾಡಬೇಕೆಂದು ತೋಚದೆ ಮತ್ತಷ್ಟು ಗಾಬರಿ, ತೊಂದರೆ ಎದುರಾಗುತ್ತದೆ. ಶಾಲೆಗೆ ಬಂದ ಮಕ್ಕಳನ್ನು ಮತ್ತೆ ಮನೆಗೆ ಕಳುಹಿಸುವುದೂ ಸಹ ಕಷ್ಟದ ಕೆಲಸ, ಏಕೆಂದರೆ ಬಹಳಷ್ಟು ಮಕ್ಕಳ ಪಾಲಕರು ಕೆಲಸಕ್ಕೆಂದು ಹೋಗಿರುತ್ತಾರೆ, ಹಾಗಾಗಿ ಮಳೆ ರಜೆ ಪೂರ್ವನಿಗದಿಯಾಗಿ ನೀಡುವುದು ಸೂಕ್ತ.

-ಸುರೇಂದ್ರ ಪೈ, ಭಟ್ಕಳ

ಅಖಂಡ ವೀರಶೈವ (ಲಿಂಗಾಯತ) ಧರ್ಮೀಯರು ಆತ್ಮವಿಮರ್ಶೆ ಮಾಡಿಕೊಳ್ಳಬೇಕು



ಬಸವಮಂಟಪ
ರವಿ ಹಂಜ್
vveditoped@gmail.com

ಭಾಗ-2

ಕಾರ್ಮಿಕಮಲವು ದ್ರವ್ಯ ಸಂಬಂಧಿಯಾದುದು. ಈಷಣತ್ರಯ ಯುಕ್ತವಾದುದು. ಅರ್ಥದ ಆರ್ತವನ್ನೂ ಈಷಣತ್ರಯಗಳನ್ನೂ ಸಮೂಲವಾಗಿ ತ್ಯಜಿಸಿದಾಗಲೇ ಕಾರ್ಮಿಕಮಲದ ನಿವೃತ್ತಿಯು, ಧನಕನಕಾದಿಗಳು ತನ್ನವೆಂದು ಹೋರುವುದು ಒಂದು ಭ್ರಾಂತಿ. ಈ ಧನವನ್ನು ಹುಟ್ಟುವಾಗ ಯಾರೂ ತಂದಿರುವುದಿಲ್ಲ. ತಾತಮುತ್ತಾತರೂ ತರುವುದಿಲ್ಲ. ಹೋಗುವಾಗ ಹರಣದೊಡನೆ ಒಯ್ಯುವುದಿಲ್ಲ. ನಟ್ಟ ನಡುವೆ ಒಡೆತನ ಹೇಗೆ ತಾನೇ ಬಂದೀತು. ಹಾಗಾಗಿ ಜೀವನೋಪಾಯಕ್ಕೆಂದೂ ಅದನ್ನು ಕೂಡಿಡತಕ್ಕುದಲ್ಲ ಎನ್ನಲಾಗಿದೆ.

ಗುರುವು ಸ್ಥೂಲ, ಸೂಕ್ಷ್ಮ ಹಾಗೂ ಕಾರಣಶರೀರಗಳಿಗೆ ಪ್ರಾಪ್ತವಾಗಿದ್ದ ಕಾರ್ಮಿಕ, ಮಾಯಾ ಹಾಗೂ ಆಣವವೆಂಬ ಮಲಗಳನ್ನು ಕ್ರಿಯಾ, ಮಂತ್ರ ಹಾಗೂ ವೇಧಾದೀಕ್ಷೆಗಳಿಂದ ಪರಿಹರಿಸಿ ಸ್ಥೂಲಶರೀರ (ತ್ಯಾಗಾಂಗ)ದಲ್ಲಿ ಇಷ್ಟಲಿಂಗವನ್ನೂ ಸೂಕ್ಷ್ಮ ಶರೀರ (ಭೋಗಾಂಗ)ದಲ್ಲಿ ಪ್ರಾಣಲಿಂಗವನ್ನೂ, ಕಾರಣಶರೀರ (ಯೋಗಾಂಗ)ದಲ್ಲಿ ಭಾವಲಿಂಗವನ್ನೂ ಸಂಬಂಧ ಮಾಡುವನು. ಈ ಮಲ-ತ್ರಯಗಳ ನಿವಾರಣೆಯೆಂದರೆ ಜೀವನನ್ನು ಸುತ್ತಿಕೊಂಡಿದ್ದ ಮೂರು ವಿಧವಾದ ಬಂಧನಗಳಿಂದ ಬಿಡುಗಡೆ ಮಾಡುವುದಾಗಿದೆ.

ಈ ಮಲತ್ರಯಗಳನ್ನೇ ವಿಸ್ತರಿಸಿ ಸೂತಕಗಳು ಎಂದು ಬಸವಣ್ಣನವರೂ ತಮ್ಮ ಈ ವಚನದಲ್ಲಿ ಅನುಮೋದಿಸಿದ್ದಾರೆ: ''ಜನನಸೂತಕ, ಕುಲಸೂತಕ, ರಜಃಸೂತಕ, ಎಂಜಲಸೂತಕ, ಪ್ರೇತಸೂತಕ ಎಂಬಿವಾದಿಯಾದ ಸರ್ವಸೂತಕಂಗಳು ಅಂಗಲಿಂಗ ಸಂಬಂಧಿಗಳಾದ ಲಿಂಗಭಕ್ತರಿಗಿಲ್ಲ ನೋಡಾ, ಅದೆಂತೆಂದೊಡೆ; ಆದಿಬಿಂದುರ್ಭವೇದ್ಬೀಜಂ ಬೀಜಮಧ್ಯಸ್ಥಿತಂ ಕುಲಂ ಬೀಜಂ ನಾಸ್ತಿ ಕುಲಂ ನಾಸ್ತಿ ತಸ್ಮೈ ಶಿವಕುಲಂ ಭವೇತ್ ಎಂದುದಾಗಿ ಪೂರ್ವಾಚಾರವನಳಿದು ಪುನರ್ಜಾತನಾಗಿ, ಅಂಗದ ಮೇಲೆ ಲಿಂಗಸಾಹಿತ್ಯನಾದ ಭಕ್ತಂಗೆ ಜನನಸೂತಕವೆಂಬುದೆ ಪಾತಕ ನೋಡಾ. ಶಿವಭಕ್ತರಾದ ಬಳಿಕ ಭವಿನೇಮಸ್ತರ ಕಳೆದು ಶಿವಕುಲವೆ ಕುಲವಾದ ಭಕ್ತರಿಗೆ ಕುಲಸೂತಕವೆಂಬುದೆ ಪಾತಕ ನೋಡಾ. ಗುರುಪಾದತೀರ್ಥ, ಲಿಂಗಪಾದತೀರ್ಥ, ಜಂಗಮ ಪಾದತೀರ್ಥ ಆದಿಯಾದ ಲಿಂಗೋದಕ, ಪಾದೋದಕ, ಪ್ರಸಾದೋದಕ ಎಂಬ ತ್ರಿವಿಧೋದಕದಲ್ಲಿ ಸರ್ವಪಾಕಪ್ರಯತ್ನ, ನಾನಾ ಕ್ರಿಯಾವಿಧಾನ, ಸ್ನಾನಪಾನಂಗಳಿಂದ ಬಾಹ್ಯಾಭ್ಯಂತರಂ ಶುಚಿಯಾದ, ಶುದ್ಧನಿರ್ಮಲದೇಹಿಯಾದ ಭಕ್ತಂಗೆ ರಜಃಸೂತಕವೆಂಬುದೆ ಪಾತಕ ನೋಡಾ. ಶುದ್ಧ ಸಿದ್ಧ ಪ್ರಸಿದ್ಧ ಪ್ರಸಾದ ಯುಕ್ತವಾದ ಸದಾಸನ್ನಹಿತ ಭಕ್ತಂಗೆ ಎಂಜಲಸೂತಕವೆಂಬುದೆ ಪಾತಕ ನೋಡಾ. ಗುರುವಿನಿಂ ಜನನ, ಚರಲಿಂಗದಿಂ ಸ್ಥಿತಿ, ಪರಮಪಾವನ ಘನಮಹಾಲಿಂಗದೊಳೈಕ್ಯ. ಅದೆಂತೆಂದೊಡೆ; ಸದ್ಗುರೋಃ ಪಾಣಿಜಾತಸ್ಯ ಸ್ಥಿತೇ ಸದ್ಭಕ್ತಸಂಗಿನಾಂ ಲೀಯತೇ ಚ ಮಹಾಲಿಂಗೀ ವೀರಶೈವೋತ್ತಮೋತ್ತಮಂ ಎಂದುದಾಗಿ, ನಿಜಲಿಂಗೈಕ್ಯವಾದ ಸದ್ಭಕ್ತಂಗೆ ಪ್ರೇತಸೂತಕವೆಂಬುದೆ ಪಾತಕ ನೋಡಾ. ಇಂತೀ ಪಂಚಸೂತಕವನುಳ್ಳ ಪಾತಕಂಗಳ ಪಂಚಾಚಾರ ಯುಕ್ತನಾದ ಸದ್ಭಕ್ತಂಗೆ ಕಲ್ಪಿಸುವ ಪಂಚಮಹಾಪಾತಕರ ಅಘೋರ ನರಕದಲ್ಲಿಕ್ಕುವ ಕೂಡಲಸಂಗಯ್ಯ''.

ದೀಕ್ಷಾ ವಿಧಾನ: ಇನ್ನು ಚೆನ್ನಬಸವಣ್ಣನು ನಿರೂಪಿಸಿದ ದೀಕ್ಷಾವಿಧಾನವು, ''ಭವಿತನಕ್ಕೆ ಹೇಸಿ ಭಕ್ತನಾಗಬೇಕೆಂಬಾತನು ಸದ್ಗುರುವನರಸಿಕೊಂಡು ಬಂದು ಅವರ ಕಾರುಣ್ಯದಿಂದ ಮುಕ್ತಿಯ ಪಡೆವೆನೆಂದು ಆ ಶ್ರೀಗುರುವಿಂಗೆ ದಂಡ ಪ್ರಣಾಮವಂ ಮಾಡಿ ಭಯಭಕ್ತಿಗಳಿಂದ ಕರಂಗಳಂ ಮುಗಿದು ನಿಂದು ಎಲೆ ದೇವಾ! ಎನ್ನ ಭವಿತನವಂ ಹಿಂಗಿಸಿ ನಿಮ್ಮ ಕಾರುಣ್ಯದಿಂದೆನ್ನ ಭಕ್ತನಂ ಮಾಡುವದೆಂದು ಆ ಶ್ರೀಗುರುವಿಂಗೆ ಬಿನ್ನಹವಂ ಮಾಡಲು ಆ ಶ್ರೀಗುರುಲಿಂಗನು ಅಂತಪ್ಪ ಭಯಭಕ್ತಿ ಕಿಂಕರತೆಯೊಳಿಪ್ಪ ಶಿಶುವಂ ಕಂಡು ತಮ್ಮ ಕೃಪಾದಿಲೋಚನದಿಂ ನೋಡಿ ಆ ಭವಿಯ ಪೂರ್ವಾಶ್ರಯಮಂ ಕಳೆದು ಪುನರ್ಜಾತನಂ ಮಾಡಿ ಆತನ ಅಂಗದ ಮೇಲೆ ಲಿಂಗ ಪ್ರತಿಷ್ಠೆಯಂ ಮಾಡುವ ಕ್ರಮವೆಂತೆಂದಡೆ ಮೊದಲಲ್ಲಿ ಕಾಯಶುದ್ಧ ಜೀವಶುದ್ಧ ಆತ್ಮಶುದ್ಧವಂ ಮಾಡುವ ಕ್ರಮವೆಂತೆಂದಡೆ. ಅದಕ್ಕೆ ಮಂತ್ರ: ಓಂ ಅಗ್ನಿರಿತಿ ಭಸ್ಮ ವಾಯುರಿತಿಭಸ್ಮ ಜಲರಿತಭಸ್ಮ ಸ್ಥಲರಿತಿಭಸ್ಥ ವ್ಯೋಮೇತಿ ಭಸ್ಮ ಸೋಮೇತಿಭಸ್ಮ ಸೂರ್ಯರಿತಿಭಸ್ಮ ಆತಿಭಸ್ಮ ಎಂದು ಈ ಮಂತ್ರದಿಂದಾತನ ಅಷ್ಟತನುವಂ ಶುದ್ಧವಂ ಮಾಡುವುದು'' ಎನ್ನುತ್ತಾ ವೀರಶೈವ (ಲಿಂಗಾಯತ) ದೀಕ್ಷಾ ವಿಧಾನಗಳ ಪ್ರತಿಯೊಂದು ಕ್ರಮ ಮತ್ತು ಕ್ರಮಕ್ಕೆ ಉದ್ಘೋಷಿಸಲೇಬೇಕಾದ ಮಂತ್ರಗಳನ್ನೂ ಬರೆದಿದ್ದಾನೆ. ಅವುಗಳ ವಿಸ್ತಾರದ ಹರವು ಅಪಾರ. ಅವೆಲ್ಲವನ್ನೂ ಲೇಖನದಲ್ಲಿ ವಿವರಿಸಲಾಗದು. ಹಾಗಾಗಿ ಕೆಲವು ಕ್ರಮಗಳು ಮತ್ತವುಗಳ ಮಂತ್ರಗಳ ಉದಾಹರಣೆಯನ್ನಷ್ಟೇ ಇಲ್ಲಿ ಗಮನಿಸೋಣ.

ಇನ್ನು ಜೀವಶುದ್ಧವ ಮಾಡುವ ಕ್ರಮವೆಂತೆಂದಡೆ, ಅದಕ್ಕೆ ಮಂತ್ರ: ಓಂಯಸ್ಯ ಪ್ರಾಣ ಪ್ರತಿಷ್ಠಾಮಂತ್ರಸ್ಯ ಬ್ರಹ್ಮ ವಿಷ್ಣು ಮಹೇಶ್ವರಾ ಈಶ್ವರ ಋಷಯಃ ರುಗ್ಯಜುಸ್ಸಾಮಾಥರ್ವ ಣಶ್ಚಂದಾಂಸಿ ಸದಾಶಿವ ಮಹಾಪ್ರಾಣ ಇಹಪ್ರಾಣ ಮಮಜೀವ ಇಹಜೀವಸ್ಸತ್ವಾಮಮ ಸಮಸ್ತ ಸರ್ವೇಂದ್ರಿಯಾಣಿ ವಾಜ್ಞನಶ್ಚಕ್ಷುಃ ಪ್ರೋತ್ರಜಿಹ್ವಾಪ್ರಾಣ ಮನೋಬುದ್ಧಿ ಚಿತ್ತವಿಜ್ಞಾನ ಮಮಶರೀರೇ ಆಗತ್ಯಾಸುಖಂ ಸ್ಥಿರಂ ತಿಷ್ಯತಿ.

ಇನ್ನು ಆತ್ಮಶುದ್ಧವ ಮಾಡುವ ಕ್ರಮವೆಂತೆಂದಡೆ, ಅದಕ್ಕೆ ಮಂತ್ರ ಓಂ ಶಿವಾತ್ಮಕಂ ಸುಖಂ ಜೀವಂ ಜೀವಾತ್ಮಕ ಸುಖಂ ಶಿವಃ ಶಿವಜೀವಾತ್ಮ ಸಂಯೋಗೇ ಪ್ರಾಣಲಿಂಗ ಯಥಾಭವೇತ್ ಎಂದು ಈ ಮಂತ್ರದಿಂದ ಆತನ ಆತ್ಮವಶುದ್ಧ ಮಾಡುವುದು. ಇನ್ನು ಮನೋಬುದ್ಧಿ ಚಿತ್ತ ಅಹಂಕಾರವೆಂಬ ಅಂತಃಕರಣ ಚತುಷ್ಟಯಂಗಳಂ ನಿರ್ವತ್ರನೆಯಂ ಮಾಡುವ ಕ್ರಮವೆಂತೆಂದಡೆ ಮನದಲ್ಲಿ ಧ್ಯಾನವಾಗಿ ಬುದ್ಧಿಯಲ್ಲಿ ವಂಚನೆಯಿಲ್ಲದೆ ಚಿತ್ತದಾಸೋಹದಲ್ಲಿ ಅಹಂಕಾರವಿಲ್ಲದೆ ಜ್ಞಾನದಲ್ಲಿ ಇಂತೀ ಈ ಮರಿಯಾದೆಯಲ್ಲಿ ಚತುರ್ಥಮಂ ನಿರ್ವತ್ರನೆಯಂ ಮಾಡುವುದು.

ಇನ್ನು ಏಕಭುಕ್ತ ಉಪವಾಸಂಗಳಂ ಮಾಡಿಸಿ ಪಂಚಭೂತಸ್ಥಾನದ ಆದಿದೇವತೆಗಳಂ ತೋರುವುದು ಅವು ಅವಾವೆಂದಡೆ ಸಾಕ್ಷಿ ಬ್ರಹ್ಮವಿಷ್ಣು ರುದ್ರಕ್ಕೆ ಕೇ ಗರ್ಭಗತಶ್ವೇತಃ ತಸ್ಮೈಶ್ರೀಗುರವೇ ನಮಃ ಎಂದು ಈ ಮಂತ್ರದಿಂದ ಆತನ ಪಂಚಭೂತಾತ್ಮ ಶುದ್ಧಾನತ್ಮನಂ ಮಾಡುವುದು.

ಈ ಪ್ರಕಾರದಲ್ಲಿ ಶುದ್ಧಾತ್ಮನ ಮಾಡಿದ ಬಳಿಕ ಆತನ ಗಣತಿಂಥಿಣಿಯ ಮುಂದೆ ನಿಂದಿರಿಸೂದು ನಿಂದಿರ್ದಾತನ ಆ ಗಣತಿಂಥಿಣಿಗೆ ದಂಡಪ್ರಣಾಮವಂ ಮಾಡಿಸುವ ಕ್ರಮವೆಂತೆಂದಡೆ, ಅದಕ್ಕೆ ಮಂತ್ರ: ಅನಂತ ಜನ್ಮ ಸಂಪ್ರಾಪ್ತ ಕರ್ಮಧನ ವಿದಾಹೀನೆ ಜ್ಞಾನಾನಲ ಪ್ರಭಾವೇನ ತಟ್ಟೆ ಶ್ರೀಗುರವೇ ನಮಃ ಪ್ರಣಮ್ಯಂ ದಂಡಮದ್ಗೂವಂ ಅಷ್ಟಮಂತ್ರಣಮಾರ್ಚಯೇತ್ ಗುರುಶ್ರೀಪಾದಪಾದ್ಯಂಚ ಗಂಧಪುಷ್ಪಾಕ್ಷತಾದಿಭಿಃ ಅನ್ಯಥಾ ವಿತ್ತಹೀನೋಪಿ ಗುರವೇ ತತ್ವರಾಯಣಂ ಕೃತ್ವಾದಂಡ ನಮಸ್ಕಾರಂ ಸ್ವಕರೀರಂ ನಿವೇದಯೇತ್ ಎಂದು ಈ ಮಂತ್ರದಿಂದ ನಮಸ್ಕಾರವಂ ಮಾಡಿಸುವುದು.

ನಮಸ್ಕಾರವನ್ನು ಮಾಡಿದಾತನ ಕೈವಿಡಿದೆತ್ತುವ ಕ್ರಮವೆಂತೆಂದಡೆ, ಅದಕ್ಕೆ ಮಂತ್ರ ಗುರುಂ ಮಾತಾ ಗುರುಂ ಪಿತಾ ಗುರೂಣಾಂ ಬಾಂಧವೇವ ಚ ಗುರು ದೈವಂ ಪರಂನಾಸ್ತೇ ತಸ್ಮೈ ಶ್ರೀ ಗುರವೇ ನಮಃ ಓಂ ಗುರುದೇವೋಭವ ಮಾತೃದೇವೋಭವ ಪಿತೃದೇವೋಭವ ಆಚಾರ್ಯದೇವೋಭವ ಅತಿಥಿದೇವೋಭವ ಎಂದು ಈ ಮಂತ್ರದಿಂದ ಆತನ ಕೈವಿಡಿದೆತ್ತುವುದು.

ಇನ್ನು ಭೂಶುದ್ಧವ ಮಾಡಿದ ಬಳಿಕ ಆತನ ಚೌಕಮಧ್ಯದಲ್ಲಿ ಕುಳ್ಳಿರಿಸುವ ಕ್ರಮ, ನಾಲ್ಕು ಕಳಶದ ಪ್ರತ್ಯೇಕ ಪ್ರಧಾನ ದೇವತೆಗಳನ್ನು ಕುಳ್ಳಿರಿಸಿ ಗುರು ಕಳಶಮಂ ಸ್ಥಾಪನೆ ಮಾಡುವ ಕ್ರಮಗಳಿವೆ.

ತದನಂತರ ಜಲಶುದ್ಧವ ಮಾಡುವ ಕ್ರಮವೆಂತೆಂದಡೆ, ಅದಕ್ಕೆ ಮಂತ್ರ: ಓಂ ನಮಃ ಶಿವಾಯ ನಮಸ್ತೇಸ್ತು ಭಗವಾನ್ ವಿಶ್ವೇಶ್ವರಾಯ ತ್ರಯಂಬಕಾಯ ತ್ರಿಪುರಾಂತಕಾಯ ತ್ರಿಕಾಲಾಗ್ನಿಕಾಲಾಯ ಕಾಲಾಗ್ನಿ ರುದ್ರಾಯ ನೀಲಕಂಠಾಯ ಸರ್ವೇಶ್ವರಾಯ ಸದಾಶಿವಾಯ ಮಹಾದೇವಾಯ ನಮಃ ಓಂ ನಿಧಾನಾಯನಮಃ ನಿಧನಪಶ್ಚಂತಿಕಾಯೇಂ ನಮಃ ಊರ್ಧ್ವಯೇಂ ನಮಃ ಊರ್ಧ್ವಲಿಂಗಯೇಂ ನಮಃ ಹಿರಣ್ಯಾಯೆ ನಮಃ ಹಿರಣ್ಯ ಲಿಂಗಾಯೇ ನಮಃ ದಿವ್ಯಾಯೇ ನಮಃ ದಿವ್ಯಲಿಂಗಾಯೇಂ ನಮಃ ಜೇಷ್ಟಾಯೇಂ ನಮಃ ಜೇಷ್ಟಲಿಂಗಾಯೇಂ ನಮಃ ಶ್ರೇಷ್ಠಾಯೇಂ ನಮಃ ಶ್ರೇಷ್ಠಲಿಂಗಾಯೇಂ ನಮಃ ಜ್ವಾಲಾಯ ನಮಃ ಜ್ವಾಲಾಲಿಂಗಾಯೇಂ ನಮಃ ಸ್ಥೂಲಾಯ ನಮಃ ಸ್ಥೂಲ ಲಿಂಗಾಯೇಂ ನಮಃ ಸೂಕ್ಷ್ಮಾಯ ನಮಃ ಸೂಕ್ಷ್ಮ ಲಿಂಗಾಯೇಂ ನಮಃ ಶೂನ್ಯಾಯ ನಮಃ ಶೂನ್ಯಲಿಂಗಾಯೇಂ ನಮಃ.... ಸಹವೀರ್ಯಂ ಕರವಾವಹೈ ತೇಜಸ್ವಿನಾವಧೀತಮಸ್ತು ಮಾ ವಿದ್ವಿಷವತ್ ಓಂ ಶಾಂತಿ ಶಾಂತಿ ಸರ್ವಶಾಂತಿರಸ್ತು ಎಂದು ಈ ಮಂತ್ರದಿಂದ ಜಲಶುದ್ಧವಂ ಮಾಡುವುದು ಎನ್ನುತ್ತದೆ.

ಅಲ್ಲದೇ ಕುಮಾರರಾವನು ಜಲಾಧಿವಾಸಂ ಮಾಡುವ ಕ್ರಮ, ಹಸ್ತವು ಶುದ್ಧವ ಮಾಡುವ ಕ್ರಮ, ವಿಭೂತಿಯ ಧರಿಸುವ ಕ್ರಮ, ರುದ್ರಾಕ್ಷಿಯ ಧರಿಸುವ ಕ್ರಮ, ಜಲಾಧಿವಾಸದೊಳಗಣ ಕುಮಾರರಾವನು ತೆಗೆಯುವ ಕ್ರಮ, ಶಿಲೆಯ ಪೂರ್ವಾಶ್ರಯವಂ ಕಳೆಯುವ ಕ್ರಮ, ಶಿಲೆಗೆ ಪ್ರಾಣ ಪ್ರತಿಷ್ಠೆಯಂ ಮಾಡುವ ಕ್ರಮಗಳಿಗೆ ಮಂತ್ರಗಳಿವೆ.

ತದನಂತರ ದೇವರಿಗೆ ಸ್ವಪನಕ್ಕೆರೆವರಕ್ಕೆ ವಸ್ತ್ರ, ಗಂಧ ಅಕ್ಷತೆ, ಪುಷ್ಪ, ಧೂಪ, ದೀಪ, ತಾಂಬೂಲ, ಮಂತ್ರಪುಷ್ಪ, ಅನುಷ್ಠಾನ, ಅನುಷ್ಠಾನ ಮಾಡಿದ ಬಳಿಕ ಆ ಗುರುವು ಶಿಷ್ಯನ ಉರಸೆಜ್ಜೆಯಲ್ಲಿ ಲಿಂಗವ ಧರಿಸುವ ಕ್ರಮ, ಶಿಷ್ಯನ ವಾಯುಪ್ರಾಣೆಯಂ ಕಳೆದು ಲಿಂಗಪ್ರಾಣೆಯಂ ಮಾಡುವ ಕ್ರಮ, ಆ ಶಿಷ್ಯಂಗೆ ಆಗೋದಕವನು ಸರ್ವಾಂಗದಲ್ಲಿ ತಳಿದ ಕ್ರಮ, ಆ ಶಿಷ್ಯನ ಫಾಲದಲ್ಲಿ ವಿಭೂತಿಯು ಧರಿಸುವ ಕ್ರಮ, ಶಿಷ್ಯನ ದುರಾಕ್ಷರವಂ ತೊಡೆವ ಕ್ರಮ, ಶಿಷ್ಯನ ಲಲಾಟದಲ್ಲಿ ಶಿವ ಲಿಖಿತವಂ ಮಾಡುವ ಕ್ರಮ, ಶಿಷ್ಯನ ಕರ್ಣದಲ್ಲಿ ಶಿವಮಂತ್ರಮಂ ನಿರೂಪಿಸುವ ಕ್ರಮಗಳೆಲ್ಲಕ್ಕೂ ವಿಶೇಷ ಮಂತ್ರಗಳಿವೆ.

ಈ ಎಲ್ಲಾ ಮಂತ್ರಾಚರಣೆಗಳ ನಂತರ ''ಶತಪತ್ರದೊಳಗಣ ಮನಸಾಪ್ರಾಣದೊಳಗಿಪ್ಪ ಪ್ರಾಣಲಿಂಗಕ್ಕೆ ಒಂದು ಇಷ್ಟಲಿಂಗ ಸ್ಥಲವಂ ತೋರಿಸಿ ಆ ಶಿಷ್ಯನ ಕೃತಕೃತ್ಯನಂ ಮಾಡುವುದು ಕೂಡಲ ಚೆನ್ನಸಂಗಯ್ಯ ನಿಮ್ಮ ಧರ್ಮ ನಿಮ್ಮ ಧರ್ಮ'' ಎಂದು ಚೆನ್ನ ಬಸವಣ್ಣ ಸಮಗ್ರವಾಗಿ ದೀಕ್ಷಾ ವಿಧಾನಗಳನ್ನು ನಿರೂಪಿಸಿದ್ದಾನೆ.

ಈ ಎಲ್ಲಾ ವಿಧಿ ವಿಧಾನಗಳನ್ನು ಚಾಚೂತಪ್ಪದೆ ಪಾಲಿಸುವವರು ಪಂಚಪೀಠಾಧೀಶರು ಮತ್ತು ಗುರುವರ್ಗದ ಮಠಾಧೀಶರು!

ತಮ್ಮ ಹುಟ್ಟಿನ ಅಣವ ಮಲ, ಜಾತಿಯೆಂಬ ಕುಲದ ಮಲ, ಜಾತಿಪೀಠವೆಂಬ ಭೌತಿಕ ಆಸ್ತಿಯ ಕಾರ್ಮಿಕ ಮಲಗಳ ಮಲವೇ ಮೈವೆತ್ತಂತಿರುವ ಈ ನಾಸ್ತಿಕ, ಕಮ್ಯುನಿಸ್ಟ್ ಮಠಾಧೀಶ ಒಕ್ಕೂಟಿಗರು ಚೆನ್ನಬಸವಣ್ಣನು ಹೇಳಿರುವ ದೀಕ್ಷಾವಿಧಾನದ ಯಾವುದೇ ಮಂತ್ರವನ್ನು ಉಚ್ಚರಿಸಬಲ್ಲರೇ? ಹೀಗೆ ಮಲತ್ರಯಿಗಳಾಗಿ ತಮ್ಮ ಮಲತ್ರಯಗಳ ದುರ್ವಾಸನೆಯನ್ನು ಮುಚ್ಚಿಕೊಳ್ಳಲು ಬಸವ/ಕಲ್ಯಾಣ/ವಚನಗಳ ಪುನುಗನ್ನು ಪೂಸಿಕೊಂಡರೆ ಮಾಹಿತಿ ತಂತ್ರಜ್ಞಾನದ ಆಧುನಿಕ ಜಗತ್ತು ಅರಿಯದೇ? ಅಖಂಡ ವೀರಶೈವ (ಲಿಂಗಾಯತ) ಧರ್ಮೀಯರು ಪ್ರಶ್ನಿಸಿಕೊಂಡು ಆತ್ಮವಿಮರ್ಶೆ ಮಾಡಿಕೊಳ್ಳಬೇಕು.

ಜಗತ್ತಿನ ಎಲ್ಲಾ ಧರ್ಮಗಳಲ್ಲಿಯೂ ಇರುವಂಥ ಗುರುಶ್ರೇಣಿಗಳಂತೆಯೇ ಅಖಂಡ ವೀರಶೈವ (ಲಿಂಗಾಯತ) ಧರ್ಮದಲ್ಲಿಯೂ ಶ್ರೇಣಿಗಳಿವೆ. ಈ ಧಾರ್ಮಿಕ ಶ್ರೇಣಿಗಳ ಕಾರಣ ಗುರುವರ್ಗದ ಠೇಂಕಾರ ಮತ್ತು ವಿರಕ್ತರ ಠೀವಿ ಆರಂಭಗೊಂಡು ಈಗ ವೀರಶೈವ ಬೇರೆ ಲಿಂಗಾಯತ ಬೇರೆ ಎಂಬ ಕಂದಕಕ್ಕೆ ಕಾರಣವಾಗಿದೆಯೇ ಹೊರತು ಯಾವ ಸೈದ್ಧಾಂತಿಕ ಧಾರ್ಮಿಕ ಭಿನ್ನತೆಯಿಂದಲ್ಲ. ಈ ಠೇಂಕಾರ-ಠೀವಿಗೆ ತುಪ್ಪ ಸುರಿದ ಪಟ್ಟಭದ್ರ ಹಿತಾಸಕ್ತಿಗಳು ಇಂದು ವಿರಕ್ತರನ್ನು ಆಪೋಶನ ಪಡೆದಿವೆ. ಈ ಆಪೋಶನದ ಕಾರಣವೇ ವಚನಕಾರ ಚೆನ್ನಬಸವಣ್ಣನ ಎಲ್ಲ ದೀಕ್ಷಾ ವಿಧಾನಗಳನ್ನು ಕಟ್ಟೆಸೆದು ವಿರಕ್ತರು ಊಟದ ಮೇಜಿನ ಮೇಲೆ ಪ್ರಭಾವಿಗಳನ್ನು ಕೂರಿಸಿ ಲಿಂಗದೀಕ್ಷೆ ಕೊಟ್ಟು ಪತ್ರಿಕೆಗಳಲ್ಲಿ ರಾರಾಜಿಸುತ್ತಾರೆ. ಏಕೆಂದರೆ ಖುದ್ದು ಅವರಿಗೇ ಚೆನ್ನಬಸವ ಪ್ರಣೀತ ದೀಕ್ಷಾವಿಧಿ ವಿಧಾನದಂತೆ ದೀಕ್ಷೆಯಾಗಿಲ್ಲ ಮತ್ತು ಶಾಸ್ತ್ರೀಯವಾಗಿ ಇವರು ಲಿಂಗದೀಕ್ಷೆ ಕೊಡಲು ಅರ್ಹರೂ ಅಲ್ಲ! ಹೀಗಿದ್ದಾಗ ಯಾರು ನಿಜ ವೀರಶೈವ (ಲಿಂಗಾಯತ)ರು? ಎಂದು ಅಖಂಡ ವೀರಶೈವ (ಲಿಂಗಾಯತ) ಧರ್ಮೀಯರು ಪ್ರಶ್ನಿಸಿಕೊಂಡು ಆತ್ಮವಿಮರ್ಶೆ ಮಾಡಿಕೊಳ್ಳಬೇಕು.

ಇನ್ನು ಜಗತ್ತಿನ ಎಲ್ಲಾ ಧರ್ಮಗಳಲ್ಲಿಯೂ ಮಂತ್ರಗಳನ್ನು ಅವರವರ ಪುರಾತನ ಭಾಷೆಯಲ್ಲಿಯೇ ಈಗಲೂ ಉಚ್ಚರಿಸುತ್ತಾರೆ. ಏಕೆಂದರೆ ಐತಿಹಾಸಿಕ ಪ್ರಾಮುಖ್ಯ, ಪರಂಪರೆ, ತತ್ವಶಾಸ್ತ್ರ ಮತ್ತು ದಿವ್ಯಾರಾಧನೆಯ ಭಾಷೆಯಾಗಿ ಲ್ಯಾಟಿನ್, ಹೀಬ್ರೂ, ಸಂಸ್ಕೃತ ಭಾಷೆಗಳ ಬಳಕೆ ಈಗಲೂ ಇದೆ. ಈ ಭಾಷೆಗಳ ಋಕ್ಕು ಉಚ್ಚಾರವು ದಿವ್ಯ ಧನಾತ್ಮಕ ಶಕ್ತಿಯನ್ನು ಸೃಷ್ಟಿಸುತ್ತದೆ ಎಂಬ ನಂಬಿಕೆ ಇರುವುದಲ್ಲದೆ ಇವುಗಳ ಧ್ವನಿ ತರಂಗಗಳ ಮೇಲೆ ವೈಜ್ಞಾನಿಕ ಸಂಶೋಧನೆಗಳು ನಡೆದಿವೆ. ಹಾಗಾಗಿಯೇ ವ್ಯಾಟಿಕನ್ ಈಗಲೂ ಲ್ಯಾಟಿನ್ ಭಾಷೆಯ ಋಕ್ಕು, ಮಂತ್ರಗಳನ್ನೇ ಬಳಸುತ್ತಿದೆ. ಇದೇ ಯಾದಿಯಲ್ಲಿ ವಚನಕಾರರೂ ಸಂಸ್ಕೃತವನ್ನು ಬಳಸಿದ್ದಾರೆ. ಈಗ ಇಂಥ ಸಂಸ್ಕೃತ ವಾಕ್ಯಗಳಿರುವ ವಚನಗಳನ್ನು ಮತ್ತು ವೀರಶೈವ ಪದವಿರುವ ವಚನಗಳನ್ನು ತಿದ್ದುವ ಕಾರ್ಯವನ್ನು 'ಬಸವ ಸಮಿತಿ' ಮಾಡುತ್ತಿದೆ ಎಂದು ವೀರಣ್ಣ ರಾಜೂರ ಅವರು ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯ್ಲಿಯವರ ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಅಧಿಕೃತವಾಗಿ ಹೇಳಿದ್ದಾರೆ. ಅಂದರೆ ಇವರು ಹಿಂದಿನ ಜನ್ಮದಲ್ಲಿ ಬಸವಣ್ಣ ಮತ್ತಿತರೆ ವಚನಕಾರರ ಬದಿಯಲ್ಲಿ ಕುಳಿತು ಕರಡು ತಿದ್ದಿ ಕೊಟ್ಟಿದ್ದರೇನೋ ಎನ್ನುವಷ್ಟರ ಮಟ್ಟಿಗೆ ಈ ಜನ್ಮದಲ್ಲಿ ವಚನ ತಿದ್ದುವ ಕಾರ್ಯಕ್ಕೆ ಬಸವ ಸಮಿತಿಯ ಮೂಲಕ ಸಾಮೂಹಿಕವಾಗಿ ಕೈಹಾಕಿದ್ದಾರೆ. ಯಾವ ವಚನದ ಅಂಕಿತವನ್ನು 'ಮಾತೆ' ಮಹಾದೇವಿ ತಿದ್ದಿ ವೀರಶೈವ ಮಹಾಸಭಾದಿಂದ ಕಾನೂನಾತ್ಮಕವಾಗಿ ತದುಕಿಸಿಕೊಂಡಿದ್ದರೋ ಅದಕ್ಕಿಂತ ಘೋರವಾದ ಅಪರಾಧಕ್ಕೆ ಈ ಸಮಿತಿ ಕೈಹಾಕಿದೆ. ಆದರೆ ವೀರಶೈವ ಮಹಾಸಭಾ ವಯೋವೃದ್ಧವಾಗಿ ನಿರ್ವೀರ್ಯಶವ ಮಹಾಸಭಾ ಆಗಿ ತಣ್ಣಗೆ ಮಲಗಿದೆ. ಹೀಗಿದ್ದಾಗ ಯಾರು ಅಖಂಡ ವೀರಶೈವ (ಲಿಂಗಾಯತ)ರ ಹಿತ ಕಾಪಾಡುವವರು? ಎಂದು ಅಖಂಡ ವೀರಶೈವ (ಲಿಂಗಾಯತ) ಧರ್ಮೀಯರು ಪ್ರಶ್ನಿಸಿಕೊಂಡು ಆತ್ಮವಿಮರ್ಶೆ ಮಾಡಿಕೊಳ್ಳಬೇಕು.

ಯಾವ ಕೋನದಿಂದಲೂ ಈ ಲಿಂಗಾಯತ ಮಠಾಧೀಶರ ಒಕ್ಕೂಟದ ಒಕ್ಕೂಟಿಗರು, ತಪ್ಪುತಪ್ಪಾಗಿ ವಚನಗಳನ್ನು ಕಮ್ಯುನಿಸ್ಟ್, ನಾಸ್ತಿಕತೆಗೆ ವ್ಯಾಖ್ಯಾನಿಸುವ ಬುದ್ಧಿಜೀವಿ ಪಂಡಿತರು, ವಚನಗಳನ್ನು ಹಿಗ್ಗಾಮುಗ್ಗಾ ತಿದ್ದುವ ಕಿಂಕರ್ತವ್ಯಮೂಢ ಸಂಶೋಧಕರಾದಿಯಾಗಿ ಎಲ್ಲರೂ ಬಸವ, ಶರಣ, ಲಿಂಗಾಯತ, ಲಿಂಗಾಯತತ್ವದ ಕನಿಷ್ಠ ಅಣುರೇಣು ತೃಣಕಾಷ್ಠಿಗಳಾಗಲೂ ಅರ್ಹರಲ್ಲ! ಹಾಗಾಗಿ ಅಖಂಡ ವೀರಶೈವ (ಲಿಂಗಾಯತ) ಧರ್ಮೀಯರು ಪ್ರಶ್ನಿಸಿಕೊಂಡು ಆತ್ಮವಿಮರ್ಶೆ ಮಾಡಿಕೊಳ್ಳಬೇಕು.

ಇನ್ನುಳಿದಂತೆ ಭಕ್ತ ಮಹಾಶಯ ಅಖಂಡ ವೀರಶೈವ (ಲಿಂಗಾಯತ) ಧರ್ಮೀಯರು ತಮ್ಮ ಧಾರ್ಮಿಕ ಲಾಂಛನವಾದ ಚೆನ್ನಬಸವಣ್ಣನ ಈ ವಚನವನ್ನು ಮನದಟ್ಟು ಮಾಡಿಕೊಂಡು ಗಣಾಚಾರರಾಗಿ ತಮ್ಮ ಗಣತಿಯ ನಿರ್ಣಯ ಕೈಗೊಳ್ಳತಕ್ಕದ್ದು: ''ಕೇಶ ಕಾಷಾಯಾಂಬರ ವೇಷ ಲಾಂಛನವಾದಡೇನೊ? ಗ್ರಾಸಕ್ಕೆ ಭಾಜನರಲ್ಲದೆ ಲಿಂಗಕ್ಕೆ ಭಾಜನರಲ್ಲ. ಈ ಆಸೆಯ ವೇಷವ ಕಂಡಡೆ ಕಾರಹುಣ್ಣಿಮೆಯ ಹಗರಣವೆಂಬೆ ಕಾಣಾ ಕೂಡಲಚೆನ್ನಸಂಗಮದೇವಾ''.

(ಲೇಖಕರು ಶಿಕಾಗೊ ನಿವಾಸಿ ಮತ್ತು ಸಾಹಿತಿ)

ಅಚ್ಚುಕಟ್ಟು ಪ್ರದೇಶ
RNI no: 3918/59

VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed @ manipal media network limited Sy no7/2,plot no CA-3/1,28 (p)&29 (p),Kapnoor,2nd stage industrial area,kapnoor village, Gulbarga-585104

Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:68, Issue: 106

ಸಮಾಚಾರ ಸಣ್ಣದಲ್ಲ

ಶೋಭಾಯಾತ್ರೆ ರಥಕ್ಕೆ ವಿದ್ಯುತ್‌ಸ್ಪರ್ಶ: 5 ಬಲಿ

ಹೈದರಾಬಾದ್: ತೆಲಂಗಾಣದ ಉಪ್ಪಳ ಪೊಲೀಸ್ ವ್ಯಾಪ್ತಿ ರಾಮಂತಪುರದಲ್ಲಿ ಭಾನುವಾರ ರಾತ್ರಿ ಶ್ರೀಕೃಷ್ಣ ಶೋಭಾ ಯಾತ್ರೆ ರಥ ಸಾಗಿದ್ದಾಗ, ರಥಕ್ಕೆ ವಿದ್ಯುತ್ ಸ್ಪರ್ಶಿಸಿದ್ದರಿಂದ ಐವರು ಭಕ್ತರು ಸಾವನ್ನಪ್ಪಿದ್ದಾರೆ. ನಾಲ್ವರು ಯುವಕರು ಗಾಯಗೊಂಡಿದ್ದಾರೆ. ರಥದ ಕಲಶ ಎತ್ತರವಾಗಿದ್ದುದರಿಂದ ವಿದ್ಯುತ್ ತಂತಿಗೆ ತಾಗಿದೆ. ಪರಿಣಾಮ ರಥದಲ್ಲಿದ್ದ ಕೃಷ್ಣ (21), ಸುರೇಶ್ ಯಾದವ್ (34), ಶ್ರೀಕಾಂತ್ ರೆಡ್ಡಿ (35), ರುದ್ರ ವಿಕಾಸ್ (39) ಮತ್ತು ರಾಜೇಂದ್ರ ರೆಡ್ಡಿ (45) ಜೀವ ಕಳೆದುಕೊಂಡರು. ನಾಲ್ವರು ಗಾಯಾಳುಗಳನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿದೆ. ಐವರ ಮೃತದೇಹಗಳನ್ನು ಮರಣೋತ್ತರ ಪರೀಕ್ಷೆಗಾಗಿ ಗಾಂಧಿ ಆಸ್ಪತ್ರೆಗೆ ರವಾನಿಸಿರುವ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದಾರೆ.

ಎಸ್‌ಪಿ ಶಾಸಕಿ ಪೂಜಾ ಸಿಎಂ ಯೋಗಿ ಭೇಟಿ

ಲಖನೌ: ಉತ್ತರ ಪ್ರದೇಶ ವಿಧಾನಸಭೆ ಅಧಿವೇಶನದಲ್ಲಿಯೇ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರನ್ನು ಹೊಗಳಿದ್ದಕ್ಕೆ ಸಮಾಜವಾದಿ ಪಕ್ಷದಿಂದ ಉಚ್ಚಾಟನೆಗೊಂಡಿರುವ ಶಾಸಕಿ ಪೂಜಾ ಪಾಲ್ ಅವರು ಸಿಎಂ ಅವರನ್ನು ಅಧಿಕೃತ ನಿವಾಸದಲ್ಲಿ ಸೋಮವಾರ ಭೇಟಿಯಾಗಿದ್ದಾರೆ. ಇದು ರಾಜ್ಯ ರಾಜಕೀಯ ವಲಯದಲ್ಲಿ ದೊಡ್ಡ ಚರ್ಚೆಗೆ ಕಾರಣವಾಗಿದೆ. ಮಾಫಿಯಾದಿಂದ ಪತಿ ಹತ್ಯೆಯಾದ ಬಳಿಕ ಪೂಜಾ ಪಾಲ್ ರಾಜಕೀಯ ಪ್ರಯಾಣ ಆರಂಭಗೊಂಡಿದ್ದು ಹೋರಾಟದ ಹಾದಿಯಲ್ಲಿ ಸಾಗುತ್ತಿದೆ. 'ನೇರ ನಡೆನುಡಿಯ ನಾಯಕಿ ಎನಿಸಿಕೊಂಡಿರುವ ಶಾಸಕಿ ಪೂಜಾ, ಬಿಜೆಪಿ ಸೇರಿದರೆ ಉತ್ತರಪ್ರದೇಶದ ಪಾಲ್ ಸಮುದಾಯಕ್ಕೆ ಬಿಜೆಪಿ ಪರ ಬಲವಾದ ಸಂದೇಶ ಕಳುಹಿಸುತ್ತದೆ. ಜತೆಗೆ ಪ್ರಯಾಗ್ರಾಜ್ ಪ್ರದೇಶದ ರಾಜಕೀಯದಲ್ಲಿ ಹೊಸ ತಿರುವು ತರಬಹುದು' ಎಂದು ಬಿಜೆಪಿಯ ಹಿರಿಯ ನಾಯಕರೊಬ್ಬರು ವಿಶ್ಲೇಷಣೆ ಮಾಡಿದ್ದಾರೆ.

22ಕ್ಕೆ ಕೋಲ್ಕತ್ತ ಮೆಟ್ರೊ ಪ್ರಧಾನಿ ಉದ್ಘಾಟನೆ

ಕೋಲ್ಕತ್ತ: ಪ್ರಧಾನಿ ನರೇಂದ್ರ ಮೋದಿ ಅವರು ಆ.22ರಂದು ಕೋಲ್ಕತ್ತ ನಗರದಲ್ಲಿನ ಮೆಟ್ರೊ ಮೂರು ಯೋಜನೆಗಳನ್ನು ಉದ್ಘಾಟಿಸಲಿದ್ದಾರೆ. ಮೆಟ್ರೊ ಯೋಜನೆಗಳ ಉದ್ಘಾಟನಾ ಸಮಾರಂಭಕ್ಕೆ ಆಗಮಿಸುವಂತೆ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರು ಮಮತಾ ಬ್ಯಾನರ್ಜಿ ಅವರಿಗೆ ಪತ್ರ ಬರೆದು ಆಹ್ವಾನಿಸಿದ್ದಾರೆ. ಮಮತಾ ಬ್ಯಾನರ್ಜಿ ಅವರು ರೈಲ್ವೆ ಸಚಿವರಾಗಿದ್ದಾಗ ಈ ಮೆಟ್ರೊ ಯೋಜನೆಗಳನ್ನು ಯೋಜಿಸಿದ್ದರು ಎಂದು ಟಿಎಂಸಿ ಹೇಳಿಕೊಂಡಿದೆ. ಆದರೆ, ಈ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಗೈರು ಹಾಜರಾಗಲಿದ್ದಾರೆ ಎಂದು ತಿಳಿದುಬಂದಿದೆ.

ಪ.ಬಂಗಾಳ ಶಾಲೆ ಬಳಿ ಸ್ಫೋಟ: ಒಬ್ಬ ಸಾವು

ಕೋಲ್ಕತ್ತಾ: ಪಶ್ಚಿಮ ಬಂಗಾಳದ ಉತ್ತರ 24 ಪರಗಣ ಜಿಲ್ಲೆಯ ಮಧ್ಯಮಗ್ರಾಮ್ ಪ್ರೌಢ ಶಾಲೆಯ ಬಳಿ ಸೋಮವಾರ ಮುಂಜಾನೆ ಬಾಂಬ್ ಸ್ಫೋಟಗೊಂಡು ಒಬ್ಬರು ಸಾವಿಗೀಡಾಗಿದ್ದಾರೆ. ಸ್ಫೋಟವಾದಾಗ ಗಂಭೀರವಾಗಿ ಗಾಯಗೊಂಡಿದ್ದ ವ್ಯಕ್ತಿಯನ್ನು ಬರಾಸತ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ, ಚಿಕಿತ್ಸೆಗೆ ಸ್ಪಂದಿಸದೇ ಆತ ಅಸುನೀಗಿದ ಎಂದು ಪೊಲೀಸ್ ವರಿಷ್ಠಾಧಿಕಾರಿ ಪ್ರತೀಕ್ಷಾ ಝಾರ್ಖರಿಯ ಸುದ್ದಿಸಂಸ್ಥೆಗೆ ಸೋಮವಾರ ತಿಳಿಸಿದ್ದಾರೆ. ಬಾಂಬ್ ಸ್ಫೋಟ ಸ್ಥಳಕ್ಕೆ ಆಹಾರ-ನಾಗರಿಕ ಸರಬರಾಜು ಸಚಿವ ರತಿನ್ ಘೋಷ್ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಮೃತ ವ್ಯಕ್ತಿ ಬೇರೆ ರಾಜ್ಯದ ನಿವಾಸಿ. ಆತನ ಗುರುತು ಇನ್ನೂ ಪತ್ತೆಯಾಗಿಲ್ಲ, ಸ್ಫೋಟ ಸಂಬಂಧ ಹೆಚ್ಚಿನ ತನಿಖೆ ನಡೆಯುತ್ತಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಪಾಕ್ ಮೇಘಸ್ಫೋಟ, ಪ್ರವಾಹಕ್ಕೆ 337 ಬಲಿ

ಇಸ್ಲಾಮಾಬಾದ್: ಪಾಕಿಸ್ತಾನ ಆಕ್ರಮಿತ ಕಾಶ್ಮೀರ (ಪಿಒಕೆ)ದಲ್ಲಿ ಮಳೆ ಆರ್ಭಟ ಮುಂದುವರೆದಿರುವ ಮಧ್ಯೆಯೇ ಮತ್ತೆ ಮತ್ತೆ ಮೇಘಸ್ಫೋಟವಾಗುತ್ತಿದೆ. ಪಿಒಕೆಯಲ್ಲಿ ಭಾರೀ ಪ್ರವಾಹ ಉಂಟಾಗಿದ್ದು, ಹಲವು ಗ್ರಾಮ-ಪಟ್ಟಣಗಳು ಹಾನಿಗೀಡಾಗಿವೆ. ಪ್ರವಾಹಕ್ಕೆ 337 ಮಂದಿ ಸಾವನ್ನಪ್ಪಿದ್ದಾರೆ. 150ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಗಂಟೆಗಳ ಕಾಲ ನಡೆಸಿದ ಪ್ರಯತ್ನದ ನಂತರ 54 ಶವಗಳು ಪತ್ತೆಯಾಗಿವೆ ಎಂದು ವರದಿಯಾಗಿದೆ. ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರ ಪ್ರಕಾರ, ವಾಯುವ್ಯ ಪಾಕಿಸ್ತಾನದ ಪಾಕಿಸ್ತಾನ ಆಕ್ರಮಿತ ಖೈಬರ್ ಪಖ್ತುಂಖ್ವಾ ಮತ್ತು 'ಪಿಒಕೆ'ಯ ಕಾಶ್ಮೀರ ಮತ್ತು ಗಿಲ್ಗಿಟ್-ಬಾಲ್ಟಿಸ್ತಾನ್ ಪ್ರದೇಶಗಳಲ್ಲಿ ಮೇಘಸ್ಫೋಟವಾಗುತ್ತಲೇ ಇದೆ ಎಂದು ತುರ್ತು ಸೇವೆಯ ವಕ್ತಾರ ಹೇಳಿದ್ದಾರೆ.

{ ಜೆ.ಪಿ.ನಡ್ಡಾ } ಕೇಂದ್ರ ಸಚಿವ

ಪಾಕ್-ಭಾರತ ನಡುವಿನ '1960ರ ಸಿಂಧೂ ಜಲ ಒಪ್ಪಂದ' ಮಾಜಿ ಪ್ರಧಾನಿ ಜವಾಹರಲಾಲ್ ನೆಹರು ಮಾಡಿದ ಅತಿ ದೊಡ್ಡ ಪ್ರಮಾದ. ನೆಹರು ಏಕಪಕ್ಷೀಯವಾಗಿ ಸಿಂಧೂ ಜಲಾನಯನ ಪ್ರದೇಶದ ನೀರಿನಲ್ಲಿ ಶೇ.80 ರಷ್ಟನ್ನು ಪಾಕ್‌ಗೆ ಮುಕ್ತವಾಗಿ ಬಿಟ್ಟುಕೊಟ್ಟಿದ್ದಾರೆ. ಭಾರತಕ್ಕೆ ಕೇವಲ ಶೇ.20 ಪಾಲಷ್ಟೇ ಸಿಕ್ಕಿದೆ. ಇದು ರಾಷ್ಟ್ರೀಯ ಹಿತಾಸಕ್ತಿ, ಕೃಷಿಕ್ಷೇತ್ರದ ಪ್ರಗತಿಗೆ ವಿರುದ್ಧ ನಿರ್ಧಾರ.

24 ಗಂಟೆಗಳಲ್ಲಿ ದಾಹಿಸರ್ 188, ಕಾಂಡಿವಿಲಿ 150, ಕಾಟನ್ ಗ್ರೀನ್ 145 ಮಿಮೀ ಮಳೆ। ಮಹಾಮಳೆಗೆ 9 ವಿಮಾನ ಲ್ಯಾಂಡಿಂಗ್‌ವ್ಯತ್ಯಯ, ಶಾಲೆ-ಕಾಲೇಜಿಗೆ ರಜೆ: ಮುಂಬೈಗೆ ರೆಡ್ ಅಲರ್ಟ್। ಸೋಮವಾರ 6 ಗಂಟೆ ಅವಧಿಯಲ್ಲೇ ಚೆಂಬೂರ್-117, ವಿಖ್ರೋಲಿ-103 ಮಿಮೀ ಮಳೆ

ಮಹಾ ವರ್ಷಾಧಾರೆ: ಪ್ರವಾಹ, ಭೂಕುಸಿತ

ಮುಂಬೈ: ಮಹಾರಾಷ್ಟ್ರದ ರಾಜಧಾನಿ ಮುಂಬೈ ಮಹಾನಗರ ಮತ್ತು ಸಮೀಪದ ಜಿಲ್ಲೆಗಳಲ್ಲಿ ಎರಡು ದಿನದ ಹಿಂದೆ ಶುರುವಾದ ಮಳೆ ಧಾರಾಕಾರ ಸುರಿಯುತ್ತಿದ್ದು, ಸೋಮವಾರವೂ ಆರ್ಭಟ ಮುಂದುವರಿಸಿದೆ.

ನಾಂದೇಡ್ ಜಿಲ್ಲೆಯಲ್ಲಿ ಪ್ರವಾಹ ಉಂಟಾಗಿದ್ದು, ಐವರು ಕಣ್ಮರೆಯಾಗಿದ್ದಾರೆ. ಜಿಲ್ಲೆಯ ವಿವಿಧೆಡೆ ಪ್ರವಾಹದಲ್ಲಿ ಸಿಲುಕಿದ್ದ 200ಕ್ಕೂ ಹೆಚ್ಚು ಜನರನ್ನು ಭಾರತೀಯ ಸೇನಾಪಡೆ ಸಿಬ್ಬಂದಿ ರಕ್ಷಣಾ ಕಾರ್ಯಾಚರಣೆ ನಡೆಸಿ ಸ್ಥಳಾಂತರಿಸಿದೆ. ಎಸ್‌ಡಿಆರ್‌ಎಫ್ ತಂಡವೂ ಮುಖೇಡ್ ತಾಲೂಕಿನಲ್ಲಿ 21 ಜನರ ರಕ್ಷಣೆ ಮಾಡಿದೆ. ಮತ್ತೊಂದೆಡೆ, ರಾವಣ್‌ಗಾಂವ್‌ನ 225 ನಿವಾಸಿಗಳು ಪ್ರವಾಹದಲ್ಲಿ ಸಿಲುಕಿದ್ದರು. ಅವರನ್ನು ರಕ್ಷಿಸುವ ಕಾರ್ಯಾಚರಣೆ ಸೋಮವಾರ ಸಂಜೆವರೆಗೂ ನಡೆಯಿತು. ಅಂಬಾ ಘಟ್ಟ ಪ್ರದೇಶದಲ್ಲಿ ಸೋಮವಾರ ಮಧ್ಯಾಹ್ನ 12ರ ವೇಳೆ ಭೂಕುಸಿತವಾಗಿದ್ದು, ಕೊಲ್ಲಾಪುರ-ರತ್ನಗಿರಿ ಹೆದ್ದಾರಿ ಸಂಚಾರ ಸ್ಥಗಿತಗೊಂಡಿದೆ. ಮುಂಬೈ ವಿಮಾನ ನಿಲ್ದಾಣದಲ್ಲಿ ಇಳಿಯಬೇಕಿದ್ದ 1 ವಿಮಾನವನ್ನು ಸೂರತ್‌ಗೆ ಕಳುಹಿಸಿಕೊಡಲಾಗಿದೆ. ಧಾರಾಕಾರ ಮಳೆಯಾಗುತ್ತಿದ್ದುದರಿಂದ 9 ವಿಮಾನಗಳ ಲ್ಯಾಂಡಿಂಗ್ ಬಹಳ ತಡವಾಗಿದೆ. 9 ವಿಮಾನಗಳು ನಿಲ್ದಾಣದಲ್ಲಿ ಇಳಿಯುವುದಕ್ಕೂ ಮೊದಲು ಆಕಾಶದಲ್ಲೇ ಹಲವು ಸುತ್ತು ಹಾಕಬೇಕಾಯಿತು ಎಂದು ಮುಂಬೈ ವಿಮಾನ ನಿಲ್ದಾಣದ ವಕ್ತಾರರು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಮುಂಬೈ ಜನತೆಗೆ ಸೂಚನೆ: ಮುಂಬೈ ನಿವಾಸಿಗಳು ತುರ್ತು ಇದ್ದರಷ್ಟೇ ಮನೆಯಿಂದ ಹೊರಬಹುದು, ಇಲ್ಲವಾದರೆ ಮನೆಯಲ್ಲೇ ಇರಬೇಕೆಂದು ಬಿಎಂಸಿ ಸೂಚನೆ ಹೊರಡಿಸಿದೆ. ಸಮುದ್ರಕ್ಕೆ ಮೀನುಗಾರಿಕೆಗೆ ಇಳಿಯದಂತೆ ಸೂಚನೆ ನೀಡಲಾಗಿದೆ. 3 ದಿನದ ಮಳೆಯಿಂದಾಗಿ ಹಲವು ಪ್ರದೇಶ ಜಲಾವೃತಗೊಂಡಿವೆ, ರಸ್ತೆಗಳೆಲ್ಲಾ ನದಿಯಂತಾಗಿವೆ. ಪರಿಣಾಮ, ಮುಂಬೈ ನಗರ ಸಾರಿಗೆ ಬಸ್ ಸಂಚಾರ(ಬೆಸ್ಟ್) ದಲ್ಲಿ ಭಾರೀ ವ್ಯತ್ಯಯವಾಗಿದೆ. ಮಹಾನಗರದ ಜೀವನಾಡಿ ಎನಿಸಿದ 'ಲೋಕಲ್ ಟ್ರೇನ್' ಸೇವೆ ಸ್ಥಗಿತಗೊಂಡಿಲ್ಲ, ಆದರೆ ತಡವಾಗಿ ಸಂಚರಿಸುತ್ತಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರೈಲು ಸಂಚಾರ: ಭಾರೀ ಮಳೆಯಾಗುತ್ತಿದ್ದರೂ, ಹಳಿಗಳು ಮಳೆ ನೀರಿನಲ್ಲಿ ಮುಳುಗಡೆಯಾಗಿದ್ದರೂ ರೈಲುಗಳ ಸಂಚಾರದಲ್ಲಿ ಯಾವುದೇ ವ್ಯತ್ಯಯ ಮಾಡಿಲ್ಲ. ಆದರೆ, ಮಳೆ ಪ್ರದೇಶದಲ್ಲಿ ರೈಲುಗಳ ವೇಗವನ್ನು ಗಣನೀಯವಾಗಿ(15 ಕಿಮೀಗೆ) ತಗ್ಗಿಸುವಂತೆ ಲೋಕೊಪೈಲಟ್‌ಗಳಿಗೆ ಸೂಚನೆ ನೀಡಲಾಗಿದೆ ಎಂದು ಸೆಂಟ್ರಲ್ ರೈಲ್ವೆ ಸ್ಪಷ್ಟಪಡಿಸಿದೆ.

ಅಣೆಯಿಂದ ನದಿಗೆ ನೀರು: ನಾಂದೇಡ್ ಜಿಲ್ಲೆಯಲ್ಲಿ ಪ್ರವಾಹ ಪರಿಸ್ಥಿತಿ ಸೃಷ್ಟಿಯಾಗಿದೆ. ಮುಖೇಡ್ ಪ್ರದೇಶದಲ್ಲಿ 15 ಯೋಧರ ರಕ್ಷಣಾ ತಂಡವನ್ನು ನಿಯೋಜಿಸಲಾಗುತ್ತಿದೆ. ಈ ಭಾಗದ ಅಣೆಕಟ್ಟೆಗಳಿಂದ ನೀರು ಬಿಡುಗಡೆ ಮಾಡಲಾಗುತ್ತಿದೆ. ತೆಲಂಗಾಣ ರಾಜ್ಯದ ನೀರಾವರಿ ಇಲಾಖೆಗೆ ಕರೆ ಮಾಡಿ ಪೋಚಂಪಡ್ ಅಣೆಕಟ್ಟೆಯಿಂದ ನೀರು ಬಿಡುಗಡೆ ಮಾಡುವಂತೆ ಸೂಚಿಸಲಾಗಿದೆ ಎಂದು ಮಹಾರಾಷ್ಟ್ರ ನೀರಾವರಿ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಮುಂಬೈ ನಗರದ ರಸ್ತೆಗಳೆಲ್ಲಾ ನದಿಗಳಂತಾಗಿದ್ದು, ಅಪಾಯಕಾರಿ ಮಾರ್ಗಗಳಲ್ಲಿ ಬ್ಯಾರಿಕೇಡ್ ಅಡ್ಡ ಇಟ್ಟು ಬಿಎಂಸಿ ಸಿಬ್ಬಂದಿ ಕಾವಲು ನಿಂತಿದ್ದಾರೆ.

ಆ.21ರವರೆಗೂ ವರ್ಷಧಾರೆ: ಸಿಎಂ

ರಾಜ್ಯದ 15-16 ಜಿಲ್ಲೆಗಳಲ್ಲಿ ಆ.21ರವರೆಗೂ ಪ್ರಮಾಣದಲ್ಲಿ ಮಳೆಯಾಗಲಿದೆ ಎಂದು ಹೇಳಿರುವ ಸಿಎಂ ದೇವೇಂದ್ರ ಫಡ್ನವಿಸ್, ಜನ-ಜಾನುವಾರು, ಆಸ್ತಿಗಳ ರಕ್ಷಣೆಗೆ ಮುನ್ನೆಚ್ಚರಿಕೆ ಕ್ರಮಗ ಳನ್ನು ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೋಮವಾರ ಸೂಚನೆ ನೀಡಿದ್ದಾರೆ. ಸಚಿವಾಲಯದಲ್ಲಿ ಸೋಮ ವಾರ ಬೆಳಗ್ಗೆ ರಾಜ್ಯ ಪ್ರಾಕೃತಿಕ ವಿಕೋಪ ನಿರ್ವಹಣಾ ವಿಭಾಗದ ತುರ್ತು ಸಭೆ ನಡೆಸಿ ಪರಿಸ್ಥಿತಿಯ ಅವಲೋಕನ ನಡೆಸಿದ್ದಾರೆ. ಸಚಿವಾಲಯ ಸಿಬ್ಬಂದಿಗೆ ಸಂಜೆ 4ಕ್ಕೆಲ್ಲಾ ಮನೆಗೆ ತೆರಳುವಂತೆಯೂ ಹೇಳಿದ್ದಾರೆ.

ಉತ್ತರ ಭಾರತ ಮಳೆ ಆರ್ಭಟ

ಉತ್ತರ ಭಾರತದಲ್ಲಿಯೂ ಮಳೆಯ ಆರ್ಭಟವಾಗುತ್ತಿದ್ದು, ಯಮುನಾ ನದಿಯ ಮಟ್ಟ ದೆಹಲಿ ಭಾಗದಲ್ಲಿ ಸೋಮವಾರ 206 ಮೀ. ಮೀರಿತ್ತು. ಮಧ್ಯಪ್ರದೇಶದಲ್ಲಿ ಧಾರಾಕಾರ ಮಳೆಗೆ ಸೋಮವಾರ ಕಟ್ಟಡವೊಂದರ ಗೋಡೆ ಕುಸಿದು ಮೂವರು ಕಾರ್ಮಿಕರು ಸಾವಿಗೀಡಾಗಿದ್ದಾರೆ. ಹರಿಯಾಣದಲ್ಲಿಯೂ ಭಾರೀ ಮಳೆಯಾಗುತ್ತಿದೆ. ಹಿಮಾಚಲ ಪ್ರದೇಶದಲ್ಲಿ ವರ್ಷಧಾರೆಯ ಆಟಾಟೋಪ ಮುಂದುವರಿದಿದೆ. ಜೂ.20ರಿಂದ ಈವರೆಗೆ ಮುಂಗಾರು ಮಳೆ ಅವಘಡಗಳಲ್ಲಿ 263 ಮಂದಿ ಪ್ರಾಣ ಕಳೆದು ಕೊಂಡಿದ್ದಾರೆ. ರಾಜ್ಯದಲ್ಲಿ 2,173 ಕೋಟಿ ರು.ಗಳಷ್ಟು ಆಸ್ತಿ ಹಾನಿಯಾಗಿದೆ. ಒಡಿಶಾದಲ್ಲಿಯೂ ಭಾರೀ ಮಳೆಯಾಗುತ್ತಿದೆ.

ಅಂಬಾ ಘಟ್ಟದಲ್ಲಿ ಸೋಮವಾರ ಭೂಕುಸಿತವಾಗಿ ಕೊಲ್ಲಾಪುರ-ರತ್ನಗಿರಿ ಹೆದ್ದಾರಿ ಸಂಚಾರ ಬಂದ್ ಆಗಿದೆ.

ತತ್ತರಿಸಿದ ಮುಂಬೈ ಮಹಾನಗರ

ಮುಂಬೈ ಮಹಾನಗರದಲ್ಲಿ ಸೋಮವಾರ ಬೆಳಗ್ಗೆ 8ಕ್ಕೂ ಮುಂಚಿನ 24 ಗಂಟೆಗಳಲ್ಲಿ ಸರಾಸರಿ 55 ಮಿ.ಮೀಗೂ ಅಧಿಕ ಮಳೆಯಾಗಿದೆ. ದಾಹಿಸರ್ 188, ಕಾಂಡಿವಿಲಿ 150, ಕಾಟನ್ ಗ್ರೀನ್ 145 ಮಿಮೀ ಮಳೆಯಾಗಿದೆ. ಸೋಮವಾರ ಕೇವಲ 6 ಗಂಟೆಗಳಲ್ಲೇ ಚೆಂಬೂರ್-117, ವಿಖ್ರೋಲಿ-103, ಪೂರ್ವ ಉಪನಗರಗಳಲ್ಲಿ 72.61 ಮಿ.ಮೀ ಮತ್ತು ಪಶ್ಚಿಮ ಉಪನಗರಗಳಲ್ಲಿ 65.86 ಮಿ.ಮೀ ಮಳೆಯಾಗಿದೆ. ಸೋಮವಾರ ಬೆಳಗ್ಗೆ 9ರಿಂದ 10ರ ನಡುವಿನ 1 ಗಂಟೆ ಅವಧಿಗೇ ಮುಂಬೈನ ಚೆಂಬೂರ್‌ನಲ್ಲಿ 65, ಶಿವಾಜಿ ನಗರ 50, ದ್ವೀಪ ನಗರ 37, ಪೂರ್ವ ಉಪನಗರ 39 ಮತ್ತು ಪಶ್ಚಿಮ ಉಪನಗರ 29 ಮಿಮೀ ಮಳೆಯಾಗಿದೆ. ಪರಿಣಾಮ ಮುಂಬೈನಲ್ಲಿ ಶಾಲಾ-ಕಾಲೇಜುಗಳಿಗೆ ಸೋಮವಾರ ರಜೆ ಘೋಷಿಸಲಾಗಿದೆ. ಹವಾಮಾನ ಇಲಾಖೆ, ಮುಂಬೈ ನಗರ ಹಾಗೂ ಥಾಣೆ ಮತ್ತು ರಾಯಗಢ ಜಿಲ್ಲೆಗಳಿಗೆ 'ರೆಡ್ ಅಲರ್ಟ್', ಅಮರಾವತಿ, ಗಡ್‌ಚಿರೋಲಿ,ಗೆ ಆರೆಂಜ್ ಅಲರ್ಟ್, ನಾಗಪುರ, ವಿದರ್ಭ ಜಿಲ್ಲೆಗಳಿಗೆ ಯೆಲ್ಲೊ ಅಲರ್ಟ್ ಘೋಷಿಸಿದೆ. ಪ್ರಸಕ್ತ ಮುಂಗಾರಿನಲ್ಲಿ ಮುಂಬೈನಲ್ಲಿ ಆ.17ರ ವೇಳೆಗೆ ಸರಾಸರಿ 1000 ಮಿಮೀ ಮಳೆಯಾಗಿದೆ. ಸಾಂತಾಕ್ರೂಜ್‌ನಲ್ಲಿ 1764 ಮಿ.ಮೀ ಮತ್ತು ಕೊಲಬಾದಲ್ಲಿ 1257 ಮಿಮೀನಷ್ಟು ದಾಖಲೆ ಮಳೆ ಸುರಿದಿದೆ ಎಂದು ಐಎಂಡಿ ತಿಳಿಸಿದೆ.

ಶುಭಾಂಶು ಸಾಧನೆಗೆ ಶಶಿತರೂರ್ ಶ್ಲಾಘನೆ

ದೆಹಲಿ: ಭಾರತದ 2ನೇ ಗಗನಯಾತ್ರಿ, ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಪ್ರವೇಶ ಪಡೆದ ಮೊದಲ ಭಾರತೀಯ ಗಗನಯಾನಿ ಗ್ರೂಪ್ ಕ್ಯಾಪ್ಟನ್ ಶುಭಾಂಶು ಶುಕ್ಲಾ ಅವರ ಸಾಧನೆಯನ್ನು ಕಾಂಗ್ರೆಸ್ ಸಂಸದ ಶಶಿ ತರೂರ್ ಸೋಮವಾರ ಬಹಳವಾಗಿ ಶ್ಲಾಘಿಸಿದ್ದಾರೆ.

ಶುಭಾಂಶು ಸಾಧನೆಯು ಭವಿಷ್ಯದ ಭಾರತೀಯರ ಗಗನಯಾನ ಕಾರ್ಯಕ್ರಮದ ಮಹತ್ವದ ಮೆಟ್ಟಿಲಾಗಿದೆ. ಭಾರತದ ಮಾನವ ಬಾಹ್ಯಾಕಾಶ ಯಾನದ ಮಹತ್ವಾಕಾಂಕ್ಷೆಗಳ ಶಕ್ತಿಯುತ ಸಂಕೇತವಾಗಿದೆ ಎಂದು ತರೂರ್ ಬಣ್ಣಿಸಿದ್ದಾರೆ. ಶುಭಾಂಶು ಶುಕ್ಲಾ ಬಾಹ್ಯಾಕಾಶ ನಿಲ್ದಾಣ ಸಾಧನೆ ಕುರಿತು ಲೋಕಸಭೆಯಲ್ಲಿ ವಿಶೇಷ ಚರ್ಚೆಯಲ್ಲಿ ಭಾಗವಹಿಸಲು ಪ್ರತಿಪಕ್ಷಗಳು ಭಾಗವಹಿಸದೇ ಹೋಗಿದ್ದರಿಂದ, ಶಶಿತರೂರ್ ಪ್ರತಿಪಕ್ಷಗಳ ಪರವಾಗಿ ಶುಭಾಂಶು ಸಾಧನೆಯನ್ನು ಕೊಂಡಾಡಿದರು. ಶುಭಾಂಶು ಶುಕ್ಲಾ ಅವರ ಐಎಸ್‌ಎಸ್ ಸಾಧನೆಗೆ ಎಲ್ಲಾ ಭಾರತೀಯರು ಭಾರೀ ಹೆಮ್ಮೆಪಡುತ್ತಾರೆ ಎಂದರು.

ಶುಕ್ಲಾ ಬಾಹ್ಯಾಕಾಶ ಯಾನ ಕುರಿತು ಲೋಕಸಭೆಯಲ್ಲಿ ವಿಶೇಷ ಚರ್ಚೆಯಲ್ಲಿ ಭಾಗಿಯಾಗುವಂತೆ ಪ್ರತಿಪಕ್ಷಗಳನ್ನು ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಕೋರಿದಾಗ, ಎಸ್‌ಐಆರ್, ಮತ ಕಳವು ಕುರಿತು ಚರ್ಚೆಗೇ ಪ್ರತಿಪಕ್ಷಗಳು ಪಟ್ಟು ಹಿಡಿದಿದ್ದವು. ಪ್ರತಿಪಕ್ಷಗಳ ನಾಯಕರು ಸದನದಿಂದಲೇ ದೂರ ಉಳಿದಿದ್ದರು.

ಮುಖ್ಯ ಚು.ಆಯುಕ್ತರೇ ಬಿಜೆಪಿ ವಕ್ತಾರ: ಕಾಂಗ್ರೆಸ್

ದೆಹಲಿ: ಬಿಹಾರದ ಮತದಾರರ ಪಟ್ಟಿಯಿಂದ ವಿವಿಧ ಕಾರಣಗಳಿಂದಾಗಿ ಕೈಬಿಡಲಾದ 65 ಲಕ್ಷ ಮತದಾರರ ಪಟ್ಟಿಯನ್ನೂ ಮತ್ತು ಕೈಬಿಟ್ಟಿದ್ದಕ್ಕೆ ಕಾರಣ ವೇನು ಎಂಬುದನ್ನೂ ಕೇಂದ್ರ ಚುನಾವಣಾ ಆಯೋಗ ಸುಪ್ರೀಂ ಕೋರ್ಟ್‌ನ ನಿರ್ದೇಶನದಂತೆ ಪ್ರಕಟಿಸಿದೆ. ಮತ್ತೊಂದೆಡೆ ಕಾಂಗ್ರೆಸ್ ನೇತೃತ್ವದಲ್ಲಿನ 'ಇಂಡಿಯ' ಒಕ್ಕೂಟದ ವಾಗ್ದಾಳಿ ಮುಂದುವರಿದಿದೆ.

ದೆಹಲಿಯಲ್ಲಿ ಸೋಮವಾರ ಸುದ್ದಿಗೋಷ್ಠಿ ನಡೆಸಿದ ಕಾಂಗ್ರೆಸ್ ನಾಯಕ ಪವನ್ ಖೇರಾ ಅವರು, ಮುಖ್ಯ ಚುನಾವಣಾ ಆಯುಕ್ತ (ಸಿಇಸಿ) ಜ್ಞಾನೇಶ್ ಕುಮಾರ್ ಅವರನ್ನು ಸೋಮವಾರ ತೀವ್ರ ತರಾಟೆಗೆ ತೆಗೆದುಕೊಂಡರು. ಜ್ಞಾನೇಶ್ ಕುಮಾರ್ ಬಿಜೆಪಿಯ ಹೊಸ ವಕ್ತಾರರಂತೆ ಮಾತನಾಡುತ್ತಿದ್ದಾರೆ ಎಂದು ಟೀಕಿಸಿದರು.

ಬಿಜೆಪಿ ನಾಯಕರಾದ ಅನುರಾಗ್ ಠಾಕೂರ್, ಸಂಬಿತ್ ಪಾತ್ರ ಕಾಮೆಂಟ್ ಮಾಡುತ್ತಾರೆ ಎಂದು ನಿರೀಕ್ಷಿಸಿದ್ದೆವು. ಆದರೆ, ಸಿಇಸಿ ಜ್ಞಾನೇಶ್ ಕುಮಾರ್ ಮಾತನಾಡಿದ್ದಾರೆ ಎಂದು ಖೇರಾ ವ್ಯಂಗ್ಯವಾಡಿದರು.

ಮತದಾರರ ಪಟ್ಟಿಯಲ್ಲಿನ ಲೋಪ ಮತ್ತು ಮತ ಕಳವು ಆರೋಪ ಸಂಬಂಧ ರಾಹುಲ್ ಗಾಂಧಿ ಅವರು ಸಹಿ ಮಾಡಿದ ಪ್ರಮಾಣ ಪತ್ರವನ್ನು 7 ದಿನಗಳೊಳಗೆ ಸಲ್ಲಿಸಲಿ, ಇಲ್ಲವೇ ದೇಶದ ಕ್ಷಮೆ ಕೇಳಲಿ ಎಂದು ಚುನಾವಣಾ ಆಯೋಗ ಭಾನುವಾರ ಗಡುವು ವಿಧಿಸಿದ ಬಳಿಕ ಕಾಂಗ್ರೆಸ್ ಮರು ದಾಳಿ ನಡೆಸಿದೆ.

ಮೊದಲು ಚುನಾವಣಾ ಆಯೋಗ ಬಿಹಾರದಲ್ಲಿ ಇತ್ತೀಚೆಗೆ ಪ್ರಕಟಿಸಿದ ಮತದಾರರ ಪಟ್ಟಿ ಪೂರ್ಣ ಸ್ವಚ್ಛವಾಗಿದೆ ಎಂದು ಸುಪ್ರೀಂ ಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸಲಿ. ನಂತರ ನಾವು ಮತದಾರರ ಪಟ್ಟಿಯಲ್ಲಿ ಅದೆಷ್ಟು ಲೋಪ ಇವೆ, ಎಲ್ಲೆಲ್ಲಿ ಅಕ್ರಮಗಳಾಗಿವೆ ಎಂಬ ಬಗ್ಗೆ ಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸುತ್ತೇವೆ ಎಂದು ಕಾಂಗ್ರೆಸ್ ನಾಯಕರು ಹೇಳಿದ್ದಾರೆ.

ವಾಂಗ್ ಭೇಟಿ: ಕೇಂದ್ರ ವಿರುದ್ಧ ಕೈಪಡೆ ವಾಗ್ದಾಳಿ

ದೆಹಲಿ: 'ಆಪರೇಷನ್ ಸಿಂದೂರ್' ಸೇನಾ ಕಾರ್ಯಾಚರಣೆ ವೇಳೆ ಪಾಕಿಸ್ತಾನಕ್ಕೆ ಚೀನಾ ದೊಡ್ಡ ಮಟ್ಟದಲ್ಲಿ ಶಸ್ತ್ರಾಸ್ತ್ರ ಪೂರೈಸಿತ್ತು ಹಾಗೂ ಗುಪ್ತಚರ ಮಾಹಿತಿಗಳನ್ನೂ ಒದಗಿಸುತ್ತಿತ್ತು. ವಾಸ್ತವ ಹೀಗಿರುವಾಗ ಸಿಂದೂರ್ ನಂತರದ 3 ತಿಂಗಳಲ್ಲೇ ಚೀನಾ ವಿದೇಶಾಂಗ ಸಚಿವರಿಗೆ ಭಾರತ ಭೇಟಿಗೆ ಅವಕಾಶ ನೀಡಿರುವುದು ಎಷ್ಟು ಸರಿ? ಎಂದು ಕೇಂದ್ರ ಸರಕಾರವನ್ನು ಕಾಂಗ್ರೆಸ್ ಕಟುವಾಗಿ ಪ್ರಶ್ನೆ ಮಾಡಿದೆ.

ಗಾಲ್ವಾನ್ ಒತ್ತುವರಿ ವಿಚಾರದಲ್ಲಿ ಪ್ರಧಾನಿ ನರೇಂದ್ರ ಮೋದಿ ಚೀನಾಕ್ಕೆ ಈ ಮೊದಲು ಕ್ಲೀನ್ ಚಿಟ್ ನೀಡಿದ್ದರು. ಅದಕ್ಕೆ ಭಾರತದ ಸೈನಿಕರು ಗಡಿಯಲ್ಲಿ ದೊಡ್ಡ ಬೆಲೆ ತೆರಬೇಕಾಯಿತು. 2020ರ ಜೂನ್‌ನಲ್ಲಿ ಗಾಲ್ವಾನ್ ಕಣಿವೆಯಲ್ಲಿ ಚೀನಾ ಸೈನಿಕರ ಜತೆಗಿನ ಘರ್ಷಣೆಯಲ್ಲಿ 20 ಭಾರತೀಯ ಸೈನಿಕರು ಹುತಾತ್ಮರಾದರು. ಅವರ ಜೀವತ್ಯಾಗಕ್ಕೆ ಕೇಂದ್ರ ಸರಕಾರದಿಂದ ಅವಮಾನವಾಗಿದೆ ಎಂದು ಕಾಂಗ್ರೆಸ್‌ನ ರಾಜ್ಯಸಭಾ ಸದಸ್ಯ ಜೈರಾಮ್ ರಮೇಶ್ ಕಿಡಿಕಾರಿದ್ದಾರೆ.

ಆಪರೇಷನ್ ಸಿಂದೂರ್ ಸಮಯದಲ್ಲಿ ಪಾಕ್‌ಗೆ ಚೀನಾ ಜೆ-10 ಸಿ ಯುದ್ಧ ವಿಮಾನ ಮತ್ತು ಪಿಎಲ್-15 ಏರ್-ಟು-ಏರ್ ಕ್ಷಿಪಣಿ ದಾಳಿ ಸಾಧನಗಳು ಮತ್ತು ವಿವಿಧ ಬಗೆಯ ಕ್ಷಿಪಣಿಗಳು ಮತ್ತು ಡ್ರೋನ್‌ಗಳನ್ನು ಒದಗಿಸಿದೆ ಎಂಬ ಸತ್ಯವನ್ನು ಭಾರತ ಮರೆಯಬಾರದು. ಅಲ್ಲದೇ ಭಾರತದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವ ಯಾರ್‌ಲುಂಗ್ ತ್ಸಾಂಗ್ಪೋ ನದಿಗೆ ಅಡ್ಡಲಾಗಿ 60 ಮೆಗಾವಾಟ್ ವಿದ್ಯುತ್ ಉತ್ಪಾದನಾ ಸಾಮರ್ಥ್ಯದ ಬೃಹತ್ ಅಣೆಕಟ್ಟೆಯನ್ನು ಭಾರತದ ಗಡಿ ಭಾಗದಲ್ಲೇ ಚೀನಾ ನಿರ್ಮಿಸುತ್ತಿದೆ. ಭಾರತದ ವಿರುದ್ಧ ಚೀನಾ ಇಂಥ ಅಪಾಯಕಾರಿ ಕಾರ್ಯಗಳನ್ನು ಕೈಗೊಂಡಿರುವುದನ್ನು ಕಡೆಗಣಿಸಲು ಸಾಧ್ಯವೇ ಇಲ್ಲ ಎಂದೂ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಯೂ ಆಗಿರುವ ಜೈರಾಮ್ ರಮೇಶ್ 'ಎಕ್ಸ್' ಖಾತೆಯಲ್ಲಿ ತಿಳಿಸಿದ್ದಾರೆ.

ಮೋದಿ-ರಾಧಾಕೃಷ್ಣನ್ ಭೇಟಿ

ದೆಹಲಿ: ಆಡಳಿತಾರೂಢ ಎನ್‌ಡಿಎ ಮೈತ್ರಿಕೂಟದ ಉಪ ರಾಷ್ಟ್ರಪತಿ ಅಭ್ಯರ್ಥಿಯಾಗಿ ಆಯ್ಕೆಯಾಗಿರುವ ಮಹಾರಾಷ್ಟ್ರ ರಾಜ್ಯಪಾಲ ಸಿ.ಪಿ.ರಾಧಾ ಕೃಷ್ಣನ್ ಪ್ರಧಾನಿ ನರೇಂದ್ರ ಮೋದಿ ಅವರನ್ನು ಪ್ರಧಾನಿ ಅಧಿಕೃತ ನಿವಾಸದಲ್ಲಿ ಸೋಮವಾರ ಭೇಟಿಯಾದರು.

ಬಳಿಕ 'ಎಕ್ಸ್' ಸಂದೇಶ ದಲ್ಲಿ ಪ್ರಧಾನಿ ಮೋದಿ, 'ಎನ್‌ಡಿಎ ಮೈತ್ರಿಕೂಟದ ಉಪ ರಾಷ್ಟ್ರಪತಿ ಅಭ್ಯರ್ಥಿ ರಾಧಾಕೃಷ್ಣನ್ ಜಿ ಅವರನ್ನು ಭೇಟಿಯಾದೆ. ಅವರಿಗೆ ಶುಭಾಶಯ ಕೋರಿದೆ. ಸಾರ್ವಜನಿಕ ಸೇವೆ ಮತ್ತು ವಿವಿಧ ಕ್ಷೇತ್ರಗಳಲ್ಲಿನ ರಾಧಾಕೃಷ್ಣನ್ ಅವರ ಸುದೀರ್ಘ ಅನುಭವ ದೇಶವನ್ನು ಮತ್ತಷ್ಟು ಶ್ರೀಮಂತಗೊಳಿಸಲಿದೆ. ಸಮರ್ಪಣೆ- ದೃಢಸಂಕಲ್ಪದಿಂದ ಅವರು ರಾಷ್ಟ್ರಕ್ಕೆ ಸೇವೆ ಸಲ್ಲಿಸುವುದನ್ನು ಮುಂದುವರಿಸಲಿ' ಎಂದು ಬರೆದಿದ್ದಾರೆ.

ಎನ್‌ಡಿಎ ಮೈತ್ರಿಕೂಟದ ಸಂಸದರ ಸಭೆ ಸೇರಿದಂತೆ ವಿವಿಧ ಸಭೆಗಳಲ್ಲಿ ಭಾಗವಹಿಸಲು ದೆಹಲಿಗೆ ಆಗಮಿಸಿರುವ ಸಿ.ಪಿ. ರಾಧಾಕೃಷ್ಣನ್, ಸೋಮವಾರ ಪ್ರಧಾನಿ ಸೇರಿದಂತೆ ಹಲವು ನಾಯಕರನ್ನು ಭೇಟಿಯಾ ದರು. ಸೆ.9ರಂದು ಉಪ ರಾಷ್ಟ್ರಪತಿ ಹುದ್ದೆಗೆ ಚುನಾವಣೆ ನಡೆಯಲಿದೆ. ರಾಧಾಕೃಷ್ಣನ್ ಆ.20ರಂದು ನಾಮಪತ್ರ ಸಲ್ಲಿಸಲಿದ್ದಾರೆ. ಮಂಗಳವಾರ ಎನ್‌ಡಿಎ ಸಂಸದೀಯ ಪಕ್ಷದ ಸಭೆಯಲ್ಲಿ ಅವರಿಗೆ ಸನ್ಮಾನ ನಡೆಯಲಿದೆ.

ಅಮೆರಿಕ ವಿದೇಶಾಂಗ ಕಾರ್ಯದರ್ಶಿ ಮಾರ್ಕ್ ರುಬಿಯೊ ಭವಿಷ್ಯ

ಭಾರತ-ಪಾಕ್ ನಡುವೆ ಮತ್ತೆ ಸೇನಾ ಸಂಘರ್ಷ?

ವಾಷಿಂಗ್ಟನ್: ಭಾರತ-ಪಾಕಿಸ್ತಾನ ನಡುವಿನ ಪರಿಸ್ಥಿತಿಯನ್ನೂ ಅಮೆರಿಕ ಸೂಕ್ಷ್ಮವಾಗಿ ಗಮನಿಸುತ್ತಿದೆ. ವಿಶ್ವದ ವಿವಿಧೆಡೆಯಲ್ಲಿನ ಉದ್ವಿಗ್ನತೆ ಇರುವೆಡೆಯೂ ಗಮನವಿಟ್ಟು ಪ್ರತಿದಿನ ಮಾಹಿತಿ ಪಡೆದುಕೊಳ್ಳುತ್ತಿದೆ. ಈಗಿನ ಪರಿಸ್ಥಿತಿ ಗಮನಿಸಿದರೆ ಭಾರತ-ಪಾಕ್ ನಡುವೆ ಮತ್ತೆ ಸೇನಾ ಸಂಘರ್ಷ ಏರ್ಪಡುವ ಸಾಧ್ಯತೆ ಕಾಣುತ್ತಿದೆ ಎಂದು ಅಮೆರಿಕ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರೂಬಿಯೊ ಹೇಳಿದ್ದಾರೆ.

ಮಾಧ್ಯಮವೊಂದಕ್ಕೆ ಸಂದರ್ಶನ ನೀಡಿರುವ ಮಾರ್ಕ್, ಭಾರತ ಮತ್ತು ಪಾಕಿಸ್ತಾನ ನಡುವಿನ ಘೋಷಿತ ಕದನ ವಿರಾಮ ಒಪ್ಪಂದ ದುರ್ಬಲವಾಗಿದೆ. ಅದನ್ನು ನಿರ್ವಹಣೆ ಮಾಡುವುದೇ ಎರಡೂ ದೇಶಗಳಿಗೂ ಸವಾಲಿನ ಕೆಲಸವಾಗಿದೆ. ಆದ್ದರಿಂದ ಕದನ ವಿರಾಮ ಶೀಘ್ರದಲ್ಲೇ ಸ್ಥಗಿತಗೊಳ್ಳಬಹುದು ಎಂದು ಭವಿಷ್ಯ ನುಡಿದಿದ್ದಾರೆ.

ಭಾರತ-ಪಾಕ್ ನಡುವೆ ಏನಾಗುತ್ತಿದೆ? ಕಾಂಬೋಡಿಯಾ-ಥಾಯ್ಲೆಂಡ್ ಮಧ್ಯೆ ಏನೇನಾಗುತ್ತಿದೆ? ಎಂಬುದರ ಮೇಲೆ ಕಣ್ಣಿಟ್ಟಿದ್ದೇವೆ. ಹಾಗಾಗಿ, ಸದ್ಯದ ಪರಿಸ್ಥಿತಿ ಮೇ ತಿಂಗಳಲ್ಲಿ ಇದ್ದುದಕ್ಕಿಂತಲೂ ಬದಲಾಗಿರುವುದು ನಮಗೆ ಕಂಡಿದೆ. ಭಾರತ-ಪಾಕ್ ನಡುವಿನ ಕದನ ವಿರಾಮ ಸದ್ಯದಲ್ಲೇ ಕೊನೆಗೊಳ್ಳಬಹುದು ಎನಿಸುತ್ತಿದೆ ಎಂದು ಮಾರ್ಕ್ ಹೇಳಿದ್ದಾರೆ.

ಟ್ರಂಪ್ ಪ್ರಶಂಸೆ: ಮೇ ತಿಂಗಳಲ್ಲಿ ನಡೆದ ಭಾರತ-ಪಾರ್ಕ ನಡುವಿನ ಯುದ್ಧ 4 ದಿನಕ್ಕೇ ಕೊನೆಗೊಳ್ಳುವಂತೆ ಮಾಡಿದ್ದೇ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಂದು ಮಾರ್ಕ್ ಮತ್ತೊಮ್ಮೆ ಹೇಳಿದ್ದಾರೆ. ನಾವು ತುಂಬಾ ಅದೃಷ್ಟವಂತರು. ಶಾಂತಿ ಸಾಧನೆಯನ್ನೇ ಆಡಳಿತದ ಆದ್ಯತೆಯನ್ನಾಗಿಸಿಕೊಂಡಿರುವ ಟ್ರಂಪ್ ಅವರಂತಹ ಅಧ್ಯಕ್ಷರನ್ನ ಹೊಂದಿರುವುದಕ್ಕೆ ಅಮೆರಿಕಕ್ಕೆ ಹೆಮ್ಮೆ ಇದೆ ಎಂದು ಟ್ರಂಪ್ ಗುಣಗಾನ ಮಾಡಿದ್ದಾರೆ.

ಕೃಷ್ಣಾಂಗಿ 21 ವರ್ಷಕ್ಕೇ ಬ್ರಿಟನ್ ಸಾಲಿಸಿಟರ್!

ಲಂಡನ್: 18 ವರ್ಷಕ್ಕೆಲ್ಲಾ ಲಂಡನ್ ವಿವಿ ಕಾನೂನು ಪದವೀಧರೆ ಎನಿಸಿಕೊಂಡ ಭಾರತ ಮೂಲದ ಕೃಷ್ಣಾಂಗಿ ಮೆಶ್ರಮ್, 21ನೇ ವರ್ಷದಲ್ಲೇ ಯುನೈಟೆಡ್ ಕಿಂಗ್ಡಂನ ಸಾಲಿಸಿಟರ್ ಆಗಿ ನೇಮಕಗೊಂಡಿದ್ದಾರೆ. ಇಂಗ್ಲೆಂಡ್ ಮತ್ತು ವೇಲ್ಸ್‌ನ ಅತ್ಯಂತ ಕಿರಿಯ ಸಾಲಿಸಿಟರ್ ಎನಿಸಿಕೊಂಡಿರುವ ಕೃಷ್ಣಾಂಗಿ ಸದ್ಯ ಅರಬ್ ಸಂಯುಕ್ತ ಸಂಸ್ಥಾನ(ಯುಎಇ)ದಲ್ಲಿ ನೆಲೆಸಿದ್ದಾರೆ.

ಪಶ್ಚಿಮ ಬಂಗಾಳದಲ್ಲಿ ಜನಿಸಿದ ಕೃಷ್ಣಾಂಗಿ ಮೆಶ್ರಮ್, ರಾಜ್ಯದ ಇಸ್ಕಾನ್ ಮಾಯಾಪುರ್ ಸಮುದಾಯದಲ್ಲಿ ಬೆಳೆದರು. ಅಲ್ಲಿನ ಅಂತಾರಾಷ್ಟ್ರೀಯ ಶಾಲೆಯಲ್ಲಿ ಪ್ರೌಢ ಶಿಕ್ಷಣ ಪಡೆದರು. 15ನೇ ವಯಸ್ಸಿಗೇ ಮಿಲ್ಟನ್‌ನ ಕೀನ್ಸ್ ಮುಕ್ತ ವಿಶ್ವವಿದ್ಯಾಲಯದಲ್ಲಿ ಕಾನೂನು ಪದವಿ ವ್ಯಾಸಂಗ ಆರಂಭಿಸಿ, 18ನೇ ವಯಸ್ಸಿನಲ್ಲಿ ಮೊದಲ ದರ್ಜೆಯಲ್ಲಿ ಹಾನರ್ಸ್ ಪದವಿ ಪಡೆದರು. 2022ರಲ್ಲಿ ಅಂತಾರಾಷ್ಟ್ರೀಯ ಕಾನೂನು ಸಂಸ್ಥೆಯಲ್ಲಿ ಕೆಲಸಕ್ಕೆ ಸೇರಿ 3 ವರ್ಷ ಅನುಭವ ಪಡೆದುಕೊಂಡರು. ಹಾರ್ವರ್ಡ್ ಆನ್‌ಲೈನ್‌ನಲ್ಲಿ ಜಾಗತಿಕ ಕಾರ್ಯಕ್ರಮಗಳಲ್ಲಿಯೂ ಭಾಗವಹಿಸಿರುವ ಕೃಷ್ಣಾಂಗಿ, ಸಿಂಗಾಪುರದಲ್ಲಿ ಕೆಲಸ ಮಾಡಿದ ಅನುಭವವನ್ನೂ ಹೊಂದಿದ್ದಾರೆ. ಫಿನ್ಟೆಕ್, ಬ್ಲಾಕ್ಚೈನ್, ಕೃತಕ ಬುದ್ಧಿಮತ್ತೆ(ಎಐ) ಮತ್ತು ಖಾಸಗಿ ದಾವೆದಾರರ ಸೇವೆಗಳಾದ 'ವಿಲ್'(ಉಯಿಲು) ಮತ್ತು ಪ್ರೊಬೇಟ್(ಉಯಿಲು ಜಾರಿ) ಸೇವೆಗಳಲ್ಲಿಯೂ ಆಸಕ್ತಿ ಹೊಂದಿದ್ದಾರೆ ಎನ್ನಲಾಗಿದೆ.

ಟೇಕಾಫ್ ವೇಳೆ 'ಎಐ' ವಿಮಾನ ಯಾನ ರದ್ದು

ಕೊಚ್ಚಿ: ಕೇರಳದ ಮೂವರು ಸಂಸದರು ಸೇರಿದಂತೆ 185 ಪ್ರಯಾಣಿಕರು, ಐವರು ಸಿಬ್ಬಂದಿಗಳಿದ್ದ ಏರ್ ಇಂಡಿಯ ಎಕ್ಸ್‌ಪ್ರೆಸ್ ಸಂಸ್ಥೆಯ 'ಎಐ-504' ವಿಮಾನ ದೆಹಲಿಯತ್ತ ಭಾನುವಾರ ತಡರಾತ್ರಿ ಸಂಚಾರ ಆರಂಭಿಸಿದ್ದಾಗ ಟೇಕಾಫ್ ವೇಳೆ ಕೊನೆ ಕ್ಷಣದಲ್ಲಿ ಸಂಚಾರ ರದ್ದುಗೊಳಿಸಲಾಗಿದೆ.

ಕೊಚ್ಚಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ರನ್‌ವೇನಲ್ಲಿ ಓಟ ಆರಂಭಿಸಿದ್ದ ವಿಮಾನ ಥಟ್ಟನೆ ನಿಲುಗಡೆಗೆ ಬಂದು ಹಾರಾಟ ರದ್ದುಗೊಳಿಸಿದ್ದರಿಂದ ಪ್ರಯಾಣಿಕರೆಲ್ಲರೂ ತೀವ್ರ ಆತಂಕಕ್ಕೆ ಒಳಗಾದರು. ವಿಮಾನದ ಎಂಜಿನ್‌ನಿಂದ ಅಸಹಜ ರೀತಿಯಲ್ಲಿ ಶಬ್ದ ಬಂದು ಭಾರೀ ಕಂಪನ ಕಂಡುಬಂದಿದ್ದರಿಂದ ವಿಮಾನ ಹಾರಾಟವನ್ನು ಟೇಕಾಫ್ ವೇಳೆಯಲ್ಲೆ ರದ್ದುಗೊಳಿಸಲಾಯಿತು. ರಾತ್ರಿ 10.40ರಲ್ಲಿ ರನ್‌ವೇನಲ್ಲಿ ವಿಮಾನದ ಟೇಕಾಫ್ ರೋಲ್ ಆರಂಭಗೊಳ್ಳುತ್ತಲೇ ವಿಮಾನದ ಪೈಲಟ್ ಎಂಜಿನ್ ಭಾಗದಲ್ಲಿ ಬಲವಾದ ಕಂಪನವನ್ನು ಗ್ರಹಿಸಿದ್ದಾರೆ. ತಕ್ಷಣವೇ ಬ್ರೇಕ್ ಹಾಕಿ ವಿಮಾನವನ್ನು ನಿಲುಗಡೆ ತಂದು ಟೇಕಾಫ್ ರದ್ದುಗೊಳಿಸಿದ್ದಾರೆ ಎಂದು ವರದಿಯಾಗಿದೆ. ಸಂಸತ್ ಅಧಿವೇಶನದಲ್ಲಿ ಭಾಗಿಯಾಗಲು ಕಾಂಗ್ರೆಸ್ ಸಂಸದರಾದ ಹೈಬಿ ಈಡನ್, ಜೆಬಿ ಮಾಥರ್ ಮತ್ತು ಆಂಟೊ ಆಂಟನಿ ದೆಹಲಿಗೆ ಇದೇ ವಿಮಾನದಲ್ಲಿ ಪ್ರಯಾಣಿಸುತ್ತಿದ್ದರು. ಬಳಿಕ ಎಐ ವಿಮಾನ ಯಾನ ಸಂಸ್ಥೆ ಸಿಬ್ಬಂದಿ, ಪ್ರಯಾಣಿಕರನ್ನು ಕೆಳಕ್ಕಿಳಿಸಿ ಸೋಮವಾರ ಮುಂಜಾನೆ 2.45ರ ವೇಳೆಗೆ ಪರ್ಯಾಯ ವಿಮಾನ ಸಂಚಾರಕ್ಕೆ ವ್ಯವಸ್ಥೆ ಮಾಡಿದರು. ಈ ವಿಮಾನದಲ್ಲಿ 162 ಪ್ರಯಾಣಿಕರಷ್ಟೇ ಪ್ರಯಾಣಿಸಿದರು.

ಪ್ರತಿಪಕ್ಷ ನಾಯಕನಿಗೆ ದೂಷಣೆಯೇ ಕಾಯಕ

ನಾಗಪುರ: ಮತಕಳವು ಆರೋಪದೊಂದಿಗೆ ಕೇಂದ್ರ ಚುನಾವಣಾ ಆಯೋಗ ವಿರುದ್ಧ ದಾಳಿ ಮಾಡುತ್ತಿರುವ ರಾಹುಲ್ ಗಾಂಧಿ ನಡೆಯನ್ನು ಕಾಂಗ್ರೆಸ್‌ನ ಮಾಜಿ ನಾಯಕರೊಬ್ಬರು ಖಂಡಿಸಿದ್ದಾರೆ.



ಕಾಂಗ್ರೆಸ್‌ನ ಮಾಜಿ ನಾಯಕ ಆಚಾರ್ಯ ಪ್ರಮೋದ್ ಕೃಷ್ಣಮ್ ಸೋಮವಾರ ನಾಗಪುರದಲ್ಲಿ ಸುದ್ದಿಸಂಸ್ಥೆ ಜತೆ ಮಾತನಾಡಿ, 'ರಾಹುಲ್ ಗಾಂಧಿ ಲೋಕಸಭೆ ಪ್ರತಿಪಕ್ಷ ನಾಯಕ ಆಗಿರುವವರೆಗೂ ಸಾಂವಿಧಾನಿಕ ಸಂಸ್ಥೆಗಳು, ಸುಪ್ರೀಂ ಕೋರ್ಟ್ ಮತ್ತು ಸಂಸತ್ತನ್ನು ಗೌರವಿಸುವುದಿಲ್ಲ. ಅವರ ಈ ನಡೆ ದೊಡ್ಡ ಸಂಚಿನ ಒಂದು ಭಾಗವಷ್ಟೆ. ಅವರು ದೇಶವನ್ನೂ ದೂಷಿಸಲು ಬಯಸುತ್ತಾರೆ ಎಂದು ಆರೋಪಿಸಿದ್ದಾರೆ. ಹೊಸ ಸಂಸತ್ ಭವನ ನಿರ್ಮಾಣವಾದಾಗಲೂ ರಾಹುಲ್ ಪ್ರತಿಭಟಿಸಿದರು. ರಾಮ ಮಂದಿರದ ಪಾವಿತ್ರ್ಯೀಕರಣ ಸಮಾರಂಭದ ಆಹ್ವಾನವನ್ನೂ ಪಕ್ಕಕ್ಕೆ ಸರಿಸಿದರು. ಸುಪ್ರೀಂ ಕೋರ್ಟ್‌ನತ್ತಲೂ ಬೊಟ್ಟು ಮಾಡುತ್ತಾರೆ. ಸಂಸತ್ತನ್ನೂ ಗೌರವಿಸುವುದಿಲ್ಲ. ಈಗ ಚುನಾವಣಾ ಆಯೋಗದ ಬೆನ್ನು ಬಿದ್ದಿದ್ದಾರೆ. ಮತ ಕದ್ದ ಆಯೋಗ ಎನ್ನುತ್ತಿದ್ದಾರೆ ಎಂದು ಆಚಾರ್ಯ ಕಿಡಿಕಾರಿದರು. ಮುಖ್ಯ ಚುನಾವಣಾ ಆಯುಕ್ತರ ವಿರುದ್ಧ ಮಹಾಭಿಯೋಗ ಗೊತ್ತುವಳಿಗೆ ಮುಂದಾಗಿರುವ ಪ್ರತಿಪಕ್ಷಗಳ ನಡೆ ಸರಿಯಲ್ಲ. ರಾಹುಲ್ ಮತ್ತು ಪ್ರತಿಪಕ್ಷಗಳ ಎಲ್ಲಾ ನಾಯಕರೂ ಮೊದಲು ಸಂಸತ್ ಸದಸ್ಯತ್ವಕ್ಕೆ ರಾಜೀನಾಮೆ ನೀಡಿ ಬಳಿಕ ಆಯೋಗದ ವಿರುದ್ಧ ಹೋರಾಡಲಿ ಎಂದರು.

ನಕ್ಸಲ್ ನೆಲಬಾಂಬ್‌ಗೆ ಒಬ್ಬ ಪೊಲೀಸ್ ಬಲಿ

ಬಿಜಾಪುರ್: ನಕ್ಸಲ್ ವಾದ ಅಂತ್ಯವಾಗುತ್ತಿದೆ ಎಂದುಕೊಂಡಿರುವಾಗಲೇ ಛತ್ತೀಸ್‌ಗಢ ರಾಜ್ಯದ ಬಿಜಾಪುರ ಜಿಲ್ಲೆಯಲ್ಲಿ ನಕ್ಸಲರಿಟ್ಟ ನೆಲಬಾಂಬ್‌ಗೆ ರಾಜ್ಯ ಪೊಲೀಸ್ ಸಿಬ್ಬಂದಿಯೊಬ್ಬರ ಜೀವಹರಣವಾಗಿದೆ. ಮೂವರು ಪೊಲೀಸರು ಗಾಯಗೊಂಡಿದ್ದಾರೆ.

ಬಿಜಾಪುರ್ ಜಿಲ್ಲೆಯ ಇಂದ್ರಾವತಿ ರಾಷ್ಟ್ರೀಯ ಉದ್ಯಾನ ಭಾಗದಲ್ಲಿ ಗಸ್ತು ನಡೆಸುತ್ತಿದ್ದ ಜಿಲ್ಲಾ ಮೀಸಲು ಪಡೆಯ(ಡಿಆರ್‌ಜಿ) ಪೊಲೀಸ್ ಕಾನ್ಸ್ಟೆಬಲ್ ಒಬ್ಬರು ನಕ್ಸಲರು ಅಡಗಿಸಿಟ್ಟಿದ್ದ ನೆಲಬಾಂಬ್ ಮೇಲೆ ಅಕಸ್ಮಾತ್ತಾಗಿ ಕಾಲಿಟ್ಟಿದ್ದರಿಂದ ಬಾಂಬ್ ಸ್ಫೋಟಗೊಂಡಿದೆ. ಪರಿಣಾಮ ಒಬ್ಬ ಡಿಆರ್‌ಜಿ ಪೊಲೀಸ್ ಕಾನ್‌ಸ್ಟೆಬಲ್ ಸ್ಥಳದಲ್ಲೇ ಸಾವಿಗೀಡಾದರು. ಮೂವರು ಕಾನ್‌ಸ್ಟೆಬಲ್‌ಗಳು ಗಂಭೀರವಾಗಿ ಗಾಯಗೊಂಡರು. ಘಟನೆ ಭಾನುವಾರ ನಡೆದಿರುವುದಾಗಿ ವರದಿಯಾಗಿದೆ. ಗಾಯಾಳುಗಳನ್ನು ಸಮೀಪ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಮೂವರ ಸ್ಥಿತಿಯೂ ಗಂಭೀರವಾಗಿದೆ. ಇತ್ತೀಚೆಗೆ ಒಟ್ಟು 1.16 ಕೋಟಿ ರು. ಇನಾಮು ಹೊಂದಿದ್ದ ಇಬ್ಬರು ನಕ್ಸಲ್ ನಾಯಕರನ್ನು ಆ.13ರಂದು ನಕ್ಸಲ್ ನಿಗ್ರಹ ಪಡೆ ಪೊಲೀಸರು ಗುಂಡಿಕ್ಕಿ ಕೊಂದ ಬಳಿಕ ನಕ್ಸಲರು ಪ್ರತಿಕಾರ ಕ್ರಮವಾಗಿ ನೆಲಬಾಂಬ್ ಸಂಚು ನಡೆಸಿರಬೇಕು ಎಂದು ಶಂಕಿಸಲಾಗಿದೆ.

ಒಳ ಮೀಸಲಿಗೆ ಆಗ್ರಹಿಸಿ ತಮಟೆ ಚಳವಳಿ

ಶಾಸಕ ರಾಘವೇಂದ್ರ ಹಿಟ್ನಾಳ ಮನೆ ಮುಂದೆ ಹೋರಾಟ | ಸ್ವಪಕ್ಷೀಯರಿಂದಲೇ ಸಂಸದರಿಗೆ ತರಾಟೆ

ಕೊಪ್ಪಳ: ಒಳ ಮೀಸಲಾತಿ ಕೂಡಲೇ ಜಾರಿ ಮಾಡುವುದರ ಪರವಾಗಿ ಸದನದಲ್ಲಿ ಮಾತನಾಡಬೇಕು ಎಂದು ಆಗ್ರಹಿಸಿ ಒಳ ಮೀಸಲಾತಿ ಜಾರಿ ಹೋರಾಟ ಸಮಿತಿ ನೇತೃತ್ವದಲ್ಲಿ ಮಾದಿಗ ಸಮುದಾಯದ ಮುಖಂಡರು ಶಾಸಕರ ಮನೆ ಮುಂದೆ ಸೋಮವಾರ ತಮಟೆ ಚಳುವಳಿ ನಡೆಸಿದರು.

ನಗರದ ಈಶ್ವರ ಪಾರ್ಕ್ ಮುಂದೆ ಜಮಾಯಿಸಿದ ಮಾದಿಗ ಸಮುದಾಯದ ಮುಖಂಡರು, ಶಾಸಕ ರಾಘವೇಂದ್ರ ಹಿಟ್ನಾಳ ಅವರ ಬಿ.ಟಿ.ಪಾಟೀಲ್ ನಗರದ ಮನೆ ವರೆಗೆ ಅರೆ ಬೆತ್ತಲೆಯಾಗಿ ಮೆರವಣಿಗೆ ನಡೆಸಿದರು. ಶಾಸಕರ ಮನೆ ಮುಂದೆ ನಿಂತು ರಕ್ತದಲ್ಲಿ ಪತ್ರ ಬರೆದು, ರಕ್ತದಿಂದ ಬರೆದಿದ್ದ ಪೋಸ್ಟರ್ ಹಿಡಿದು ಮೆರವಣಿಗೆ ಮಾಡಿದರು. ಕೂಡಲೇ ಒಳ ಮೀಸಲಾತಿ ಜಾರಿ ಮಾಡಲು ಆಗ್ರಹಿಸಿಸರು. ಸುಮಾರು 1 ಗಂಟೆಗೂ ಹೆಚ್ಚು ಕಾಲ ತಮಟೆ ಚಳವಳಿ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು. ಮಂಗಳವಾರದ ಸದನದಲ್ಲಿ ರಾಜ್ಯದ ಎಲ್ಲ 24 ಶಾಸಕರು ಒಳ ಮೀಸಲಾತಿ ಪರ ಮಾತನಾಡಬೇಕು ಎಂದು ಶಾಸಕರ ಮನೆ ಮುಂದೆ ಬಾಯಿ ಬಡಿದುಕೊಂಡು ಆಕ್ರೋಶ ವ್ಯಕ್ತಪಡಿಸಿದರು.

ಸಂಸದ ರಾಜಶೇಖರ ಹಿಟ್ನಾಳ ಹೋರಾಟದ ಸ್ಥಳಕ್ಕೆ ಆಗಮಿಸಿ, ಸಹೋದರ ಕೆ. ರಾಘವೇಂದ್ರ ಹಿಟ್ನಾಳ ಅವರಿಗೆ ಕರೆ ಮಾಡಿ, ಸದನದಲ್ಲಿ ಒಳ ಮೀಸಲಾತಿ ಪರ ಮಾತಾಡುವಂತೆ ತಿಳಿಸಿದರು. ನಿಮ್ಮ ಹೋರಾಟಕ್ಕೆ ನಮ್ಮ ಬೆಂಬಲ ಯಾವಾಗಲೂ ಇದೆ. ನೀವು ಎಲ್ಲಿ ಕರೆದರೂ ಹೋರಾಟಕ್ಕೆ ಬರುವುದಾಗಿ ಹೇಳಿದರು. ಈ ವೇಳೆ ಸಂಸದರ ವಿರುದ್ಧ ಸ್ವಪಕ್ಷೀಯ ಮುಖಂಡ ಮಲ್ಲಿಕಾರ್ಜುನ ಪೂಜಾರ ಆಕ್ರೋಶಗೊಂಡು ಮಾತನಾಡಿ, ಕೊಪ್ಪಳ ವಿಧಾನಸಭೆ ಕ್ಷೇತ್ರದಲ್ಲಿ ಶೇ.90 ರಷ್ಟು ಮಾದಿಗರು ವಿಧಾನಸಭೆ- ಲೋಕಸಭೆ ಚುನಾವಣೆಯಲ್ಲಿ ಅಣ್ಣ-ತಮ್ಮಂದಿರಿಗೆ ಮತ ಹಾಕಿದ್ದೇವೆ. ಈ ಹಿನ್ನೆಲೆ ಈ ಬಾರಿ ಸದನದಲ್ಲಿ ಶಾಸಕ ರಾಘವೇಂದ್ರ ಹಿಟ್ನಾಳ ಒಳ ಮೀಸಲಾತಿ ಪರ ಮಾತನಾಡಬೇಕು. ಇಲ್ಲವಾದರೆ ಮಾದಿಗರು ತಕ್ಕ ಪಾಠ ಕಲಿಸುತ್ತೇವೆ ಎಂದು ಕಿಡಿ ಕಾರಿದರು.

ಕೊಪ್ಪಳದಲ್ಲಿ ಶಾಸಕ ರಾಘವೇಂದ್ರ ಹಿಟ್ನಾಳ ಮನೆ ಮುಂದೆ ಒಳ ಮೀಸಲಾತಿ ಕೂಡಲೇ ಜಾರಿಗೆ ಆಗ್ರಹಿಸಿ ತಮಟೆ ಚಳುವಳಿ ನಡೆಸಿದರು.

> ನಾಗಮೋಹನ್ ದಾಸ್ ವರದಿಯನ್ನು ಕೂಡಲೇ ಯಥಾವತ್ ಜಾರಿ ಮಾಡಬೇಕು. ಸರಕಾರ ವಿಳಂಬ ನೀತಿ ಅನುಸರಿಸಿದರೆ, ಒಳಮೀಸಲಾತಿ ಜಾರಿಗೆ ರಾಜಕೀಯ ಮಾಡಿದರೆ, ರಕ್ತಪಾತ.
> – **ಗಣೇಶ ಹೊರತಟ್ನಾಳ**, ಮಾದಿಗ ಮುಖಂಡ

ಸುದೀರ್ಘ ಮೂರು ದಶಕದಿಂದ ಒಳ ಮೀಸಲಾತಿ ಜಾರಿಗಾಗಿ ಮಾದಿಗ ಸಮುದಾಯ ಹೋರಾಟ ಮಾಡುತ್ತಲೇ ಇದೆ. ಕಾಂಗ್ರೆಸ್ ನ ಸಿದ್ದರಾಮಯ್ಯ ಸರಕಾರ ಚುನಾವಣೆ ಮುನ್ನ ಪ್ರಣಾಳಿಕೆಯಲ್ಲಿ ಒಳ ಮೀಸಲಾತಿ ನೀಡುವ ಭರವಸೆ ನೀಡಿದ್ದರು. ಕೊಟ್ಟ ಮಾತಿನಂತೆ ಭರವಸೆ ಈಡೇರಿಸಬೇಕು. ಈ ಬಗ್ಗೆ ಸಂಪುಟ ಸಭೆ ಆ. 16 ರಂದು ನಡೆಸುವುದಾಗಿ ಹೇಳಿದ್ದ ಸರಕಾರ ಆ. 19ಕ್ಕೆ ಮುಂದೂಡಿದೆ. ಇದರಲ್ಲಿ ಹುನ್ನಾರ ಹಡಗಿದೆ ಎಂದು ಆರೋಪಿಸಿದರು.

ಆ. 1 ಕ್ಕೆ ಸುಪ್ರೀಂ ಕೋರ್ಟ್ ತೀರ್ಪು ನೀಡಿದೆ. ಒಂದು ವರ್ಷ ಕಳೆದರೂ, ಸಿದ್ದರಾಮಯ್ಯ ಸರಕಾರ ಇನ್ನು ವಿಳಂಬ ನೀತಿ ಅನುಸರಿಸುತ್ತಿದೆ. ಒಳಮೀಸಲಾತಿ ಜಾರಿಯಾಗದೇ, ನೇಮಕಾತಿಗಳು ಸಹ ನೆನಗುದಿಗೆ ಬಿದ್ದಿವೆ. ಸಿದ್ದರಾಮಯ್ಯ ಸರ್ಕಾರ ಕಾಲಹರಣ ನೀತಿ ಪಕ್ಕಕ್ಕೆ ಇಟ್ಟು ಆ. 19 ಕ್ಕೆ ಒಳ ಮೀಸಲಾತಿ ಜಾರಿ ಮಾಡಬೇಕು. ಇಲ್ಲವಾದರೆ ಉಗ್ರಹೋರಾಟ ಖಚಿತ ಎಂದು ಎಚ್ಚರಿಸಿದರು.

> ಕೊಪ್ಪಳ ವಿಧಾನಸಭೆ ಕ್ಷೇತ್ರದಲ್ಲಿ ಶೇ.90 ರಷ್ಟು ಮಾದಿಗರು ವಿಧಾನಸಭೆ- ಲೋಕಸಭೆ ಚುನಾವಣೆಯಲ್ಲಿ ಅಣ್ಣ- ತಮ್ಮಂದಿರಿಗೆ ಮತ ಹಾಕಿದ್ದೇವೆ. ಈ ಹಿನ್ನೆಲೆ ಈ ಬಾರಿ ಸದನದಲ್ಲಿ ಶಾಸಕ ರಾಘವೇಂದ್ರ ಹಿಟ್ನಾಳ ಒಳ ಮೀಸಲಾತಿ ಪರ ಮಾತನಾಡಬೇಕು. ಇಲ್ಲವಾದರೆ ಮಾದಿಗರು ತಕ್ಕ ಪಾಠ ಕಲಿಸುತ್ತೇವೆ.
> – **ಮಲ್ಲಿಕಾರ್ಜುನ ಪೂಜಾರ**, ಮುಖಂಡ

ಮಾದಿಗ ಸಮುದಾಯದ ಮುಖಂಡರಾದ ಹನುಮೇಶ ಕಡೆಮನಿ, ಯಲ್ಲಪ್ಪ ಹಳೇಮನಿ ಮುದ್ದಾಪುರ, ರಾಮಣ್ಣ ಚೌಡಕಿ, ದ್ಯಾಮಣ್ಣ ಪೂಜಾರ, ಪರಶುರಾಮ ಕೆರೆಹಳ್ಳಿ, ಗಾಳೆಪ್ಪ ಹಿಟ್ನಾಳ, ಸಿದ್ದು ಮಣ್ಣಿನವರ, ಮಹಾಲಕ್ಷ್ಮಿ ಕಂದಾರಿ, ಯಂಕಪ್ಪ ಹೊಸಳ್ಳಿ, ಹನುಮಂತಪ್ಪ ಮ್ಯಾಗಳ ಮನಿ, ನಿಂಗಪ್ಪ ಮೈನಳ್ಳಿ, ಮಂಜುನಾಥ ಮುಸಲಾಪುರ, ಮಾರುತೆಪ್ಪ ಬಿಕನಳ್ಳಿ, ಚಂದ್ರ ಸ್ವಾಮಿ ಬಹದ್ದೂರ ಬಂಡಿ, ಶಂಕರ ನರೇಗಲ್, ಸುಧೀರ್ ಕಾತರಕಿ, ಗಾಳೆಪ್ಪ ಹಿರೇಮನಿ, ಬಸವರಾಜ ಮ್ಯಗಳಮನಿ, ಸಂತೋಷ ಕಾತರಿಕಿ ಇದ್ದರು.

ಸಮಾಚಾರ ಸಣ್ಣದಲ್ಲ

ಶ್ರೀ ಸಂಗಮೇಶ್ವರ ಜಾತ್ರಾ ಮಹೋತ್ಸವ

ಮುದಗಲ್: ಪಟ್ಟಣ ಸಮೀಪದ ಹೂನೂರು ಗ್ರಾಮದ ಶ್ರೀ ಸಂಗಮೇಶ್ವರ ಜಾತ್ರಾ ಮಹೋತ್ಸವ ಸೋಮುವಾರ ಅದ್ದೂರಿಯಾಗಿ ಜರುಗಿತು. ಪ್ರತಿ ವರ್ಷದಂತೆ ಈ ವರ್ಷ ಕೂಡ ಶ್ರಾವಣ ಮಾಸದ ಕಡೆ ಸೋಮುವಾರ ಹೂನೂರು ಗ್ರಾಮದ ಶ್ರೀ ಸಂಗಮೇಶ್ವರ ಜಾತ್ರಾ ಮಹೋತ್ಸವ ನಿಮಿತ್ಯ ಶ್ರೀ ಮಾರುತೇಶ್ವರ ದೇವಸ್ಥಾನ ದಿಂದ ಹೀರೆಹಳ್ಳದ ವರಗೆ ಡೊಳ್ಳು ಭಾಜಾ ಭಜಂತ್ರಿ ದೊಂದಿಗೆ ಕುಂಬ ಕಳಸ ಮೂಲಕ ಮೆರವಣಿಗೆ ನಡೆ ಯಿತು. ನಂತರ ಶ್ರೀ ಸಂಗಮೇಶ್ವರ ದೇವಸ್ಥಾನದ ಕಳಸಾ ದೋರಣ ಕಾರ್ಯಕ್ರಮ ನಡೆಯಿತು. ಶ್ರೀ ಸಂಗಮೇಶ್ವರ ದೇವರಿಗೆ ಭಕ್ತರು ಕಾಯಿ ಕರ್ಪೂರ ಸಲ್ಲಿಸಿ ದರ್ಶನ ಪಡೆದುಕೊಂಡರು. ಅಂಕಲಿಮಠ ಪರಮ ಪೂಜ್ಯ ಫಕೀರೇಶ್ವರ ಮಹಾ ಸ್ವಾಮಿಗಳು ಜಾತ್ರಾ ಮಹೋತ್ಸವದ ದಿವ್ಯ ಸಾನಿಧ್ಯ ವಹಿದ್ದರು ಭಕ್ತರಿಗೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿತು ಹೂನೂರು ಸೇರಿದಂತೆ ಸುತ್ತಮುತ್ತಲಿನ ಗ್ರಾಮಸ್ಥರು ಜಾತ್ರಾ ಮಹೋತ್ಸವದಲ್ಲಿ ಭಾಗವಹಿಸಿದ್ದರು.

ಲೋಕಾ ಬಲೆಗೆ ಬಿದ್ದ ಇಬ್ಬರು ಅಧಿಕಾರಿಗಳು

ರಾಯಚೂರು: ಪೆಟ್ರೋಲ್ ಬಂಕ್ ಒಂದರ ಮಾಲೀಕನಿಂದ 30 ಸಾವಿರ ಲಂಚ ಪಡೆಯುವಾಗ ಕಾರ್ಮಿಕ ಇಲಾಖೆ ಅಧಿಕಾರಿಗಳ ಬಲೆಗೆ ಸೋಮವಾರ ಬಿದ್ದಿದ್ದಾರೆ. ಕಾರ್ಮಿಕ ಇಲಾಖೆ ನಿರೀಕ್ಷಕ ಮೊಹಮ್ಮದ್ ಉಮರ್, ಮಕ್ಕಳ ಯೋಜನಾಧಿಕಾರಿ ಮಂಜುನಾಥ ರೆಡ್ಡಿ ಲೋಕಾ ಬಲೆಗೆ ಬಿದ್ದ ಅಧಿಕಾರಿಗಳು.

ತಾಲೂಕಿನ ಶಕ್ತನಗರದ ಪೆಟ್ರೋಲ್ ಬಂಕ್‌ನಲ್ಲಿ ಬಾಲ ಕಾರ್ಮಿಕರ ಬಳಕೆ, ನಿಯಮಗಳ ಉಲ್ಲಂಘನೆ ಆರೋಪ ಹಿನ್ನೆಲೆ ಬಂಕ್‌ನ ಮಾಲೀಕನಿಗೆ ಇಬ್ಬರು ಅಧಿಕಾರಿಗಳು ಒಟ್ಟು 70 ಸಾವಿರ ರು.ಲಂಚ ನೀಡುವಂತೆ ಬೇಡಿಕೆ ಇಟ್ಟಿದ್ದರು. ಮಾಲೀಕ ಭಯ ಭೀತಗೊಂಡು ಮೊದಲು 40 ಸಾವಿರ ರು. ನೀಡಿದ್ದ ನಂತರ ಉಳಿದ 30 ಸಾವಿರ ರು,ಯನ್ನು ಕಚೇರಿಯ ಹೊರಗಡೆ ನೀಡುವಾಗ ಲೋಕಾಯುಕ್ತ ಎಸ್ಪಿ ಸತೀಶ್ ಚಿತಗುಪ್ಪಿ ನೇತೃತ್ವದಲ್ಲಿ ದಾಳಿ ಮಾಡಿದ್ದು, ಈ ಇಬ್ಬರು ಅಧಿಕಾರಿಗಳನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.

ಪೆಟ್ರೋಲಿಯಂ ರಿಟೈಲ್ ಔಟ್‌ಲೆಟ್ ಸ್ಥಾಪನೆ

ಹೊಸಪೇಟೆ: ಬಿಎಂಎಂ ಇಸ್ಪಾತ್ ಲಿಮಿಟೆಡ್ ಹೊಸಪೇಟೆ. ವಿಜಯನಗರ ಜಿಲ್ಲೆಯ ಹೊಸಪೇಟೆ ತಾಲೂಕಿನ ಮರಿಯಮ್ಮನಹಳ್ಳಿ ಹೋಬಳಿಯ ಡಾಣಾಪುರ ಗ್ರಾಮದ ಸರ್ವೆ ನಂ.201/ಎ ಮತ್ತು 2021/ಬಿ ಎಕರೆ ಜಮೀನನಲ್ಲಿ 10 ಕೆಎಲ್ ಸಾಮರ್ಥ್ಯದ ಪೆಟ್ರೋಲಿಯಂ ಕ್ಲಾಸ್ ಬಿ ಮತ್ತು 50 ಕೆಎಲ್ ಸಾಮರ್ಥ್ಯದ ಪೆಟ್ರೋಲಿಯಂ ಕ್ಲಾಸ್ ಸಿ, ಒಟ್ಟು 60 ಕೆಎಲ್ ಸಾರ್ಮರ್ಥ್ಯದ ಎಚ್.ಎಸ್.ಡಿ ಮತ್ತು ಹೆಚ್.ಎಫ್.ಓ ದಾಸ್ತಾನು ಮಾಡಲು ನಿರಾಪೇಕ್ಷಣ ಪ್ರಮಾಣ ಪತ್ರ ನೀಡುವಂತೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಜಮೀನಿನಲ್ಲಿ ಎಚ್.ಎಸ್.ಡಿ ಮತ್ತು ಹೆಚ್.ಎಫ್.ಓ ದಾಸ್ತಾನು ಮಾಡಲು ನಿರಾಪೇಕ್ಷಣಾ ಪ್ರಮಾಣ ಪತ್ರ ನೀಡಲು ಸಾರ್ವಜನಿಕರಿಂದ ಅಕ್ಷೇಪಣೆಗಳನ್ನು ಆಹ್ವಾನಿಸಲಾಗಿದೆ. ಇಮೇಲ್ ಐಡಿ : vijayanagaradc@gmail.com ಅಥವಾ ಕಾರ್ಯಾಲಯದ ಎಂಎಜಿ-2 ಶಾಖೆಗೆ ಸಲ್ಲಿಸಲು ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆದಿಲ್ ಶಾಹಿ ನಾಟಕ ಕೃತಿ ಲೋಕಾರ್ಪಣೆ

ರಾಯಚೂರು: ಬಾಲಕರ ಸರಕಾರಿ ಪದವಿ ಪೂರ್ವ ಕಾಲೇಜು ಮತ್ತು ಹೊಸಮನಿ ಪ್ರಕಾಶನದ ಸಹಯೋಗದಲ್ಲಿ ಆ.20 ರಂದು ಬಷೀರ ಅಹ್ಮದ ಹೊಸಮನಿ ಇವರ ಆದಿಲ್ ಶಾಹಿ ನಾಟಕ ಕೃತಿ ಲೋಕಾರ್ಪಣೆ ಕಾರ್ಯಕ್ರಮ ಬೆಳಗ್ಗೆ 10.30ಕ್ಕೆ ಬಾಲಕರ ಪಿಯು ಕಾಲೇಜಿನಲ್ಲಿ ಆಯೋಜಿಸಲಾಗಿದೆ ಎಂದು ಹೊಸಮನಿ ಪ್ರಕಾಶನದ ಕಾರ್ಯದರ್ಶಿ ಖುಷಿ ಹೊಸಮನಿ ಹೇಳಿದರು. ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಕಾರ್ಯಕ್ರಮವನ್ನು ಹಿರಿಯ ಚಿತ್ರ ಕಲಾವಿದ ಎಚ್.ಎಚ್. ಮ್ಯಾದಾರ ಉದ್ಘಾಟಿಸಲಿದ್ದಾರೆ. ಕೃತಿಯನ್ನು ವಿಜಾಪುರು ಹಿರಿಯ ಉಪನ್ಯಾಸಕ ಎ.ಎಲ್. ನಾಗೂರು ಬಿಡುಗಡೆಗೊಳಿಸಲಿದ್ದಾರೆ. ಕೃತಿಯನ್ನು ಹಿರಿಯ ಸಾಹಿತಿ ವೀರಹನುಮಾನ ಪರಿಚಯಿಸಲಿದ್ದಾರೆ. ಅಧ್ಯಕ್ಷತೆಯನ್ನು ಬಾಲಕರ ಪಿಯು ಕಾಲೇಜಿನ ಪ್ರಾಚಾರ್ಯ ಡಾ.ರವೀಂದ್ರ ಎಸ್. ಬಂಡಿವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಹಿರಿಯ ಉಪನ್ಯಾಸಕ ಗೋವರ್ಧನರೆಡ್ಡಿ, ಕನ್ನಡ ಮಿತ್ರ ಕೂಟದ ಅಧ್ಯಕ್ಷ ಅಶೋಕಕುಮಾರ ಜೈನ್, ಜಿಲ್ಲಾ ಕನ್ನಡ ಕ್ರಿಯಾ ಸಮಿತಿ ಅಧ್ಯಕ್ಷ ರಫೀಕ್ ಅಹ್ಮದ್, ಜಾನವೆಸ್ಸಿ, ಮಲ್ಲಿಕಾರ್ಜುನ ಸ್ವಾಮಿ, ರಂಗ ನಿರ್ದೇಶಕ ಪ್ರವೀಶರೆಡ್ಡಿ ಗುಂಜಳ್ಳಿ, ಕುಂಚ ಚಿತ್ರ ಕಲಾವಿದ ಮಲ್ಲಿಕಾರ್ಜುನ ಆಲೂರು ಕೃತಿಯ ಕರ್ತೃ ಬಷೀರ ಅಹ್ಮದ ಹೊಸಮನಿ, ಪರ್ವಿನಬೇಗಂ ಹೊಸಮನಿ, ಬೀಬಿ ಫಾತಿಮಾ, ಷಂಷಾದ ಬೇಗಂ, ಸೈದಾಬಾನು ಉಪಸ್ಥಿತಯಲ್ಲಿ ಕಾರ್ಯಕ್ರಮ ನಡೆಯಲಿದೆ ಎಂದರು. ಸುದ್ದಿಗೋಷ್ಟಿಯಲ್ಲಿ ರಾಮಣ್ಣ ಮ್ಯಾದಾರ, ರಫೀಕ್ ಅಹ್ಮದ್, ಬಷೀರ ಅಹ್ಮದ ಹೊಸಮನಿ, ಫರ್ವಿನ್ ಬೇಗಂ ಉಪಸ್ಥಿತರಿದ್ದರು.

{ **ದಿನೇಶ್ ಗೂಳಿಗೌಡ** } ವಿಧಾನ ಪರಿಷತ್ ಸದಸ್ಯ

ಮಹಿಳೆಯರಿಗೆ ಹೆಚ್ಚಿನ ಅವಕಾಶ ನೀಡಿದ ಯಾವುದಾದರೂ ಪಕ್ಷ ಇದ್ದರೆ ಅದು ಕಾಂಗ್ರೆಸ್ ಮಾತ್ರ. ವಿರೋಧ ಪಕ್ಷದ ನಾಯಕರಾಗಿದ್ದ ವಾಜಪೇಯಿ ಅವರು ಇಂದಿರಾಗಾಂಧಿ ಅವರ ಜನಪರ ದಿಟ್ಟ ಆಡಳಿತ ನೋಡಿ 'ಉಕ್ಕಿನ ಮಹಿಳೆ' ಎಂದು ಬಿರುದು ನೀಡಿದ್ದರು. ಲೋಕಸಭಾ ಸ್ಪೀಕರ್ ಸ್ಥಾನಕ್ಕೆ ಮೊದಲ ಬಾರಿಗೆ ಮಹಿಳೆಯರನ್ನು ಆಯ್ಕೆ ಮಾಡಿದ್ದೂ ಸಹ ಕಾಂಗ್ರೆಸ್ ಪಕ್ಷ.

ಹದಗೆಟ್ಟ ಶಾಲಾ ರಸ್ತೆ: ವಿದ್ಯಾರ್ಥಿಗಳ ಪರದಾಟ

ನೂತನ ಸಿಸಿ ರಸ್ತೆ ಕಾಮಗಾರಿ ಕೈಗೊಳ್ಳಲು ಹೆಗ್ಗಡದಿನ್ನಿ ಗ್ರಾಮಸ್ಥರ ಆಗ್ರಹ

ದೇವದುರ್ಗ: ನಿರಂತರ ಮಳೆಯಿಂದ ಅರಕೇರಾ ತಾಲೂಕಿನ ಹೆಗ್ಗಡದಿನ್ನಿ ಗ್ರಾಮದ ಸರಕಾರಿ ಶಾಲೆ ರಸ್ತೆ ಕೆಸರು ತುಂಬಿ ಸಂಪೂರ್ಣ ಹದಗೆಟ್ಟಿದೆ. ರಸ್ತೆ ನಡುವೆ ದೊಡ್ಡ ದೊಡ್ಡ ಗುಂಡಿಗಳು ಬಿದ್ದಿದ್ದು, ಮಳೆ ನೀರು ತುಂಬಿ ಗುಂಡಿ ಯಾವುದು ರಸ್ತೆ ಯಾವುದೆನ್ನುವುದು ಕಾಣದಂತಾಗಿದೆ. ನಿತ್ಯ ನೂರಾರು ಮಕ್ಕಳು ಪರದಾಡುತ್ತ ಶಾಲೆಗೆ ತೆರಳುವ ಸ್ಥಿತಿ ನಿರ್ಮಾಣ ಆಗಿದ್ದು, ರಸ್ತೆ ಮತ್ತು ಚರಂಡಿ ವ್ಯವಸ್ಥೆಯನ್ನು ಸರಿಪಡಿಸುವಂತೆ ಸ್ಥಳೀಯರು ಆಗ್ರಹಿಸಿದ್ದಾರೆ.

ಗ್ರಾಮದ ಆಂಜನೇಯ್ಯ ದೇಗುಲದಿಂದ ಶಾಲೆಗೆ ತೆರಳುವ ಮುಖ್ಯ ಸಿಸಿ ರಸ್ತೆ ಮೇಲೆ ಮಣ್ಣು ಬಿದ್ದಿದೆ. ಕಳೆದ 5 ವರ್ಷಗಳ ಹಿಂದೆ ಸಿಸಿ ರಸ್ತೆ ನಿರ್ಮಾಣ ಮಾಡಿದ್ದು, ಅದು ಈಗ ಸಂಪೂರ್ಣ ಗುಂಡಿಮಯ ಆಗಿದೆ. ರಸ್ತೆ ತುಂಬೆಲ್ಲ ಗುಂಡಿಗಳು ಬಿದ್ದಿವೆ. ಇದರಿಂದ ಶಾಲಾ ಮಕ್ಕಳು, ಅಂಗನವಾಡಿ ಮಕ್ಕಳು, ಹಿರಿಯ ನಾಗರಿಕರು, ಎತ್ತು ಬಂಡಿ ಕಟ್ಟಿಕೊಂಡು ಹೊಲಗಳಿಗೆ ಹೋಗುವವರು, ಬೈಕ್ ಸವಾರರು ಪರದಾಡುವಂತಾಗಿದೆ. ರಸ್ತೆ ಸರಿಪಡಿಸಲು ಹಲವು ಬಾರಿ ಮನವಿ ಮಾಡಿದರು ಗ್ರಾಮ ಪಂಚಾಯಿತಿ ಅಧಿಕಾರಿಗಳು, ಜನಪ್ರತಿನಿಧಿಗಳು ಗಮನ ಹರಿಸಿಲ್ಲ ಎಂದು ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸದ್ಯ ಕ್ಷೇತ್ರದ ವಿವಿಧ ಅಭಿವೃದ್ಧಿ ಕಾರ್ಯಗಳಿಗಾಗಿ ಸರಕಾರ ಶಾಸಕರಿಗೆ 50 ಕೋಟಿ ರುಪಾಯಿ ಅನುದಾನ ನೀಡಿದೆ. ಈ ಅನುದಾನದಲ್ಲಿ ಕೈಗೊಳ್ಳುವ ಅಭಿವೃದ್ಧಿ ಕಾಮಗಾರಿಗಳಲ್ಲಿ ಹೆಗ್ಗಡದಿನ್ನಿ ಗ್ರಾಮದ ಶಾಲೆಗೆ ಉತ್ತಮ ದರ್ಜೆಯ ಸಿಸಿ ರಸ್ತೆ ಮಂಜೂರು ಮಾಡಲು ಶಾಸಕರಿಗೆ ಗ್ರಾಮಸ್ಥರು ಆಗ್ರಹಿಸಿದ್ದಾರೆ. ಅಲ್ಲಿಯ ವರೆಗೂ ತಾತ್ಕಾಲಿಕವಾಗಿ ಮೊರಂ ಹಾಕಿ ಗುಂಡಿಗಳನ್ನು ಮುಚ್ಚಲು ಗ್ರಾಮ ಪಂಚಾಯಿತಿ ಅಧಿಕಾರಿಗಳಿಗೆ ಒತ್ತಾಯ ಮಾಡಲಾಗಿದೆ.

ಮಳೆಯಿಂದ ಹದಗೆಟ್ಟಿರುವ ಹೆಗ್ಗಡದಿನ್ನಿ ಗ್ರಾಮದ ಸರಕಾರಿ ಶಾಲೆಗೆ ತೆರಳುವ ರಸ್ತೆ.

> ಆಂಜನೇಯ್ಯ ದೇಗುಲದಿಂದ ಸರಕಾರಿ ಶಾಲೆಗೆ ತೆರಳುವ ರಸ್ತೆ ಸಂಪೂರ್ಣ ಹದಗೆಟ್ಟಿದೆ. ಈ ರಸ್ತೆಯಲ್ಲಿ ಓಡಾಡಲು ಶಾಲಾ ಮಕ್ಕಳು, ಅಕ್ಕಪಕ್ಕದ ಮನೆಯವರು ಪರದಾಡುತ್ತಿ ದ್ದಾರೆ. ಕೂಡಲೇ ಅಧಿಕಾರಿಗಳು ಹಾಗೂ ಜನಪ್ರತಿಧಿಗಳು ಗಮನ ಹರಿಸಿ ರಸ್ತೆ ಸರಿಪಡಿಸಲಿ.
> **ಈಶ್ವರ್**, ಸ್ಥಳೀಯ

ಉಚ್ಚ ಬುಡೇಶ್ವರ ರಥೋತ್ಸವ ಸಾಮೂಹಿಕ ವಿವಾಹ

ಸಿಂಧನೂರು: ತಾಲೂಕಿನ ಯಾಪಲಪರ್ವಿ ಕ್ರಾಸ್ ಬಳಿ ಉಚ್ಚ ಬುಡ್ಡೇಶ್ವರ ರಥೋತ್ಸವ ಪರಮ ಪೂಜ್ಯ ಬಸವರಾಜ ತಾತ ಅವರ ನೇತೃತ್ವದಲ್ಲಿ ಅದ್ದೂರಿಯಾಗಿ ಜರುಗಿತು. ಜಾತ್ರೆಯಲ್ಲಿ 5 ಸಾಮೂಹಿಕ ವಿವಾಹಗಳು ಜರುಗಿದವು. ಬ್ರಹ್ಮ ಜ್ಞಾನಿ 1111 ಪವಾಡ ಪುರುಷ ಗೊನವಾರ ಪೂಜ್ಯ ಶ್ರೀ ಶಿವಲಿಂಗಪ್ಪ ಶರಣರ 9ನೇ ವರ್ಷದ ಪುಣ್ಯ ಆರಾಧನೆ ಸಾಮೂಹಿಕ ವಿವಾಹ ಸಾಮಾಜಿಕ, ಧಾರ್ಮಿಕ, ಆಧ್ಯಾತ್ಮಿಕ ಸಾಂಸ್ಕೃತಿಕ ಜಾತ್ರೆಯು ಇಂದು ಸೋಮವಾರ ಜರುಗಿತು.

ಶ್ರಾವಣ ಮಾಸ ನಾಲ್ಕನೇ ಸೋಮವಾರ ಇಂದು ಜರುಗಿದ ಜಾತ್ರೆ ಇದಾಗಿದೆ. ಇಡೀ ರಾಯಚೂರು ಜಿಲ್ಲೆಯಲ್ಲಿ 1111 ಸಾಮೂಹಿಕ ವಿವಾಹಗಳನ್ನು ಮಾಡಿ ಸಾಮೂಹಿಕ ವಿವಾಹಗಳನ್ನು ಯಾರು ಮಾಡದ ರೀತಿಯಲ್ಲಿ ಮಾಡಿ ಅಚ್ಚರಿಗೊಳಿಸುವಂತೆ ಮಾಡಿ ಈ ಕಲ್ಯಾಣ ಕರ್ನಾಟಕ ಭಾಗದಲ್ಲಿ ಹೆಸರುವಾಸಿಯಾದರು. ಭಕ್ತರಿಗೆ ಮಹಾ ಪ್ರಸಾದ ಜಾತ್ರೆಯಲ್ಲಿ ಸಾಮೂಹಿಕ ವಿವಾಹಗಳು ಜರುಗಿದವು. ಪೊತ್ನಾಳ ಕ್ರಾಸ್‌ನಲ್ಲಿರುವ ಶ್ರೀ ಮಠಕ್ಕೆ ಸುತ್ತಮುತ್ತಲಿನ ಭಕ್ತರು ಆಗಮಿಸಿ ಉಚ್ಚ ಬುಡ್ಡೇಶ್ವರ ತಾತನವರ ಆಶೀರ್ವಾದ ಪಡೆದರು. ಭಕ್ತರಿಗೆ ಮಹಾ ಪ್ರಸಾದ ವ್ಯವಸ್ಥೆ ಮಾಡಲಾಗಿತ್ತು. ನವ ದಂಪತಿಗಳಿಗೆ ಆಶೀರ್ವಾದ ಜಾತ್ರೆಯಲ್ಲಿ ಮಾಂಗಲ್ಯ ಧಾರಣದ ನಂತರ ನವ ದಂಪತಿಗಳಿಗೆ ಜೀವನದ ಉದ್ದಕ್ಕೂ ಆರೋಗ್ಯ, ಸಂತಾನ ,ಆಯಸ್ಸು ಕೊಡಲಿ ಕೌಟುಂಬಿಕ ಜೀವನ ಉತ್ತಮವಾಗಿರಲಿ ಎಂದು ಶ್ರೀ ಗಳು ಹರಸಿದರು.

ಈ ಸಂದರ್ಭದಲ್ಲಿ ಪ್ರಮುಖರಾಗಿ ಈರಣ್ಣ ತಾತ ಗೋಮರ್ಸಿ, ಎಸ್.ಎ ಖಾದ್ರಿ ಸಿಂಧನೂರು, ಡಾ.ಬಸವರಾಜಪ್ಪ,ಖಾಜಸಾಬ ತೆಕ್ಕಲಕೋಟೆ,ಹಿರಿಯ ಮುಖಂಡರಾದ ನಿಂಗಪ್ಪ ಮ್ಯಾಕಲ್ ಗೋನ್ವಾರ ,ಅರುಣ ಕುಮಾರ ಯಾಪಲಪರ್ವಿ ,ಚಿನ್ನಪ್ಪ ಸೇರಿದಂತೆ ಅನೇಕರಿದ್ದರು.

ಶ್ರಾವಣ ಮಾಸ ನಾಲ್ಕನೇ ಜರುಗಿದ ಜಾತ್ರೆಯಲ್ಲಿ ಸಾಮೂಹಿಕ ವಿವಾಹ ಜರುಗಿದವು

ವಿದ್ಯಾರ್ಥಿಗಳು ಪಠ್ಯೇತರ ಚಟುವಟಿಕೆಗೆ ಆದ್ಯತೆ ನೀಡಿ

ಹರಪನಹಳ್ಳಿ: ವಿದ್ಯಾರ್ಥಿಗಳು ಪಠ್ಯದ ಜತೆಗೆ ಪಠ್ಯೇತರ ಚಟುವಟಿಕೆಗೆ ಹೆಚ್ಚು ಒತ್ತು ನೀಡಿದಾಗ ವಿದ್ಯಾರ್ಥಿಗಳು ಸೃಜನಶೀಲ ವ್ಯಕ್ತಿಯಾಗಿ, ಸಮಾಜದಲ್ಲಿ ಕ್ರೀಯಾಶೀಲಾ ವ್ಯಕ್ತಿಯಾಗಿ ಬಾಳುವುದಕ್ಕೆ ಸಾಧ್ಯವಾಗುತ್ತದೆ. ಎಂದು ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರವರು ಎಲ್ ಕುಬೇಂದ್ರ ನಾಯ್ಕ ಹೇಳಿದರು

ಪಟ್ಟಣದ ಹಡಗಲಿ ರಸ್ತೆಯಲ್ಲಿರುವ ತಾಲೂಕು ಕ್ರೀಡಾಂಗಣದ ಸಮಿಪದಲ್ಲಿರುವ ಶ್ರೀ ಶರಣಬಸವ ಬುದ್ಧ ಭೀಮಜಿ ವಿದ್ಯಾಸಂಸ್ಥೆಯ ನಿಸರ್ಗ ಪದವಿ ಪೂರ್ವ ಕಾಲೇಜಿನಲ್ಲಿ ಸಾಂಸ್ಕೃತಿಕ ಚಟುವಟಿಕೆಗಳ ಉದ್ಘಾಟನೆ ಪ್ರಥಮ ಪಿಯುಸಿ ವಿದ್ಯಾರ್ಥಿಗಳಿಗೆ ಸ್ವಾಗತ ಹಾಗೂ ಮಾರ್ಚ್-2025 ರ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಉನ್ನತ ಶ್ರೇಣಿಯಲ್ಲಿ ಕಾಲೇಜಿಗೆ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಉದ್ಘಾಟಿಸಿ ಮಾತನಾಡಿದರು.

ಸಂಸ್ಥೆಯ ಕಾರ್ಯದರ್ಶಿಗಳು ಶೈಕ್ಷಣಿಕ ಸೇವಾ ಕಳಕಳಿಯನ್ನು ಹೊಂದಿದಂತವರು ಅವರು ವೃತ್ತಿಯಲ್ಲಿ ಶಿಕ್ಷಕರಾಗಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶಿ ಶಿಕ್ಷಕರಾಗಿ ಸೇವೆ ಸಲ್ಲಿಸಿದ ಅನುಭವ ಇವರಿಗಿದೆ.

ಕಾಲೇಜಿನ ವಿದ್ಯಾರ್ಥಿಗಳು ಪಠ್ಯದ ಜತೆಗೆ ಪಠ್ಯೇತರ ಚಟುವಟಿಕೆಗಳಾದ ಗಾಯನ, ನೃತ್ಯ, ನಾಟಕ, ಹಾಗೂ ಸೃಜನ ಸಾಹಿತ್ಯದ ಹಲವಾರು ಹವ್ಯಾಸಗಳಲ್ಲಿ ತಮ್ಮ ತೊಡಗಿಸಿಕೊಂಡು ಉತ್ತಮ ಕಲಾವಿದರಾಗುವಂತೆ ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು.

> ಒಬ್ಬ ಸಾಮಾನ್ಯ ವ್ಯಕ್ತಿ ಹೇಗೆ ಸಾಧಕನಾಗಬಲ್ಲ ಎಂಬುದನ್ನು ಪದವಿ ಸಂಸ್ಥೆಯ ಸಂಸ್ಥಾಪಕರಾದ ಗುಂಡಗತ್ತಿ ಕೊಟ್ರಪ್ಪ ಅವರೇ ನಮ್ಮ ಮುಂದೆ ಜೀವಂತ ಸಾಕ್ಷಿ ಆಗಿದ್ದು, ಅವರ ಪರಿಶ್ರಮದಿಂದ ಕಟ್ಟಿರುವ ಅವರ ಉದಾತ್ತ ಸಂಕಲ್ಪದ ಈ ಸಂಸ್ಥೆಯಲ್ಲಿ ಕಲಿಯುವ ವಿದ್ಯಾರ್ಥಿಗಳು ಮೊಬೈಲ್ ಗೀಳಿಗೆ ಬಲಿಯಾಗದೇ ಪ್ರಾಮಾಣಿಕವಾಗಿ ವ್ಯಾಸಂಗ ಮಾಡಿ, ನೈತಿಕ ನೆಲೆಯಲ್ಲಿ ಬೆಳೆದು ಈ ರಾಜ್ಯಕ್ಕೆ ದೇಶಕ್ಕೆ ಕೀರ್ತಿಯನ್ನು ತರುವಂತರಾಗಬೇಕೆಂದು.
> -**ಟಿ.ಎಂ. ರಾಜಶೇಖರ್**, ನಿವೃತ್ತ ಪ್ರಾಂಶುಪಾಲ

> ವಿದ್ಯಾರ್ಥಿಗಳು ಛಲ, ನಿಷ್ಠೆ ಶ್ರದ್ದೆಯನ್ನು ಬೆಳೆಸಿಕೊಂಡು ಒಳ್ಳೆಯ ಸಾಧಕರಾಗಿ ತಂದೆ-ತಾಯಿ ವಿದ್ಯೆ ಕಲಿಸಿದ ಶಿಕ್ಷಕರು ಹಾಗೂ ಸಂಸ್ಥೆಯ ಋಣ ತೀರಿಸುವಂತಹ ರೀತಿಯಲ್ಲಿ ಬೆಳೆಯಬೇಕು.
> -**ಶ್ರೀ ಶರಣ ಬಸವ ಬುದ್ಧ ಭೀಮಜಿ**, ವಿದ್ಯಾ ಸಂಸ್ಥೆಯ ಕಾರ್ಯಧ್ಯಕ್ಷ

ಸಮಾರಂಭದಲ್ಲಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ, ಶೃತಿರಾಜು ಎಲಿಗಾರ್, ಆಡಳಿತಾಧಿಕಾರಿಗಳು, ಹೆಚ್. ಬಸವರಾಜ್ ಮುಖ್ಯೋಪಾಧ್ಯಯರು, ವಿದ್ಯಾರ್ಥಿಗಳನ್ನು ಉದ್ದೇಶಿಸಿ ಹಿತನುಡಿಯನ್ನಾಡಿದರು. ಸಿ.ಕೊಟ್ರಮ್ಮ ಕೊಟ್ರಪ್ಪ ಸಂಸ್ಥಾಪಕ ಕಾರ್ಯದರ್ಶಿಗಳು ಉಪಸ್ಥಿತರಿದ್ದರು. ಪ್ರಾಂಶುಪಾಲ ಆರ್.ಹೆಚ್.ಕಲ್ಯಾಣದವರ್, ಪ್ರಸ್ತಾವಿಕ ನುಡಿಯನ್ನಾಡಿದರು. ಉಪನ್ಯಾಸಕ ಎ.ಮಂಜುನಾಥ ಸ್ವಾಗತಿಸಿದರು. ಸಾಗರ್.ಪಿ.ಬಿ ದೈಹಿಕ ಶಿಕ್ಷಣ ಉಪನ್ಯಾಸಕರು ವಂದಿಸಿದರು. ಉಪನ್ಯಾಸಕ ವೆಂಕಟೇಶ್ ಸೇರಿದಂತೆ ವಿದ್ಯಾರ್ಥಿಗಳು ಇದ್ದರು.

ಪಟ್ಟಣದ ಹಡಗಲಿ ರಸ್ತೆಯಲ್ಲಿರುವ ತಾಲೂಕು ಕ್ರೀಡಾಂಗಣದ ಸಮಿಪದಲ್ಲಿರುವ ಶ್ರೀ ಶರಣಬಸವ ಬುದ್ಧ ಭೀಮಜಿ ವಿದ್ಯಾಸಂಸ್ಥೆಯ ನಿಸರ್ಗ ಪದವಿ ಪೂರ್ವ ಕಾಲೇಜಿನಲ್ಲಿ ಸಾಂಸ್ಕೃತಿಕ ಚಟುವಟಿಕೆಗಳ ಉದ್ಘಾಟನೆ ನಡೆಸಿದರು.

ವಿದ್ಯುತ್ ಉಪಕರಣವೂ ಜಪ್ತಿ | ಕತ್ತಲೆಯಲ್ಲಿ ಕಚೇರಿ

ಭೂ ಪರಿಹಾರ ವಿಳಂಬ: ಎಸಿ ಕಚೇರಿ ಜಪ್ತಿ

ಕೊಪ್ಪಳದ ಜಿಲ್ಲಾಡಳಿತ ಭವನದಲ್ಲಿನ ಉಪ ವಿಭಾಗೀಯ ಕಚೇರಿಯ ಕಂಪ್ಯೂಟರ್ ಮತ್ತು ಪೀಠೋಪಕರಣಗಳನ್ನು ಕೋರ್ಟ್ ಸಿಬ್ಬಂದಿ ಜಪ್ತಿ ಮಾಡಿದರು.

ಕೊಪ್ಪಳ: ಭೂ ಸ್ವಾಧೀನ ಪರಿಹಾರ ನೀಡಲು ವಿಳಂಭ ಮಾಡಿದ ಹಿನ್ನೆಲೆ, ನಗರದ ಜಿಲ್ಲಾಡಳಿತ ಭವನದಲ್ಲಿನ ಉಪ ವಿಭಾಗೀಯ ಕಚೇರಿಯ ಕಂಪ್ಯೂಟರ್ ಮತ್ತು ಪೀಠೋಪಕರಣಗಳನ್ನು ಕೋರ್ಟ್ ಸಿಬ್ಬಂದಿ ಸೋಮವಾರ ಜಪ್ತಿ ಮಾಡಿದ್ದಾರೆ.

ರೈತರಿಗೆ ಹೆಚ್ಚುವರಿ ಪರಿಹಾರ ನೀಡುವಂತೆ ನ್ಯಾಯಾಲಯ ನೀಡಿದ್ದ ತೀರ್ಪು ಪಾಲನೆ ಮಾಡದ ಹಿನ್ನೆಲೆ ಎಸಿ ಕಚೇರಿಯ ಲೈಟ್ ಸೇರಿ ಪೀಠೋಪಕರಣ ಜಪ್ತಿಗೆ ಕೋರ್ಟ್ ಆದೇಶಿಸಿದೆ.

ಕೋರ್ಟ್ ಆದೇಶದ ಹಿನ್ನೆಲೆ ರೈತರ ಪರ ವಕೀಲರು ಹಾಗೂ ನ್ಯಾಯಾಲಯದ ಸಿಬ್ಬಂದಿ ಮತ್ತು ನೊಂದ ರೈತರ ಹಾಜರಾತಿಯಲ್ಲಿ ವಿವಿಧ ಉಪ ವಿಭಾಗೀಯ ಕಚೇರಿಯ ಸಿಬ್ಬಂದಿ ಕಚೇರಿಯಲ್ಲಿನ ವಿವಿಧ ವಸ್ತು ವಶಕ್ಕೆ ಪಡೆದಿದ್ದಾರೆ. ಕಚೇರಿಯಲ್ಲಿನ ವಿದ್ಯುತ್ ಉಪಕರಣಗಳಾದ ಬ್ಯಾಟರಿ, ಯುಪಿಎಸ್ ಕೂಡ ಕೋರ್ಟ್ ಬೇಲಿಫ್ ಗಳು ಜಪ್ತಿ ಮಾಡಿದ್ದಾರೆ. ಇದರಿಂದ ಎಸಿ ಕಚೇರಿಯಲ್ಲಿ ಕತ್ತಲೆ ಆವರಿಸಿತ್ತು.

ಪ್ರಕರಣದ ಹಿನ್ನೆಲೆ: ಕುಷ್ಟಗಿ ತಾಲೂಕು ಪುರ ಗ್ರಾಮದ ಪಕ್ಕದಲ್ಲಿ ಸಣ್ಣ ನೀರಾವರಿ ಇಲಾಖೆ ಕೆರೆ ನಿರ್ಮಾಣ ಮಾಡಿದೆ. ಕೆರೆ ಹಿನ್ನೀರಿನ ಸತ್ಯನಾರಾಯಣ ಎಂಬುವರ 10 ಎಕರೆ ಜಮೀನನ್ನು ಸಣ್ಣ ನೀರಾವರಿ ಇಲಾಖೆ ಭೂಸ್ವಾಧೀನ ಮಾಡಿಕೊಂಡಿದೆ.

ಕಂದಾಯ ಇಲಾಖೆಯಿಂದ ಕಳೆದ 15 ವರ್ಷದ ಹಿಂದೆಯೇ ಭೂ ಸ್ವಾಧೀನ ಪ್ರಕ್ರಿಯೆಗೆ ಸಂಬಂಧಿಸಿ ರೈತರಿಗೆ ಪರಿಹಾರ ಹಣವನ್ನೂ ನೀಡಲಾಗಿದೆ. ಭೂಮಿ ಕಳೆದುಕೊಂಡ ರೈತ ಸುಮಾರು 1.20 ಕೋಟಿ ರೂ. ಪರಿಹಾರ ಪಡೆದು, ಹೆಚ್ಚುವರಿ ಪರಿಹಾರಕ್ಕೆ ಕೋರ್ಟ್ ಮೆಟ್ಟಿಲೇರಿದ್ದರು. ಹೆಚ್ಚುವರಿ ಪರಿಹಾರವಾಗಿ ಇನ್ನೂ 70 ಲಕ್ಷ ರೂ. ಹಣವನ್ನು ರೈತರಿಗೆ ನೀಡುವಂತೆ ಜಿಲ್ಲಾ ನ್ಯಾಯಾಲಯ ಆದೇಶಿಸಿದೆ.

ಆದರೆ, ಸಣ್ಣ ನೀರಾವರಿ ಇಲಾಖೆ ಕೋರ್ಟ್ ಆದೇಶದ ಪಾಲನೆ ಮಾಡದ ಹಿನ್ನೆಲೆ, ರೈತರ ಪರ ವಕೀಲರು ಕೋರ್ಟ್ ಮುಂದೆ ಮತ್ತೊಂದು ಅರ್ಜಿ ಸಲ್ಲಿಸಿದ್ದರು. ನ್ಯಾಯಾಲಯ ಭೂ ಸ್ವಾಧೀನ ಪ್ರಕ್ರಿಯೆ ಮಾಡಿದ್ದ ಉಪ ವಿಭಾಗಾಧಿಕಾರಿ ಕಚೇರಿ ಜಪ್ತಿಗೆ ಆದೇಶಿಸಿದೆ.

> ಸಣ್ಣ ನೀರಾವರಿ ಇಲಾಖೆಯ ಕೆರೆ ನಿರ್ಮಾಣಕ್ಕಾಗಿ ಭೂಸ್ವಾಧೀನ ಮಾಡಿದ್ದ ಹಳೇ ಪ್ರಕರಣದಲ್ಲಿ ಕೋರ್ಟ್ ಸಿಬ್ಬಂದಿ ಕಚೇರಿ ಜಪ್ತಿ ಮಾಡಿದ್ದಾರೆ. ಭೂಸ್ವಾಧೀನ ಮಾಡಿದ್ದಾಗ ನಾವು ರೈತರಿಗೆ ಅಗತ್ಯ ಪರಿಹಾರ ನೀಡಿದ್ದೇವೆ. ಹೆಚ್ಚುವರಿ ಪರಿಹಾರಕ್ಕೆ ರೈತರು ನ್ಯಾಯಾಲಯದ ಮೆಟ್ಟಿಲೇರಿದ್ದರು. ಸಣ್ಣ ನೀರಾವರಿ ಇಲಾಖೆ ರೈತರಿಗೆ ಪರಿಹಾರ ನೀಡಬೇಕಿತ್ತು. ಕಾನೂನ ರೀತಿಯಲ್ಲಿ ಮುಂದಿನ ಕ್ರಮ ಕೈಗೊಳ್ಳಲಾಗುವುದು
> – **ಕ್ಯಾ.ಮಹೇಶ ಮಾಲಗಿತ್ತಿ**, ಉಪ ವಿಭಾಗಾಧಿಕಾರಿ

ಕಟ್ಟಡ ಕಾರ್ಮಿಕರ ಸಮ್ಮೇಳನ ಆ.22ಕ್ಕೆ

ಕೊಪ್ಪಳ: ನಗರದ ಮೇರಾಜ ಕಲ್ಯಾಣ ಮಂಟಪದಲ್ಲಿ ಆ.22 ಮತ್ತು ಆ. 23 ರಂದು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ 5ನೇ ರಾಜ್ಯ ಮಟ್ಟದ ಸಮ್ಮೇಳನ ಆಯೋಜಿಸಲು ನಿರ್ಧರಿಸಲಾಗಿದೆ ಎಂದು ರಾಜ್ಯ ಕಟ್ಟಡ ಮತ್ತು ಇತರೇ ನಿರ್ಮಾಣ ಕಾರ್ಮಿಕರ ಫೆಡರೇಷನ್? ಪ್ರಧಾನ ಕಾರ್ಯದರ್ಶಿ ಕೆ.ಮಹಾಂತೇಶ ಹೇಳಿದರು. ನಗರದಲ್ಲಿ ಸುದ್ದಿಗೋಷ್ಠಿ ನಡೆಸಿ ಸೋಮವಾರ ಮಾತನಾಡಿ, ಕಟ್ಟಡ ಕಾರ್ಮಿಕರ ಕ್ಷೇತ್ರ ಬಹು ವಿಸ್ತಾರವಾಗಿದೆ. ಸರ್ಕಾರದಿಂದ ಸರಿಯಾದ ಸೌಲಭ್ಯ ಸಿಗುತ್ತಿಲ್ಲ. ಕೇಂದ್ರ ಸರ್ಕಾರ ಕಾರ್ಮಿಕ ವಿರೋಧಿ ಕಾನೂನು ತರುತ್ತಿದೆ. ಕೆಲಸದ ಅವಧಿ 12 ಗಂಟೆಗೆ ಹೆಚ್ಚಿಸುವ ಹುನ್ನಾರ ನಡೆದಿದೆ. ಕೆಲವೆಡೆ ಕಂಪನಿಗಳು ಅದನ್ನು ಜಾರಿ ಮಾಡಿದ ಉದಾಹರಣೆ ಇದೆ. ರಾಜ್ಯದಲ್ಲಿ ಕಿಟ್? ವಿತರಣೆ ಹೆಸರಿನಲ್ಲಿ ಕೋಟ್ಯಂತರ ರೂ. ಹಣ ಭ್ರಷ್ಟರ ಪಾಲಾಗಿದೆ. ಆದರೆ, ಸರಕಾರ ಕುಂಟು ನೆಪ ಹೇಳಿ ಕಾರ್ಮಿಕರಿಗೆ ಸೌಲಭ್ಯ ಕಲ್ಪಿಸುತ್ತಿಲ್ಲ. ಕೆಲ ಪ್ರರಕಣಗಳಲ್ಲಿ ನ್ಯಾಯಾಲಯದ ಮೊರೆ ಹೋಗಿದ್ದೇವೆ. ಹೊಸ ಕಾನೂನುಗಳು ಕಾರ್ಮಿಕ ರಚನೆಯನ್ನು ಪ್ರಶ್ನಿಸಲಿವೆ. ಈ ಬಗ್ಗೆ ಸಮ್ಮೇಳನದಲ್ಲಿ ಚರ್ಚೆ ನಡೆಯಲಿದೆ ಎಂದು ಮಾಹಿತಿ ನೀಡಿದರು. ಮೊಲದ ದಿನ ನಗರದಲ್ಲಿ ಮೆರವಣಿಗೆ ನಡೆಯಲಿದೆ. ಸಿಐಟಿಯು ರಾಜ್ಯ ನಾಯಕರಾದ ಮೀನಾ ಸುಂದರಂ, ಯು.ಪಿ.ಜೋಸೆಫ್, ಬಾಲಕೃಷ್ಣ ಶೆಟ್ಟಿ ಇತರರು ಭಾಗಿಯಾಗುವರು. ಹೆಚ್ಚಿನ ಸಂಖ್ಯೆಯ ಕಾರ್ಮಿಕರು ಭಾಗಿಯಾಗಿ ಸಮ್ಮೇಳನ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು. ಬಳಿಕ ಸಮ್ಮೇಳನ ಲಾಂಛನ ಬಿಡುಗಡೆಗೊಳಿಸಿದರು.

ಪಂಚಮಸಾಲಿ ಸಂಘಟನೆ ಹಳ್ಳಿ ಕಡೆಗೆ

ಹೂವಿನಹಡಗಲಿ: ಪಂಚಮಸಾಲಿ ಸಂಘಟಿತರಾಗಿ ಶೈಕ್ಷಣಿಕ. ಆರ್ಥಿಕ ಮತ್ತು ರಾಜಕೀಯವಾಗಿ ಬೆಳೆಯಬೇಕಾಗಿದೆ ಎಂದು ಪಂಚಮಸಾಲಿ ರಾಜ್ಯಾದ್ಯಕ್ಷ ಸೋಮನಗೌಡ ಪಾಟೀಲ್ ಹೇಳಿದರು.

ಪಟ್ಟಣದ ಪಂಚಮಸಾಲಿ ಸಮುದಾಯದ ಭವನದಲ್ಲಿ ಭಾನುವಾರ ನಡೆದ ತಾಲೂಕಿನ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ನಿವೃತ್ತ ನೌಕರರ ಸನ್ಮಾನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಶ್ರಾವಣ ಮಾಸದಲ್ಲಿ ರಾಜ್ಯದ 18 ಜಿಲ್ಲೆಗಳಲ್ಲಿ ಪ್ರವಾಸ ಕೈಗೊಂಡಿದ್ದು ಮೀಸಲಾತಿ. ಸರಕಾರದ ಸೌಲಭ್ಯಕ್ಕೆ ಸಮಾಜ ಸಂಘಟನೆಗೆ ಮುಂದಿನ ತಿಂಗಳು ತಾಲೂಕಿನ ಪ್ರತಿ ಹಳ್ಳಿ ಕಡೆಗೆ ಬರುತ್ತೇವೆ ಎಂದರು. ಹರಿಹರ ಪಂಚಮಸಾಲಿ ಪೀಠದ ವಚನಾನಂದ ಸ್ವಾಮೀಜಿ ಆಶೀರ್ವಾಚನದಲ್ಲಿ ಅಂತರಿಕವಾಗಿ ಗಟ್ಟಿಯಾಗಲು ಧಾರ್ಮಿಕ ಸಂಸ್ಕಾರ ವಿಭೂತಿ. ಲಿಂಗ ದೀಕ್ಷೆ ಮಾಡಿ ಸಮಾಜ ಸಂಘಟನೆ ಮಾಡಿರಿ ಎಂದರು. ರಂಗಭಾರತಿ ಕಾರ್ಯಾಧ್ಯಕ್ಷೆ ಎಂ.ಪಿ.ಸುಮಾ ಮಾತನಾಡಿ ವಿದ್ಯಾರ್ಥಿನಿಲಯ ನಿರ್ಮಿಸಿ ಸಮಾಜದ ಬಡ ವಿದ್ಯಾರ್ಥಿಗಳಿಗೆ ಆಸರೆಯಾಗಿ ಎಂದರು. ಗವಿಮಠದ ಡಾ. ಹಿರಿಶಾಂತ ವೀರಸ್ವಾಮೀಜಿ. ಹಿರೇಮಲ್ಲನಕೆರೆ ಮಠದ ಚನ್ನಬಸವಸ್ವಾಮೀಜಿ. ಡಾ.ರಾಮಸ್ವಾಮಿ ರಾಕೇಶಯ್ಯ ಸಾನಿಧ್ಯ ವಹಿಸಿದ್ದರು.

ಪಂಚಮಸಾಲಿ ನೌಕರರ ರಾಜ್ಯದ್ಯಕ್ಷ ಉತ್ತಂಗಿ ರವಿ. ಹರಿಹರ ಬ್ಯಾಂಕ್ ಅದ್ಯಕ್ಷ ಅಂಗಡಿ ವೀರಣ್ಣ. ರಾಜ್ಯ ಯುವ ಘಟಕ ಅದ್ಯಕ್ಷ ಕಿಚಡಿ ಕೊಟ್ರೇಶ್. ನೌಕರರ ಸಂಘದ ಅದ್ಯಕ್ಷ ವಿಬಿ.ಜಗದೀಶ್ ಮಾತನಾಡಿದರು.

ಪಂಚಮಸಾಲಿ ತಾಲೂಕು ಅದ್ಯಕ್ಷ ಕೆ. ಎಸ್.ಶಾಂತನಗೌಡ. ಮಹಿಳಾ ಅದ್ಯಕ್ಷೆ ಅಕ್ಕಮ್ಮ. ಮುಖಂಡರಾದ ಕೆ.ಮುದುಕಪ್ಪ. ಟಿ.ಕೆ.ಬ್ಯಾಡಿಗಿ. ನಾಗಭೂಷಣ. ವಿ.ಸಿ.ಪಾಟೀಲ್. ಎಂ.ವಿ.ಪಾಟೀಲ್. ಗಡ್ಡಿ ಪತ್ರೆಪ್ಪ.ಬಿ. ಅಸುಂಡಿ. ಎಚ್.ಜಿ.ಪಾಟೀಲ್, ಎಂ.ಬಿ. ಬಸವರಾಜ. ಸೊಪ್ಪಿನ ಮಂಜುನಾಥ. ಹಣ್ಣಿ ಶಶಿಧರ. ಟಿ.ಪಿ.ವೀರೇಂದ್ರ. ಚನ್ನವೀರಗೌಡ .ಡಿ.ವಿ. ವೀರೇಶ . ಎ.ಜಿ.ಭದ್ರಗೌಡ ಇದ್ದರು.

ಪಟ್ಟಣದ ಪಂಚಮಸಾಲಿ ಸಮುದಾಯದ ಭವನದಲ್ಲಿ ನಡೆದ ಕಾರ್ಯಕ್ರಮವನ್ನು ಸೋಮನಗೌಡ ಪಾಟೀಲ್ ಅವರು ಉದ್ಘಾಟಿಸಿದರು.

ಹಾಸ್ಟೆಲ್ ಹೊರ ಗುತ್ತಿಗೆ ನೌಕರರ ಪ್ರತಿಭಟನೆ

ಕೊಪ್ಪಳ: ಕನಿಷ್ಠ ವೇತನ ಸೇರಿ ನಾನಾ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ, ರಾಜ್ಯ ಸರಕಾರಿ ಹಾಸ್ಟೆಲ್ ಹಾಗೂ ವಸತಿ ಶಾಲೆ ಹೊರಗುತ್ತಿಗೆ ನೌಕರರ ಸಂಘದ ಪದಾಧಿಕಾರಿಗಳು ನರಗದ ಜಿಲ್ಲಾಡಳಿತ ಭವನದ ಮುಂದೆ ಸೋಮವಾರ ಪ್ರತಿಭಟಿಸಿದರು. ಹಿಂದುಳಿದ ವರ್ಗ, ಸಮಾಜ ಕಲ್ಯಾಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ಎಸ್ಟಿ ಇಲಾಖೆ ವ್ಯಾಪ್ತಿಯ ವಸತಿ ಶಾಲೆ, ಹಾಸ್ಟೇಲ್ ಗುತ್ತಿಗೆ ನೌಕರರು ಕಳೆದ 10 ರಿಂದ 15 ವರ್ಷದಿಂದ ಕಡಿಮೆ ಸಂಬಳಕ್ಕೆ ಕೆಲಸ ಮಾಡುತ್ತಿದ್ದೇವೆ. ಸರಕಾರ ಕಾರ್ಮಿಕರಿಗೆ ಕನಿಷ್ಠ ವೇತನ ಪರಿಷ್ಕರಣೆ ಮಾಡಿದೆ. ಆದರೆ, ಜಾರಿ ಮಾಡುತ್ತಿಲ್ಲ. ಪ್ರತಿ ತಿಂಗಳು ವೇತನ ಸಿಗುತ್ತಿಲ್ಲ. ಪಿಎಫ್, ಇಎಸ್ಐ ಸರಿಯಾಗಿ ಭರ್ತಿ ಮಾಡುತ್ತಿಲ್ಲ. ಖಾಸಗಿ ಏಜೆನ್ಸಿಗಳಿಂದ ಮುಕ್ತಿ ದೊರೆಯುತ್ತಿಲ್ಲ. ಶಾಸಕರು, ಸಂಸದರ ದುಡಿವ ಕಾರ್ಮಿಕರನ್ನು ಕೆಲಸದಿಂದ ತೆಗೆದು ಹೊಸಬರನ್ನು ನೇಮಿಸಲಾಗುತ್ತಿದೆ ಎಂದು ಹೋರಾಟಗಾರರು ಆರೋಪಿಸಿದರು. ಎಲ್ಲ ನೌಕರರಿಗೆ ಮಾಸಿಕ 36 ಸಾವಿರ ರು. ಕನಿಷ್ಠ ವೇತನ ಜಾರಿಗೊಳಿಸಿ. ಖಾಸಗಿ ಏಜೆನ್ಸಿಗಳಿಗೆ ಗುತ್ತಿಗೆ ನೀಡುವ ಬದಲು ಸೊಸೈಟಿ ರಚಿಸಿ, ಸೇವಾ ಭದ್ರತೆ ಕಲ್ಪಿಸಿ. ಕಾನೂನು ಪ್ರಕಾರ ರಜೆ, ಇನ್ನಿತರ ಸೌಲಭ್ಯ ಕಲ್ಪಿಸಿ. ನಿಯಮ ಮೀರುವ ಏಜೆನ್ಸಿಗಳನ್ನು ಕಪ್ಪು ಪಟ್ಟಿಗೆ ಸೇರಿಸಬೇಕು. ಶಾಸಕ, ಸಂಸದ, ಸಚಿವರ ಶಿಫಾರಸ್ಸು ಪತ್ರ ಪರಿಗಣಿಸದಂತೆ ಸೂಚಿಸುವಂತೆ ಒತ್ತಾಯಿಸಿದರು. ಸಂಘದ ಪದಾಧಿಕಾರಿಗಳಾದ ಗ್ಯಾನೇಶ ಕಡಗದ, ಮಹ್ಮದ್ ರಫೀಕ್, ಕೀರಪ್ಪ, ಹುಸೇನಪ್ಪ, ಬಸವರಾಜ, ನಿರುಪಾದಿ, ನೂರಪಾಷಾ ಇದ್ದರು.

ಚೆಸ್‌ಗೆಂದೇ ಮೀಸಲಾಗಿರುವ ವಿದ್ಯಾಲಯ ಹೊಂದಿರುವ ಏಕೈಕ ರಾಜ್ಯ
ಭಾರತದ 88 ಚೆಸ್ ಗ್ರ್ಯಾಂಡ್‌ಮಾಸ್ಟರ್‌ಗಳಲ್ಲಿ 31 ಮಂದಿ ಇಲ್ಲಿನವರು

ತಮಿಳುನಾಡು ಚದುರಂಗದ ಬೀಡು

- ವಿಶ್ವನಾಥನ್ ಆನಂದ್ ಬಳಿಕ ತಮಿಳುನಾಡು ಮೂಲದಿಂದಲೇ ಬಂದಿದ್ದಾರೆ ಸಾಲು ಸಾಲು ಗ್ರ್ಯಾಂಡ್‌ಮಾಸ್ಟರ್‌ಗಳು.
- ಚೆಸ್ ಫ್ಯಾಕ್ಟರಿ ಎಂದೇ ವಿಶ್ವ ಪ್ರಸಿದ್ಧವಾಗುತ್ತಿರುವ ಚೆನ್ನೈನ ಒಂದು ವಿದ್ಯಾಲಯದಿಂದಲೇ ಹೊರ ಬರುತ್ತಿದ್ದಾರೆ ವರ್ಷವೊಂದಕ್ಕೆ ಸಾವಿರಕ್ಕೂ ಅಧಿಕ ಚೆಸ್ ಕ್ರೀಡಾಳುಗಳು.
- ತಮಿಳುನಾಡಿನ ತಿರುವರೂರ್ ಜಿಲ್ಲೆಯ ಚತುರಂಗ ವಲ್ಲಭನಾಥರ್ ದೇವಾಲಯವು ಚೆಸ್ ಆಟದ ಹಿನ್ನೆಲೆಯನ್ನೊಂದಿರುವ ಕ್ಷೇತ್ರ.



ಇತ್ತೀಚಿನ ವರ್ಷಗಳಲ್ಲಿ ವಿಶ್ವ ಚೆಸ್ ಆಟದಲ್ಲಿ ನಮ್ಮ ದೇಶವು ಬಲಾಢ್ಯವಾಗಿ ಬೆಳೆಯುತ್ತಿದೆ. ಫಿಡೆ ರ್‍ಯಾಂಕಿಂಗ್‌ನ ಟಾಪ್ ಟೆನ್ ಪಟ್ಟಿ ನೋಡಿದರೆ ಭಾರತದ್ದೇ ಮೇಲುಗೈ, ಆ ಪೈಕಿ ರಾಷ್ಟ್ರಮಟ್ಟದಲ್ಲಿ ನಾವು ಕಣ್ಣಾಡಿಸಿದರೆ ತಮಿಳುನಾಡಿನದ್ದೇ ಸಿಂಹಪಾಲು. ಆ ಕಾರಣಕ್ಕಾಗಿ ತಮಿಳುನಾಡು-ಚದುರಂಗದ ನಾಡು ಎಂದೇ ಖ್ಯಾತಿವೆತ್ತಿರುವುದಲ್ಲದೇ ಚೆಸ್ ಕ್ರೀಡೆಯ ರಾಜಧಾನಿ ಎಂದೂ ಜನಜನಿತವಾಗಿದೆ. ವಿಶ್ವನಾಥನ್ ಆನಂದ್ ಚೆಸ್ ಚಾಂಪಿಯನ್ ಆದ ಬಳಿಕ ತಮಿಳುನಾಡಿನಿಂದ ಚೆಸ್ ಆಟಗಾರರು ಒಬ್ಬರಿಗಿಂತ ಒಬ್ಬರು ಮಿಗಿಲು ಎಂಬಂತೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಬೆಳೆಯುತ್ತಿದ್ದಾರೆ. ತಮಿಳುನಾಡು ರಾಜ್ಯವು ಚದುರಂಗದ ನಾಡು ಆಗಿದ್ದು ಹೇಗೆ? ಚೆಸ್ ಆಟಕ್ಕೆ ತಳಕು ಹಾಕಿಕೊಂಡಿರುವ ಅಲ್ಲಿರುವ ಚತುರಂಗ ವಲ್ಲಭನಾಥರ್ ದೇವಾಲಯದ ವೈಶಿಷ್ಟ್ಯವೇನು? ಮುಂತಾದ ಮಾಹಿತಿ ಈ ವಿಶೇಷ ಲೇಖನದಲ್ಲಿದೆ.

ನಮ್ಮ ದೇಶದ ಬಹುತೇಕ ರಾಜ್ಯಗಳು ಒಂದೊಂದು ಕ್ರೀಡೆಗೆ ಬಹಳ ಜನಪ್ರಿಯ, ಆ ಕಾರಣಕ್ಕಾಗಿ ಒಂದೇ ಭಾಗದಿಂದ ಆ ಕ್ರೀಡೆಯ ಪ್ರತಿಭೆಗಳು ಮಿಂಚುತ್ತಿರುವುದು ಸರ್ವೇ ಸಾಮಾನ್ಯ. ಮಹಾರಾಷ್ಟ್ರದ ಮುಂಬೈ ನಗರವು ಕ್ರಿಕೆಟಿಗರನ್ನು ತಯಾರಿಸುವ ಕಾರ್ಖಾನೆ, ನಮ್ಮ ಕರ್ನಾಟಕ ರಾಜ್ಯವು ಹಾಕಿ ಮತ್ತು ಕ್ರಿಕೆಟ್‌ಗೂ ಅಡಿಪಾಯ. ಪಂಜಾಬ್, ಹರ್ಯಾಣ ರಾಜ್ಯಗಳು ಕುಸ್ತಿಗೆ ಹೆಗ್ಗುರುತು, ಕೇರಳ ಮತ್ತು ಪಶ್ಚಿಮ ಬಂಗಾಳ ಫುಟ್ಬಾಲ್‌ಗೆ ಸರ್ವಶ್ರೇಷ್ಠ. ಹೀಗೆ ಇನ್ನೂ ಇಂತಹ ಉದಾಹರಣೆಗಳನ್ನು ಕೊಡುತ್ತಾ ಹೋಗಬಹುದು.

ಚೆಸ್ ಆಟದತ್ತೊಮ್ಮೆ ಗಮನಿಸಿ ನೋಡಿ, ದಕ್ಷಿಣ ಭಾರತವೇ ಆ ಕ್ರೀಡೆಯಲ್ಲಿ ಪಾರಮ್ಯ, ಅದರಲ್ಲೂ ತಮಿಳುನಾಡಿನದ್ದೇ ಎತ್ತಿದ ಕೈ, ಇದೇನೂ ಅತಿಶಯೋಕ್ತಿಯಲ್ಲ.

ಇತ್ತೀಚೆಗೆ ಭಾರತದ ಮಹಿಳಾ ಚೆಸ್ ಗ್ರ್ಯಾಂಡ್ ಮಾಸ್ಟರ್ ವಂತಿಕಾ ಅಗ್ರವಾಲ್ ಒಂದು ವಿಚಾರ ತಿಳಿಸಿದರು, ಅದೇನೆಂದರೆ, ಚೆಸ್‌ಗೆ ದಕ್ಷಿಣ ಭಾರತದಲ್ಲಿ ಸಿಗುವಷ್ಟು ಪ್ರೋತ್ಸಾಹವು ಉತ್ತರ ಭಾರತದ ಚೆಸ್ ಆಟಗಾರರಿಗೆ ಸಿಗುತ್ತಿಲ್ಲ ಎಂಬುದಾಗಿದೆ. ಅವರೇನೂ ನಿರ್ದಿಷ್ಟವಾಗಿ ಯಾವುದೇ ರಾಜ್ಯದ ಹೆಸರು ಹೇಳಿರಲಿಲ್ಲ. ಕೇವಲ ದಕ್ಷಿಣ ಭಾರತದಲ್ಲಿ ಹೇಗೆ ಚೆಸ್ ವಿಭಿನ್ನವಾಗಿ ಬೆಳೆದಿದೆ ಮತ್ತು ಚೆಸ್ ಚೆಸ್ ಆಟಗಾರರಿಗೆ ಸಿಗುವ ಪ್ರಾಮುಖ್ಯತೆ ಬಗ್ಗೆ ವಿವರಿಸಿದ್ದರು. ವಂತಿಕಾ ಅಗ್ರವಾಲ್ ಹೇಳಿಕೆಯು ಚೆಸ್ ವಲಯದಲ್ಲಿ ಒಂದು ಚರ್ಚೆಗೂ ಕಾರಣವಾಯಿತು, ಪರ-ವಿರೋಧ ವ್ಯಾಖ್ಯಾನಗಳು ಕೇಳಿಬಂದವು. ಅವರು ನಿರ್ದಿಷ್ಟವಾಗಿ ತಮಿಳುನಾಡನ್ನು ಮಾತ್ರ ಒತ್ತಿ ಹೇಳಿಲ್ಲ. ಆದರೂ ತಮ್ಮ ಮಾತಿನ ನಡುವೆ ಚೆನ್ನೈನಲ್ಲಿ ಚೆಸ್‌ಗೆ ಸಿಗುವ ಪ್ರೋತ್ಸಾಹವನ್ನು ಹೊಗಳಿದ್ದರು, ಅವರ ಆ ಮಾತು ಅಕ್ಷರಶ: ನಿಜ ಮತ್ತು ಒಪ್ಪುವಂತಹ ವಿಷಯ.

ವಿಶ್ವನಾಥನ್ ಆನಂದ್ ಎಂಬ ಅಪ್ರತಿಮ ಚೆಸ್ ಪ್ರತಿಭೆಯನ್ನು ಭಾರತಕ್ಕೆ ಕೊಟ್ಟ ಕೀರ್ತಿ ತಮಿಳುನಾಡು ರಾಜ್ಯದ್ದಾಗಿದೆ. ಅವರಿಂದ ಪ್ರೇರೇಪಣೆ ಪಡೆದು ನಂತರದ ದಿನಗಳಲ್ಲಿ ಸಾಲುಸಾಲಾಗಿ ಚೆಸ್ ಆಟಗಾರರು ಅಲ್ಲಿಂದಲೇ ಬರಲಾರಂಭಿಸಿದರು. ಇಂದು ನಮ್ಮ ಭಾರತದಲ್ಲೇ ಅತೀ ಹೆಚ್ಚು ಗ್ರ್ಯಾಂಡ್ ಮಾಸ್ಟರ್‌ಗಳನ್ನು ಹೊಂದಿರುವ ರಾಜ್ಯ ತಮಿಳುನಾಡು ಎಂಬ ಹೆಗ್ಗಳಿಕೆ ಇದೆ. ಹಾಗಾಗಿ ನಮ್ಮ ದೇಶದ ಚೆಸ್ ರಾಜಧಾನಿ ಎಂದೇ ಜನಜನಿತವಾಗಿದೆ. ಭಾರತದ 88 ಚೆಸ್ ಗ್ರ್ಯಾಂಡ್‌ಮಾಸ್ಟರ್‌ಗಳಲ್ಲಿ 31 ಮಂದಿ ತಮಿಳುನಾಡಿನವರೇ ಆಗಿದ್ದಾರೆ, ಅವರಲ್ಲಿ ಇಬ್ಬರು ವಿಶ್ವಚಾಂಪಿಯನ್ಸ್. ಅಲ್ಲಿನ ಮನೆ ಮನೆಯಲ್ಲೂ ಚೆಸ್ ಕ್ರೀಡಾಸ್ಫೂರ್ತಿ ಇದೆ ಎಂದು ಹೇಳಲು ಅಣ್ಣ-ತಂಗಿಯರಾದ ಆರ್. ಪ್ರಜ್ಞಾನಂದ ಮತ್ತು ಆರ್. ವೈಶಾಲಿಗಿಂತ ದೊಡ್ಡ ಉದಾಹರಣೆ ಬೇಕಾ? ಹಾಗಾಗಿಯೇ ತಮಿಳುನಾಡನ್ನು ಚೆಸ್ ಆಟದ ತವರೂರು, ನೆಲೆಬೀಡು ಎಂಬುವುದು ಕೂಡಾ ಸರಿ. ಇಂದು ಫಿಡೆ ಶ್ರೇಯಾಂಕದ ಟಾಪ್ 10 ಪಟ್ಟಿಯನ್ನು ಗಮನಿಸಿದರೆ ಕನಿಷ್ಟ ಪಕ್ಷ ನಾಲ್ಕೈದು ಮಂದಿ ಭಾರತೀಯರು, ಅದರಲ್ಲೂ ತಮಿಳುನಾಡಿನವರೇ ಹೆಚ್ಚು.

ಮೊದಲ ಗ್ರ್ಯಾಂಡ್‌ಮಾಸ್ಟರ್

ವಿಶ್ವನಾಥನ್ ಆನಂದ್ ಅವರಿಗಿಂತಲೂ ಮೊದಲು 1961ರಲ್ಲಿ ಭಾರತದ ಮೊದಲ ಇಂಟರ್‌ನ್ಯಾಷನಲ್ ಮಾಸ್ಟರ್ ಆಗಿ ಮೂಡಿಬಂದಿದ್ದ ಮ್ಯಾನುವಲ್ ಆ್ಯರೋನ್‌ರವರೂ ತಮಿಳುನಾಡಿನವರು. ಸುಮಾರು 2 ದಶಕಗಳ ಕಾಲ ಅವರು ಭಾರತದ ಚೆಸ್ ಸಾಮ್ರಾಜ್ಯವನ್ನು ಆಳಿದ್ದರು. 1988ರಲ್ಲಿ ವಿಶ್ವನಾಥನ್ ಆನಂದ್ ಭಾರತದ ಮೊದಲ ಗ್ರ್ಯಾಂಡ್ ಮಾಸ್ಟರ್ ಎಂಬ ಗೌರವಕ್ಕೆ ಪಾತ್ರರಾಗಿ ಗಮನ ಸೆಳೆದರು, 2002ರಲ್ಲಿ ಅವರು ವಿಶ್ವ ಚಾಂಪಿಯನ್ ಕೂಡಾ ಆದರು. 2001ರಲ್ಲಿ ತಮಿಳುನಾಡಿನ ವಿಜಯಲಕ್ಷ್ಮೀ ಸುಬ್ಬಾರಾಮನ್ ಅವರು ಮೊದಲ ಮಹಿಳಾ ಗ್ರ್ಯಾಂಡ್‌ಮಾಸ್ಟರ್ ಆಗಿ ಹೊರಹೊಮ್ಮಿ ಎಲ್ಲರೂ ಹುಬ್ಬೇರುವಂತೆ ಮಾಡಿದರು.

ತಮಿಳುನಾಡಿನ ಚೆಸ್ ಕಲಿಗಳು

- **ಮ್ಯಾನುಯೆಲ್ ಆ್ಯರೋನ್**

ಭಾರತದ ಮೊದಲ ಇಂಟರ್‌ನ್ಯಾಷನಲ್ ಮಾಸ್ಟರ್.

- **ವಿಶ್ವನಾಥನ್ ಆನಂದ್** ಭಾರತದ ಮೊದಲ ಗ್ರ್ಯಾಂಡ್‌ಮಾಸ್ಟರ್ (ಐದು ಬಾರಿ ವಿಶ್ವ ಚೆಸ್ ಚಾಂಪಿಯನ್).
- **ಸುಬ್ಬರಾಮನ್ ವಿಜಯಲಕ್ಷ್ಮೀ** ಭಾರತದ ಮೊದಲ ಮಹಿಳಾ ಗ್ರ್ಯಾಂಡ್ ಮಾಸ್ಟರ್.
- **ಕೋನೇರು ಹಂಪಿ** ಭಾರತದ ಉನ್ನತ ಶ್ರೇಯಾಂಕದ ಮಹಿಳಾ ಚೆಸ್ ಆಟಗಾರ್ತಿ (ಗ್ರ್ಯಾಂಡ್‌ಮಾಸ್ಟರ್ ಪ್ರಶಸ್ತಿಯನ್ನು ಪಡೆದ ಅತ್ಯಂತ ಕಿರಿಯ ಮಹಿಳೆ).
- **ಆರ್. ಪ್ರಜ್ಞಾನಂದ** ತಮಿಳುನಾಡು ಮೂಲದ ಫಿಡೆ ವಿಶ್ವಕಪ್‌ನ ಕಿರಿಯ ಫೈನಲಿಸ್ಟ್.
- **ಗುಕೇಶ್ ಡಿ** ತಮಿಳುನಾಡು ಮೂಲಕ ಅತ್ಯಂತ ಕಿರಿಯ ಚೆಸ್ ವಿಶ್ವಚಾಂಪಿಯನ್

ಸರಕಾರ-ಶಿಕ್ಷಣ ಸಂಸ್ಥೆಗಳ ಪ್ರೋತ್ಸಾಹ

ತಮಿಳುನಾಡಿನಲ್ಲಿ ಚೆಸ್ ಆಟ ಬೇರೂರಲು ಅಲ್ಲಿನ ಸರಕಾರ ಮತ್ತು ಶಿಕ್ಷಣ ಸಂಸ್ಥೆಗಳು ಆ ಆಟವನ್ನು ಪ್ರಾಮಾಣಿಕವಾಗಿ ಬೆಂಬಲಿಸಿದ್ದೇ ಈ ಪರಿಯ ಬೆಳವಣಿಗೆಗೆ ಕಾರಣ. 1947ರಲ್ಲಿ ಅಸ್ತಿತ್ವಕ್ಕೆ ಬಂದ ತಮಿಳುನಾಡು ರಾಜ್ಯ ಚೆಸ್ ಸಂಸ್ಥೆ ಬಹಳ ಮುತುವರ್ಜಿಯಿಂದ ಕಾರ್ಯನಿರ್ವಹಿಸುತ್ತಾ ಬಂದಿದೆ. 2011ರಲ್ಲಿ ತಮಿಳುನಾಡಿನ ಅಂದಿನ ಮುಖ್ಯಮಂತ್ರಿ ಜಯಲಲಿತಾ ಅವರು ಚದುರಂಗ ಆಟವನ್ನು ಶಾಲಾ ಪಠ್ಯ ಚಟುವಟಿಕೆಯನ್ನಾಗಿ ಮಾಡಿದರು. ಅಲ್ಲಿಂದ ಚೆಸ್ ಕ್ರೀಡೆಯ ಬೆಳವಣಿಗೆ ತಮಿಳುನಾಡಿನಲ್ಲಿ ಬಹಳ ವೇಗ ಪಡೆಯಿತು. ಪ್ರತೀ ಶಾಲೆಯೂ 7ರಿಂದ 17 ವರ್ಷ ವಯಸ್ಸಿನ ವಿದ್ಯಾರ್ಥಿಗಳಿಗೆ ಚೆಸ್ ತರಬೇತಿ ನೀಡುತ್ತದೆ. ತಮಿಳುನಾಡು ಸರಕಾರದ ವತಿಯಿಂದಲೇ ವಿದ್ಯಾರ್ಥಿಗಳಿಗೆ ಆಫ್‌ಲೈನ್ ಮತ್ತು ಆನ್‌ಲೈನ್ ತರಬೇತಿಯನ್ನೂ ನೀಡಲಾಗುತ್ತಿದೆ.

ಚೆಸ್ ವಿದ್ಯಾಲಯ

ಚೆನ್ನೈನ ವೇಲಮ್ಮಾಳ್ ವಿದ್ಯಾಲಯವು ಚೆಸ್ ಆಟಗಾರರನ್ನು ಸಿದ್ಧಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ. ಹಾಗಾಗಿಯೇ ಇದು ಚೆನ್ನೈನ ಚೆಸ್ ಫ್ಯಾಕ್ಟರಿ ಎಂದೇ ವಿಶ್ವ ಪ್ರಸಿದ್ಧ. ಚೆಸ್ ತರಬೇತಿ ಪಡೆಯುವ ಸಲುವಾಗಿಯೇ ಈ ವಿದ್ಯಾಸಂಸ್ಥೆಗೆ ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಪ್ರತೀ ವರ್ಷ ದಾಖಲಾಗುತ್ತಾರೆ. ಚೆಸ್‌ನಲ್ಲಿ ಆಸಕ್ತಿ ಹೊಂದಿರುವ ವಿದ್ಯಾರ್ಥಿಗಳನ್ನು ಈ ಸಂಸ್ಥೆ ಕೈ ಹಿಡಿದು ಮುನ್ನಡೆಸುತ್ತದೆ. ಕಾಲೇಜು ವಿದ್ಯಾರ್ಜನೆಗೂ ತೊಂದರೆಯಾಗದಂತೆ ಚೆಸ್‌ನಲ್ಲಿ ಭವಿಷ್ಯ ಕಂಡುಕೊಳ್ಳಲು ಈ ವಿಶ್ವವಿದ್ಯಾಲಯ ವಿದ್ಯಾರ್ಥಿಗಳಿಗೆ ಅವಕಾಶವನ್ನು ಸೃಷ್ಟಿಸುತ್ತದೆ, ಅಷ್ಟೇ ಅಲ್ಲದೆ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವನ್ನೂ ನೀಡುತ್ತದೆ.

ಚೆಸ್‌ಗಾಗಿಯೇ ದೇವಾಲಯ

ಚೆಸ್ ಆಟವು ತಮಿಳುನಾಡಿನ ಸಂಸ್ಕೃತಿ, ಪರಂಪರೆಗಳಲ್ಲಿ ಬಹಳ ಆಳವಾಗಿ ಬೇರೂರಿದೆ. ಅಲ್ಲಿ ಚೆಸ್‌ಗಾಗಿಯೇ ಒಂದು ದೇವಾಲಯವೂ ಇದೆ. ಅಲ್ಲಿನ ತಿರುವರೂರು ಜಿಲ್ಲೆಯ ನೀಡಮಂಗಲಂ ಸಮೀಪದಲ್ಲಿರುವ ಚತುರಂಗ ವಲ್ಲಭನಾಥರ್ ದೇವಸ್ಥಾನವು ಈ ನಂಬಿಕೆಗೆ ಸಾಕ್ಷಿಯಾಗಿದೆ. ಚತುರಂಗ ಅಥವಾ ಸತುರಂಗ ವಲ್ಲಭನಾಥರ್ ಎಂದರೆ ಚೆಸ್ ಆಟದಲ್ಲಿ ಪರಿಣತ ಎಂದು ಅರ್ಥ. ಚೆಸ್ ಆಟವು ಸುಮಾರು 1,500 ವರ್ಷಗಳಷ್ಟು ಹಿಂದೆಯೇ ತಮಿಳುನಾಡಿನಲ್ಲಿ ಆಡಲಾಗುತ್ತಿತ್ತು ಎಂಬುದನ್ನು ಈ ಶಿವಾಲಯದ ದಾಖಲೆಗಳು ಹೇಳುತ್ತವೆ. ಅಲ್ಲಿನ ಐತಿಹ್ಯದ ಪ್ರಕಾರ ಶಿವನು ರಾಜಕುಮಾರಿಯನ್ನು ಚೆಸ್ ಆಟದಲ್ಲಿ ಸೋಲಿಸಿ ಸತುರಂಗ ವಲ್ಲಭನಾಥರ್ ಎಂಬ ಹೆಸರನ್ನು ಪಡೆದನು. ಪ್ರಾಚೀನ ಕಾಲದಲ್ಲಿ ಅಲ್ಲಿನ ತಿರು ನಲ್‌ವೇಲಿಯ ರಾಜ ವಾಸುದೇವನ್ ಮತ್ತು ಆತನ ಪತ್ನಿ ಗಾಂಧಿಮತಿ ಶಿವಭಕ್ತರಾಗಿದ್ದರು, ಬಹುಕಾಲ ಅವರಿಗೆ ಮಕ್ಕಳಾಗಿರಲಿಲ್ಲ. ಸಂತಾನಾಪೇಕ್ಷೆಯಿಂದ ಅವರು ಶಿವನನ್ನು ಅತ್ಯಂತ ಶ್ರದ್ಧಾ ಭಕ್ತಿಯಿಂದ ಪೂಜಿಸಿ

ದರು. ಒಂದು ದಿನ ದಂಪತಿ ತಾಮಿರಬರಾಣಿ ನದಿಯಲ್ಲಿ ಸ್ನಾನ ಮಾಡುತ್ತಿದ್ದಾಗ ಕಮಲದ ಹೂವಿನಲ್ಲಿ ಪವಡಿಸಿದ್ದ ಶಂಖ ಅವರ ಕಡೆಗೆ ತೇಲುತ್ತಾ ಬಂತು. ಆ ಶಂಖವನ್ನು ಎತ್ತಿಕೊಂಡಾಗ ಅದು ಹೆಣ್ಣು ಮಗುವಾಗಿ ಪರಿವರ್ತನೆಗೊಂಡಿತು. ಆ ಮಗುವಿಗೆ ಅವರು ರಾಜರಾಜೇಶ್ವರಿ ಎಂದು ಹೆಸರಿಟ್ಟರು, ಆ ಮಗು ಪಾರ್ವತಿ ದೇವಿಯ ಅವತಾರ ಎಂದು ನಂಬಲಾಗಿತ್ತು. ಆಕೆ ಚದುರಂಗದಾಟದಲ್ಲಿ ಪರಿಣಿತಳಾಗಿದ್ದಳು. ರಾಜರಾಜೇಶ್ವರಿ ಪ್ರಾಪ್ತ ವಯಸ್ಕಳಾದಾಗ ರಾಜನು ತನ್ನ ಮಗಳನ್ನು ಚದುರಂಗದಲ್ಲಿ ಸೋಲಿಸಿದವರಿಗೆ ವಿವಾಹ ಮಾಡಿಕೊಡುವುದಾಗಿ ಘೋಷಿಸಿದನು. ಶಿವನು ಸನ್ಯಾಸಿಯ ರೂಪದಲ್ಲಿ ಬಂದು ರಾಜ ಕುಮಾರಿಯನ್ನು ಸೋಲಿಸಿ, ಬಳಿಕ ತನ್ನ ನಿಜರೂಪವನ್ನು ತೋರಿಸಿ ಆಕೆಯನ್ನು ವಿವಾಹವಾದನು ಎಂಬ ಪ್ರತೀತಿ ಇದೆ. ಇಂದಿಗೂ ಈ ದೇವಸ್ಥಾನದ ಮಹಿಮೆಯಿಂದಲೇ ತಮಿಳುನಾಡಿನಲ್ಲಿ ಚೆಸ್ ಆಟ ಇಷ್ಟರ ಮಟ್ಟಿಗೆ ಬೆಳೆಯಲು ಕಾರಣವಾಗಿದೆ ಎಂಬುದು ಅಲ್ಲಿನ ಜನರ ನಂಬಿಕೆ.

▶▶ ಸುಪ್ರೀಂ ಅಂಗಳದಲ್ಲಿ ಪೂಜೆ ಹಕ್ಕಿನ ದಾವೆ ▶▶ ಅಂಜನಾದ್ರಿಗೆ ಹೆಚ್ಚುತ್ತಿದ್ದಾರೆ ಭಕ್ತರ ಸಂಖ್ಯೆ

ಅಂಜನಾದ್ರಿ ಹನುಮಪ್ಪನಿಗೆ ವಿವಾದಗಳ ಕಾಟ!

ಜಿಲ್ಲಾ ನೋಟ

ಶರಣಬಸವ ಹುಲಿಹೈದರ್

ಕೊಪ್ಪಳ: ಅಂಜನಾದ್ರಿ ಬೆಟ್ಟ! ಶ್ರೀರಾಮನ ಭಕ್ತ ಹನುಮಂತನ ಹುಟ್ಟಿದ ಸ್ಥಳವೇ ಅಂಜನಾದ್ರಿ. ಅಂದರೆ ಹನುಮಂತನ ತಾಯಿ ಅಂಜನಾದೇವಿ ನೆಲೆಸಿದ್ದ ಸ್ಥಳ. ಪೌರಾಣಿಕ ಪ್ರಸಿದ್ಧ ಈ ಸ್ಥಳ ಇರುವುದು ಕೊಪ್ಪಳ ಜಿಲ್ಲೆ ಗಂಗಾವತಿ ತಾಲೂಕು ಐತಿಹಾಸಿಕ ಪ್ರಸಿದ್ಧ ಆನೆಗೊಂದಿ ಸಮೀಪ. ವಿಶ್ವ ಪಾರಂಪರಿಕ ಪಟ್ಟಿಯಲ್ಲಿನ ಹಂಪಿ ಮತ್ತು ಅಂಜನಾದ್ರಿ ನಡುವೆ ತುಂಗಭದ್ರಾ ನದಿ ಹರಿಯುತ್ತದೆ. ಈ ಹಿನ್ನೆಲೆಯಲ್ಲಿ ಅಂಜನಾದ್ರಿ ಬೆಟ್ಟಕ್ಕೆ ಬರುವ ಭಕ್ತರು ಮತ್ತು ಪ್ರವಾಸಿಗರ ಸಂಖ್ಯೆ ದಿನದಿಂದ ದಿನಕ್ಕೆ ಗಣನೀಯವಾಗಿ ಏರಿಕೆ ಆಗುತ್ತಿದೆ.

ಪೂಜೆ ಹಕ್ಕು ಯಾರಿಗೆ?

ಸದ್ಯದ ವಿಷಯ ಇದಲ್ಲ. ಅಂಜನಾದ್ರಿ ಬೆಟ್ಟದ ಮೇಲಿನ ಪೂಜೆ ಹಕ್ಕು ಮತ್ತು ಇಲ್ಲಿನ ಆಡಳಿತ ಯಾರಿಗೆ ಸೇರಬೇಕು ಎಂಬ ವಿವಾದ ಸದ್ಯ ಸುಪ್ರೀಂ ಕೋರ್ಟ್ ಅಂಗಳದಲ್ಲಿದೆ. ಈ ಹಿನ್ನೆಲೆಯಲ್ಲಿ ಸದ್ಯ ಪೂಜೆ ಸೇರಿ ಇಲ್ಲಿನ ಆಡಳಿತದ ಸಂಪೂರ್ಣ ಹಕ್ಕು ತಮಗೆ ಸೇರಬೇಕು ಎಂದು ವಾದಿಸುತ್ತಿರುವ ಅರ್ಚಕ ವಿದ್ಯಾದಾಸ ಬಾಬಾ ಹಾಗೂ ಸರಕಾರ ನೇಮಕ ಮಾಡಿರುವ ಆಡಳಿತಾಧಿಕಾರಿ ಪ್ರಕಾಶ ರಾವ್ ನಡುವಿನ ಹಗ್ಗ ಜಗ್ಗಾಟ ಬರುವ ಭಕ್ತರಿಗೆ ಕಿರಿಕಿರಿ ಉಂಟು ಮಾಡುತ್ತಿದೆ. ಮತ್ತೊಂದೆಡೆ ಪ್ರಕಾಶರಾವ್ ಮಾಡಿದ ತಪ್ಪಿನಿಂದ ಇದೀಗ ಕೊಪ್ಪಳ ಜಿಲ್ಲಾಧಿಕಾರಿಗಳು ಸುಪ್ರೀಂ ಕೋರ್ಟ್‌ಗೆ ಉತ್ತರ ನೀಡುವ ಪರಿಸ್ಥಿತಿ ಬಂದಿದೆ.

ಏನಿದು ವಿವಾದ?

ರಾಮಾನಂದ್ ಸಂಪ್ರದಾಯದ ಲಾಲ್‌ದಾಸ, ಲಕಡದಾಸ್, ಭಗವಾನ್‌ದಾಸ್ ಸೇರಿ ನಾನಾ ಬಾಬಾಗಳು ಅಂಜನಾದ್ರಿ ಬೆಟ್ಟದಲ್ಲಿ ಪೂಜೆ ಮಾಡಿಕೊಂಡಿದ್ದರು.ಸದ್ಯ ಆಡಳಿತಾಧಿಕಾರಿ ಹಾಗೂ ಪೂಜೆ ಹಕ್ಕಿಗಾಗಿ ಸುಪ್ರೀಂ ಕೋರ್ಟ್ ಮೆಟ್ಟಿಲು ಏರಿರುವ ವಿದ್ಯಾದಾಸ ಬಾಬಾ ಕಳೆದ 2007ರಿಂದ ಅಂಜನಾದ್ರಿ ಬೆಟ್ಟದಲ್ಲಿ ಪೂಜಾ ಕಾರ್ಯ ಮಾಡಿಕೊಂಡಿದ್ದಾರೆ. ವಿದ್ಯಾದಾಸ ಬಾಬಾ ಪೂಜೆ ಹಕ್ಕು ಪಡೆದ ನಂತರ ಉತ್ತರ ಭಾರತ ಸೇರಿ ರಾಜ್ಯದಲ್ಲಿ ಕೂಡ ಅಂಜನಾದ್ರಿ ಬೆಟ್ಟದ ದೇವಸ್ಥಾನ ಮತ್ತು ಇಲ್ಲಿನ ನಿಸರ್ಗ ಸೌಂದರ್ಯದ ಬಗ್ಗೆ ಸಾಕಷ್ಟು ಮಾಧ್ಯಮದಲ್ಲಿ ಪ್ರಚಾರ ಆಯಿತು. ಇದರಿಂದಾಗಿಯೂ ಭಕ್ತರ ಸಂಖ್ಯೆ ದಿನದಿಂದ ದಿನಕ್ಕೆ ಏರಿಕೆ ಆಗುತ್ತಲೇ ಬಂದಿದೆ.

ಅಶ್ಲೀಲ ಫೋಟೊ ವೈರಲ್

ಈ ನಡುವೆ ವಿದ್ಯಾದಾಸ ಬಾಬಾ ಅವರದ್ದು ಎನ್ನಲಾದ ಕೆಲ ಅಶ್ಲೀಲ ಫೋಟೊಗಳು 2007ರಲ್ಲಿ ಸಾಮಾಜಕ ಜಾಲತಾಣದಲ್ಲಿ ವೈರಲ್ ಆಗಿದ್ದವು. ಕೊಪ್ಪಳ ಜಿಲ್ಲಾಡಳಿತ 2018ರಲ್ಲಿ ಅಂಜನಾದ್ರಿ ಬೆಟ್ಟವನ್ನು ಸರಕಾರದ ವಶಕ್ಕೆ ಪಡೆಯಿತು. ಜಿಲ್ಲಾಡಳಿತದ ಕ್ರಮ ವಿರೋಧಿಸಿ, ವಿದ್ಯಾದಾಸ ಬಾಬಾ ನೇರವಾಗಿ ಧಾರವಾಡ ಹೈಕೋರ್ಟ್ ಮೆಟ್ಟಿಲೇರಿದ್ದರು.

ಪೂಜೆಗೆ ಕೋರ್ಟ್ ಆದೇಶ

ಸುದೀರ್ಘ ವಿಚಾರಣೆ ನಡೆಸಿದ ಧಾರವಾಡ ಹೈಕೋರ್ಟ್ ಪೀಠ, ವಿದ್ಯಾದಾಸ ಬಾಬಾಗೆ ಪೂಜೆಗೆ ಅವಕಾಶ ನೀಡಬೇಕು. ಬಾಬಾಗೆ ಬೆಟ್ಟದ ಮೇಲೆ ವಾಸ್ತವ್ಯಕ್ಕೆ ಸುಸಜ್ಜಿತ ಕೊಠಡಿ ವ್ಯವಸ್ಥೆ ಮಾಡಬೇಕು ಎಂದು ಜಿಲ್ಲಾಡಳಿತಕ್ಕೆ ಸೂಚನೆ ನೀಡಿದೆ. ಆದರೆ, ಕೋರ್ಟ್ ಆದೇಶಕ್ಕೆ ಅಂಜನಾದ್ರಿ ಬೆಟ್ಟದ ಆಡಳಿತಾಧಿಕಾರಿ ಆಗಲಿ, ಜಿಲ್ಲಾಡಳಿತವಾಗಲಿ ಸ್ಪಂದಿಸಲಿಲ್ಲ. ನಂತರ ಬಾಬಾ ಸದ್ಯ ಸುಪ್ರೀಂ ಕೋರ್ಟ್‌ಗೆ ಮೊರೆ ಹೋಗಿದ್ದಾರೆ. ಧಾರವಾಡ ಹೈಕೋರ್ಟ್‌ನ ಆದೇಶವನ್ನು ಕೂಲಂಕಷವಾಗಿ ಪರಿಶೀಲಿಸಿದ್ದ ಸುಪ್ರೀಂ ಕೋರ್ಟ್, ವಿದ್ಯಾದಾಸ ಬಾಬಾ ಅವರಿಗೆ ಪೂಜೆ ಹಕ್ಕು ನೀಡಬೇಕು ಮತ್ತು ಅಂಜನಾದ್ರಿ ಬೆಟ್ಟದಲ್ಲಿ ಸುಸಜ್ಜಿತ ಕೊಠಡಿ ನೀಡಬೇಕೆಂದು ಕೊಪ್ಪಳ ಜಿಲ್ಲಾಡಳಿತಕ್ಕೆ ಸೂಚಿಸಿದೆ.

ಆದೇಶಕ್ಕಿಲ್ಲ ಕಿಮ್ಮತ್ತು

ಸುಪ್ರೀಂ ಕೋರ್ಟ್ ಆದೇಶವನ್ನು ಕೊಪ್ಪಳ ಜಿಲ್ಲಾಡಳಿತ ಮತ್ತು ಆಡಳಿತಾಧಿಕಾರಿ ಪ್ರಕಾಶರಾವ್ ಅವರು ತಮಗೆ ಇಷ್ಟಬಂದಂತೆ ಕೋರ್ಟ್ ಆದೇಶ ಅರ್ಥೈಸಿಕೊಂಡಿದ್ದಾರೆ. ಅಂಜನಾದ್ರಿ ಬೆಟ್ಟಕ್ಕೆ ಬಂದು ಪೂಜೆ ಹಕ್ಕು ಕೇಳಿದ ವಿದ್ಯಾದಾಸ ಬಾಬಾರಿಗೆ ದೇವಸ್ಥಾನದ ಆಡಳಿತಾಧಿಕಾರಿ, ಕೇವಲ ಪೂಜೆ ಮಾತ್ರ ಮಾಡಬೇಕು. ಯಾವುದೇ ಕಾರಣಕ್ಕೂ ಮಂಗಳಾರತಿ ಮಾಡುವಂತಿಲ್ಲ ಎಂದು ಸೂಚಿಸಿದ್ದಾರೆ. ದೇವಸ್ಥಾನದ ಮುಂದೆ ಆರತಿ ತಟ್ಟೆ ಇಡುವ ಜಾಗದಲ್ಲಿ ಮೂರು ಹುಂಡಿಗಳನ್ನು ಸಾಲಾಗಿ ಇಡಲಾಗಿತ್ತು. ಬರೋಬ್ಬರಿ 575 ಮೆಟ್ಟಿಲುಗಳನ್ನು ಭಕ್ತಿಯಿಂದ ಏರಿ ಬರುವ ಭಕ್ತರಿಗೆ ಮೂಲ ವಿಗ್ರಹದ ಮುಂದಿನ ದೃಶ್ಯ ಇರುಸು ಮುರುಸು ಉಂಟು ಮಾಡಿತ್ತು. ಬಂದ ಭಕ್ತರಿಗೆ ಮಂಗಳಾರತಿ ಸಿಗಲಿಲ್ಲ. ಬದಲಿಗೆ ಹನುಮಂತನ ಮೂರ್ತಿಗಿಂತ ದೊಡ್ಡ ಹುಂಡಿ ಕಂಡು ಭಕ್ತರು ಅರ್ಚಕರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ ಘಟನೆಗಳೂ ಜರುಗಿದವು.

ಕಿಷ್ಕಿಂಧ ಕಾಂಡದಲ್ಲಿ ಉಲ್ಲೇಖ

ಈ ಅಂಜನಾದ್ರಿ ಬೆಟ್ಟ ಪೌರಾಣಿಕ ಪ್ರಸಿದ್ಧ. ವಾಲ್ಮೀಕಿ ರಾಮಾಯಣದ ಕಿಷ್ಕಿಂಧ ಕಾಂಡ ಭಾಗದಲ್ಲಿ ಉಲ್ಲೇಖಿಸಿದ ಎಲ್ಲ ಪ್ರದೇಶಗಳು ಗಂಗಾವತಿ ತಾಲೂಕಿನ ಕಿಷ್ಕಿಂಧ ಪ್ರದೇಶಕ್ಕೆ ಹೋಲಿಕೆ ಆಗುತ್ತವೆ. ದೇಶದಲ್ಲಿ ಆಂಜನೇಯ ಹುಟ್ಟಿದ ಸ್ಥಳದ ಬಗ್ಗೆ ಸಾಕಷ್ಟು ಚರ್ಚೆಗಳು ಏನೇ ಇದ್ದರೂ ಭಕ್ತರು ಮಾತ್ರ ಗಂಗಾವತಿ ತಾಲೂಕಿನ ಅಂಜನಾದ್ರಿ ಬೆಟ್ಟವೇ ಹನುಮಂತನ ಜನ್ಮಸ್ಥಳ ಎಂದು ಬಲವಾಗಿ ನಂಬಿದ್ದಾರೆ. ಇಲ್ಲಿಗೆ ಬರುವ ಭಕ್ತರ ಸಂಖ್ಯೆಯೂ ಗಣನೀಯ ಏರಿಕೆ ಆಗುತ್ತಿದೆ. ಕಳೆದ 20 ವರ್ಷದ ಹಿಂದೆ ಉತ್ತರ ಭಾರತದ ಪ್ರವಾಸಿಗರು ಮಾತ್ರ ಅಂಜನಾದ್ರಿ ಬೆಟ್ಟಕ್ಕೆ ಬಂದು ಹೋಗುತ್ತಿದ್ದರು. ಆದರೆ, ಕಳೆದ 15 ವರ್ಷದಿಂದ ಅಂಜನಾದ್ರಿಗೆ ರಾಜ್ಯ ಸೇರಿ ನೆರೆ ರಾಜ್ಯದ ಭಕ್ತರ ಸಂಖ್ಯೆಯೂ ವ್ಯಾಪಕವಾಗಿ ಹೆಚ್ಚಿದೆ.

ಪರ್ಯಾಯ ಪೂಜೆ

ಹೊಸದಾಗಿ ಅಧಿಕಾರ ವಹಿಸಿಕೊಂಡ ಜಿಲ್ಲಾಧಿಕಾರಿ ಸುರೇಶ ಹಿಟ್ನಾಳ ಅವರು ಅಂಜನಾದ್ರಿ ಬೆಟ್ಟ ಏರಿ ಹನುಮಂತನ ದರ್ಶನ ಪಡೆಯಲು ಹೋಗಿದ್ದರು. ಈ ವೇಳೆ ಆಡಳಿತಾಧಿಕಾರಿ ವಿದ್ಯಾದಾಸ ಬಾಬಾ ಬದಲಿಗೆ ಬೇರೊಬ್ಬರು ಅರ್ಚಕರಿಂದ ಪೂಜೆ ಮಾಡಿಸಿದ್ದರು. ಇದೆಲ್ಲದರ ವಿಡಿಯೋ ದಾಖಲೆ ಯೊಂದಿಗೆ ವಿದ್ಯಾದಾಸ ಬಾಬಾ ಪರ ವಕೀಲರು ಸುಪ್ರೀಂ ಕೋರ್ಟ್ ಗಮನಕ್ಕೆ ತಂದಿದ್ದಾರೆ. ಇದ ರಿಂದ ಗರಂ ಆಗಿರುವ ದ್ವಿಸದಸ್ಯ ಪೀಠದ ನ್ಯಾಯ ಮೂರ್ತಿಗಳು ವಿಡಿಯೋ ಕಾಲ್‌ನಲ್ಲಿ ಸ್ವತಃ ಕೊಪ್ಪಳ ಜಿಲ್ಲಾಧಿಕಾರಿ ಕೋರ್ಟ್ ಮುಂದೆ ಹಾಜರಾಗಲು ಸೂಚಿಸಿದ್ದಾರೆ. ಏನಾಗುತ್ತೆ ಕಾದು ನೋಡಬೇಕಿದೆ.

ಬರೋಬ್ಬರಿ 75 ವರ್ಷವಾದರೂ ಬರಲಿಲ್ಲ ಹೊಸ ಕ್ರಸ್ಟ್ ಗೇಟ್

19ನೇ ಕ್ರಸ್ಟ್ ಗೇಟ್ ಕಿತ್ತು ಹೋದ ನಂತರ ಆಗಿದೆ ಎಚ್ಚರ

ಐವತ್ತು ವರ್ಷಕ್ಕೆ ಬದಲಾಗಬೇಕು ಕ್ರಸ್ಟ್ ಗೇಟ್



ಕೊಪ್ಪಳ: ರಾಜ್ಯದ ನಾಲ್ಕು ಜಿಲ್ಲೆ ಹಾಗೂ ಆಂಧ್ರ-ತೆಲಂಗಾಣ ರಾಜ್ಯಗಳ ರೈತರ ಜೀವನಾಡಿ ತುಂಗಭದ್ರ ಡ್ಯಾಂ ಲೋಕಾರ್ಪಣೆಗೊಂಡು ಬರೋಬ್ಬರಿ 75 ವರ್ಷ ಗತಿಸಿವೆ. ಕಳೆದ 1950ರಲ್ಲಿ ಲೋಕಾರ್ಪಣೆಗೊಂಡ ಜಲಾಶಯದ ಕ್ರಸ್ಟ್ ಗೇಟ್‌ಗಳನ್ನು ಮುಂದಿನ 50 ವರ್ಷಕ್ಕೆ ಬದಲಾಯಿಸಬೇಕಿತ್ತು. ಆದರೆ ಬರೋಬ್ಬರಿ 75 ವರ್ಷ ಕಳೆದರೂ ಕ್ರಸ್ಟ್ ಗೇಟ್ ಬದಲಾವಣೆ ಮಾಡುವ ಗೋಜಿಗೆ ಯಾವುದೇ ಸರಕಾರ ಹೋಗಲಿಲ್ಲ. ಇದರ ಫಲವಾಗಿಯೇ ಇದೀಗ 8ಕ್ಕೂ ಹೆಚ್ಚು ಗೇಟ್ ನಿಷ್ಕ್ರಿಯ ಸ್ಥಿತಿ ತಲುಪಿವೆ.

ಕಳೆದ ಬರೋಬ್ಬರಿ 25 ವರ್ಷದಿಂದಲೂ ತಜ್ಞರು ತುಂಗಭದ್ರ ಜಲಾಶಯದ ಎಲ್ಲ 33 ಕ್ರಸ್ಟ್ ಗೇಟ್ ಬದಲಾವಣೆಗೆ ಸಲಹೆ ನೀಡುತ್ತಾ ಬಂದಿದ್ದಾರೆ. ಆದರೆ ಯಾವೊಂದು ಸರಕಾರ ಕೂಡ ಇದನ್ನು ಗಂಭೀರವಾಗಿ ಪರಿಗಣಿಸಿರಲಿಲ್ಲ. ಆದರೆ ಕಳೆದ 2024ರ ಆ. 10ರಂದು ರಾತ್ರಿ ಡ್ಯಾಂನ 19ನೇ ಕ್ರಸ್ಟ್ ಗೇಟ್‌ನ ಚೈನ್‌ಲಿಂಕ್ ಕಳಚಿ, ಗೇಟ್ ಕಿತ್ತು ಹೋಗಿತ್ತು. ಇದರಿಂದ ಇಡೀ ಅಚ್ಚುಕಟ್ಟು ವ್ಯಾಪ್ತಿಯ ರೈತರಲ್ಲಿ ಆತಂಕ ಮನೆ ಮಾಡಿತ್ತು. ಆದರೆ ರಾಜ್ಯ ಸರಕಾರ ಯುದ್ಧೋಪಾದಿಯಲ್ಲಿ ಕಾರ್ಯಾಚರಣೆ ಮಾಡಿದ್ದರಿಂದ ಒಂದು ವಾರದಲ್ಲಿ ಸ್ಟಾಪ್‌ಲಾಗ್ ಗೇಟ್ ಅಳವಡಿಕೆ ಸಾಧ್ಯವಾಗಿತ್ತು. ಈ ವೇಳೆ ಡ್ಯಾಂಗೆ ಬಂದಿದ್ದ ಗೇಟ್ ಡಿಸೈನ್ ಬಗ್ಗೆ ಮಾಹಿತಿ ಹೊಂದಿದ್ದ ಕನ್ನಯ್ಯ ನಾಯ್ಡು, ಕೂಡಲೇ ಎಲ್ಲಾ ಗೇಟ್‌ಗಳ ಬದಲಾವಣೆ ಮಾಡುವಂತೆಯೂ ಸಲಹೆ ನೀಡಿದ್ದರು. ಆದರೆ ಕಿತ್ತು ಹೋಗಿರುವ 19ನೇ ಗೇಟ್‌ನ ಜಾಗದಲ್ಲಿನ ಸ್ಟಾಪ್ ಲಾಗ್ ಗೇಟ್ ಬದಲಾಯಿಸಲೂ ಈ ಬಾರಿ ಸಾಧ್ಯವಾಗಲಿಲ್ಲ, ಇದು ಸದ್ಯ ಕರ್ನಾಟಕದ ವಿರೋಧ ಪಕ್ಷಗಳಿಗೆ ಅಸ್ತ್ರವಾಗಿದೆ.

ತಡವಾದ ಗೇಟ್ ಬದಲಾವಣೆ

ಆಗಿನ ಮದ್ರಾಸ್ ಪ್ರೆಸಿಡೆನ್ಸಿ ಮತ್ತು ಅಖಂಡ ಆಂಧ್ರಪ್ರದೇಶ ರಾಜ್ಯಗಳ ಜಂಟಿ ಸಹ ಭಾಗಿತ್ವದಲ್ಲಿ ಈಗಿನ ಕೊಪ್ಪಳ-ವಿಜಯನಗರ ಜಿಲ್ಲೆಯ ನಡುವೆ ತುಂಗಭದ್ರಾ ಜಲಾಶಯ ನಿರ್ಮಾಣವಾಗಿದೆ. ಸ್ವಾತಂತ್ರ್ಯ ಪೂರ್ವದಲ್ಲೇ ನಿರ್ಮಾಣ ಕಾರ್ಯ ಆರಂಭಗೊಂಡು, ಸ್ವಾತಂತ್ರ್ಯ ನಂತರ ಮುಂದುವರೆದಿದೆ. ನಂತರ 1950ರಲ್ಲಿ ತುಂಗಭದ್ರಾ ಜಲಾಶಯದ ಲೋಕಾರ್ಪಣೆ ಆಗಿದೆ. ಡ್ಯಾಂ ಆರಂಭಕ್ಕೂ ಮೊದಲೇ ಅನೇಕ ಜಲಾಶಯಕ್ಕೆ ಕ್ರಸ್ಟ್ ಗೇಟ್ ನಿರ್ಮಾಣ ಮಾಡಿ ಕೊಟ್ಟಿದ್ದ ತುಂಗಭದ್ರ ಸ್ಟೀಲ್ ಪ್ರೊಡಕ್ಟ್ ಎಂಬ ಸರಕಾರಿ ಸ್ವಾಮ್ಯದ ಸಂಸ್ಥೆಯಲ್ಲೇ ತುಂಗಭದ್ರ ಡ್ಯಾಂನ 33 ಗೇಟ್ ನಿರ್ಮಿಸಿ, ಅಳವಡಿಕೆ ಮಾಡಲಾಗಿದೆ. ಡ್ಯಾಂ ಲೋಕಾರ್ಪಣೆಯ ನಂತರ 50 ವರ್ಷಕ್ಕೆ ಎಲ್ಲ ಗೇಟ್ ಬದಲಾವಣೆ ಆಗಬೇಕಿತ್ತು.

ಟೆಂಡರ್ ಪ್ರಕ್ರಿಯೆ

ತುಂಗಭದ್ರ ಜಲಾಶಯವು ಕರ್ನಾಟಕ, ಆಂಧ್ರ-ತೆಲಂಗಾಣ ಸೇರಿ ಒಟ್ಟು 15 ಲಕ್ಷ ಎಕರೆ ಜಮೀನಿಗೆ ತುಂಗಭದ್ರ ಜಲಾಶಯ ನೀರು ಒದಗಿಸುತ್ತದೆ. ಡ್ಯಾಂ ನಿರ್ವಹಣೆ ವೆಚ್ಚವನ್ನೂ ಮೂರು ರಾಜ್ಯಗಳೇ ಭರಿಸಬೇಕಿದೆ. ತಜ್ಞರ ಸಲಹೆಯಂತೆ ಎಲ್ಲಾ ಗೇಟ್ ಬದಲಾವಣೆಗೆ ಟಿಬಿ ಬೋರ್ಡ್ ಮುಂದಾಗಿದೆ. ಒಟ್ಟು 52 ಕೋಟಿ ರೂ ವೆಚ್ಚದಲ್ಲಿ 33 ಗೇಟ್ ನಿರ್ಮಾಣಕ್ಕೆ ಈಗಾಗಲೇ ಟೆಂಡರ್ ಕರೆಯಲಾಗಿದೆ.

ಬಿಜೆಪಿಗರು ಕೇವಲ ರಾಜಕಾರಣ ಮಾಡಲೆಂದು ಮಾತನಾಡುವುದು ಸರಿಯಲ್ಲ. ಕಳೆದ ಬಾರಿ ಫೆಬ್ರವರಿ ವರೆಗೆ ಡ್ಯಾಂನಲ್ಲಿ ನೀರಿತ್ತು. ರೈತರಿಗೆ ಎರಡೂ ಬೆಳೆಗೆ ನೀರು ಕೊಟ್ಟಿದ್ದೇವೆ. ನಂತರ ಕೇಂದ್ರದ ಒಟ್ಟು ಮೂರು ತಜ್ಞರ ತಂಡಗಳು ಡ್ಯಾಂಗೆ ಭೇಟಿ ನೀಡಿ ವರದಿ ಸಲ್ಲಿಸಿವೆ. ಇವೆಲ್ಲ ಟಿಬಿ ಬೋರ್ಡ್ ನಿರ್ದೇಶನದಂತೆಯೇ ನಡೆದಿವೆ. ಅಷ್ಟರಲ್ಲೇ ನಮ್ಮ ಸರಕಾರ 19ನೇ ಗೇಟ್‌ಗೆ ಹೊಸ ಗೇಟ್ ಅಳವಡಿಕೆಗೆ ಸಿದ್ಧವಾಗಿತ್ತು. ಅಷ್ಟರಲ್ಲೇ ಡ್ಯಾಂಗೆ ಮತ್ತೆ ಒಳ ಹರಿವು ಶುರು ಆಗಿದ್ದರಿಂದ ಗೇಟ್ ಅಳವಡಿಕೆ ಕಾರ್ಯ ಕೈ ಬಿಡಲಾಯಿತು. ನಿರೀಕ್ಷೆಯಂತೆ ಮತ್ತಷ್ಟು ಗೇಟ್‌ನಲ್ಲಿ ಸಮಸ್ಯೆ ಕಾಣಿಸಿಕೊಂಡಿದೆ. ಈಗಾಗಲೇ ಟೆಂಡರ್ ಆಗಿದ್ದು, ಶೀಘ್ರ ಕೆಲಸ ಶುರು ಆಗಲಿದೆ.

– **ಶಿವರಾಜ ತಂಗಡಗಿ,** ಸಚಿವ ಹಾಗೂ ನೀರಾವರಿ ಸಲಹಾ ಸಮಿತಿ ಅಧ್ಯಕ್ಷ

ಚಿತ್ರವಿಹಾರ

ಹೊರೆಯಾಗುವ ಮಾಹಿತಿಗಳು

• ಮಾಯಾ ಬಾಲಚಂದ್ರ

ವ್ಯಾವಹಾರಿಕ ಪ್ರಪಂಚದ ಮಾಹಿತಿಗಳನ್ನು ತಲೆಯಲ್ಲಿ ಹೇರಳವಾಗಿ ತುಂಬಿಕೊಳ್ಳುತ್ತ, ಅವುಗಳನ್ನು ಬಳಸುವುದು ಹೇಗೆಂದು ತಿಳಿಯದೆ, ತಪ್ಪು ತಪ್ಪಾಗಿ ಆ ಮಾಹಿತಿ, ಜ್ಞಾನಗಳನ್ನು ಬಳಸಿದರೆ ನಷ್ಟ ಕಟ್ಟಿಟ್ಟ ಬುತ್ತಿ. ಅಲ್ಲಿ ಆಗುವ ನಷ್ಟವು ಅರಿವಿಗೆ ಬಾರದೆ ಹೋಗುವುದೇ ಹೆಚ್ಚು.

ಬೀದಿಬದಿಯ ವ್ಯಾಪಾರಿಯೊಬ್ಬನಿಗೆ ಕಿವಿ ಸರಿಯಾಗಿ ಕೇಳುತ್ತಿರಲಿಲ್ಲ. ಹಾಗಾಗಿ ರೇಡಿಯೋ ಮುಂತಾದ ಕಡೆಗಳಿಂದ ಯಾವ ವಿಚಾರಗಳೂ ತಿಳಿಯುತ್ತಿರಲಿಲ್ಲ. ಕಣ್ಣು ಸ್ಪಷ್ಟವಾಗಿ ಕಾಣಿಸದ ಕಾರಣ ದೂರದರ್ಶನ ದೂರವೇ ಉಳಿದಿತ್ತು. ಕಣ್ಣು ಕಾಣದೆ, ಅನಕ್ಷರಸ್ಥನೂ ಆಗಿದ್ದ ಆತನಿಗೆ ವೃತ್ತ ಪತ್ರಿಕೆಯಂತೂ ಬಹು ದೂರವಾಗಿತ್ತು. ಆದರೂ ಆತನನ್ನು ವ್ಯಾಪಾರದಲ್ಲಿ ಮೀರಿಸುವ ವ್ಯಾಪಾರಿಗಳು ಸುತ್ತಮುತ್ತಲ ಹಲವು ಊರುಗಳಲ್ಲಿ ಇರಲಿಲ್ಲ. ಬೇರೆ ವ್ಯಾಪಾರಿಗಳು ವಿಸ್ಮಿತರಾಗುವಂತೆ ಈತನ ವ್ಯವಹಾರ ದಿನೇ ದಿನೇ ವೃದ್ಧಿಸುತ್ತಾ ಹೋಯಿತು.

ಇದೇ ಸಮಯದಲ್ಲಿ ಮಗನಿಗೆ ಶಿಕ್ಷಣ ಕೊಡಿಸುತ್ತಾ ಬಂದ. ಮಗ ಕಾಲೇಜು ಶಿಕ್ಷಣ ಮುಗಿಸಿ, ತಂದೆಯ ವ್ಯವಹಾರಕ್ಕೆ ಕೈಜೋಡಿಸಿದ. ಮಗ ಮಾರುಕಟ್ಟೆಯ ಪ್ರತಿ ಹಂತದ ಮಾಹಿತಿಯನ್ನು ಎಲ್ಲ ಮೂಲಗಳಿಂದ ನಿಖರವಾಗಿ ಸಂಗ್ರಹಿಸುತ್ತಿದ್ದ. ಈತ ಒಮ್ಮೆ ತಂದೆಗೆ "ಅಪ್ಪಾ, ಸದ್ಯದಲ್ಲಿಯೇ ಮಾರುಕಟ್ಟೆ ಕುಸಿದು, ವ್ಯಾಪಾರ ಕುಂಠಿತವಾಗುವ ಸಂಭವ ಇದೆ. ಅಂತಾರಾಷ್ಟ್ರೀಯ ಮಾರುಕಟ್ಟೆ ಸಮಸ್ಯೆಗೆ ಈಡಾಗಿ, ನಮ್ಮ ದೇಶದ ವ್ಯಾಪಾರ ವಹಿವಾಟು ಇನ್ನಷ್ಟು ಗಂಭೀರ ಸಮಸ್ಯೆಯನ್ನು ಎದುರಿಸಲಿದೆ. ಇದನ್ನೆಲ್ಲ ಎದುರಿಸಬೇಕಾದರೆ ನಾವು ಈಗಿನಿಂದಲೇ ಸನ್ನದ್ಧರಾಗಬೇಕು" ಎಂದು ಎಚ್ಚರಿಸಿದ. ನಗರದ ದೊಡ್ಡ ಶಿಕ್ಷಣ ಸಂಸ್ಥೆಯಲ್ಲಿ ಕಲಿತು ಬಂದ ಮಗನ ಮಾತುಗಳನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿದ ತಂದೆ, ಉತ್ಪಾದನಾ ಘಟಕಗಳಿಗೆ ತಾನು ಸಲ್ಲಿಸುತ್ತಿದ್ದ ಬೇಡಿಕೆಯನ್ನು ಕಡಿಮೆ ಮಾಡಿದ. ಅಂಗಡಿಯಲ್ಲಿ ದಾಸ್ತಾನು ಕಡಿಮೆ ಯಾಯಿತು. ಬೇಡಿಕೆ ಪೂರೈಸಲು ವಿಫಲರಾಗಿದ್ದಾರೆ ಎಂಬ ಕಾರಣಕ್ಕೆ ಗಿರಾಕಿಗಳು ಬೇರೆ ಅಂಗಡಿಗಳ ದಾರಿ ಹಿಡಿದರು. ಕ್ರಮೇಣ ವ್ಯವಹಾರ ಕುಂದುತ್ತಿರುವುದನ್ನು ಗಮನಿಸಿದ ವ್ಯಾಪಾರಿಯ ಆತಂಕ ಹೆಚ್ಚಾಯಿತು. ಅಂತಹ ಸಂದಿಗ್ಧ ಸ್ಥಿತಿಯಲ್ಲಿ "ಮಗನೇ ನೀನು ಹೇಳಿದ್ದು ನಿಜ. ಮಾರುಕಟ್ಟೆ ಪರಿಸ್ಥಿತಿ ಬಿಗಡಾಯಿಸಿದೆ. ವಹಿವಾಟಿನ ಕುಸಿತ ಈಗಾಗಲೇ ಆರಂಭವಾಗಿದೆ. ನೀನು ನನ್ನನ್ನು ಮೊದಲೇ ಎಚ್ಚರಿಸಿದ್ದು ಒಳ್ಳೆಯದೇ ಆಯಿತು. ನಿನ್ನ ಸೂಚನೆಯಂತೆ ಮುಂಜಾಗ್ರತೆ ವಹಿಸಿದ್ದರಿಂದ ನಮ್ಮ ವ್ಯವಹಾರ ಉಳಿದಿದೆ" ಎಂದು ತನ್ನ ಮಗನನ್ನು ಪ್ರಶಂಸಿಸಿದ. ಇಂತಹ ಯಾವುದೇ ಮಾಹಿತಿಯೂ ಇಲ್ಲದ ವ್ಯಾಪಾರಿಗಳ ವಹಿವಾಟಿನಲ್ಲಿ ಯಾವುದೇ ವ್ಯತ್ಯಾಸ ಆಗಿರಲಿಲ್ಲ. ಸಂಗ್ರಹಿತ ಮಾಹಿತಿಗಳನ್ನು ಸರಿಯಾಗಿ ಬಳಸಿದರೆ ಮಾತ್ರ ಅಭಿವೃದ್ಧಿ. ಇಲ್ಲವೆಂದರೆ ಮಾಹಿತಿಗಳೇ ಹೊರೆಯಾಗಿ, ಅದಃಪತನದ ಸಾಧ್ಯತೆಯೇ ಹೆಚ್ಚಾಗುತ್ತದೆ.

ಹನಿ ಮಳೆ

ಮಳೆಗಾಲದಲ್ಲೂ ಬೇಗೆ!

ಸುರಿದಿದೆ ಮಳೆ ಎಲ್ಲೆಡೆ ನಿರಂತರ
ಬೆದರಿಬಿಟ್ಟಿದೆ ಭೂಸ್ವರ್ಗ ಕಾಶ್ಮೀರ
ಮೇಘ ಗುಡುಗುಗಳ ತಾಳಮದ್ದಲೆಗೆ
ಮಳೆಗಾಲದಲ್ಲೂ ಎದ್ದಿದೆ ಬಿಸಿ ಬೇಗೆ!

• ಶಿಶಿರ್ ಮುದೂರಿ

ತಬಲಾ ವಾದನದಲ್ಲಿ ಅಪೂರ್ವ ಸಾಧನೆ

• ಶ್ರೀನಿವಾಸ ಪ್ರಭು

ನಮ್ಮ ನಾಡಿನ ಸುಪ್ರಸಿದ್ಧ ಲಯವಾದ್ಯ ನಿಷ್ಣಾತರಂದರೆ ಪಂಡಿತ್ ಡಾ|| ಸತೀಶ್ ಹಂಪಿಹೊಳಿ ಅವರಿಗೆ ಈಗ ಅರವತ್ತು ವರ್ಷ! ಲಯವಾದ್ಯದಲ್ಲಿ ನೂರಾರು ನಡೆಗಳನ್ನು ಸುಲಲಿತವಾಗಿ ಲೀಲಾಜಾಲವಾಗಿ ನುಡಿಸಿ ಬೆರಗುಗೊಳಿಸುವ ಡಾ|| ಸತೀಶ್ ಹಂಪಿಹೊಳಿ ಅವರ ವೈಯುಕ್ತಿಕ ಬದುಕಿನಲ್ಲಿ ಈ ಒಂದು ಮಹತ್ವದ ನಡೆ ಅದೇ "60ರ ನಡೆ" ಅಂತೆಯೇ ಅವರ ವೃತ್ತಿ ಬದುಕಿನಲ್ಲಿಯೂ ಸಾರ್ಥಕ "40ರ ನಡೆ", ಜುಲೈ 28ರಂದು 60 ವಸಂತಗಳನ್ನು ಅರ್ಥಪೂರ್ಣವಾಗಿ ಮುಗಿಸಿ ಹೊಸ ಹುರುಪು, ಉತ್ಸಾಹ, ಚೈತನ್ಯದೊಂದಿಗೆ ಹೊಸ ಕನಸುಗಳೊಂದಿಗೆ ಮುಂದೆ ಸಾಗುತ್ತಿದ್ದಾರೆ ಡಾ|| ಸತೀಶ್ ಹಂಪಿಹೊಳಿ.

ರೈಲ್ವೆ ಅಧಿಕಾರಿಯಾಗಿದ್ದ ದತ್ತಾತ್ರೇಯ ಹಂಪಿಹೊಳಿ ಹಾಗೂ ಸರಸ್ವತಿ ಬಾಯಿ ಹಂಪಿ ಹೊಳಿ ದಂಪತಿಗಳ ಮೂರನೆಯ ಸುಪುತ್ರ ಸತೀಶ್ ಹಂಪಿಹೊಳಿ. ಹುಬ್ಬಳ್ಳಿಯ ಚಿಟಗುಬ್ಬಿಯಲ್ಲಿ 28 ಜುಲೈ 1965 ರಲ್ಲಿ ಜನನ. ಎಂಟನೇ ವಯಸ್ಸಿನಲ್ಲಿಯೇ ಶಾರದಾ ಕಲಾನಿಕೇತನದಲ್ಲಿ ಮೂಲತಃ ಹಿಂದೂಸ್ತಾನಿ ಗಾಯಕರಾಗಿದ್ದ ಪಂಡಿತ್ ಎಂ. ಎನ್. ಕಸ್ತೂರಿ ಅವರಲ್ಲಿ ಪ್ರಾಥಮಿಕ ತಬಲಾ ಶಿಕ್ಷಣವನ್ನು ಸತೀಶ್ ಆರಂಭಿಸಿದರು. ತಬಲವಾದನದಲ್ಲಿ ಸತೀಶ್ ಅವರಿಗಿದ್ದ ಆಸಕ್ತಿಯನ್ನು ಗುರುತಿಸಿದ ಕಸ್ತೂರಿ ಅವರು, ತಬಲಾ ಶಿಕ್ಷಣ ಮುಂದುವರಿಸಲು ಸೂಚಿಸಿದರು. ಹಾಗೆ ನೋಡಿದರೆ ಈ ತಬಲವಾದ್ಯದಲ್ಲಿನ ಆಸಕ್ತಿ ಸತೀಶ್ ಅವರಿಗೆ ರಕ್ತಗತವಾಗಿಯೇ ಬಂದಿರುವಂಥದ್ದು. ಇವರ ತಾತ ರಾಮಪ್ಪಯ್ಯ ಇನಾಮ್ದಾರ್ ಅವರು ಸಹ ತಬಲ ವಾದಕರಾಗಿದ್ದರಂತೆ.

ಮುಂದೆ ಕಾಲೇಜ್‌ನಲ್ಲಿ ವ್ಯಾಸಂಗ ಮಾಡುತ್ತಿದ್ದಾಗಲೇ ಅಣ್ಣ ಅರುಣ್ ಹಂಪಿಹೊಳಿ ಅವರು, ಪಂಡಿತ್ ಬಸವರಾಜ್ ಬೆಂಡಿಗೇರಿ ಅವರ ಬಳಿ ಸತೀಶ್ ಅವರನ್ನು ತಬಲಾ ಶಿಕ್ಷಣಕ್ಕಾಗಿ ಸೇರಿಸಿದರು. ಪ್ರತಿದಿನ ಕಾಲೇಜ್‌ನಲ್ಲಿ ತರಗತಿಗಳನ್ನು ಮುಗಿಸಿಕೊಂಡು, ಸೈಕಲ್ ನಿಲ್ಲಿಸಿ ರೈಲು ಹತ್ತಿ 45 ನಿಮಿಷ ಪ್ರಯಾಣ ಮಾಡಿ ಧಾರವಾಡಕ್ಕೆ ಬಂದು ಅಲ್ಲಿ 15 ನಿಮಿಷದ ಕಾಲು ನಡಿಗೆಯ ಹಾದಿ ಸವೆಸಿ ಗುರುಗಳಾದ ಬೆಂಡಿಗೇರಿಯವರ ನಿವಾಸ ತಲುಪುತ್ತಿದ್ದರು, ಸತೀಶ್!

ಶೇಷಾದ್ರಿ, ಗವಾಯಿಯವರ ಆಶೀರ್ವಾದ

1986ರಲ್ಲಿ ಕುಂದಗೋಳದ ಕಾರ್ಯಕ್ರಮಕ್ಕೆ ಬೆಂಗಳೂರಿನ ಶೇಷಾದ್ರಿ, ಗವಾಯಿ ಅವರು ಆಗಮಿಸಿದ್ದರು. ಸತೀಶ್ ಅವರ ಚುರುಕುತನ ಗಮನಿಸಿದ ಗವಾಯಿಗಳು, ಸತೀಶ್ ಅವರಿಗೆ ಬೆಂಗಳೂರಿಗೆ ಬರಲು ಆಹ್ವಾನ ನೀಡಿದರು. 1986 ರಲ್ಲಿ ತಮ್ಮ ತಬಲಾದ ಜತೆ, ರಾಜಧಾನಿಗೆ ಬಂದಿಳಿದೇ ಬಿಟ್ಟರು ಸತೀಶ್ ಹಂಪಿಹೊಳಿ. ಗವಾಯಿಗಳು, ತಮ್ಮ ಅರವಿಂದ ಸಂಗೀತ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ತಬಲಾ ಸಾಥ್ ನೀಡಲು ಸತೀಶ್ ಅವರನ್ನು ನಿಯೋಜಿಸಿದ್ದರು. ಗವಾಯಿಗಳ ಮೂಲಕವೇ ಅವರ ಶಿಷ್ಯ ಜಿ. ವಿ. ಅತ್ರಿಯವರ ಹಾಗೂ ನಾಡಿನ ಹೆಸರಾಂತ ಗಾಯಕಿ ಉಭಯಗಾನ ವಿದುಷಿ ಶ್ಯಾಮಲಾ ಭಾವೆಯವರ ಪರಿಚಯವಾಯಿತು. ಶ್ಯಾಮಲಾ ಭಾವೆಯವರು ತಮ್ಮ ಸರಸ್ವತಿ ಸಂಗೀತ ವಿದ್ಯಾಲಯದಲ್ಲಿ ತಬಲಾ ಮಾರ್ಗದರ್ಶಕರಾಗಿ ಕೆಲಸ ಮಾಡಲು ಅವಕಾಶವನ್ನು ನೀಡಿದರು.

ಮುಂದಿನ ದಿನಗಳಲ್ಲಿ ನಾಡಿನ ಹಲವು ಪ್ರಖ್ಯಾತ ಸಂಗೀತಗಾರರಿಗೆ ತಬಲಾ ಸಾಥ್ ನೀಡಿದ ಗೌರವಕ್ಕೆ ಸತೀಶ್ ಹಂಪಿಹೊಳಿ ಪಾತ್ರರಾದರು. ಭಾರತದ ಉಪರಾಷ್ಟ್ರಪತಿಗಳಾಗಿದ್ದ ಬಿ. ಡಿ. ಜತ್ತಿ ಅವರಿಗೂ ಸತೀಶ್ ಅವರು ತಬಲಾ ಪಾಠ ಮಾಡಿದ್ದಾರೆ ಎಂಬುದು ಮರೆಯಲಾಗದ ಸ್ವಾರಸ್ಯಕರ ಸಂಗತಿ!

ಸದ್ಗುರು ಸಂಗೀತ ವಿದ್ಯಾಲಯ

1994 ರಲ್ಲಿ 'ಸದ್ಗುರು ಸಂಗೀತ ವಿದ್ಯಾಲಯ'ವನ್ನು ಸ್ಥಾಪಿಸಿ ತನ್ಮೂಲಕ ಕಾರ್ಯಕ್ರಮಗಳನ್ನು ಆಯೋಜಿಸತೊಡಗಿದರು. ಜಿ. ವಿ ಅತ್ರಿ ಅವರ ಸಂಗೀತ ಶಾಲೆಯಲ್ಲೂ ತಬಲಾ ಶಿಕ್ಷಣ ನೀಡುತ್ತಿದ್ದರಲ್ಲದೆ "ಮನೆಮನೆಗೂ ಸಂಗೀತ" ಮುಟ್ಟಿಸುವ ವಿಶೇಷ ಪರಿಕಲ್ಪನೆಯ ಸಂಗೀತ ಕಾರ್ಯಕ್ರಮಗಳಲ್ಲೂ ತಬಲಾ ಸಾಥಿ ನೀಡುತ್ತಿದ್ದರು.

1997ರಲ್ಲಿ ಶ್ಯಾಮಲಾ ಭಾವೆ ಅವರು ಸಂಗೀತ ನೃತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ಸತೀಶ್ ಅವರಿಗೆ ಸಂಗೀತ ನೃತ್ಯ ಅಕಾಡೆಮಿಯ ಸದಸ್ಯರಾಗಿ ಕಾರ್ಯ ನಿರ್ವಹಿಸುವ ಸದವಕಾಶ ದೊರಕಿತು. ಇಲ್ಲಿಯವರೆಗೆ ನಾಡಿನ ಹೆಸರಾಂತ ಕಲಾವಿದರೊಂದಿಗೆ 18 ಬಾರಿ ಅಮೆರಿಕ ಪ್ರವಾಸ ಮಾಡಿರುವ ಸತೀಶ್ ಹಂಪಿಹೊಳಿ ಅವರು ತಮ್ಮ ಸಭ್ಯತೆ, ಸೌಜನ್ಯತೆಗಳಿಂದ ಎಲ್ಲರ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಿದ್ದಾರೆ.

ತಬಲಾ ನಾದ ಸಾಧಕ, ರಂಗಕಲಾ ಶ್ರೀ, ಗಾನಭಾರತಿ ಸಂಗೀತ ಸೇವಾ ಪುರಸ್ಕಾರ, ನಾದೋಪಾಸಕ, ಸಂಗೀತ ಧಾಮ ಕೌಸ್ತುಭ, ಚಾಲುಕ್ಯ ನಾದ ಸೌರಭ, ಕಲಾದೇಗುಲ, ಲಯ ಸಂಸ್ಕಾರ, ಕಲಾತಪಸ್ವಿ, ಪಂಚಾಕ್ಷರಿ ಕೃಪಾಭೂಷಣ ಸಂಗೀತ ಕಲಾರವಿಂದ ಮೊದಲಾದ ಅನೇಕ ಪ್ರಶಸ್ತಿ ಪುರಸ್ಕಾರಗಳು ಇವರ ಮುಡಿಯನ್ನು ಅಲಂಕರಿಸಿ ತಮ್ಮ ಘನತೆಯನ್ನು ಹೆಚ್ಚಿಸಿಕೊಂಡಿವೆ. 2023-24ನೇ ಸಾಲಿನ "ಕರ್ನಾಟಕ ಕಲಾಶ್ರೀ" ಪ್ರಶಸ್ತಿ ಇವರ ಸಾಧನೆಗೆ ಸಂದ ಗೌರವ. "ಇವು ನನ್ನ ಜವಾಬ್ದಾರಿಯನ್ನು ಹೆಚ್ಚಿಸಿದೆ ಇನ್ನಷ್ಟು ಉತ್ಸಾಹದಿಂದ ಕೆಲಸದಲ್ಲಿ ತೊಡಗಿಕೊಳ್ಳಲು ಪ್ರೇರಣೆ ನೀಡುತ್ತಿವೆ" ಎಂದು ಸತೀಶ್ ಜೀ ನಮ್ರವಾಗಿ ನುಡಿಯುತ್ತಾರೆ. ಅವರ 60 ವರ್ಷಗಳ ಮಹತ್ವಪೂರ್ಣ ವೈಯುಕ್ತಿಕ ಬದುಕು 40 ವರ್ಷಗಳ ವೃತ್ತಿ ಬದುಕು ಸಾರ್ಥಕತೆಯಿಂದ ಕಂಗೊಳಿಸುತ್ತಿದೆ. ಇವರ ಯಶೋಯಾನ ಹೀಗೆ ಇನ್ನಷ್ಟು ಹುರುಪುಗಟ್ಟಿಕೊಂಡು ಮುಂದುವರೆಯ, ಸಾಂಸ್ಕೃತಿಕ ಲೋಕದಲ್ಲಿ ಮತ್ತಷ್ಟು ದಾಖಲೆಗಳು ಸ್ಥಾಪಿತವಾಗಲಿ ಎಂಬುದು ಕಲಾಸಕ್ತರ ಆಶಯ.

ಒಂಟಿಕಲ್ಲು ಬಸವಣ್ಣ!



• ಶಿವಯೋಗಿ ಎಂ ವಿ ರಾಂಪುರ

ಚಿತ್ರದುರ್ಗ ಕೋಟೆಯ ಅಂಗಳದಲ್ಲಿ ಇತಿಹಾಸದ ಹೆಮ್ಮೆಯ ನೆನಪುಗಳನ್ನು ಹೊತ್ತಿರುವ ಅದೆಷ್ಟೋ ಸ್ಮಾರಕಗಳು ಇವೆ. ಅವುಗಳ ಮಧ್ಯೆ ಒಂಟಿಕಲ್ಲು ಬಸವಣ್ಣ ದೇವಸ್ಥಾನವು ನೋಡುಗರ ಗಮನ ಸೆಳೆಯುತ್ತದೆ. ನಾಗರ ಹಾವು ಚಲನಚಿತ್ರದಲ್ಲೂ ಇದನ್ನು ಚಿತ್ರೀಕರಿಸಲಾಗಿದ್ದು, ಆ ದೃಶ್ಯವು ಜನಪ್ರಿಯತೆ ಗಳಿಸಿದೆ.

ಹಿಂದೆ ಈ ದೇವಾಲಯವನ್ನು ತಲುಪಲು 'ಗಾರೆ ಬಾಗಿಲು' ಮೂಲಕವೇ ಹೋಗಬೇಕಾಗುತ್ತಿತ್ತು. ಆದರೆ 1980ರ ದಶಕದ ನಂತರ ಗಾರೆ ಬಾಗಿಲಿನ ಪ್ರವೇಶವನ್ನು ನಿಲ್ಲಿಸಿದ ಕಾರಣ, ಈಗ 'ಕಾಮನ ಬಾಗಿಲಿ'ನಿಂದ ಕೋಟೆಯೊಳಗೆ ಪ್ರವೇಶಿಸಿ, ನಂತರ ಗಂಟೆ ಬಾಗಿಲು ದಾಟಿ, ಬಲಬದಿಯ ಬಸವನ ಬುರುಜು ಕಡೆ ಸಾಗಿದರೆ ಅಲ್ಪ ದೂರದಲ್ಲೇ ಒಂಟಿಕಲ್ಲು ಬಸವಣ್ಣ ದೇವಾಲಯ ಕಾಣಿಸುತ್ತದೆ. ಈ ದೇವಾಲಯವನ್ನು 17-18ನೇ ಶತಮಾನದಲ್ಲಿ ಪಾಳೇಗಾರರ ಕಾಲದಲ್ಲಿ ಪೂರ್ವಾಭಿಮುಖವಾಗಿ ನಿರ್ಮಿಸಲಾಗಿದೆ. ಇತಿಹಾಸಕಾರರ ಪ್ರಕಾರ, ಇದರ ನಿರ್ಮಾಣ ಭರಮಣ್ಣ ನಾಯಕರ ಕಾಲದಲ್ಲಿ ನಡೆದಿದೆ. ದೇವಸ್ಥಾನದ ವೈಶಿಷ್ಟ್ಯವೆಂದರೆ ಎತ್ತರದ ಭಾಗದಲ್ಲಿ ನಿರ್ಮಿಸಲಾಗಿರುವ ಚಿಕ್ಕ ಗುಡಿಯಲ್ಲಿ ಪ್ರತಿಷ್ಠಾಪಿಸಲ್ಪಟ್ಟಿರುವ ಪುಟ್ಟದಾದ ನಂದಿ. ಇದರ ಮುಂಭಾಗದಲ್ಲೇ ಚೊಕ್ಕದಾದ ದೀಪಸ್ತಂಭವಿದೆ. ಈ ಪುಟ್ಟ ಮಂಟಪದ ಸುತ್ತಮುತ್ತಲೂ ಹರಡಿರುವ ಬೆಟ್ಟ ಮತ್ತು ಅದರ ಮೇಲಿರುವ ಕಲ್ಲಿನ ವಿನ್ಯಾಸಗಳು ಮನ ಸೆಳೆಯುತ್ತವೆ.

ಈ ಜಾಗದಿಂದ ಕೋಟೆಯ ಒಳ ಆವರಣ, ಜೋಗಿಮಟ್ಟಿ ಗಿರಿಸಾಲು ಹಾಗೂ ಇಡೀ ಚಿತ್ರದುರ್ಗ ನಗರವು ಸುಂದರ ದೃಶ್ಯವಾಗಿ ಕಣ್ಮುಂದೆ ತೆರೆದುಕೊಳ್ಳುತ್ತದೆ. ಬೆಳಗಿನ ಸೂರ್ಯೋದಯವಾಗಲಿ, ಸಂಜೆ ಸೂರ್ಯಾಸ್ತವಾಗಲಿ, ಈ ತಾಣದಿಂದ ಕಾಣುವ ನೋಟ ಪ್ರವಾಸಿಗರ ಮನಸನ್ನು ಸೆಳೆಯುತ್ತದೆ. ಚಿತ್ರದುರ್ಗದಲ್ಲಿ ಸೂರ್ಯೋದಯವನ್ನು ನೋಡಿ, ಉಲ್ಲಾಸ ಪಡೆಯಬೇಕಾದರೆ ಇದು ಪ್ರಶಸ್ತ ತಾಣ.

ಈ ದೇವಾಲಯವನ್ನು ಜನಪ್ರಿಯಗೊಳಿಸಿದ ಮತ್ತೊಂದು ಅಂಶವೆಂದರೆ 'ನಾಗರಹಾವು' ಚಿತ್ರದ ದೃಶ್ಯಗಳು. ನಾಗರಹಾವು ಸಿನಿಮಾದಲ್ಲಿ ವಿಷ್ಣುವರ್ಧನ್ ಅಭಿನಯದ ಪ್ರಮುಖ ಸನ್ನಿವೇಶಗಳು ಇಲ್ಲೇ ಚಿತ್ರೀಕರಿಸಲ್ಪಟ್ಟಿವೆ. ಆ ದೃಶ್ಯಗಳ ಮೂಲಕ ಕೋಟೆಯ ಸೊಬಗು ಕನ್ನಡಿಗರ ಮನಗಳಲ್ಲಿ ಶಾಶ್ವತವಾಗಿ ಅಚ್ಚುಮೆಚ್ಚಾಗಿದೆ. ಇಂದು ಕೋಟೆಗೆ ಭೇಟಿ ನೀಡುವ ಸಾವಿರಾರು ಪ್ರವಾಸಿಗರು ಒಂಟಿಕಲ್ಲು ಬಸವಣ್ಣ ದೇವಾಲಯವನ್ನೂ ನೋಡುವುದನ್ನು ಮರೆಯುವುದಿಲ್ಲ. ಇದು ಕೇವಲ ಧಾರ್ಮಿಕ ತಾಣವಲ್ಲ, ಇತಿಹಾಸ, ವಾಸ್ತುಶಿಲ್ಪ ಮತ್ತು ಪ್ರಕೃತಿ ಸೌಂದರ್ಯದ ಸಂಯೋಜನೆಯಾದ ಒಂದು ಅಮೂಲ್ಯ ಸಾಂಸ್ಕೃತಿಕ ಸಂಪತ್ತು.

ಹೊಸ ಪ್ರಸಂಗ ಆದಿನಾರಾಯಣ ದರ್ಶನ

• ವಿನಾಯಕ ಒಣಿವಿಘ್ನೇಶ್ವರ

ಪೌರಾಣಿಕ ಕಥೆಗಳು ಹೊಸ ಪ್ರಸಂಗವಾಗಿ ಬಂದಾಗ ಅದು ಸ್ವಾಭಾವಿಕವಾಗಿಯೇ ಯಕ್ಷಗಾನ ಚೌಕಟ್ಟಿನಲ್ಲಿ ಬಂದು ಬಿಡುತ್ತವೆ. ಪೌರಾಣಿಕ ಕಥೆಗಳ ಶಕ್ತಿ, ವ್ಯಾಪ್ತಿಯೇ ಅಂಥದ್ದು. ಅಂತಹ ಹೊಸ ಪ್ರಸಂಗಗಳಿಗೆ ಒಂದು ಹೊಸ ಸೇರ್ಪಡೆ, ಕವಿ ಶ್ರೀಧರ ಡಿ ಎಸ್ ಅವರ 'ಆದಿನಾರಾಯಣ ದರ್ಶನ' ಪ್ರಸಂಗ.

ಬೆಂಗಳೂರಿನ ಯಕ್ಷ ಕಲಾ ಅಕಾಡೆಮಿ ಸಹಯೋಗದಲ್ಲಿ ಸ್ವಾತಂತ್ರ್ಯೋತ್ಸವದ ದಿನ ಈ ಪ್ರಸಂಗದ ಮೊದಲ 'ತಾಳ ಮದ್ದಳೆ' ಪ್ರಯೋಗ ಮೂಡಿಬಂತು. ಶುದ್ಧ ಪೌರಾಣಿಕ ಕಥೆಯಾದ್ದರಿಂದ ಯಕ್ಷಗಾನಕ್ಕೆ ಉತ್ತಮವಾಗಿ ಹೊಂದಿಕೆಯಾಗಿದೆ.

ಈ ಪೌರಾಣಿಕ ಕಥೆಯ ಸಾರಾಂಶವನ್ನು ನೋಡೋಣ. ಮಹಾಭಾರತ ಯುದ್ಧಾನಂತರ ದ್ವಾರಕೆಯಲ್ಲಿ ಅಶ್ವಮೇಧ ಯಾಗ. ಕೃಷ್ಣ ಯಾಗ ದೀಕ್ಷಿತ. ಬಲರಾಮ ವ್ಯವಸ್ಥಾಪಕ. ಅರ್ಜುನನೂ ಕಾರ್ಯಕ್ರಮಕ್ಕೆ ಬಂದಿರುತ್ತಾನೆ. ಈ ಸಂದರ್ಭದಲ್ಲಿ, ಸುಶರ್ಮ ಎಂಬಾತ, ಕ್ಷತ್ರಿಯರನ್ನು ಮೂದಲಿಸುತ್ತಾ ಓಡಾಡುತ್ತಿರುತ್ತಾನೆ. ಬಲರಾಮ ಅವನನ್ನು ಕರೆಸಿ ಕಾರಣವನ್ನು ಕೇಳುತ್ತಾನೆ. ಆವಾಗ ಬ್ರಾಹ್ಮಣ ತನ್ನ ದುಃಖದ ಪರಿಸ್ಥಿತಿಯನ್ನು ಬಲರಾಮನಲ್ಲಿ ತೋಡಿಕೊಳ್ಳುತ್ತಾನೆ. ಸುಶರ್ಮನ ಹೆಂಡತಿಯಾದ ಭಾಗೀರಥಿಯು ಎಂಟು ಸಾರಿ ಗರ್ಭ ಧರಿಸಿ, ಮಗುವನ್ನು ಹೆರುತ್ತಾಳೆ. ಪ್ರತಿ ಹೆರಿಗೆ ಆದಾಗಲೂ,, ಮಗುವಿನ ಅಳು ಕೇಳಿಸುತ್ತದೆ ಆದರೆ ಮಗು ಮಾಯವಾಗಿರುತ್ತದೆ. ಈಗ ಭಾಗೀರಥಿಯು ಒಂಬತ್ತನೇ ಬಾರಿಗೆ ಗರ್ಭಿಣಿ ಆಗಿರುತ್ತಾಳೆ. ಒಂಬತ್ತು ತಿಂಗಳೂ ತುಂಬಿರುತ್ತದೆ. ಸುಶರ್ಮನಿಗೆ ಮಗು ಕಾಣೆಯಾಗುವ ದುಃಖಕ್ಕೆ ಯಾವುದೇ ಪರಿಹಾರ ಸಿಗುವುದಿಲ್ಲ. ಹತಾಶನಾದ ಆತ, ಇದಕ್ಕೆ ಕಾರಣ ಕ್ಷತ್ರಿಯರಲ್ಲಿ ನಶಿಸುತ್ತಿರುವ ಧರ್ಮ ಪ್ರಜ್ಞೆ ಅನ್ನುವ ಅರ್ಥದಲ್ಲಿ ಮಾತಾಡುತ್ತಾನೆ.

ಅಲ್ಲಿಯೇ ಇದ್ದ ಅರ್ಜುನ ಕೆರಳಿ, ತಾನು ಈ ಸಮಸ್ಯೆಗೆ ಪರಿಹಾರವನ್ನು ಕೊಡುತ್ತೇನೆಂದೂ, ಹುಟ್ಟಲಿರುವ ಒಂಬತ್ತನೇ ಮಗುವನ್ನು ರಕ್ಷಿತ್ತೇನೆಂದೂ, ಕಳೆದು ಹೋದ ಎಂಟು ಮಕ್ಕಳನ್ನು ಹುಡುಕಿ ಕೊಡುಡುತ್ತೇನೆಂದೂ, ಆಗದೇ ಹೋದರೆ ಅಗ್ನಿ ಪ್ರವೇಶ ಮಾಡುತ್ತೇನೆಂದೂ ಪ್ರತಿಜ್ಞೆ ಮಾಡಿ ಸುಶರ್ಮನೊಂದಿಗೆ ಹೊರಟು ನಿಲ್ಲುತ್ತಾನೆ. ಹೊರಡುವಾಗ ಕೃಷ್ಣನ ಆಶೀರ್ವಾದ ಪಡೆಯಲು ಹೋಗುತ್ತಾನೆ. ಕೃಷ್ಣನೂ ಈ ಸಮಸ್ಯೆಗೆ ಸದ್ಯಕ್ಕೆ ಪರಿಹಾರ ಸಿಗುತ್ತಿಲ್ಲ. ಆದರೆ, ಒಂದು ವೇಳೆ ಅರ್ಜುನನ ಪ್ರತಿಜ್ಞೆಯಲ್ಲಿ ವಿಫಲ ಆದರೂ, ಅಗ್ನಿ ಪ್ರವೇಶಕ್ಕೆ ಮುಂದಾಗದೆ, ತನ್ನನ್ನು ಬಂದು ಕಾಣಲು ತಿಳಿಸುತ್ತಾನೆ. ಅರ್ಜುನ ಸುಶರ್ಮನ ಜೊತೆಗೆ ಹೋಗುತ್ತಾನೆ. ಅಲ್ಲಿ ಸುಶರ್ಮನ ಹೆಂಡತಿ ಭಾಗೀರಥಿಯು ಕೃಷ್ಣನನ್ನು ಕರೆತರದೇ ಅರ್ಜುನನ್ನು ಕರೆ ತಂದಿದ್ದಕ್ಕೆ ಅಸಮಾಧಾನ ಹೊಂದಿರಲು, ಸುಶರ್ಮ ಅವಳನ್ನು ಸಮಾಧಾನ ಮಾಡುತ್ತಾನೆ. ಅಷ್ಟರಲ್ಲಿ ಆಕೆಗೆ ಪ್ರಸವ ವೇದನೆ ಶುರುವಾಗುತ್ತದೆ. ಅರ್ಜುನ ಬಾಣದ ಕೋಟೆಯನ್ನು ಕಟ್ಟಿ ಪ್ರಯತ್ನಿಸಿದರೂ, ಒಂಬತ್ತನೇ ಮಗು ಕೂಡಾ, ಅಳು ಕೇಳಿಸಿದ ಕ್ಷಣಾರ್ಧದಲ್ಲಿ ಮಾಯವಾಗುತ್ತದೆ. ಅಲ್ಲಿಂದ ಅರ್ಜುನ ಕೃಷ್ಣನ ಬಳಿಗೆ ಬಂದು ನಡೆದ ಘಟನೆಯನ್ನು ಹೇಳಲಾಗಿ, ಕೃಷ್ಣನಿಗೆ ಎಲ್ಲವೂ ಅರ್ಥವಾಗಿರುತ್ತದೆ. ಅರ್ಜುನನನ್ನು ಕರೆದುಕೊಂಡು ತಾನೇ ಸಾರಥ್ಯ ವಹಿಸಿ ವೈಕುಂಠಕ್ಕೆ ಹೋಗುತ್ತಾರೆ. ಅಲ್ಲಿ ಆದಿ ನಾರಾಯಣನ ದರುಶನ ಇಬ್ಬರಿಗೂ ಆಗುತ್ತದೆ. ಆದಿ ನಾರಾಯಣನು ಕೃಷ್ಣ ಮತ್ತು ಅರ್ಜುನರಿಗೆ ತಮ್ಮ ಅವತಾರವನ್ನು ಸಮಾಪ್ತಿಸುವ ನೆನಪನ್ನು ಮಾಡಿ, ಸುಶರ್ಮನ ಎಲ್ಲಾ ಒಂಬತ್ತೂ ಮಕ್ಕಳನ್ನು ಕೊಟ್ಟು ಕಳುಹಿಸುತ್ತಾನೆ.

ಈ ಕಥೆಯನ್ನು ಕವಿ ಶ್ರೀಧರರು ಯಕ್ಷಗಾನೀಯವಾಗಿಸಿದ್ದಾರೆ. ಇವರ ಛಂದೋಬದ್ಧ ಪದ್ಯಗಳನ್ನು ಹಳೆಯ ಮಟ್ಟುಗಳಲ್ಲಿ ಹಾಡಿದ್ದು ಯುವ ಭಾಗವತೆ ಕುಮಾರಿ ಚಿತ್ಕಲಾ ತುಂಗ ಅವರು. ವಿಶೇಷವೆಂದರೆ, ಪ್ರಸಂಗದ ಕವಿಯೇ ಕೃಷ್ಣನ ಪಾತ್ರದ ಅರ್ಥ ಹೇಳಿದ್ದು : ಶ್ರೀಧರ ಡಿ.ಎಸ್. ತಮ್ಮ ಎಂದಿನ ಶೈಲಿಯಲ್ಲಿ ಕೃಷ್ಣನನ್ನು ನಿರೂಪಿಸಿದರು. ಕಥೆಯ ಸಾರವೇ ಕೃಷ್ಣ ಶಕ್ತಿ. ವಿಷ್ಣು ವಾಗಿ ಪಾತ್ರ ನಿರ್ವಹಿಸಿದ ವಿ. ಪ್ರಸನ್ನ ಭಟ್ ಮಾಗೋಡು

ಇವರೊಂದಿಗಿನ ಕೃಷ್ಣನ ಸಂಭಾಷಣೆ ಕೇಳುಗರನ್ನು ಬೇರೆಯದೇ ಲೋಕಕ್ಕೆ ಕರೆದೊಯ್ಯಿತು. ಇಂಥ ಪ್ರಯತ್ನಗಳು ಹೆಚ್ಚಬೇಕು. ಹೊಸ ಹೊಸ ಪೌರಾಣಿಕ ಪ್ರಸಂಗಗಳು ರಂಗಕ್ಕೆ ಬರಬೇಕು. ಆವಾಗ ಮಾತ್ರ ಹೊಸ ವಿಚಾರಗಳು ಹೊರಗೆ ಬರುತ್ತವೆ.

ಪದಬಂಧ

• ಸಿ.ರವಿಶಂಕರ ಶಾಸ್ತ್ರಿ, ದಂಬೆ

1			■	2	■	3		4
	■	■	5				■	
6		7		■	■	■	8	
	■		■	9		10	■	
■	11		■		■	12		■
13	■	14			■		■	15
16		■	■	■	17			
	■	18		19		■	■	
20			■		■	21		

ಎಡದಿಂದ ಬಲಕ್ಕೆ

1. ಸಂಪತ್ತು ಅಥವಾ ಭಾಗ್ಯ (3)
3. ಶಿಕ್ಷಕ ಅಥವಾ ಕಲಿಸುವವನು (3)
5. ಪಾರ್ವತಿ ಅಥವಾ ದುರ್ಗೆಗೆ ಮತ್ತೊಂದು ಹೆಸರು (4)
6. ಕಾಡಿನಲ್ಲಿ ಜೀವನ ಮಾಡುವುದು (4)
8. ಮನ್ಮಥನಿಗೆ ಮತ್ತೊಂದು ಹೆಸರು (2)
9. ಕಾಮಾಲೆ ಕಣ್ಣಿನವರಿಗೆ ಕಂಡ ಬಣ್ಣ (3)
11. ದೇಹದ ಮೇಲಿನ ವ್ರಣ (2)
12. ಮಾತು ಅಥವಾ ವಚನ (2)
14. ಹಾಳಾಗು ಎಂದರ್ಥ (3)
16. ದ್ರವ ಪದಾರ್ಥವನ್ನು ಹೀರು ಎಂದರ್ಥ ಬರುವ ಚಿಗುರು (2)
17. ರಾಜ, ರಾಣಿಯರು ವಾಸಿಸುವ ವೈಭವದ ಜಾಗ (4)
18. ಸಂಕಟ ಬಂದಾಗ ನೆನಪಾಗುವ ದೇವರು ಇಲ್ಲಿ ನೆಲಿಸಿದ್ದಾನೆ (4)
20. ಕೃಷ್ಣನ ಬಡ ಸ್ನೇಹಿತ (3)
21. ಮನವಿರುವ ಲಕ್ಷ್ಯ (3)

ಮೇಲಿಂದ ಕೆಳಕ್ಕೆ

1. ಇಂದ್ರನ ಆನೆಯ ಹೆಸರು (4)
2. ಮೂರು ಚಕ್ರದ ವಾಹನ (2)
3. ದಿನದ ಮೊದಲನೆಯ ನಗದು ವ್ಯಾಪಾರ (2)
4. ದೈಹಿಕ ವ್ಯಾಯಾಮ (4)
5. ಇನ್ನೊಬ್ಬ ಸೇವಕ (2)
7. ವಾತಾವರಣದಲ್ಲಿರುವ ಗಾಳಿ (4)
9. ಆಶೀರ್ವದಿಸು ಎನ್ನುವುದರಲ್ಲಿ ಶಿವನೂ ಇದ್ದಾನೆ (3)
10. ಉದಯ ಕಾಲದಲ್ಲಿ ತಪ್ಪದೆ ಬರುವವನು (4)
13. ಕಬ್ಬಿನಂತೆ ಓರೆ-ಕೋರೆ (4)
15. ಆತನ ಕುಲ (4)
17. ಕಡಿಮೆಯಲ್ಲ, ಹೆಚ್ಚು (2)
18. ಎರಡಕ್ಷರದಲ್ಲಿ ಎಳ್ಳು (2)
19. ಬಲಿಗಾಗಿ ಅರ್ಪಿಸುವ ಪ್ರಾಣಿ (2)

ಸರಿಯುತ್ತರಗಳು

ಕೃಷ್ಣನಿಂದ ಪೂಜಿಸಲ್ಪಡುವ ಭಕ್ತರ ಪಾದ ಧೂಳಿ

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಕೃಷ್ಣ ಹದಿನಾರು ಸಾವಿರದ ಎಂಟು ಹೆಣ್ಣುಮಕ್ಕಳನ್ನು ಮದುವೆಯಾಗಿದ್ದಾನೆ., ಇವನ ಸಂಸಾರ ಹೇಗಿರಬಹುದು ಎಂಬ ಕುತೂಹಲಕ್ಕೆ ನಾರದರು ಒಮ್ಮೆ ದ್ವಾರಕಾ ನಗರಿಯನ್ನು ಪ್ರವೇಶಿಸಿದರು. ಅದ್ಭುತವಾದ ನಗರಿ ಅತ್ಯಾಕರ್ಷಕವಾಗಿತ್ತು. ವೈಭವದಿಂದ ಕೂಡಿದ ಪ್ರತಿ ಮನೆಯಲ್ಲೂ ಹೆಂಡತಿ, ಮಕ್ಕಳ ಉಪಚಾರದಲ್ಲಿ , ಪೂಜೆ ಆತಿಥ್ಯದಲ್ಲಿ ಕೃಷ್ಣ ತಲ್ಲೀನನಾಗಿದ್ದ. ಪ್ರತಿ ಮನೆಯಲ್ಲೂ ಕೃಷ್ಣನ ರೂಪ. ಪ್ರತಿ ಬಾರಿ ನಾರದರನ್ನು ನೋಡಿದಾಗಲೂ ಇದೇನು ಪೂಜ್ಯರೇ ಬಂದಿದ್ದೀರಿ ಎಂದು ಹೊಸದಾಗಿ ಮಾತನಾಡಿಸಿ ಅವರಿಗೆ ಉಪಚಾರ ಮಾಡುತ್ತಿದ್ದ.

ನಾರದರಿಗೆ ಆಶ್ಚರ್ಯವಾದರೂ.. ಮತ್ತೆ ಬರುವೆ ಎಂದು ನೆಪಹೂಡಿ ಮುಂದಿನ ಮನೆಗೆ ಹೋಗುತ್ತಿದ್ದರು ಅಲ್ಲಿಯೂ ಅದೇ ಕಥೆ. ಅಂತೂ ಹಟ ಬಿಡದೆ ಅವರೂ ಎಲ್ಲಾ ಮನೆಗಳಲ್ಲೂ ಇದ್ದ ಕೃಷ್ಣನನ್ನು ಕಂಡು ಮಾತನಾಡಿಸುತ್ತಾ ಕೊನೆಯ ಮನೆಗೆ ಬಂದರು. ಅಲ್ಲಿಯೂ ಮಡಿಯುಟ್ಟ ಕೃಷ್ಣ ಪೂಜೆಗೆ ಅಣಿಮಾಡುತ್ತಿದ್ದ. ಇವರನ್ನು ಕಂಡು ವಿಶೇಷ ಆದರದಿಂದ ಬನ್ನಿ ನಾರದರೇ ಏನು ವಿಶೇಷ. ಇಲ್ಲೀವರೆಗೆ ಆಗಮಿಸಿದ್ದುದರ ಕಾರಣವೇನು ಒಳ್ಳೇ ಸಮಯಕ್ಕೇ ಬಂದಿದ್ದೀರಿ. ಇನ್ನೇನು ಪೂಜೆ ಮಾಡುವವನಿದ್ದೆ. ನಿಮ್ಮಂತಹ ಜ್ಞಾನಿಗಳು ಬಂದಿರುವುದು ನನ್ನ ಭಾಗ್ಯ. ಬನ್ನಿ ಆರತಿ ಮಾಡೋಣ ಎಂದು ಕರೆದ.

ಹೇ ಕೃಷ್ಣ. ನೀನೇ ಸೃಷ್ಟಿಕರ್ತ. ಈ ಸೃಷ್ಟಿ, ಸ್ಥಿತಿ ಲಯಗಳ ಕಾರಣಕರ್ತ. ಎಲ್ಲದಕ್ಕೂ ನೀನೇ ಸರ್ವಸ್ವ. ಹೀಗಿರುವಾಗ ನೀನು ಯಾರನ್ನು ಪೂಜಿಸುವುದು! ಎಂದರು. ಕೃಷ್ಣ ನಕ್ಕುಬಿಟ್ಟ. ನಾರದರೇ. ನಾನು ಪ್ರತಿನಿತ್ಯ ಪೂಜೆ ಮಾಡುತ್ತೇನೆ. ಅದು ಯಾರು ಎಂದು ನೋಡಬೇಕೇನು?

ನಾರದರು ಆಶ್ಚರ್ಯದಿಂದ ಕೇಳಿದರು. ನೀನು ಪೂಜಿಸುವ ಆ ಶಕ್ತಿ ಯಾವುದು ಎಂದು ನೋಡಬೇಕು.

ಕೃಷ್ಣ : ಬನ್ನಿ ತೋರಿಸುತ್ತೇನೆ. ಎಂದು ದೇವರ ಕೋಣೆಗೆ ಕರೆದೊಯ್ದ. ದೇವರ ಕೋಣೆಯ ಚೌಕಟ್ಟುಗಳು ಬಂಗಾರದ್ದಾಗಿತ್ತು. ಮಂಟಪವೂ ಬಂಗಾರ. ಮಂಟಪಕ್ಕೆ ವಜ್ರ, ವೈಢೂರ್ಯ, ಮುತ್ತು ರತ್ನಗಳಿಂದ ಅಲಂಕರಿಸಲಾಗಿತ್ತು. ಮಂಟಪದ ಒಳಗೆ ಏಳೆಂಟು ಬಂಗಾರದ ಡಬ್ಬಿಗಳಿದ್ದವು. ಕೃಷ್ಣ ಡಬ್ಬಿಗಳನ್ನು ತೋರಿಸಿ ಇವುಗಳನ್ನೇ ಪೂಜಿಸುತ್ತೇನೆ ಎಂದ. ಕೃಷ್ಣ ಡಬ್ಬಿಯ ಮುಚ್ಚಳ ತೆಗೆದ. ಅದರಲ್ಲಿ ಮಣ್ಣಿತ್ತು. ನಾರದರು ಬಿಟ್ಟಕಣ್ಣಿಂದ ಮಣ್ಣು ನೋಡಿ 'ಕೃಷ್ಣ ನೀನು ಮಣ್ಣನ್ನು ಪೂಜಿಸುತ್ತೀಯೇ!'

ಕೃಷ್ಣ ಹೇಳಿದ. ನಾರದರೇ. ಇದು ಅಂತಿಂಥ ಮಣ್ಣು ಎಂದು ತಿಳಿಯಬೇಡಿ. ಇದು ನನ್ನ ಭಕ್ತರ ಪಾದಧೂಳಿ. ಇದನ್ನು ನಾನು ಪೂಜಿಸುತ್ತೇನೆ. ಭಕ್ತರ ಪ್ರೀತಿ, ಭಕಿಯ ಪಾಶದ ಅಂಕುರದೊಳಗೆ ನಾನಿದ್ದೇನೆ ಎಂದ. ನಾರದರಿಗೆ ಇದನ್ನು ಕೇಳಿ ಕಣ್ಣೀರು ಧಾರೆಯಾಗಿ ಸುರಿಯಿತು. ಹೇ ಪರಮಾತ್ಮ.. ನಿನ್ನನ್ನು ಎಷ್ಟು ಸ್ತುತಿಸಿದರೂ ಅದು ಅಲ್ಪವೇ. ಕೃಷ್ಣ ಕೃಷ್ಣ. ಎಂದು ನೂರು ಬಾರಿ ಹೇಳಿದರು. ಅಲ್ಲೇ ಪಕ್ಕದಲ್ಲಿ ಮತ್ತೊಂದು ಪುಟ್ಟ ಡಬ್ಬಿ ಇತ್ತು. ನಿಜವಾದ ಗುರುಭಕ್ತರು ಹೇಗಿರುತ್ತಾರೆ, ನಾರದರೇ ಈ ಪುಟ್ಟ ಡಬ್ಬಿಯಲ್ಲೇನಿದೆ ನೋಡುವುದಿಲ್ಲವೇ?

ಸಾಕು ಕೃಷ್ಣ. ನಿನ್ನನ್ನು ಅರಿಯುವುದು, ನಿನ್ನ ದರ್ಶನವಾಗುವುದಕ್ಕಿಂತ ಮಿಗಿಲಾದದ್ದು ಇನ್ನೇನಿದೆ. ನಿನ್ನನ್ನೇ ಧ್ಯಾನಿಸುವುದೇ ನನಗೆ ಬಂದ ಭಾಗ್ಯ. ಇಷ್ಟು ಸಾಕು ಈ ನಾರದನಿಗೆ ಎಂದರು.

ಎಲ್ಲವನ್ನೂ ತಿಳಿಯಲೇಬೇಕಲ್ಲವೇ ನಾರದರೇ. ನೋಡಿ ಕಟ್ಟ ಕಡೆಯ ಡಬ್ಬಿ ಎಂದು ಅದರ ಮುಚ್ಚಳ ತೆಗೆದ. ಅದರಲ್ಲಿ ಒಂದು ಚಿಟಿಕೆ ಮಣ್ಣಿತ್ತು. ನಾರದರು ಆಶ್ಚರ್ಯದಿಂದ ಕೇಳಿದರು. ಒಂದು ಚಿಟಿಕೆ ಇದೆಯಲ್ಲ ಯಾರದ್ದು ?

ಕೃಷ್ಣ ಹೇಳಿದ. ಸದಾ ನನ್ನ ಧ್ಯಾನದಲ್ಲಿಯೇ ಸಂಚಾರಿಯಾಗಿರುವ ನನ್ನ ಪರಮ ಭಕ್ತನಾದ ನಾರದರ ಪಾದಧೂಳಿ. ನಾರದರಿಗೆ ದುಃಖ ತಡೆಯಲಾರದೇ ಹೇ ಪ್ರಭೋ! ಎಂದು ಕೃಷ್ಣನ ಪಾದ ಹಿಡಿದರು.

ನಾವು ಸಂಬಂಧಗಳಲ್ಲಿ ನಿಷ್ಕಲ್ಮಶ ಪ್ರೀತಿಯಿಂದ ನಮ್ಮನ್ನು ಸಮರ್ಪಿಸಿಕೊಂಡಾಗ ಅದರ ನೂರು ಪಟ್ಟು ಪ್ರೀತಿ ನಮಗೆ ದೊರೆಯುತ್ತದೆ ಎಂಬುದಕ್ಕೆ ಮೇಲಿನ ಕಥೆ ಸಾಕ್ಷಿ. ನಮ್ಮಲ್ಲಿರುವ ಸಮರ್ಪಣಾ ಭಾವ, ಪ್ರಾಮಾಣಿಕ ಪ್ರೀತಿಗೆ ಒಂದಲ್ಲ ಒಂದು ದಿನ ಗೆಲುವು ಸಿಕ್ಕೇ ಸಿಗುತ್ತದೆ. ಯಾರಲ್ಲದಿದ್ದರೂ ಭಗವಂತ ಅದನ್ನು ನೋಡಿಯೇ ನೋಡುತ್ತಾನೆ.

ಬ್ರಹ್ಮನ ಉದ್ಯಾನದಲಿ ನಾವು!

ಶುಭೋದಯಕ್ಕೊಂದು ಕಗ್ಗ



ರವೀ ಚಿಕ್ಕನಾಯಕನಹಳ್ಳಿ

ಕರ್ಮಋಣಶೇಷಂಗಳುಳಿಯದಿರೆ ಬಿತ್ತಾಗಿ।
ಜನ್ಮ ಜನ್ಮಾಂತರದ ಮರಗಳೇಳದಿರೆ ॥
ಬ್ರಹ್ಮನುದ್ಯಾನವನ ಶಾಶ್ವತದೊಳಿಹುದೆಂತು ?
ಮರ್ಮವಿದು ಸೃಷ್ಟಿಯಲಿ - ಮಂಕುತಿಮ್ಮ ॥

ನಮ್ಮ ನಮ್ಮ ಕರ್ಮಫಲಗಳು ಒಂದೇ ಜನ್ಮಕ್ಕೆ ನಾವು ಮುಗಿಸದೇ ಇದ್ದು, ಅದೇ ಕರ್ಮಗಳು ಮುಂದಿನ ಜನ್ಮಕ್ಕೆ ಬೀಜವಾಗುವುದು. ಆ ಬೀಜಗಳೇ ಜನ್ಮಜನ್ಮಾಂತರದ ಮರಗಳಾಗಿ ಪುಟಿದೆದ್ದು ಈ ಜಗತ್ತು ಎನ್ನುವ ಆ ಭಗವಂತನ ಉದ್ಯಾನವನದಲ್ಲಿ ಶಾಶ್ವತವಾಗಿರಿಸಿ ಅದನ್ನು ಚೆಂದವಾಗಿಸುವುದು. ಒಂದೇ ಜನ್ಮಕ್ಕೆ ಈ ಕರ್ಮಗಳು ಮುಗಿದರೆ ಭಗವಂತನ ಉದ್ಯಾನವನದಲ್ಲಿ ಯಾವ ಮರಗಿಡವೂ ಇಲ್ಲದೆ ಬೋಳಾಗಿ ಅಂದಗೆಡುತ್ತದೆ. ಹಾಗಾಗಿ ಹುಟ್ಟು - ಸಾವು - ಮರುಹುಟ್ಟು - ಪುನರ್ಜನ್ಮ ಇವೆಲ್ಲವೂ ಸಹ ಈ ಸೃಷ್ಟಿಯ, ಆ ಭಗವಂತನ ಮರ್ಮವೇ ಆಗಿವೆ ಎಂದು ಹೇಳಿದ್ದಾರೆ.

ನಮ್ಮ ಜೀವನ ಮುಗಿದ ನಂತರ ನಮ್ಮ ಕರ್ಮಫಲಗಳಿಂದಲೇ ಮತ್ತೆ ಈ ಜಗತ್ತಿನಲ್ಲಿ ಅವತಾರ ಎತ್ತುವುದು ಮತ್ತೆ ಬಾಕಿ ಇರುವ ಕರ್ಮಗಳ ಲೆಕ್ಕವನ್ನು ಚುಕ್ತಾ ಮಾಡುವುದೇ ಆಗಿದೆ. ಇದೊಂದು ನಮ್ಮ ಜೀವನದ ಕರಮದ ಲೆಕ್ಕ ಪೂರ್ಣವಾಗಿ ಮುಗಿಯುವ ತನಕ ಇದೊಂದು ನಿರಂತರವಾದ ಪ್ರಕ್ರಿಯೆಯಾಗಿ ಹುಟ್ಟು - ಸಾವು - ಮರುಹುಟ್ಟು - ಪುನರ್ಜನ್ಮಗಳು ಇರುವಂತಹುದೇ ಆಗಿರುತ್ತದೆ. ಈ ನಿರಂತರತೆಗೂ ಒಂದು ಘನ ಉದ್ದೇಶವನ್ನು ಆ ಸೃಷ್ಟಿಕರ್ತನು ತನ್ನ ಮನದಲ್ಲಿಟ್ಟುಕೊಂಡೇ ಮಾಡಿಸುತ್ತಿದ್ದಾನೆ. ಈ ಜಗತ್ತು ಎನ್ನುವುದು ಆ ಭಗವಂತನ ಒಂದು ನಳನಳಿಸುವ ಉದ್ಯಾನವನವೇ ಇದ್ದ ಹಾಗೆ, ಈ ಉದ್ಯಾನವನವು ಈ ಜೀವರಾಶಿ ಎಂಬ ಮರಗಿಡಗಳಿಂದ ತುಂಬಿ, ಹಸಿರಾಗಿ ಸೌಂದರ್ಯವನ್ನು ವೃದ್ಧಿಸುವಂತಿರಬೇಕು. ಆದರೆ ಈ ಮನುಷ್ಯನ ಜೀವನವು ಒಂದೇ ಜನ್ಮಕ್ಕೆ ಮುಗಿಯುವಂತಾದರೆ ಆ ಭಗವಂತನ ಉದ್ಯಾನವನದಲ್ಲಿ ಅದ್ಯಾವ ಸೊಬಗೂ ಇರದೆ ಮಾನವ ಜೀವಿಯೆಂಬ ಮರಗಿಡ ಇರದೆ ಸೊರಗುವುದು ನಿಶ್ಚಿತವಾಗುತ್ತದೆ. ಹಾಗಾಗಿ ಆ ಭಗವಂತನು ಮನುಷ್ಯನ ಜೀವನದಲ್ಲಿ ಕರ್ಮಶೇಷಗಳನ್ನಿಟ್ಟು ಈತನನ್ನು ಮತ್ತೆ ಮತ್ತೆ ಈ ಭುವಿಯಲ್ಲಿ ಅವತರಿಸುವಂತೆ ಮಾಡುತ್ತಾ, ತನ್ನ ಉದ್ಯಾನವನ್ನು ಯಾವಾಗಲೂ ನಳನಳಿಸುವಂತೆ ಇಟ್ಟುಕೊಂಡಿದ್ದಾನೆ. ಇದೊಂದು ಆ ಭಗವಂತನ, ಆ ಭಗವಂತನು ಸೃಷ್ಟಿಸಿದ ಈ ಸೃಷ್ಟಿಯ ಮರ್ಮವೂ ಸಹ ಆಗಿದೆ ಎಂದು ಈ ಪದ್ಯದಲ್ಲಿ ಡಿವಿಜಿಯವರು ಹೇಳಿದ್ದಾರೆ.

ಜನ್ಮಜನ್ಮಾಂತರದ ಋಣಭಾಧೆಗಳು ಈ ಮಾನವನನ್ನು ಕಾಡುತ್ತಾ, ಒಂದೇ ಜನ್ಮಕ್ಕೆ ಈತನಿಗೆ ಮೋಕ್ಷವು ಸಿಗದೆ, ಮತ್ತೆ ಮತ್ತೆ ಈ ಭುವಿಯಲ್ಲಿ ಜನ್ಮ ತಳೆದು ಇಲ್ಲಿಯ ಬದುಕು, ಭವಿಷ್ಯಕ್ಕಾಗಿ ಹೋರಾಟ ಮಾಡುತ್ತಾ, ಮತ್ತೆ ಮತ್ತೆ ಪಾಪ ಕರ್ಮಗಳನ್ನು ಮಾಡುವುದು ಈ ಮಾನವನ ಹಣೆಬರಹವೇ ಆಗಿದೆ. ಇದು ಮಾನವ ಜೀವಿಗೆ ಹಣೆ ಬರಹವಾದರೆ ಆ ಭಗವಂತನಿಗೆ ಲೀಲಾ ವಿನೋದವಾಗಿರುತ್ತದೆ. ಒಂದೇ ಜನ್ಮಕ್ಕೆ ನಮ್ಮ ಪಾಪ ಕರ್ಮಗಳು ಮುಗಿದರೆ ಈ ಭುವಿಗೆ ಅದ್ಯಾವ ಸೊಬಗೂ ಇರದೆ ಇರುವುದರಿಂದ ಆ ಭಗವಂತನು ಈ ಕರ್ಮಗಳನ್ನು ಮಾನವನ ಜೀವಕ್ಕೆ ಕರ್ಮಾನುಸಾರ ಇಟ್ಟಿದ್ದಾನೆ. ಒಮ್ಮೆ ಈ ಜೀವನ ಸಾಕು ಎಂಬುದು ನಮ್ಮ ಭಾವ ಮೊಳೆತಾಗ, ನಾನು ಏನೂ ಅಲ್ಲ ಎಂಬ ಭಾವ ಇವನಲ್ಲಿ ಮೊಳೆತು ಆಧ್ಯಾತ್ಮಿಕ ಚಿಂತನೆಗಳಿಗೆ ಮನಸ್ಸು ಮಾಡಿ, ಮೋಕ್ಷಫಲಗಳನ್ನು ಉಣ್ಣುತ್ತಾನೆ ಎಂಬುದು ಈ ಪದ್ಯದ ಸಾರವಾಗಿದೆ.

ನೀವೂ ಬರೆಯಬಹುದು | ನಮ್ಮ ವಿಳಾಸ: ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com

ಸಮಾಚಾರ ಸಣ್ಣದಲ್ಲ

ಸರ್ಫರಾಝ್ ಆಕರ್ಷಕ ಶತಕ

ಚೆನ್ನೈ: ಈ ಬಾರಿ ಬುಚಿ ಬಾಬು ಆಹ್ವಾನಿತ ಟೂರ್ನಿಯು ಪ್ರಾರಂಭವಾಗಿದೆ. ಸೋಮವಾರ ಚೆನ್ನೈನಲ್ಲಿ ಟಿಎನ್‌ಸಿಎ ಇಲೆವೆನ್ ವಿರುದ್ಧ ನಡೆದಿದ್ದ ಪಂದ್ಯದ ಮೊದಲ ದಿನವೇ ಮುಂಬೈ ತಂಡದ ಸರ್ಫರಾಝ್ ಖಾನ್ ಭರ್ಜರಿ ಶತಕ ಸಿಡಿಸಿದ್ದು, ಮುಂಬರುವ ವೆಸ್ಟ್ ಇಂಡೀಸ್ ವಿರುದ್ಧದ

ಸರಣಿಯ ತಂಡದಲ್ಲಿ ತನಗೆ ಸ್ಥಾನ ನೀಡುವಂತೆ ಭಾರತೀಯ ಕ್ರಿಕೆಟ್ ಆಯ್ಕೆ ಸಮಿತಿಗೆ ಸಂದೇಶ ರವಾನಿಸಿದ್ದಾರೆ. ಇಂಗ್ಲೆಂಡ್ ವಿರುದ್ಧದ ಟೆಸ್ಟ್ ಸರಣಿಯ ಭಾರತ ಟೆಸ್ಟ್ ತಂಡದಲ್ಲಿ ಸ್ಥಾನ ಸಿಗದೆ ನಿರಾಶಗೊಂಡಿದ್ದ ಸರ್ಫರಾಝ್ ಖಾನ್ ಇದೀಗ ಶತಕ ಸಿಡಿಸಿದ್ದು, ಎಲ್ಲರ ಗಮನವನ್ನು ಸೆಳೆದಿದ್ದಾರೆ. ಚೆನ್ನೈನ ಗೋಜನ್ ಕಾಲೇಜು ಮೈದಾನದಲ್ಲಿ ಮೊದಲನೇ ಸುತ್ತಿನ ಪಂದ್ಯದಲ್ಲಿ 98 ರನ್‌ಗಳಿಗೆ ಮೂರು ವಿಕೆಟ್ ಕಳೆದುಕೊಂಡು ಮುಂಬೈ ತಂಡ ಸಂಕಷ್ಟಕ್ಕೆ ಸಿಲುಕಿದ್ದಾಗ ಬ್ಯಾಟ್ ಮಾಡಿದ ಸರ್ಫರಾಜ್ ಖಾನ್ 114 ಎಸೆತಗಳಲ್ಲಿ 138 ರನ್‌ಗಳನ್ನು ಸಿಡಿಸಿದರು. ಅದರಲ್ಲಿ ಅವರು 10 ಬೌಂಡರಿ ಮತ್ತು 6 ಸಿಕ್ಸರ್‌ಗಳು ಇದ್ದವು, ಆ ಮೂಲಕ ಮುಂಬೈ ತಂಡ ಮೊದಲನೇ ದಿನದಾಟದಂತ್ಯಕ್ಕೆ 5 ವಿಕೆಟ್ ನಷ್ಟಕ್ಕೆ 367 ರನ್ ಕಲೆಹಾಕಿದೆ.

ಏಷ್ಯಾ ಕಪ್: 10 ಸೆ. ಜಾಹೀರಾತಿಗೆ 16 ಲಕ್ಷ

ದುಬೈ: ಸೆಪ್ಟೆಂಬರ್ 14ರಂದು ನಡೆಯಲಿರುವ ಏಷ್ಯಾ ಕಪ್ ಗ್ರೂಪ್-ಎ ಪಂದ್ಯದಲ್ಲಿ ಭಾರತ ತಂಡವು ಸಾಂಪ್ರದಾಯಿಕ ಎದುರಾಳಿ ಪಾಕಿಸ್ತಾನವನ್ನು ಎದುರಿಸಲಿದೆ. ಈ ಹೈವೋಲ್ಟೇಜ್ ಪಂದ್ಯವು ದುಬೈ ಅಂತಾರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆಯಲಿದೆ. ಭಾರತದಲ್ಲಿ, ಏಷ್ಯಾ ಕಪ್ 2025ರ ನೇರ ಪ್ರಸಾರ ಮತ್ತು ಸ್ಟ್ರೀಮಿಂಗ್ ಹಕ್ಕುಗಳು ಸೋನಿ ಸ್ಪೋರ್ಟ್ಸ್ ನೆಟ್‌ವರ್ಕ್ ಹೊಂದಿದೆ. ವರದಿಯೊಂದರ ಪ್ರಕಾರ, ಸೋನಿ ಪಿಕ್ಚರ್ಸ್ ನೆಟ್‌ವರ್ಕ್ಸ್ ಇಂಡಿಯಾ ಏಷ್ಯಾಕಪ್‌ನಲ್ಲಿ ಭಾರತದ ಪಂದ್ಯಗಳ ನಡುವಿನ ಜಾಹೀರಾತು ದರವನ್ನು ನಿಗದಿಪಡಿಸಿದೆ. 10 ಸೆಕೆಂಡ್‌ನ ಜಾಹೀರಾತುಗಾಗಿ 14 ರಿಂದ 16 ಲಕ್ಷದವರೆಗೆ ಬೆಲೆ ನಿಗದಿ ಪಡಿಸಿದೆ. ಇದರಲ್ಲಿ ಭಾರತ ಮತ್ತು ಪಾಕಿಸ್ತಾನ ನಡುವಿನ ಹೈ ವೋಲ್ಟೇಜ್ ಪಂದ್ಯದ 10 ಸೆಕೆಂಡುಗಳ ಜಾಹೀರಾತಿನ ಬೆಲೆ 16 ಲಕ್ಷ ರು. ನಿಗದಿಯಾಗಿದೆ.

ಮಹಾರಾಜ ಟ್ರೋಫಿ ಟಿ20 ಕ್ರಿಕೆಟ್ | ಬೆಂಗಳೂರು ಬ್ಲಾಸ್ಟರ್ಸ್‌ಗೆ ಹೀನಾಯ ಸೋಲು

ಮೈಸೂರು ವಾರಿಯರ್ಸ್‌ಗೆ ಭರ್ಜರಿ ಜಯ

ಮೈಸೂರು: ಇಲ್ಲಿ ಸೋಮವಾರ ನಡೆದ ಮಹಾರಾಜ ಟ್ರೋಫಿ ಕ್ರಿಕೆಟ್ ಪಂದ್ಯಾವಳಿಯಲ್ಲಿ ಮೈಸೂರು ವಾರಿಯರ್ಸ್ ತಂಡವು ಬೆಂಗಳೂರು ಬ್ಲಾಸ್ಟರ್ಸ್ ತಂಡದ ವಿರುದ್ಧ 39 ರನ್‌ಗಳ ಭರ್ಜರಿ ಜಯ ದಾಖಲಿಸಿತು.

ಮಳೆಯ ಕಾರಣದಿಂದಾಗಿ ತಡವಾಗಿ ಪಂದ್ಯ ಆರಂಭವಾಯಿತು, ಹಾಗಾಗಿ 20 ಓವರ್‌ಗಳ ಬದಲು 16 ಓವರ್‌ಗಳಿಗೆ ಬೌಲಿಂಗ್ ಕಡಿತ ಮಾಡಲಾಯಿತು. ಟಾಸ್ ಗೆದ್ದ ಬೆಂಗಳೂರು ಬ್ಲಾಸ್ಟರ್ಸ್ ತಂಡವು ಫೀಲ್ಡಿಂಗ್ ಆಯ್ದುಕೊಂಡು, ಮೈಸೂರು ತಂಡವನ್ನು ಬ್ಯಾಟಿಂಗ್‌ಗೆ ಇಳಿಸಿತು.

ಮೈಸೂರು ತಂಡದ ಆರಂಭಿಕ ಜೋಡಿ ಉತ್ತಮ ಅಡಿಪಾಯ ಹಾಕಿತು. ಮೊದಲ ವಿಕೆಟ್‌ಗೆ ಮೈಸೂರು 2.3 ಓವರ್‌ಗಳಲ್ಲಿ 32 ರನ್ ಗಳಿಸುವಲ್ಲಿ ಯಶಸ್ವಿಯಾಯಿತು. ಎಸ್.ಯು ಕಾರ್ತಿಕ್ 9 ಬಾಲ್‌ಗಳಲ್ಲಿ 13 ರನ್ ಗಳಿಸಿದರೆ, ಕಾರ್ತಿಕ್ ಸಿ.ಎ 8 ಬಾಲ್‌ಗಳಲ್ಲಿ 20 ರನ್ ಗಳಿಸಿ ಔಟ್ ಆದರು.

ಆ ಬಳಿಕ ಕ್ರೀಸ್‌ಗೆ ಬಂದ ಹರ್ಷಿಲ್ ಧರ್ಮಾನಿ 13 ಬಾಲ್‌ಗಳಲ್ಲಿ 14 ರನ್ ಪಡೆದರು. ಮನೀಶ್ ಪಾಂಡೆ 13 ಬಾಲ್‌ಗಳನ್ನು ಎದುರಿಸಿ 12 ರನ್ ಗಳಿಸಿದರು. ಮೈಸೂರು ವಾರಿಯರ್ಸ್‌ನ ಲಂಕೇಶ್ ಕೆ.ಎಸ್ 18 ಬಾಲ್‌ಗಳಲ್ಲಿ 15 ಗಳಿಸಿದರೆ, 21 ಬಾಲ್‌ಗಳನ್ನು ಎದುರಿಸಿದ ಯಶೋವರ್ಧನ್ 39 ರನ್ ಗಳಿಸುವಲ್ಲಿ ಯಶಸ್ವಿಯಾದರು.

ಕೆ. ಗೌತಮ್ 3 ರನ್ ಗಳಿಸಿದರೆ, ಸುಮಿತ್ ಕುಮಾರ್ 12

ರನ್ ಗಳಿಸಿ ಕೊನೆಯಲ್ಲಿ ಅಜೇಯರಾಗುಳಿದರು. ಆ ಮೂಲಕ ಮೈಸೂರು ವಾರಿಯರ್ಸ್ ತಂಡವು ನಿಗದಿತ 16 ಓವರ್‌ಗಳಲ್ಲಿ 136 ರನ್ ಗಳಿಸುವಲ್ಲಿ ಸಫಲವಾಯಿತು.

137 ರನ್‌ಗಳ ಗೆಲುವಿನ ಗುರಿಯನ್ನು ಪಡೆದ ಬೆಂಗಳೂರು ಬ್ಲಾಸ್ಟರ್ಸ್ ತಂಡವು ಆರಂಭದಲ್ಲೇ ಮುಗ್ಗರಿಸಿತು. ಆರ್.ಎಲ್. ಚೇತನ್ ಯಾವುದೇ ರನ್ ಗಳಿಸದೆ ಶಿಖರ್ ಶೆಟ್ಟಿ ಬೌಲಿಂಗ್‌ನಲ್ಲಿ ಮನೀಶ್ ಪಾಂಡೆಗೆ ಕ್ಯಾಚ್ ನೀಡಿ ಪೆವಿಲಿಯನ್ ಸೇರಿದರು. ಆ ಬಳಿಕ ಕ್ರೀಸ್‌ಗೆ ಬಂದ ಮಯಾಂಕ್ ಅಗ್ರವಾಲ್ 3 ಬಾಲ್‌ಗಳನ್ನು ಎದುರಿಸಿ ಕೇವಲ 1 ರನ್ ಗಳಿಸಿ ಗೌತಮ್ ಬೌಲಿಂಗ್‌ನಲ್ಲಿ ಔಟ್ ಆದರು.

ಆರಂಭಿಕ ಆಟಗಾರ ರೋಹನ್ ಪಾಟೀಲ್ 12 ಬಾಲ್ ಎದುರಿಸಿ 10 ರನ್ ಗಳಿಸಿ ಗೌತಮ್ ಬೌಲಿಂಗ್‌ನಲ್ಲಿ ಬೌಲ್ಡ್ ಆಗಿ ಪೆವಿಲಿಯನ್ ಸೇರಿದರು. ಆ ನಂತರ ಬೆಂಗಳೂರು ಬ್ಲಾಸ್ಟರ್ಸ್ ತಂಡದ ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳು ತಂಡಕ್ಕೆ ಉಪಯುಕ್ತ ಕೊಡುಗೆ ಕೊಡುವಲ್ಲಿ ವಿಫಲರಾದರು. ಭುವನ್ ರಾಜು ಕೇವಲ 5 ರನ್ ಗಳಿಸಿದರೆ, ನವೀನ್ ಎಂ.ಜಿ 9 ರನ್ ಗಳಿಸಿ ವಿಕೆಟ್ ಕಳೆದುಕೊಂಡರು.

ಸೂರಜ್ ಅಹುಜಾ 9 ಬಾಲ್ ಎದುರಿಸಿ ಕೇವಲ 2 ರನ್ ಗಳಿಸಿ ಶಿಖರ್ ಶೆಟ್ಟಿ ಬೌಲಿಂಗ್‌ನಲ್ಲಿ ವಿಕೆಟ್ ಒಪ್ಪಿಸಿದರು. ರೋಹನ್ ನವೀನ್ ಈ ಪಂದ್ಯದಲ್ಲಿ ಯಾವುದೇ ರೀತಿಯ ಪ್ರತಿರೋಧವನ್ನೂ ತೋರಿಸಲಿಲ್ಲ. 8 ಬಾಲ್ ಎದುರಿಸಿ 2 ರನ್ ಗಳಿಸಿ ಗೌತಮ್ ಮಿಶ್ರಾ ಬೌಲಿಂಗ್‌ನಲ್ಲಿ ಯಶೋವರ್ಧನ್ ಅವರಿಗೆ ಕ್ಯಾಚ್ ನೀಡಿ ತಮ್ಮ ವಿಕೆಟ್ ಕಳೆದುಕೊಂಡರು.

ಬೆಂಗಳೂರು ತಂಡದ ಪರವಾಗಿ ಕೊನೆಯಲ್ಲಿ ಮಾಧವ್ ಪ್ರಕಾಶ್ ಗೆಲುವಿಗಾಗಿ ಶತಾಯ ಗತಾಯ ಪ್ರಯತ್ನ ಪಟ್ಟರು. 20 ಬಾಲ್‌ಗಳನ್ನು ಎದುರಿಸಿದ ಅವರು 34 ರನ್ ಗಳಿಸಿ ಔಟ್ ಆದಾಗ ಬೆಂಗಳೂರಿನ ಗೆಲುವಿನ ಕನಸಿಗೆ ಮಂಕು ಬಡಿಯಿತು. ಕೊನೆಯಲ್ಲಿ ವಿದ್ಯಾಧರ್ ಪಾಟೀಲ್ 12 ರನ್ ಮತ್ತು ಮೊಹ್ಸಿನ್ ಖಾನ್ 5 ರನ್ ಗಳಿಸಿ ಅಜೇಯರಾಗುಳಿದರು.

ನಿಗದಿತ 16 ಓವರ್‌ಗಳಲ್ಲಿ ಬೆಂಗಳೂರು ಬ್ಲಾಸ್ಟರ್ಸ್ ತಂಡವು 9 ವಿಕೆಟ್ ನಷ್ಟಕ್ಕೆ ಕೇವಲ 97 ರನ್ ಗಳಿಸಲಷ್ಟೇ ಶಕ್ತವಾಯಿತು. ಮೈಸೂರು ತಂಡದ ಪರವಾಗಿ ಕೇವಲ 5 ರನ್ ನೀಡಿ 3 ವಿಕೆಟ್ ಪಡೆದ ಶಿಖರ್ ಶೆಟ್ಟಿ ಗೆಲುವಿನ ರುವಾರಿ ಎನಿಸಿಕೊಂಡರು.

ಏಷ್ಯಾ ಕಪ್ ಹಾಕಿ: ಪಾಕ್ ಇನ್ನೂ ದೃಢೀಕರಿಸಿಲ್ಲ

ಬಾಂಗ್ಲಾಕ್ಕೆ ಅವಕಾಶ ಸಾಧ್ಯತೆ

ದೆಹಲಿ: ಆಗಸ್ಟ್ 29ರಿಂದ ಬಿಹಾರದ ರಾಜ್‌ಗಿರ್‌ನಲ್ಲಿ ನಡೆಯಲಿರುವ ಪುರುಷರ ಏಷ್ಯಾ ಕಪ್ ಹಾಕಿ ಪಂದ್ಯಾವಳಿಯಲ್ಲಿ ಪಾಕಿಸ್ತಾನ ಮುಂದಿನ ಎರಡು ದಿನಗಳಲ್ಲಿ ಭಾಗವಹಿಸುವಿಕೆಯನ್ನು ದೃಢೀಕರಿಸದಿದ್ದರೆ ಬದಲಿ ತಂಡವಾಗಿ ಬಾಂಗ್ಲಾದೇಶ ಆಯ್ಕೆಯಾಗುವ ಸಾಧ್ಯತೆಯಿದೆ ಎಂದು ಹಾಕಿ ಇಂಡಿಯಾದ ಉನ್ನತ ಅಧಿಕಾರಿಯೊಬ್ಬರು ಸೋಮವಾರ ತಿಳಿಸಿದ್ದಾರೆ. ಏಷ್ಯಾ ಕಪ್‌ಗಾಗಿ ಪಾಕಿಸ್ತಾನಿ ಆಟಗಾರರಿಗೆ ವೀಸಾ ನೀಡುವುದಾಗಿ ಭಾರತ ಸರಕಾರ ಈಗಾಗಲೇ ಹೇಳಿತ್ತು, ಆದರೆ ಭದ್ರತಾ ಕಾಳಜಿಯನ್ನು ಉಲ್ಲೇಖಿಸಿ ಪಾಕಿಸ್ತಾನ ಹಾಕಿ ಫೆಡರೇಶನ್ (ಪಿಎಚ್‌ಎಫ್) ಪ್ರಯಾಣಿಸಲು ನಿರಾಕರಿಸಿದೆ, ಆದರೂ ಕೂಡ ಪಾಕ್‌ಗೆ ಮತ್ತೊಂದು ಅಂತಿಮ ಗಡುವನ್ನು ನೀಡಲಾಗಿದೆ.

ಎಂಟು ತಂಡಗಳ ಟೂರ್ನಮೆಂಟ್‌ನಲ್ಲಿ ಪಾಕಿಸ್ತಾನದ ಸ್ಥಾನವನ್ನು ತುಂಬಲು ಆಯೋಜಕರು ಈಗಾಗಲೇ ಬಾಂಗ್ಲಾದೇಶವನ್ನು ಸಂಪರ್ಕಿಸಿದ್ದಾರೆ, ಆದರೆ ಮುಂದಿನ 48 ಗಂಟೆಗಳಲ್ಲಿ ನಿಖರವಾದ ಸನ್ನಿವೇಶವು ಸ್ಪಷ್ಟವಾಗಲಿದೆ ಎಂದು ಹಾಕಿ ಇಂಡಿಯಾ ಹೇಳಿದೆ.

ಪಾಕಿಸ್ತಾನಿ ಆಟಗಾರರಿಗೆ ವೀಸಾ ನೀಡಲು ಸಿದ್ಧ ಎಂದು ಭಾರತ ಸರಕಾರ ಈಗಾಗಲೇ ಹೇಳಿದೆ, ಆದರೆ ಅವರು ಭಾರತಕ್ಕೆ ಬರಲು ಬಯಸದಿದ್ದರೆ, ಅದು ನಮ್ಮ ಸಮಸ್ಯೆಯಲ್ಲ. ಪಾಕಿಸ್ತಾನ ಬರದಿದ್ದರೆ ಬಾಂಗ್ಲಾದೇಶವನ್ನು ಭಾಗವಹಿಸಲು ಈಗಾಗಲೇ ಆಹ್ವಾನಿಸಲಾಗಿದೆ. ದೃಢೀಕರಣವನ್ನು ಪಡೆಯಲು ನಾವು ಇನ್ನೂ ಎರಡು ದಿನಗಳವರೆಗೆ ಕಾಯಬೇಕಾಗುತ್ತದೆ ಎಂದು ಪರಿಸ್ಥಿತಿಯ ಬಗ್ಗೆ ಪ್ರಶ್ನಿಸಿದಾಗ ಹಾಕಿ ಇಂಡಿಯಾ ಅಧಿಕಾರಿ ಹೇಳಿದರು. ಪಾಕಿಸ್ತಾನ ಅಥವಾ ಬಾಂಗ್ಲಾದೇಶ ಇಲ್ಲಿಯವರೆಗೆ ನಮಗೆ ಏನನ್ನೂ ದೃಢಪಡಿಸಿಲ್ಲ, ಆದರೆ ಬಾಂಗ್ಲಾದೇಶ ಪಾಕಿಸ್ತಾನಕ್ಕೆ ಬದಲಿಯಾಗುವ ಸಾಧ್ಯತೆಯಿದೆ ಎಂದು ಅವರು ಹೇಳಿದರು.

ಭಾಗವಹಿಸುವ ತಂಡಗಳು

ಪಾಕ್ ಹೊರತುಪಡಿಸಿ ಏಷ್ಯಾ ಕಪ್‌ನಲ್ಲಿ ಭಾಗವಹಿಸುವ ಇತರ ತಂಡಗಳೆಂದರೆ ಚೀನಾ, ಜಪಾನ್, ಮಲೇಷ್ಯಾ, ದಕ್ಷಿಣ ಕೊರಿಯಾ, ಓಮನ್ ಮತ್ತು ಚೈನೀಸ್ ತೈಪೆ. ಏಷ್ಯಾಕಪ್ ಹಾಕಿಯಲ್ಲಿ ವಿಜೇತರಾದ ತಂಡವು ಮುಂದಿನ ವರ್ಷದ ವಿಶ್ವಕಪ್ ಹಾಕಿ ಟೂರ್ನಿಗೆ ನೇರ ಪ್ರವೇಶವನ್ನು ಪಡೆಯಲಿದೆ.

ಅಕ್ಟೋಬರ್‌ನಲ್ಲಿ ನಡೆಯಲಿರುವ ಆರ್ಚರಿ ಪ್ರೀಮಿಯರ್ ಲೀಗ್

ಭಾರತದ ಅಗ್ರ ಬಿಲ್ಗಾರರು ಕಣಕ್ಕೆ

ದೆಹಲಿ: ದೀಪಿಕಾ ಕುಮಾರಿ, ಧೀರಜ್ ಬೊಮ್ಮದೇವರ, ಜ್ಯೋತಿ ಸುರೇಖಾ ವೆನ್ನಮ್ ಮತ್ತು ಅಭಿಷೇಕ್ ವರ್ಮಾ ಸೇರಿದಂತೆ ಭಾರತದ ಅಗ್ರ ಬಿಲ್ಗಾರರು ಉದ್ಘಾಟನಾ ಆರ್ಚರಿ ಪ್ರೀಮಿಯರ್ ಲೀಗ್‌ನಲ್ಲಿ ಸ್ಪರ್ಧಿಸಲಿದ್ದಾರೆ ಎಂದು ರಾಷ್ಟ್ರೀಯ ಒಕ್ಕೂಟ ಸೋಮವಾರ ತಿಳಿಸಿದೆ. ಪಂದ್ಯಾವಳಿ ಅಕ್ಟೋಬರ್‌ನಲ್ಲಿ ದೆಹಲಿಯ ಯಮುನಾ ಸ್ಪೋರ್ಟ್ಸ್ ಕಾಂಪ್ಲೆಕ್ಸ್‌ನಲ್ಲಿ ನಡೆಯಲಿದೆ.

ಆರು ಫ್ರಾಂಚೈಸಿ ಆಧಾರಿತ ಸ್ಪರ್ಧೆಯು 11 ದಿನಗಳ ಕಾಲ ನಡೆಯಲಿದೆ. ಹಲವು ದೇಶಗಳ ಪ್ರಮುಖ ರಿಕರ್ವ್ ಮತ್ತು ಕಾಂಪೌಂಡ್ ಬಿಲ್ಗಾರರನ್ನು ಈ ಕೂಟ ಒಟ್ಟುಗೂಡಿಸಲಿದೆ. ಫ್ರಾಂಚೈಸಿಗಳ ಹೆಸರುಗಳನ್ನು ಇನ್ನೂ ಘೋಷಿಸಲಾಗಿಲ್ಲ.

ಉದ್ಘಾಟನಾ ಆವೃತ್ತಿಯಲ್ಲಿ ಹರಾಜಿನ ಬದಲು ಡ್ರಾಫ್ಟ್ ವ್ಯವಸ್ಥೆಯನ್ನು ಅನುಸರಿಸುವ ಸಾಧ್ಯತೆಯಿದೆ. ಪ್ರತಿ ತಂಡವು ನಾಲ್ವರು ಪುರುಷರು ಮತ್ತು ನಾಲ್ವರು ಮಹಿಳೆಯರನ್ನು ಒಳಗೊಂಡ ಎಂಟು ಸದಸ್ಯರನ್ನು ಒಳಗೊಂಡಿರುತ್ತದೆ. ತಂಡಗಳು ಇಬ್ಬರು ವಿದೇಶಿ ಬಿಲ್ಗಾರರನ್ನು ಸೇರಿಸಿಕೊಳ್ಳಬಹುದು, ಅವರಲ್ಲಿ ಕನಿಷ್ಠ ಒಬ್ಬರು ಆಡುವ ನಾಲ್ವರಲ್ಲಿ ಭಾಗವಹಿಸುವುದು ಕಡ್ಡಾಯವಾಗಿದೆ.

ರಿಕರ್ವ್ ಮತ್ತು ಕಾಂಪೌಂಡ್ ಬಿಲ್ಲುಗಾರರು ಕ್ರಮವಾಗಿ 70 ಮೀ. ಮತ್ತು 50 ಮೀ. ದೂರವನ್ನು ಫ್ಲಡ್‌ಲೈಟ್‌ಗಳ ಅಡಿಯಲ್ಲಿ ವಿಶಿಷ್ಟ ತಂಡ ಸ್ವರೂಪದಲ್ಲಿ ಶೂಟ್ ಮಾಡುತ್ತಾರೆ. ವಿಶ್ವ ಶ್ರೇಯಾಂಕಗಳು ಹಾಗೂ ಭಾರತೀಯ ಆರ್ಚರಿ ಸಂಘ (ಎಎಐ) ಇತ್ತೀಚಿನ ಆಯ್ಕೆ ಪ್ರಯೋಗಗಳ ಆಧಾರದ ಮೇಲೆ ಭಾರತೀಯ ಬಿಲ್ಲುಗಾರರನ್ನು ಆಯ್ಕೆ ಮಾಡಿದೆ.

ಏಷ್ಯನ್ ಸರ್ಫಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಕಂಚಿನ ಪದಕ ಗೆದ್ದ ಸ್ಪರ್ಧಾಳು

ಗದಗದ ಯುವಕನಿಗೆ ಸಿಎಂ ಅಭಿನಂದನೆ



ಬೆಂಗಳೂರು: ಇತ್ತೀಚೆಗೆ ನಡೆದಿದ್ದ ಏಷ್ಯನ್ ಸರ್ಫಿಂಗ್ ಚಾಂಪಿಯನ್‌ಷಿಪ್ ಸ್ಪರ್ಧೆಯಲ್ಲಿ ಕಂಚಿನ ಪದಕ ಗೆದ್ದಿದ್ದ ಭಾರತದ ಪ್ರಪ್ರಥಮ ಸರ್ಫರ್, ಗದಗ ಜಿಲ್ಲೆ ಮುಂಡರಗಿ ತಾಲೂಕಿನ ಮುರುಡಿ ತಾಂಡಾದ ಯುವಕ ರಮೇಶ್ ಬೂದಿಹಾಳ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿನಂದನೆ ಸಲ್ಲಿಸಿದ್ದಾರೆ. 'ರಾಜ್ಯದ ಹೆಸರನ್ನು ಅಂತಾರಾಷ್ಟ್ರೀಯ ಮಟ್ಟಕ್ಕೆ ತಲುಪಿಸಿದ ನೀವು ಇನ್ನಷ್ಟು ಸಾಧನೆ ಮಾಡಬೇಕು' ಎಂದು ಸರ್ಫರ್ ರಮೇಶ್ ಬೂದಿಹಾಳ ಅವರಿಗೆ ಸಿಎಂ ಶುಭ ಹಾರೈಸಿದ್ದಾರೆ.

ತಮಿಳುನಾಡಿನ ಮಹಾಬಲಿಪುರಂನ ಕಡಲತೀರದಲ್ಲಿ ಭಾನುವಾರ ನಡೆದಿದ್ದ 2025ರ ಏಷ್ಯನ್ ಸರ್ಫಿಂಗ್ ಚಾಂಪಿಯನ್‌ಶಿಪ್ ಪುರುಷರ ಮುಕ್ತ ಸ್ಪರ್ಧೆಯಲ್ಲಿ ರಮೇಶ್ ಬುದಿಹಾಳ ಕಂಚಿನ ಪದಕ ಗೆಲ್ಲುವ ಮೂಲಕ ಇತಿಹಾಸ ಸೃಷ್ಟಿಸಿದ್ದರು. ಆ ರೀತಿ ಕಾಂಟಿನೆಂಟಲ್ ಚಾಂಪಿಯನ್‌ಶಿಪ್‌ನಲ್ಲಿ ವೈಯಕ್ತಿಕ ಪದಕ ಗೆದ್ದ ಮೊದಲ ಭಾರತೀಯ ಸರ್ಫರ್ ಆಗಿದ್ದಾರೆ. ಭಾನುವಾರ ನಾಲ್ವರು ಆಟಗಾರರ ಫೈನಲ್ ಸ್ಪರ್ಧೆಯಲ್ಲಿ ರಮೇಶ್ ಬುದಿಹಾಳ 12.60 ಅಂಕಗಳನ್ನು ಗಳಿಸಿ ಮೂರನೇ ಸ್ಥಾನ ಪಡೆದರು, ಇಂಡೋನೇಷ್ಯಾದ ಮೆಗಾ ಅರ್ತಾನಾ (9.97) ಅವರನ್ನು ಹಿಂದಿಕ್ಕಿ ತಮ್ಮ ಐತಿಹಾಸಿಕ ಸಾಧನೆ ಮಾಡಿದ್ದಾರೆ. ಮಹಾಬಲಿಪುರಂನಲ್ಲಿ ನಡೆದಿದ್ದ ಓಪನ್ ಪುರುಷರ ವಿಭಾಗದಲ್ಲಿ ಕೊರಿಯಾ ಗಣರಾಜ್ಯದ ಕನೋವಾ ಹೀಜೆ (15.17) ಚಿನ್ನ ಗೆದ್ದರೆ, ಇಂಡೋನೇಷ್ಯಾದ ಪಜರ್ ಅರಿಯಾನಾ (14.57) ಬೆಳ್ಳಿ ಪದಕ ಗೆದ್ದಿದ್ದರು.

ತಿಂಗಳಾಂತ್ಯದಲ್ಲಿ ಸ್ವಿಟ್ಜರ್‌ಲೆಂಡ್‌ನಲ್ಲಿ ಡೈಮಂಡ್ ಲೀಗ್ ಅಂತಿಮ ಸ್ಪರ್ಧೆ

ಫೈನಲ್‌ಗೆ ಅರ್ಹತೆ ಪಡೆದ ಚೋಪ್ರಾ

ದೆಹಲಿ: ಭಾರತದ ಜಾವೆಲಿನ್ ತಾರೆ ನೀರಜ್ ಚೋಪ್ರಾ, ಪೋಲೆಂಡ್‌ನ ಸಿಲೆಸಿಯಾದಲ್ಲಿ ಕಳೆದ ಶನಿವಾರ ನಡೆದ ಡೈಮಂಡ್ ಲೀಗ್‌ನಲ್ಲಿ ಭಾಗವಹಿಸದಿದ್ದರೂ, ಈ ತಿಂಗಳ ಅಂತ್ಯದಲ್ಲಿ ಸ್ವಿಟ್ಜರ್ಲೆಂಡ್‌ನ ಜೂರಿಚ್‌ನಲ್ಲಿ ನಡೆಯಲಿರುವ ಡೈಮಂಡ್ ಲೀಗ್ ಫೈನಲ್‌ಗೆ ತೇರ್ಗಡೆ ಆಗಿದ್ದಾರೆ. ಲೀಗ್‌ನಲ್ಲಿ ಇದುವರೆಗೆ 15 ಅಂಕಗಳನ್ನು ಹೊಂದಿರುವ ಚೋಪ್ರಾ ಫೈನಲ್‌ನ ಆರು ಕ್ರೀಡಾಪಟುಗಳಲ್ಲಿ ಒಬ್ಬರಾಗಿ ಸ್ಥಾನ ಪಡೆದಿದ್ದಾರೆ.

ಡೈಮಂಡ್ ಲೀಗ್ ಅಂಕಪಟ್ಟಿಯಲ್ಲಿ ಚೋಪ್ರಾ ಪ್ರಸ್ತುತ ಮೂರನೇ ಸ್ಥಾನದಲ್ಲಿದ್ದಾರೆ. ಟ್ರಿನಿಡಾಡ್‌ಟೊಬ್ಯಾಗೊದ ಕೆಶೋರ್ನ್ ವಾಲ್‌ಕಾಟ್ ಅಗ್ರಸ್ಥಾನದಲ್ಲಿದ್ದರೆ, ಜರ್ಮನಿಯ ಜೂಲಿಯನ್ ವೆಬರ್ ದ್ವಿತೀಯ ಸ್ಥಾನದಲ್ಲಿದ್ದಾರೆ. ಜುಲೈ 5 ರಂದು ಬೆಂಗಳೂರಿನಲ್ಲಿ ನಡೆದ ಓಎ ಕ್ಲಾಸಿಕ್‌ನಲ್ಲಿ ಚೋಪ್ರಾ 86.18 ಮೀಟರ್ ಎಸೆದು ಪ್ರಶಸ್ತಿಯನ್ನು ಗೆದ್ದಿದ್ದರು.

ಆಗಸ್ಟ್ 22ರಂದು ನಡೆಯಲಿರುವ ಬ್ರಸೆಲ್ಸ್ ಆವೃತ್ತಿಯಲ್ಲಿಯೂ ಚೋಪ್ರಾ ಸ್ಪರ್ಧಿಸುವ ಖಚಿತತೆ ಇಲ್ಲ. 2022ರಲ್ಲಿ ಡೈಮಂಡ್ ಲೀಗ್ ಗೆದ್ದಿರುವ ನೀರಜ್, ಇಲ್ಲಿಯವರೆಗೆ ಎರಡು ಹಂತಗಳಲ್ಲಿ ಸ್ಪರ್ಧಿಸಿದ್ದರು. ಮೇ ತಿಂಗಳಲ್ಲಿ ದೋಹಾ ಡಿಎಲ್‌ನಲ್ಲಿ 90.23 ಮೀಟರ್ ಎಸೆಯುವ ಮೂಲಕ ಅವರು 90 ಮೀಟರ್ ಗಡಿಯನ್ನು ದಾಟಿದರು.

ವಿ ಟಾಕೀಸ್

ರಾಮನಗರದಲ್ಲಿ ಅಪರಿಚಿತೆ

ತಾಯವ್ವ ಸಿನಿಮಾದಲ್ಲಿ ನಟಿಸಿದ್ದ, ಗೀತಾಪ್ರಿಯ ಇದೀಗ ಅಪರಿಚಿತೆ ಚಿತ್ರದ ಮುಖ್ಯಪಾತ್ರದಲ್ಲಿ ನಟಿಸುತ್ತಿದ್ದಾರೆ. ವಿಶ್ವನಾಥ್ ನಿರ್ದೇಶಿಸುತ್ತಿರುವ ಈ ಚಿತ್ರದ ಶೀರ್ಷಿಕೆ ಇತ್ತೀಚೆಗೆ ಅನಾವರಣವಾಗಿತ್ತು. ಸದ್ಯ ರಾಮನಗರದಲ್ಲಿ ಭರದಿಂದ ಚಿತ್ರೀಕರಣ ನಡೆಯುತ್ತಿದೆ. ಗೀತಾಪ್ರಿಯಾ, ಸಿಂಧೂ ಲೋಕನಾಥ್ ಸೇರಿದಂತೆ ಹಲವು ಕಲಾವಿದರು ಚಿತ್ರೀಕರಣದಲ್ಲಿ ಭಾಗಿಯಾಗಿದ್ದಾರೆ.

ನೈಜಘಟನೆ ಆಧಾರಿತ ಈ ಚಿತ್ರದಲ್ಲಿ ಭಾವನಾತ್ಮಕ ಸನ್ನಿವೇಶಗಳು ಜನರ ಮನಸ್ಸಿಗೆ ಹತ್ತಿರವಾಗಲಿದೆ. ಜತೆಗೆ ಸಮಾಜಕ್ಕೆ ಉತ್ತಮ ಸಂದೇಶ ನೀಡುವ ಕಥಾಹಂದರ ಸಹ ಹೊಂದಿದೆ ಎಂದು ನಟಿ ಗೀತಾಪ್ರಿಯಾ ಹೇಳುತ್ತಾರೆ.

ಗೀತಪ್ರಿಯ ಅವರ ಪತಿ ಸುರೇಶ್ ಕುಮಾರ್ ಅಮರ್ ಫಿಲಂಸ್ ಲಾಂಛನದಲ್ಲಿ ಚಿತ್ರ ನಿರ್ಮಾಣ ಮಾಡುತ್ತಿದ್ದಾರೆ. ಗೀತಾಪ್ರಿಯಾ, ಹಿರಿಯ ನಟ ಶ್ರೀನಾಥ್, ರೋಹಿತ್ ಶ್ರೀನಾಥ್, ಸಿಂಧೂ ಲೋಕನಾಥ್, ಆರ್.ಜೆ ನಿಖಿತಾ ಮುಂತಾದವರು ತಾರಾಗಣದಲ್ಲಿದ್ದಾರೆ.



ಕಾಮಿಡಿ ಕಥೆಯ ಮಿಡಲ್‌ಕ್ಲಾಸ್ ರಾಮಾಯಣ

ಕನ್ನಡದ ಬಿಗ್ ಬಾಸ್ ನಲ್ಲಿ ಮನಗೆದ್ದ ನಟಿ ಮೋಕ್ಷಿತ ಪೈ ಹೊಸ ರಾಮಾಯಾಣ ಹೇಳಲು ಸಿದ್ಧವಾಗಿದ್ದಾರೆ. ಹೌದು, ಮೋಕ್ಷಿತಾ ಮಿಡಲ್ ಕ್ಲಾಸ್ ರಾಮಾಯಣ ಸಿನಿಮಾದಲ್ಲಿ ನಟಿಸಿದ್ದು

ತೆರೆಯಲ್ಲಿ ಮಿಂಚಲು ಸಿದ್ಧವಾಗಿದ್ದಾರೆ. ಚಿತ್ರದ ಟೈಟಲ್ ಕೇಳಿದಾಕ್ಷಣವೇ ಇದು ಮಿಡಲ್ ಕ್ಲಾಸ್ ಹುಡುಗ ಹುಡಗಿಯ ಪ್ರೇಮಕಥನಾ ಎಂಬುದು ತಿಳಿಯುತ್ತದೆ. ನಾಯಕ ತನ್ನ ಪ್ರೀತಿಯನ್ನು ಹೇಗೆ ಉಳಿಸಿಕೊಳ್ಳುತ್ತಾನೆ. ಬಯಸಿದ ಹುಡುಗಿಯನ್ನು ವರಿಸಲು ಹೇಗೆಲ್ಲಾ ಹರಸಾಹಸ ಪಡುತ್ತಾನೆ ಎಂಬುದನ್ನು ಕಾಮಿಡಿ ಬೆರೆಸಿ ಮನರಂಜನಾತ್ಮಕವಾಗಿ ಕಟ್ಟಿಕೊಡಲಾಗಿದೆ. ಈಗಾಗಲೇ ಎರಡು ಹಾಡುಗಳು ರಿಲೀಸ್ ಆಗಿದ್ದು, ಸಂಗೀತ ಪ್ರಿಯರನ್ನು ಸೆಳೆದಿವೆ.

ವಿ.ಧನುಶ್ ಗೌಡ ಕಥೆ ಬರೆದು ನಿರ್ದೇಶನ ಮಾಡಿರುವ ಈ ಚಿತ್ರವನ್ನು, ಅಂಜನಾದ್ರಿ ಪ್ರೊಡಕ್ಷನ್ ಹಾಗೂ ವಾವ್ ಸ್ಟುಡಿಯೊಸ್ ಬ್ಯಾನರ್ ನಲ್ಲಿ ಜಯರಾಮ್ ಗಂಗಪ್ಪನಹಳ್ಳಿ ನಿರ್ಮಾಣ ಮಾಡುತ್ತಿದ್ದಾರೆ. ವಿನುಗೌಡ ನಾಯಕನಾಗಿ ನಟಿಸಿದ್ದು, ಮೋಕ್ಷಿತಾ ಪೈ ನಾಯಕಯಾಗಿ ಬಣ್ಣಹಚ್ಚಿದ್ದಾರೆ. ಎಸ್ .ನಾರಾಯಣ್, ವೀಣಾ ಸುಂದರ್, ಮಜಾಭಾರತ ಜಗ್ಗಪ್ಪ, ಯುಕ್ತ ಪೆರ್ವಿ, ಬ್ಯಾಂಕ್ ಜನಾರ್ಧನ್, ಸುಂದರ್ ವೀಣಾ, ಶೋಭರಾಜ್, ತುಕಾಲಿ ಸಂತೋಷ್, ಹುಲಿ ಕಾರ್ತಿಕ್, ಸೇರಿದಂತೆ ಹಲವರು ತಾರಾಬಳಗದಲ್ಲಿದ್ದಾರೆ.

ಇದು ನನ್ನ ಎರಡನೇ ಸಿನಿಮಾ, ಮೊದಲು ರೆಬೆಲ್ ಹುಡುಗರು ಎಂಬ ಸಿನಿಮಾ ನಿರ್ದೇಶನ ಮಾಡಿದ್ದೆ. ಮಿಡಲ್ ಕ್ಲಾಸ್ ರಾಮಾಯಣ ಕನ್ನಡ ಹಾಗೂ ತೆಲುಗು ಎರಡು ಭಾಷೆಯಲ್ಲಿ ಸಿದ್ಧವಾಗಿದೆ. ಮೊದಲು ಕನ್ನಡ ಭಾಷೆಯಲ್ಲಿ ಸಿನಿಮಾ ರಿಲೀಸ್ ಮಾಡುತ್ತೇವೆ. ಎಲ್ಲರಿಗೂ ಕನೆಕ್ಟ್ ಆಗುವ ಕಥೆ ಚಿತ್ರದಲ್ಲಿದೆ ಎಂದು ನಿರ್ದೇಶಕ ಧನುಶ್ ಗೌಡ ಹೇಳಿದರು. ಅಲೆಕ್ಸ್ ಸಂಗೀತ ನಿರ್ದೇಶನ, ವಿನೋದ್ ಛಾಯಾಗ್ರಹಣ, ಚಿತ್ರಕಥೆ ಮತ್ತು ಸಂಭಾಷಣೆ ಸಿ. ಉದಯ್ ಕುಮಾರ್ ಅವರದ್ದಾಗಿದೆ. ಈಗಾಗಲೇ ಶೂಟಿಂಗ್ ಮುಗಿಸಿರುವ ಈ ಚಿತ್ರ, ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದೆ.

> **ಇದು ನನ್ನ ಮೊದಲ ಸಿನಿಮಾ. ಸೀರಿಯಲ್ ಬೇರೆ, ರಿಯಾಲಿಟಿ ಶೋ ಬೇರೆ. ಒಂದು ಸಿನಿಮಾ ಮಾಡಿ ಅದನ್ನು ಬೆಳ್ಳಿಪರದೆಯಲ್ಲಿ ನೋಡಬೇಕು ಎಂಬುದು ಎಲ್ಲ ಕಲಾವಿದರ ಆಸೆ. ಅಂತೆಯೇ ನಾನು ಮಿಡಲ್‌ಕ್ಲಾಸ್ ರಾಮಾಯಣ ಚಿತ್ರವನ್ನು ತೆರೆಯಲ್ಲಿ ಕಣ್ತುಂಬಿಕೊಳ್ಳಲು ಕಾತರಳಾಗಿದ್ದೇನೆ. ಸಿನಿಮಾ ಎಲ್ಲರಿಗೂ ಹಿಡಿಸಲಿದೆ, ಮನರಂಜಿಸಲಿದೆ.**
>
> -ಮೋಕ್ಷಿತಾ ಪೈ ನಟಿ

> **ನಾನು ಸಿನಿಮಾದಲ್ಲಿ ನಟಿಸಬೇಕು ಎಂಬುದು ನನ್ನ ಬಹುದಿನಗಳ ಕನಸು. ಅದಕ್ಕಾಗಿ ಸಿನಿಮಾರಂಗಕ್ಕೆ ಬಂದ ನಾನು ಹಲವು ಏಳುಬೀಳುಗಳನ್ನು ಕಂಡಿದ್ದೇನೆ. ಈಗ ಮಿಡಲ್ ಕ್ಲಾಸ್ ರಾಮಾಯಣ ಚಿತ್ರದ ಮೂಲಕ ನಾಯಕನಾಗಿ ಪರಿಚಿತನಾಗುತ್ತಿದ್ದೇನೆ. ಚಿತ್ರದ ಬಗ್ಗೆ ಅಪಾರ ನಿರೀಕ್ಷೆ ಇದೆ.**
>
> - ವಿನುಗೌಡ ನಟ

ಮನರಂಜನಾ ಕ್ಷೇತ್ರಕ್ಕೆ ಪವರ್ ಎಂಟ್ರಿ

ಈಗಾಗಲೇ ಕಿರುತೆರೆಯ ಹಲವು ವಾಹಿನಿಗಳು ಪ್ರೇಕ್ಷಕರಿಗೆ ಮನರಂಜನೆ ಉಣಬಡಿಸುತ್ತಿವೆ. ಈಗ ಆ ಸಾಲಿಗೆ ಜೀ ಪವರ್ ಸೇರ್ಪಡೆಯಾಗಿದೆ. ಜೀ ಪವರ್ ಕನ್ನಡ ಮನರಂಜನೆ ಜಗತ್ತಿನಲ್ಲಿ ಮತ್ತೊಂದು ಅಲೆ ಸೃಷ್ಟಿಸಲು ಸಜ್ಜಾಗಿದೆ.

ಜೀ ಪವರ್ ನ ಪ್ರಾರಂಭ ಕರ್ನಾಟಕದಲ್ಲಿನ ನಮ್ಮ ಪಯಣಕ್ಕೆ ಒಂದು ಮಹತ್ವದ ಮೈಲುಗಲ್ಲಾಗಲಿದೆ. ನಾವು ಪ್ರೇಕ್ಷಕರ ಅಭಿರುಚಿಯನ್ನು ಅರ್ಥಮಾಡಿಕೊಂಡಿದ್ದು, ಈ ವಾಹಿನಿಯ ಮೂಲಕ ಎಲ್ಲ ವಯಸ್ಕರಿಗೂ ತಲುಪುವಂತಹ ಕಾರ್ಯಗಳನ್ನು ನೀಡಲಿದ್ದೇವೆ ಎಂದು ಜೀ ವಾಹಿನಿ ಪ್ರಮುಖ ಸಿಜು ಪ್ರಭಾಕರನ್ ಹೇಳಿದರು.

ಇದೇ ತಿಂಗಳು 23ರಂದು ಪ್ರಾರಂಭವಾಗಲಿರುವ ಜೀ ಪವರ್ ಮನರಂಜನೆಯಲ್ಲಿ ಹೊಸ ಯುಗವನ್ನು ಆರಂಭಿಸಲಿದೆ. ಇದು ಕೇವಲ ವಾಹಿನಿಯಲ್ಲ ಕಲ್ಪನೆ, ನಿಜಜೀವನ, ಮತ್ತು ಸಂಸ್ಕೃತಿಯನ್ನು ಒಳಗೊಂಡ ವಾಹಿನಿಯಾಗಿರಲಿದೆ. ಪ್ರಬಲ ಕಥಾ ನಾಯಕಿಯರು ಮತ್ತು ಕಥಾನಾಯಕರಿರುವ ಧಾರಾವಾಹಿಗಳು, ಸಮಾಜವನ್ನು ತಲುಪುವ ವಾಸ್ತವ ಕಾರ್ಯಕ್ರಮಗಳು, ಮಹಿಳಾ ಪ್ರಧಾನ ಧಾರಾವಾಹಿಗಳು, ಬ್ಲಾಕ್‌ಬಸ್ಟರ್ ಚಲನ ಚಿತ್ರಗಳು, ಹಬ್ಬದ ಮತ್ತು ವಿಶೇಷ ಕಾರ್ಯಕ್ರಮಗಳೊಂದಿಗೆ ಜೀ ಪವರ್ ಆಧುನಿಕ ಕನ್ನಡಿಗರ ನೆಚ್ಚಿನ ವಾಹಿನಿಯಾಗಲಿದೆ ಎಂದು ಜೀ ಪವರ್ ಬಿಸಿನೆಸ್ ಹೆಡ್ ಸದೀಂದ್ರ, ಭಾರದ್ವಾಜ್ ತಿಳಿಸಿದರು.

ಜೀ ಪವರ್ ಪ್ರತಿ ಪೀಳಿಗೆಯನ್ನೂ ಆಕರ್ಷಿಸುತ್ತದೆ. ಮಹಿಳಾಪ್ರಧಾನ ಕಥೆಗಳು ಇದ್ದರೂ ಯುವಕರು ಮತ್ತು ಪುರುಷರ ಭಾವನೆಗಳಿಗೂ ಒತ್ತುಕೊಟ್ಟಿರುವುದರಿಂದ ಎಲ್ಲಾ ಪೀಳಿಗೆಯವರನ್ನೂ ತನ್ನತ್ತ ಸೆಳೆಯುವಲ್ಲಿ ಜೀ ಪವರ್ ಯಶಸ್ವಿ ಆಗಲಿದೆ. ಪ್ರತಿಯೊಂದು ಧಾರಾವಾಹಿಯೂ ತನ್ನ ಸಂಭಾಷಣೆ, ವಿಭಿನ್ನ ಕಥಾಹಂದರದಿಂದ ಮೊದಲ ದಿನದಿಂದಲೇ ವೀಕ್ಷಕರನ್ನು ಸೆಳೆಯಲಿದೆ.

ಜೀ ಪವರ್ ನಲ್ಲಿ, ರಾಜಕುಮಾರಿ, ಶುಭಸ್ಯ ಶೀಘ್ರಂ, ಜೋಡಿ ಹಕ್ಕಿ ಮತ್ತು ಗೌರಿ, ಧಾರಾವಾಹಿಗಳು ಹಾಗೂ ಹಳ್ಳಿ ಪವರ್ ರಿಯಾಲಿಟಿ ಶೋ ಜತೆಗೆ ಭವಿಷ್ಯ ದರ್ಶನ ಸೇರಿದಂತೆ ಹಲವು ಕಾರ್ಯಕ್ರಮಗಳು ಈ ಪ್ರಸಾರವಾಗಲಿವೆ.

ಪಾತ್ರಗಳಲ್ಲಿ ಮನಗೆದ್ದ ವೇಷಗಳು

ಗ್ರೀನ್ ಟ್ರೀ ಸ್ಟುಡಿಯೋಸ್ ನಲ್ಲಿ ನಿರ್ಮಾಣವಾಗುತ್ತಿರುವ ವೇಷಗಳು ಚಿತ್ರ ಪಾತ್ರಗಳ ಮೂಲಕವೇ ಗಮನಸೆಳೆಯುತ್ತಿದೆ. ಶ್ರೀನಗರ ಕಿಟ್ಟಿ ನಾಯಕನಾಗಿ ನಟಿಸುತ್ತಿದ್ದು ಈ ಹಿಂದೆ ಅವರ ಫಸ್ಟ್ ಬಿಡುಗಡೆಯಾಗಿತ್ತು. ಇದರಲ್ಲಿ ಕಿಟ್ಟಿ ಜೋಗತಿಯ ಪಾತ್ರದಲ್ಲಿ ಮಿಂಚಿದ್ದರು. ಈಗ ಸಿನಿಮಾ ತಂಡ ಚಿತ್ರದ ಎರಡನೆಯ ಮುಖ್ಯ ಪಾತ್ರವನ್ನು ಪರಿಚಯಿಸಿದೆ. ಸಿಂಹಣ್ಣ ಎನ್ನುವ ಪಾತ್ರ ರಿವಿಲ್ ಆಗಿದ್ದು ಈ ಪಾತ್ರದಲ್ಲಿ ಶರತ್ ಲೋಹಿತಾಶ್ವ ಕಾಣಿಸಿಕೊಂಡಿದ್ದಾರೆ. ಅವರ ಪೋಸ್ಟರ್ ಮತ್ತು ಟೀಸರ್ ಬಿಡುಗಡೆಯಾಗಿದೆ. ಮೂರು ವಿಭಿನ್ನ ಲುಕ್ ಗಳಲ್ಲಿ ಕಾಣಿಸಿಕೊಂಡಿರುವ ಶರತ್ ಲೋಹಿತಾಶ್ವ ಈ ಹಿಂದೆಂದು ಕಾಣದ ಪಾತ್ರದಲ್ಲಿ ಅಭಿನಯಿಸಿರುವುದು ಪೋಸ್ಟರ್ ನಿಂದ ಖಚಿತವಾಗುತ್ತದೆ. ಅವರ ಪಾತ್ರದ ಬಗ್ಗೆ ಕುತೂಹಲ ಇಮ್ಮಡಿಗೊಂಡಿದೆ. ಗಂಭೀರವಾದ ಪಾತ್ರ ಇದಾಗಿದ್ದು, ಒಂದರಲ್ಲಿ ಊರ ಪಟೇಲನಾಗಿ, ಮತ್ತೊಂದರಲ್ಲಿ ರಾವಣನಂತೆ ಕಂಗೊಳಿಸಿದ್ದಾರೆ.

ರವಿ ಬೆಳಗೆರೆ ರಚಿತ ಕಥೆ ಇದಾಗಿದ್ದು, ಕಿಶನ್ ರಾವ್ ದಳವಿ ನಿರ್ದೇಶನದಲ್ಲಿ ಮೂಡಿ ಬರುತ್ತಿದೆ. ಚಿತ್ರದಲ್ಲಿ ಹಲವು ಪಾತ್ರಗಳಿದ್ದು ಎಲ್ಲವೂ ಭಿನ್ನ, ವಿಭಿನ್ನವಾಗಿ ಮೂಡಿಬಂದಿವೆ. ಸದ್ಯ ಎರಡು ಪಾತ್ರಗಳು ಸಿನಿಮಾದ ನಿರೀಕ್ಷೆಯನ್ನು ದುಪಟ್ಟುಗೊಳಿಸಿದೆ. ಒಟ್ಟಿನಲ್ಲಿ ಹೊಸಬರ ತಂಡವೊಂದು ತಮ್ಮದೇ ರೀತಿಯಲ್ಲಿ ಜನರನ್ನು ತಲುಪುವ ಪ್ರಯತ್ನದಲ್ಲಿ ಯಶಸ್ವಿಯಾಗುತ್ತಿದೆ.